# ಇತಿಹಾಸ



Use e-papers for save trees-InyaTrust.com

# ಅಧ್ಯಾಯ – 1

# ಭಾರತಕ್ಕೆ ಯುರೋಪಿಯನ್ನರ ಆಗಮನ

**ಮುಖ್ಯಾಂಶಗಳು:**

- ಪ್ರಾಚೀನ ಕಾಲದಿಂದಲೂ ಭಾರತದ ಸಾಂಬಾರು ಪದಾರ್ಥಗಳಿಗೆ ಯೂರೋಪಿನ ಜನರಿಂದ ಅಪಾರ ಬೇಡಿಕೆಯಿದ್ದು, ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡಲಾಗುತಿತ್ತು.
- ಮಧ್ಯ ಕಾಲದಲ್ಲಿ ಯೂರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪರಗಳು ಪರ್ಷಿಯನ್ ಕೊಲ್ಲಿ, ಕೆಂಪುಸಮುದ್ರ ಮತ್ತು ಭಾರತದ ಫ್ರಾಂಟಿಯರ್ ಕಣಿವೆಗಳ ಮೂಲಕ ನಡೆಯುತಿತ್ತು.
- ಇಟಲಿಯು ತನ್ನ ಸಂಪದ್ಭರಿತ ನಗರಗಳಿಗೆ ಭಾರತದ ಸಾಂಬಾರು ಪದಾರ್ಥಗಳ ವಿತರಣೆ ಮಾಡುವ ಕೇಂದ್ರವಾಯಿತು.
- ಇಟಲಿಯ ಏಕಸ್ವಾಮ್ಯವನ್ನು ಮುರಿಯಲು ಪಶ್ಚಿಮ ಯೂರೋಪಿನ ದೇಶಗಳು ಅಟ್ಲಾಂಟಿಕ್ ಸಾಗರದ ಮೂಲಕ ಒಂದು ಪರ್ಯಾಯ ವ್ಯಾಪಾರ ಮಾಗವನ್ನು ಹುಡುಕುವ ಪ್ರಯತ್ನದಲ್ಲಿದ್ದವು.
- ಐರೋಪ್ಯದ ಇತರ ದೇಶಗಳು ಹೊಸ ಭೂ ಪ್ರದೇಶಗಳನ್ನು ಹುಡುಕುವ ನಾವಿಕರ ಸಾಹಸಕ್ಕೆ ಪ್ರೋತ್ಸಾಹ ನೀಡಿದವು.
- ಪೋರ್ಚುಗೀಸ್ ನಾವಿಕ ವಾಸ್ಕೊಡಗಾಮನು 1498 ರಲ್ಲಿ ಭಾರತದೊಂದಿಗೆ ಮರು ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಐರೋಪಿಯನ್ನರಲ್ಲಿ ಮೊದಲಿಗನಾದನು.
- 17ನೇ ಶತಮಾನದಲ್ಲಿ ಭಾರತದೊಳಗೆ ಡಚ್ ಮತ್ತು ಇಂಗ್ಲಿಷರ ಪ್ರವೇಶವಾಯಿತು. ವ್ಯಾಪರದ ಏಕಸ್ವಮ್ಯತೆಗಾಗಿ ಹೊಡೆದಾಡಿದ ಇಂಗ್ಲಿಷರು ಪೋರ್ಚುಗೀಸರನ್ನು ಡಚ್ಚರನ್ನು ಸೋಲಿಸಿದರು. 18ನೇ ಶತಮಾನದ ಕೊನೆಯಲ್ಲಿ ಡಚ್ಚರನ್ನು ಉಪಖಂಡದಿಂದ ಹೊರಹಾಕಿದರು. ಕ್ರಮೇಣವಾಗಿ ಮದ್ರಾಸ್ ,ಮುಂಬೈ ಮತ್ತು ಕಲ್ಕತ್ತಾಗಳಲ್ಲಿ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡ ಬ್ರಿಟಿಷರು ಈ ಸ್ಥಳಗಳನ್ನು ತಮ್ಮ ವ್ಯಾಪಾರ ಕೇಂದ್ರಗಳನ್ನಾಗಿ ಮಾಡಿಕೊಂಡರು.
- 1600 ರಲ್ಲಿ ಇಂಗ್ಲೆಂಡಿನಲ್ಲಿ ಸ್ಥಾಪಿಸಲಾದ ಈಸ್ಟ್ ಇಂಡಿಯಾ ಕಂಪನಿಯು ತನ್ನ ವಿಶಾಲವಾಗುತ್ತಿರುವ ವ್ಯಾಪಾರವನ್ನು ವ್ಯವಸ್ಥಿತಗೊಳಿಸಿಕೊಳ್ಳುತ್ತಿದ್ದ ಹಾಗೇಯ ಭಾರತದಲ್ಲಿ ಇಂಗ್ಲಿಷ್ ರಾಜ್ಯದ ಕನಸನ್ನು ಕಾಣತಿತ್ತು
- 18ನೇ ಶತಮಾನದಲ್ಲಿ ಉಂಟಾದ ಪ್ರಕ್ಷುಬ್ದ ಸಮಯದಲ್ಲಿ ಬಹಳ ಚತುರತೆಯಿಂದ ಕುಟಿಲತೆಯಿಂದ ಉಪಯೋಗಿಸಿಕೊಂಡ ಬ್ರಿಟಿಷರು ತಮ್ಮ ಸಾಮ್ರಾಜ್ಯ ಸ್ಥಾಪನೆಗೆ ಮುಂದಾದಾಗ ನವಾಬ ಸಿರಾಜುದ್ದೌಲನಿಂದ ಮೊದಲಾಗಿ ಟಿಪ್ಪು ಸಹಿತ ಅನೇಕರು ಅವರ ವಿರುದ್ಧ ಹೋರಾಡಿದರು.
- ಮೊದಲನೇ ಕರ್ನಾಟಿಕ್ , ಎರಡನೇ ಕರ್ನಾಟಿಕ್ , ಮೂರನೆಯ ಕರ್ನಾಟಿಕ್ , ಕದನಗಳಲ್ಲದೆ,1755ರಲ್ಲಿ ಪ್ಲಾಸಿ ಕದನ ,1764 ರಲ್ಲಿ ನಡೆದ ಬಕ್ಸಾರ್ ಕದನಗಳ ವಿಜಯ ಬ್ರಿಟಿಷರು ಭಾರತದಲ್ಲಿ ನೆಲೆಯೂರಲು ಸಹಾಯಕವಾದವು.



Use e-papers for save trees-InyaTrust.com

**ಪ್ರಮುಖ ವ್ಯಕ್ತಿಗಳು:**

**ಅನ್ವರುದ್ದೀನ್** ಕರ್ನಾಟಿಕ್‌ನ ನವಾಬ

**ಸಿರಾಜುದ್ದೌಲ** ಬಂಗಾಳದ ನವಾಬ

**ರಾಬರ್ಟ್ ಕ್ಲೈವ್** (a) ಬ್ರಿಟಿಷ್ ಭಾರತ ಸೃಷ್ಟಿಗೆ ಕಾರಣವಾದಂತಹ ಪ್ರಥಮ ಬ್ರಿಟಿಷ್ ಅಧಿಕಾರಿ

(b) ದ್ವಿ–ಸರ್ಕಾರವನ್ನು ಜಾರಿಗೆ ತಂದವರು

(c) ಬಂಗಾಳದ ಮೊದಲ ಗವರ್ನರ್

**ಡೂಪ್ಲೆ** ಇವರು ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗೌರ್ನರ್ ಜನರಲ್ ಆಗಿ 1942 ರಲ್ಲಿ ನೇಮಕ.

**ವಾಸ್ಕೋಡಿಗಾಮ** ಪೋರ್ಚುಗೀಸ್ ನಾವಿಕ. ಭಾರತದೊಂದಿಗೆ ಮರು ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಮೊದಲಿಗ ಯುರೋಪಿಯನ್. ಭಾರತಕ್ಕೆ ಜಲಮಾರ್ಗ ಕಂಡುಹಿಡಿದ ಮೊದಲ ಯುರೋಪ್ ನಾವಿಕ.

**ಸರ್ ಐರ್ ಕೂಟ್** ಮೂರನೇ ಕಾರ್ನಾಟಿಕ್ ಕದನದಲ್ಲಿ ಬ್ರಿಟಿಷ್ ಕಮಾಂಡರ್

**ಫರೂಕ್ ಸಿಯಾ** 17ನೇ ಶತಮಾನದ ಆರಂಭದಲ್ಲಿ ಕಲ್ಕತ್ತಾದ ಸಮೀಪದ ಕೆಲವು ಹಳ್ಳಿಗಳನ್ನು ಬ್ರಿಟಿಷರಿಗೆ ಹತ್ತಿಯಾಗಿ ನೀಡಿದ ಮೊಘಲ್ ಚಕ್ರವರ್ತಿ

**ಜಹಂಗೀರ್** ಬ್ರಿಟಿಷ್ ಈಶ್ಟ್ ಇಂಡಿಯಾ ಕಂಪನಿಗೆ ವ್ಯಾಪಾರ ಮಾಡಲು ಅನುಮತಿ ನೀಡಿದ ಮೊಘಲ್ ಚರ್ಕವರ್ತಿ

**ವರ್ಷಗಳು ಮತ್ತು ಘಟನೆಗಳು:**

**ಕ್ರಿ.ಶ. 1453** ಆಟೋಮನ್ ಟರ್ಕರು ಕಾನ್‌ಸ್ಟ್ಯಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು.

**ಕ್ರಿ.ಶ. 1498** ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮ 1498 ರಲ್ಲಿ ಭಾರತದ ಪಶ್ಚಿಮ ತೀರದ ಕಲ್ಲಿಕೋಟೆಗೆ ಬಂದಿಳಿದರು.

**ಕ್ರಿ.ಶ. 1600** ಈಸ್ಟ್ ಇಂಡಿಯಾ ಕಂಪನಿಯನ್ನು ಇಂಗ್ಲೆಂಡಿನಲ್ಲಿ ಸ್ಥಾಪಿಸಲಾಯಿತು.

**ಕ್ರಿ.ಶ. 1602** ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ ನೆದರ್‌ಲ್ಯಾಂಡ್ ನಲ್ಲಿ ಸ್ಥಾಪಿಸಲಾಯಿತು.



Use e-papers for save trees-InyaTrust.com

**ಕ್ರಿ.ಶ. 1619** ಮೊಘಲ್ ಚಕ್ರವರ್ತಿ ಜಹಂಗೀರನು ಈಸ್ಟ್ ಇಂಡಿಯಾ ಕಂಪನಿಗೆ ವ್ಯಾಪಾರ ಮಾಡಲು ಅನುಮತಿ ನೀಡಿದನು.

**ಕ್ರಿ.ಶ. 1639** ಇಂಗ್ಲೀಷರು ತಮ್ಮ ಮೊದಲ ಸರಕು ಕೋಠಿಯನ್ನು ಮದ್ರಾಸಿನಲ್ಲಿ ಸ್ಥಾಪಿಸಿದರು.

**ಕ್ರಿ.ಶ. 1664** ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಫ್ರಾನ್ಸ್‌ನಲ್ಲಿ ಸ್ಥಾಪನೆಗೊಂಡಿತು.

**ಕ್ರಿ.ಶ. 1757** ಪ್ಲಾಸಿ ಕದನ

**ಕ್ರಿ.ಶ. 1767** ರಾಬರ್ಟ್ ಕ್ಲೈವ್ ಇಂಗ್ಲೆಂಡಿಗೆ ಹಿಂದಿರುಗಿದನು.

**ಕ್ರಿ.ಶ. 1767** ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗೌರ್ನರ್ ಜನರಲ್ ಆಗಿ ನೇಮಕಗೊಂಡನು.

**ಕ್ರಿ.ಶ. 1746** ಮದ್ರಾಸ್ ಕದನ

**ಕ್ರಿ.ಶ. 1764** ಬಕ್ಸಾರ್ ಕದನ

**I ಸರಿಯಾದ ಉತ್ತರವನ್ನು ಆರಿಸಿ ಬರೆಯಿಸಿ**

**1. ಭಾರತಕ್ಕೆ ಬಂದ ಮೊದಲ ನಾವಿಕ**

1) ಕೊಲಂಬಸ್ **2) ವಾಸ್ಕೋಡಗಾಮ** 3) ಮೆಗಲನ್ 4) ಡಾಯಸ್

**2. ಮೆಡಿಟರೇನಿಯನ್ ಹಾಗೂ ಯೂರೋಪಿನ ವ್ಯಾಪಾರವು ಈ ದೇಶದ**

1) ಇಟಲಿ 2) ಅರಬ್ 3) ಫ್ರಾನ್ಸ್ 4) ಗ್ರೀಸ್

**3. ಮಧ್ಯಕಾಲದಲ್ಲಿ ಇವರು ಏಷ್ಯಾದ ವ್ಯಾಪಾರ ನಡೆಸುತ್ತಿದ್ದರು**

1) ರೋಮನ್ನರ 2) ಗ್ರೀಕರು 3) ಅರಬರು 4) ಇಂಗ್ಲೀಷ್ರು

**4. ಪ್ರಾರಂಭದಲ್ಲಿ ಕಲ್ಕತ್ತದ ಸಮೀಪ ಕೆಲವು ಹಳ್ಳಿಗಳನ್ನು ಬ್ರಿಟಿಷರಿಗೆ ದತ್ತಿಯಾಗಿ ನೀಡಿದ ಮೊಘಲ್ ಚಕ್ರವರ್ತಿ**

**1) ಫರೂಕ್ ಸಿಯಾರ್** 2) ಷಾ ಆಲಂ 3) ಮೀರ್ ಖಾಸಿಂ 4)ಶಾಜಹಾನ್

**5. 24 ಪರಗಣಗಳ ಜಮೀನ್ದಾರಿ ಹಕ್ಕನ್ನು ಬ್ರಿಟಿಷರಿಗೆ ನೀಡಿದವರು**

1) ಫ್ರೆಂಚರು 2) ಮೊಘಲ್ ಚಕ್ರವರ್ತಿ **3) ಮೀರ್ ಜಾಫರ್** 4) ಪೋರ್ಚುಗೀಸರು



Use e-papers for save trees-InyaTrust.com

6. **ಪ್ಲಾಸಿ ಕದನ ನಡೆದ ವರ್ಷ**

1) 1757 2) 1858 3) 1764 4) 1664

7. **ದಿವಾನಿ ಹಕ್ಕು ಇದಕ್ಕೆ ಸಂಬಂಧಿಸಿದ್ದು**

**1) ಭೂ ಕಂದಾಯ ವಸೂಲಿ** 2) ಆಡಳಿತ 3) ನ್ಯಾಯ ಪ್ರತಿಪಾದನೆ 4) ಇವೆಲ್ಲವೂ

8. **ಕರ್ನಾಟಿಕ್ ಕದನಗಳು ಇವರೊಡನೆ ನಡೆಯಿತು.**

1) ಇಂಗ್ಲಿಷರು ಮತ್ತು ಡಚ್ಚರು 2) ಪೋರ್ಚುಗೀಸರು ಮತ್ತು ಡಚ್ಚರು

**3) ಇಂಗ್ಲಿಷರು ಮತ್ತು ಫ್ರೆಂಚರು** 4) ಪೋರ್ಚುಗೀಸರು ಮತ್ತು ಇಂಗ್ಲೀಷರು

9) **ಮೂರನೇ ಕರ್ನಾಟಿಕ್ ಕದನದಲ್ಲಿ ಫ್ರೆಂಚರು ಪರಾಭವಗೊಂಡ ಯುದ್ಧ**

**1) ವಾಂಡಿವಾಷ್** 2) ಪ್ಲಾಸಿ 3) ಬಕ್ಸಾರ್ 4) ತಿರುಚನಾಪಳ್ಳಿ

10) **ಮೈಸೂರಿನಲ್ಲಿ ಬ್ರಿಟಿಷರು ವಿರುದ್ಧ ಹೋರಾಡಿದವರು**

1) ಒಡೆಯರು 2) ಮರಾಠರು 3) ಚಂದಾಸಾಹೇಬ್, **4) ಹೈದರ್ ಮತ್ತು ಟಿಪ್ಪು**

11. **ಏಷ್ಯಾದ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದ್ದವರು**

(a) ಭಾರತೀಯರು (b) ದೇವರಾಜ (c) ನಂಜರಾಜ (d) ಲಾರ್ಡ್‌ವೆಲ್ಲೆಸ್ಲಿ

12. **ವಾಸ್ಕೋಡಿಗಾಮ ಕಲ್ಲಿಕೋಟೆಗೆ ಬಂದದ್ದು**

(a) 1489 (b) 1448 (c) 1498 (d) 1849

13. **ಕಲ್ಕತ್ತಾದ ಬಳಿ ಬ್ರಿಟಿಷರಿಗೆ ಕೆಲವು ಹಳ್ಳಿಗಳನ್ನು ದತ್ತಿಯಾಗಿ ನೀಡಿದ ಮೊಘಲ್ ದೊರೆ**

(a) ಜಹಂಗೀರ್ (b) ಬಹದ್ದೂರ್‌ಷಾII (c) ಫರೂಕ್ ಸಿಯಾ (d) ಬಾಬರ್

14. **ಕಾನ್‌ಸ್ಟಾಂಟಿನೋಪಲ್‌ಅನ್ನು ವಶಪಡಿಸಿಕೊಂಡವರು**

(a) ಪರ್ಷಿಯನ್ನರು (b) ಅರಬ್ಬರು (c) ಆಟೋಮನ್ ಟರ್ಕರು (d) ಪೋರ್ಚುಗೀಸರು

15. **ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ**

(a) 1602 (b) 1664 (c) 1600 (d) 1661



Use e-papers for save trees-InyaTrust.com

**16.** **ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ**

(a) 1602 (b) 1600 (c) 1664 (d) 1646

**1.** **ಹೊಸ ಭೂಪ್ರದೇಶಗಳನ್ನು ಅನ್ವೇಷಿಸಲುಪ್ರೋತ್ಸಾಹ ನೀಡಿದ ರಾಷ್ಟ್ರಗಳು**

ಎ)ಸ್ಪೇನ್ ಮತ್ತು ಇಟಲಿ ಬಿ)ಪೋರ್ಚುಗಲ್ ಮತ್ತು ಬ್ರಿಟನ್

ಸಿ)ಸ್ಪೇನ್ ಮತ್ತು ಪೋರ್ಚುಗಲ್ ಡಿ)ಬ್ರಿಟನ್ ಮತ್ತು ಫ್ರಾನ್ಸ್

**2.** **ಪ್ಲಾಸಿಕದನ ನಡೆದ ವರ್ಷ**

ಎ) 1857 ಬಿ) 1758 ಸಿ) 1757 ಡಿ) 1775

**3.** **ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿದವರು.**

ಎ) ಡೂಪ್ಲೆ ಬಿ) ಸರ್ ಐರ್‌ಕೂಟ್ ಸಿ) ರಾಬರ್ಕ್‌ಕ್ಲೈವ್ ಡಿ) ಲಾರ್ಡ್‌ವೆಲ್ಲೆಸ್ಲಿ

**4.** **ಪ್ಲಾಸಿಕದನದಲ್ಲಿ ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿದವರು**

ಎ) ಸರ್ ಐರ್‌ಕೂಟ್ ಬಿ) ರಾಬಟ್ ಕ್ಲೈವ್

ಸಿ) ಲಾರ್ಡ್‌ವೆಲ್ಲೆಸ್ಲಿ ಡಿ) ಲಾರ್ಡ್‌ಡಾಲ್‌ಹೌಸಿ

**5.** **ಬಂಗಾಳದಲ್ಲಿ ದ್ವಿ ಸರ್ಕಾರವನ್ನು ಜಾರಿಗೆ ತಂದವರು**

ಎ) ಸಿರಾಜುದ್ದೌಲ ಬಿ) ಡೂಪ್ಲೆ

ಸಿ) ರಾಬರ್ಕ್‌ಕ್ಲೈವ್ ಡಿ) ಮೀರ್‌ಜಾಫರ್

**6.** **ವಾಸ್ಕೋಡಿಗಾಮನು ಭಾರತದ ಈ ಪ್ರದೇಶಕ್ಕೆ ಬಂದಿಳಿದನು**

ಎ) ಕಣ್ಣಾನೂರ್ ಬಿ) ಕಲ್ಲಿಕೋಟೆ ಸಿ) ಮಾಹೆ ಡಿ) ಕೊಚ್ಚಿನ್

**II** **ಬಿಟ್ಟ ಸ್ಥಳ ತುಂಬಿರಿ**

1. ಯೂರೋಪಿನ ವ್ಯಾಪಾರವು **ಇಟಲಿಯ** ಏಕಸ್ವಾಮ್ಯತೆಗೆ ಒಳಪಟ್ಟಿತ್ತು.
2. ಮೊದಲನೇ ಕರ್ನಾಟಿಕ್ ಯುದ್ಧವು **ಬ್ರಿಟಿಷರು ಮತ್ತು ಫ್ರೆಂಚರ** ನಡುವೆ ನಡೆಯಿತು.
3. ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಬ್ರಿಟಿಷ್ ಸೇನಾಧಿಕಾರಿ **ಸರ್ ಐರ್ ಕೂಟ್**
4. ಪ್ಲಾಸಿ ಕದನದಲ್ಲಿ ಬ್ರಿಟಿಷ್ ಸೇನೆಯ ನೇತೃತ್ವ ವಹಿಸಿದ್ದವನು **ರಾಬರ್ಟ್ ಕ್ಲೈವ್**
5. ಬಂಗಾಳದಲ್ಲಿ ದ್ವಿ ಸರ್ಕಾರವನ್ನು ಜಾರಿಗೆ ತಂದವನು **ರಾಬರ್ಟ್ ಕ್ಲೈವ್**



**Use e-papers for save trees-InyaTrust.com**

**III. ಹೊಂದಿಸಿ ಬರೆಯಿರಿ.**

| | A | B | ಉತ್ತರ |
|---|---|---|---|
| 1. | ದಸ್ತಕ್ | a) ಮೊಘಲ್ ಚಕ್ರವರ್ತಿ | d) |
| 2. | ದಿವಾನಿ | b) 1746 | c) |
| 3. | ಷಾ ಆಲಂ | c) ಭೂ ಕಂದಾಯ | a) |
| 4. | ಮದ್ರಾಸ್ ಕದನ | d) 1616 | b) |
| 5. | ಯುನೈಟೆಡ್ ಈಸ್ಟ್ ಇಂಡಿಯಾ | e) 1602 | f) |

**IV. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ಪ್ರಾರಂಭದಲ್ಲಿ ಭಾರತದೊಂದಿಗೆ ಯುರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು.**

- ❖ ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನ್ನಿ, ಏಲಕ್ಕಿ ಶುಂಠಿ ಇತ್ಯಾದಿ ವಸ್ತುಗಳಿಗೆ ಯುರೋಪಿಯನ್ನರ ಮಾರುಕಟ್ಟೆಯಲ್ಲಿ ಯಥೇಚ್ಛವಾದ ಬೇಡಿಕೆಯಿತ್ತು.
- ❖ ಈ ವಸ್ತುಗಳನ್ನು ಯುರೋಪಿನ ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿತ್ತು.
- ❖ ಮಧ್ಯಕಾಲದಲ್ಲಿ ಯುರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪಾರಗಳು ಪರ್ಷಿಯನ್ ಕೊಲ್ಲಿ, ಕೆಂಪು ಸಮುದ್ರ ಮತ್ತು ಭಾರತದ ವಾಯುವ್ಯ ಪ್ರದೇಶಗಳ ಮೂಲಕ ನಡೆಯುತ್ತಿದ್ದವು.

**2. ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯ ಕಾರಣ ಈ ಹೇಳಿಕೆಯನ್ನು ಸಮರ್ಥಿಸಿ.**

ಸಮುದ್ರಯಾನಕ್ಕೆ ಹೊಸ ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ ಸಿಡಿಮದ್ದು ನೌಕಾ ಉಪಕರಣಗಳು, ಭೂಪಟ ಇತ್ಯಾದಿಗಳು ನಾವಿಕರಿಗೆ ಸಹಾಯಕವಾದವು.

**3. ಕರ್ನಾಟಿಕ್ ಯುದ್ಧಗಳು ಇಂಗ್ಲೀಷರು ಭಾರತದಲ್ಲಿ ನೆಲೆಯೂರಲು ಹೇಗೆ ಸಹಾಯಕವಾದವು ಎಂಬುದನ್ನು ವಿವರಿಸಿ.**

ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ಅನ್ವರುದ್ದೀನನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡರು.

**ಮೊದಲನೇ ಕರ್ನಾಟಿಕ್ ಕದನ :** ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು. ನಂತರ ಆದ ಒಪ್ಪಂದದ ಮೂಲಕ ಫ್ರೆಂಚರು ಮದ್ರಾಸನ್ನು ಬ್ರಿಟಿಷರಿಗೆ ಹಿಂತಿರುಗಿಸಿದರು.



Use e-papers for save trees-InyaTrust.com

**ಎರಡನೇ ಕರ್ನಾಟಿಕ್ ಕದನ :** ದಖನ್‌ನಲ್ಲಿ ಹೈದರಾಬಾದಿನ ನಿಜಾಮ ಪದವಿಗೆ ಹಾಗೂ ಕರ್ನಾಟಿಕ್‌ನ ನವಾಬ ಪದವಿಗಾಗಿ ಪೈಪೋಟಿಯಲ್ಲಿ ಇಂಗ್ಲೀಷರು ಹಾಗೂ ಫ್ರೆಂಚರು ತಮ್ಮ ತಮ್ಮ ಅಭ್ಯರ್ಥಿಗಳಿಗೆ ಬೆಂಬಲವನ್ನಿತ್ತರು. ಬ್ರಿಟಿಷರು ರಾಬರ್ಟ್ ಕ್ಲೈವ್‌ನ ನೇತೃತ್ವದಲ್ಲಿ ಅನ್ವರುದ್ದೀನನಿಗೆ ಬೆಂಬಲ ನೀಡಿದರು. ಹಾಗೆಯೇ ಫ್ರೆಂಚರು ಡೂಪ್ಲೆ ನೇತೃತ್ವದಲ್ಲಿ ಚಂದಾಸಾಹೇಬನಿಗೆ ಬೆಂಬಲ ನೀಡಿದರು. ಮುಂದೆ ಜರುಗಿದ ಯುದ್ದದಲ್ಲಿ ರಾಬರ್ಟ್‌ಕ್ಲೈವ್‌ನ ಆರ್ಕಾಟಿನ ಮೇಲೆ ದಾಳಿ ನಡೆಸಿ ತಿರುಚನಾಪಳ್ಳಿಯನ್ನು ಸುತ್ತುವರೆದನು. ಫ್ರೆಂಚರ ಬೆಂಬಲಿಗನಾಗಿದ್ದ ಚಂದಾಸಾಹೇಬನು ಯುದ್ಧದಲ್ಲಿ ಹತನಾದನು. ಇದರಿಂದ ಕರ್ನಾಟಿಕ್ ಪ್ರದೇಶವು ಪರೋಕ್ಷವಾಗಿ ಬ್ರಿಟಿಷರ ವಶವಾಯಿತು.

**ಮೂರನೇ ಕರ್ನಾಟಿಕ್ ಕದನ :** ಮುಂದೆ ಫ್ರೆಂಚರು ಮದ್ರಾಸಿನ ಸೇಂಟ್ ಜಾರ್ಜ್ ಕೋಟೆಯನ್ನು ವಶಪಡಿಸಿಕೊಂಡು

ಮದ್ರಾಸಿನ ಮೇಲೆ ದಾಳಿ ಮಾಡಲು ಹವಣಿಸಿ ವಿಫಲರಾದರು. ಬ್ರಿಟಿಷರ ಸೇನಾ ಮುಖಂಡನಾಗಿದ್ದ ಸರ್‌ಐರ್‌ಕೂಟನು ಫ್ರೆಂಚರನ್ನು ವಾಂಡಿವಾಷ್‌ನ ಕದನದಲ್ಲಿ ಪ್ರಾಜಯಗೊಳಿಸಿದನು.

**4. ಪ್ಲಾಸಿ ಕದನದ ಫಲಿತಾಂಶಗಳೇನು?**

- ❖ ಈ ಯುದ್ಧದಲ್ಲಿ ರಾಬರ್ಟ್‌ಕೈವ್ ನೇತೃತ್ವದ ಕಂಪನಿ ಸೈನ್ಯವು ನವಾಬ ಸಿರಾಜ್‌ದ್ದೌಲನನ್ನು 1757 ರಲ್ಲಿ ಸೋಲಿಸಿತು.
- ❖ ಬ್ರಿಟಿಷರೊಂದಿಗೆ ಸಹಕರಿಸಿದ ಮೀರ್‌ಜಾಫರ್‌ನನ್ನು ಬಂಗಾಳದ ನವಾಬನನ್ನಾಗಿ ನೇಮಿಸಲಾಯಿತು.
- ❖ ಇದಕ್ಕೆ ಪ್ರತಿಯಾಗಿ ನವಾಬನಿಂದ ಬ್ರಿಟಿಷರು 24 ಪಕಗಣದ ಮೇಲಿನ ಜವಾಬ್ದಾರಿ ಹಕ್ಕನ್ನು ಪಡೆದುಕೊಂಡು ಅತ್ಯಂತ ಪ್ರಬಲಗಾದರು.

**5. ಬಾಕ್ಸಾರ್ ಕದನಕ್ಕೆ ಕಾರಣಗಳೇನು?**

- ❖ ಯಾವಾಗ ಮೀರ್ ಜಾಫರನು ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳಲು ಮುಂದಾದನೀ ಆಗ ಬ್ರಿಟಿಷರು
- ❖ ಅವನನ್ನು ಅಧಿಕಾರದಿಂದ ಕೆಳಗಿಳಿಸಿ ಮೀರ್‌ಕಾಸಾಮನನ್ನು ನವಾಬನನ್ನಾಗಿ ಮಾಡಿದರು.
- ❖ ಇದಕ್ಕೆ ಪ್ರತಿಯಾಗಿ ಅವನು ಬರ್ದವಾನ, ಮಿಡ್ನಾಪುರ ಮತ್ತು ಚಿತ್ತಗಾಂಗ್ ಪ್ರದೇಶಗಳನ್ನು ಬ್ರಿಟಿಷರಿಗೆ ಬಳುವಳಿಯಾಗಿ ನೀಡಿದನು.
- ❖ ಇಂಗ್ಲೀಷರ ಹಿಡಿತದಿಂದ ಹೊರಬರಲು ಪ್ರಯತ್ನಿಸಿದಾಗ ಮೀರ್‌ಖಾಸಿಮನನ್ನು ಪದಚ್ಯುತಿಗೊಳಿಸಿದರು.
- ❖ ತದನಂತರ ಷರತ್ತುಗಳೊಂದಿಗೆ ಇಂಗ್ಲೀಷರು ಮೀರ್‌ಜಾಫರ್‌ನನ್ನು ಮತ್ತೆ ನವಾಬನನ್ನಾಗಿ ಮಾಡಿದರು.

**6. ದ್ವಿಸರ್ಕಾರ ಪದ್ಧತಿಯನ್ನು ವಿವರಿಸಿ.**

ರಾಬರ್ಟ್ ಕ್ಲೈವ್‌ನ 1765 ರಲ್ಲಿ ಬಂಗಾದಲ್ಲಿ ದ್ವಿ ಸರ್ಕಾರವನ್ನು ಜಾರಿಗೆ ತಂದನು.

ಬ್ರಿಟಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಬಹುದಿತ್ತು.



Use e-papers for save trees-InyaTrust.com

ಆಡಳಿತ ನ್ಯಾಯ ಪ್ರತಿಪಾದನೆ ಮತ್ತಿನ್ನಿತರ ಆಡಳಿತಾತ್ಮಕ ಕಾರ್ಯಗಳನ್ನು ನವಾಬನ ಮಾಡಬೇಕಿತ್ತು. ಇದೇ ದ್ವಿ ಸರ್ಕಾರ ಪದ್ಧತಿ

**7. ಏಕಸ್ವಾಮ್ಯತೆ ಎಂದರೇನು?**

ವ್ಯಾಪಾರದಲ್ಲಿ ಕೊಳ್ಳುವ ಮತ್ತು ಮಾರಾಟ ಮಾಡುವ ಹಕ್ಕನ್ನು ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ಹೊಂದಿರುವುದನ್ನು ಏಕಸ್ವಾಮ್ಯತೆ ಎನ್ನುವರು.

**8. ಬ್ರಿಟಿಷರು ಮೊದಲ ಸಂಗ್ರಹಣ ಕೇಂದ್ರವನ್ನು ಎಲ್ಲಿ ಸ್ಥಾಪಿಸಿದರು?**

ಬ್ರಿಷಷರು ತಮ್ಮ ಮೊದಲ ಸಂಗ್ರಹಣ ಕೇಂದ್ರವನ್ನು ಮದ್ರಾಸ್‌ನಲ್ಲಿ ಸ್ಥಾಪಿಸಿದರು.

**9. ರಾಬರ್ಟ್‌ಕ್ಲೈವ್‌ನ ಬಗ್ಗೆ ಟಿಪ್ಪಣಿ ಬರೆಯಿರಿ.**

- ❖ ಬ್ರಿಟಿಷ್ ಭಾರತದ ಸೃಷ್ಟಿಗೆ ಕಾರಣವಾದಂತಹ ಪ್ರಥಮ ಅಧಿಕಾರಿ ರಾಬರ್ಟ್ ಕ್ಲೈವ್
- ❖ ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರುಕೂನನಾಗಿ ಸೇವೆಗೆ ಸೇರಿದ್ದನು. ಕರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ ಆರ್ಕಾಟ್‌ನ ಮುತ್ತಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿ, ಬ್ರಿಟಿಷರ ವಿಜಯಕ್ಕೆ ಕಾರಣನಾದನು.
- ❖ ದಕ್ಷಿಣದಲ್ಲಿ ಬ್ರಿಟಿಷರ ಅಸ್ತಿತ್ವ ರೂಪಿಸುವಲ್ಲಿ ಸಫಲನಾದ ಈತ ಬಂಗಾಳದ ವಿಜಯಕ್ಕೂ ಕಾರಣನಾದನು.
- ❖ 1757 ರ ಪ್ಲಾಸಿಕದನದ ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು.
- ❖ 1765 ರಲ್ಲಿ ಬಂಗಾಳದ ಗವರ್ನರ್ ಆಗಿ ನೇಮಕಗೊಂಡ ದ್ವಿ ಸರ್ಕಾರವನ್ನು ಜಾರಿಗೆ ತಂದನು.

**10. ಡೂಪ್ಲೆ ಆಡಳಿತವನ್ನು ಸಂಕ್ಷೀಪ್ತವಾಗಿ ವಿವರಿಸಿ.**

- ❖ ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗವರ್ನರ್ ಜನರಲ್ ಆಗಿ 1742 ರಲ್ಲಿ ನೇಮಕಗೊಂಡನು. ಭಾರತದ ಮೇಲೆ ಅಧಿಪತ್ಯ ಸ್ಥಾಪನೆಯ ಕನಸನ್ನು ಕಾಣುತ್ತಿದ್ದ ಡೂಪ್ಲೆ ಇಲ್ಲಿನ ದೇಶೀಯ ರಾಜರುಗಳ ಜೊತೆ ಒಪ್ಪಂದಗಳನ್ನು ಮಾಡಿಕೊಂಡನು.
- ❖ ಡೂಪ್ಲೆ ಕಟ್ಟಿದ ದೇಶೀ ಸೇನೆಯಿಂದಲೇ ಹೈದರಾಲಿಯು ಸಹ ತರಬೇತಿ ಪಡೆದಿದ್ದನು. ಡೂಪ್ಲೆಯು ಬ್ರಿಟಿಷರ ಅಧಿಪತ್ಯ ಸ್ಥಾಪನೆಗೆ ಸವಾಲಾಗಿ ಕಂಡಿದ್ದನು.
- ❖ ಡೂಪ್ಲೆಯು 1746 ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿ ಯಶಸ್ವಿಯಾಗಿದ್ದನು.
- ❖ ಫ್ರೆಂಚರು ಮತ್ತು ಬ್ರಿಟಿಷರ ನಡುವಿನ ಸಂಘರ್ಷವು 1754 ರ ವರೆಗೆ ನಡೆಯಿತು. ತದನಂತರದಲ್ಲಿ ಫ್ರಾನ್ಸಿನ ಸರ್ಕಾರವೇ ಶಾಂತಿಯನ್ನು ಬಯಸಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡಿತು.

**11. ಕಪ್ಪು ಕೋಣೆ ದುರಂತದ ಬಗ್ಗೆ ವಿವರಿಸಿ.**

- ❖ ಬಂಗಾಳದ ನವಾಬನಾದ ಸಿರಾಜುದ್ದೌಲನು 1756 ರಲ್ಲಿ ಇಂಗ್ಲೆಂಡಿನ ವ್ಯಾಪಾರ ಕೇಂದ್ರವಾಗಿದ್ದ ಕಾಸಿಂ ಬಜಾರ್‌ನ ಮೇಲೆ ದಾಳಿಮಾಡಿ ಕಲ್ಕತ್ತಾದ ಸಂತ ಡೇವಿಡ್ ಕೋಟೆಯನ್ನು ವಶಪಡಿಸಿಕೊಂಡನು.



Use e-papers for save trees-InyaTrust.com

- ❖ ಈ ದಾಳಿಯ ಸಮಯದಲ್ಲಿ ಸೆರೆಹಿಡಿದ ಬ್ರಿಟಿಷ್ ಸೈನಿಕರನ್ನು ಕಲ್ಕತ್ತಾದ ಒಂದು ಕಿರಿದಾದ ಕೋಣೆಯಲ್ಲಿ ಶಿಕ್ಷೆಗಾಗಿ ಕೂಡಿಟ್ಟನು. ಉರಿ ಬೇಸಿಗೆಯ ಬಿಸಿಲಿನಿಂದ ಅದರಲ್ಲಿ ಸೆರೆಯಾಗಿದ್ದ 146 ಸೈನಿಕ ಕೈದಿಗಳಲ್ಲಿ 123 ಜನರು ಮರಣ ಹೊಂದಿದರು. ಇದನ್ನೇ ಕಪ್ಪು ಕೋಣೆಯ ದುರಂತ ಎನ್ನುವರು.

**12. ದಿವಾನಿ ಹಕ್ಕು ಎಂದರೇನು?**

ಭೂಕಂದಾಯವನ್ನು ವಸೂಲಿ ಮಾಡುವ ಹಕ್ಕಿಗೆ ದಿವಾನಿ ಹಕ್ಕು ಎನ್ನುವರು.

**13. ಯುರೋಪಿಯನ್ನರು ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ಪ್ರೇರಣೆ ನೀಡಿದ ಅಂಶ ಯಾವುದು?**

- ❖ ಬಹುಕಾಲದಿಂದಲೂ ಯುರೋಪಿಯನ್ನರು ಮತ್ತು ಅರಬ್ಬರು ಏಷ್ಯಾ ಭೂ ಮಾರ್ಗದ ಮೂಲಕ ಭಾರತದೊಂದಿಗೆ ವ್ಯಾಪಾರವನ್ನು ಹೊಂದಿದ್ದರು.
- ❖ ಕಾನ್‌ಸ್ಟಾಂಟಿನೋಪಲ್‌ನಿಂದ ಏಷ್ಯಾದ ಮೂಲಕವಾಗಿ ಪ್ರಯಾಣ ಮಾಡಿ ಅವರು ಭಾರತಕ್ಕೆ ಬರುತ್ತಿದ್ದರು. ಆಗ ಭಾರತಕ್ಕೆ ಇದ್ದ ಮಾರ್ಗ ಇದೊಂದೇ ಆಗಿತ್ತು.
- ❖ ಆದರೆ 1453 ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟ್ಯಾಂಟಿನೋಪಲನ್ನು ವಶಪಡಿಸಿಕೊಂಡ ನಂತರ ಈ ವ್ಯಾಪಾರ ವಹಿವಾಟಿಗೆ ಧಕ್ಕೆಯುಂಟಾಯಿತು.
- ❖ ಇದು ಯುರೋಪಿಯನ್ನರು ಭಾರತಕ್ಕೆ ಪರ್ಯಾಯ ಮಾರ್ಗವನ್ನು ಹುಡುಕಲು ಬಹಳ ಮುಖ್ಯವಾದ ಪ್ರೇರಣೆಯಾಗಿದೆ.

**14. ಯುರೋಪಿಯನ್ನರು ಭಾರತಕ್ಕೆ ಪರ್ಯಾಯ ಮಾರ್ಗವನ್ನು ಏಕೆ ಕಂಡುಕೊಂಡರು?**

ವ್ಯಾಪಾರದ ಮೇಲೆ ಇಟಲಿಗೆ ಇದ್ದ ಏಕ ಸ್ವಾಮ್ಯತೆಯನ್ನು ಮುರಿಯಲು

ಪೂರ್ವ ದೇಶಗಳ ಸಂಪತ್ತಿನ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು

ಧರ್ಮಪ್ರಚಾರಕ್ಕಾಗಿ ಉತ್ಸುಕರಾಗಿದ್ದ ಮಿಷನರಿಗಳು.

**15 ಇಟಲಿಯ ಸಂಪದ್ಭರಿತ ನಗರಗಳು ಯಾವುವು?**

ವೆನಿಸ್. ಜಿನೋವಾ, ಮಿಲಾನ್, ಫ್ಲಾರೆನ್ಸ್



**Use e-papers for save trees-InyaTrust.com**

# ಅಧ್ಯಾಯ – 2

# ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

**ಮುಖ್ಯಾಂಶಗಳು:**

- ಮೊಘಲ್ ಸಾಮ್ರಾಜ್ಯದ ಪತನದ ನಂತರ 18ನೆಯ ಶತಮಾನದಲ್ಲಿ ಸಣ್ಣ ಸಣ್ಣ ಪ್ರಾದೇಶಿಕ ಶಕ್ತಿಗಳು ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲಿ ಭಾರತವನ್ನು ಪ್ರವೇಶಿಸಿದ ಯುರೋಪಿಯನ್ ವಸಾಹತುಶಾಹಿ ಶಕ್ತಿಗಳು ಈ ದೇಶೀಯ ಶಕ್ತಿಗಳು ವಿರುದ್ಧ ಪ್ರಾಬಲ್ಯಕ್ಕಾಗಿ ಕಾದಾಡಬೇಕಾಯಿತು. ಇದರ ನಡುವೆ ದೇಶೀಯ ಶಕ್ತಿಗಳು ಪರಮಾಧಿಕಾರಕ್ಕಾಗಿ ತಮ್ಮ ತಮ್ಮ ನಡುವೆಯೂ ಹೋರಾಟ ನಡೆಸಿದ ಸಂದರ್ಭದಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು ಬೇರೆ ಬೇರೆ ಪ್ರಾದೇಶಿಕ ಶಕ್ತಿಗಳು ಹಿಡಿತಕ್ಕೆ ಒಳಗಾದವು.
- ಕೆಲವು ಪ್ರದೇಶಗಳು ಮರಾಠರ, ಇನ್ನು ಕೆಲವು ಹೈದಾರಬಾದ್ ನಿಜಾಮ ಮತ್ತು ಕರ್ನಾಟಿಕ್‌ನ ನವಾಬನ ಆಳ್ವಿಕೆಗೆ ಒಳಗಾದವು.
- ಕಾಲಾನುಕ್ರಮೇಣ ಇಂಗ್ಲಿಷರು ಈ ದೇಶೀಯ ಸಂಸ್ಥಾನಗಳು ಮೇಲೆ ಹಿಡಿತವನ್ನು ಸಾಧಿಸಿದಾಗ ಕನ್ನಡ ಮಾತನಾಡುವ ಕೆಲವು ಪ್ರದೇಶಗಳು ಇಂಗ್ಲಿಷರ ಮುಂಬೈ ಪ್ರೆಸಿಡೆನ್ಸಿಗೆ, ಇನ್ನು ಕೆಲವು ಮದ್ರಾಸ್ ಪ್ರೆಸಿಡೆನ್ಸಿ ಹಾಗೂ ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು.
- ಸ್ವತಂತ್ರ ಸಂಸ್ಥಾನವಾಗಿದ್ದ ಕೊಡಗು ರಾಜ್ಯವು ಹಾಲೇರಿ ಅರಸರ ಆಳ್ವಿಕೆಗೆ ಒಳಪಟ್ಟಿತ್ತು.
- 18ನೆಯ ಶತಮಾನದ ಉತ್ತರಾರ್ಧದಲ್ಲಿ ಮೈಸೂರು ರಾಜ್ಯದ ಸೈನ್ಯಾಧಿಕಾರಿ ಹೈದಾರಾಲಿ ಪ್ರವರ್ಧಮಾನಕ್ಕೆ ಬಂದಾಗ ಮರಾಠರು ಹಾಗೂ ಹೈದಾರಬಾದಿನ ನಿಜಾಮನು ಬ್ರಿಟಿಷರೊಂದಿಗೆ ಸೇರಿ ಅವನ ಮೇಲೆ ಆಕ್ರಮಣ ನಡೆಸಿದರು.ಆದರೆ ಹೈದರಾಲಿಯು ಬ್ರಿಟಿಷರನ್ನು ಎದುರಿಸಿ ಮದ್ರಾಸಿನವರೆಗೂ ತಲುಪಿದಾಗ ಬ್ರಿಟಿಷರು ಶಾಂತಿ ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಮೊದಲನೆ ಆಂಗ್ಲೋ– ಮೈಸೂರು ಯುದ್ಧವು ಕೊನೆಗೊಂಡಿತು.
- ಬ್ರಿಟಿಷರು ಈ ಒಪ್ಪಂದದಂತೆ ನಡೆದುಕೊಳ್ಳದೆ ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿದ್ದ ಫ್ರೆಂಚರ ವಸಾಹತುವಾಗಿದ್ದ ಮಾಹೆಯನ್ನು ವಶಪಡಿಸಿಕೊಂಡಿದ್ದು ಎರಡನೆಯ ಮೈಸೂರು ಯುದ್ಧಕ್ಕೆ ಕಾರಣವಾಯಿತು.
- ಈ ಯುದ್ಧದಲ್ಲಿ ಹೈದರಾಲಿಗೆ, ಸೋಲುಂಟಾಯಿತು.ಹೈದರಾಲಿಯು ಮರಣ ಹೊಂದಿದ ಮೇಲೆ ಅವನ ಮಗನಾದ ಟಿಪ್ಪು ಸುಲ್ತಾನನು ಯುದ್ಧವನ್ನು ಮುಂದುವರೆಸಿದನು. ಈ ಯುದ್ಧವು ಮಂಗಳೂರಿನ ಶಾಂತಿ ಒಪ್ಪಂದದೊಂದಿಗೆ ಕೊನೆಗೊಂಡಿತು.
- ಟಿಪ್ಪು ಇಂಗ್ಲಿಷರ ಸ್ನೇಹಿತನಾದ ತಿರುವಾಂಕೂರಿ ರಾಜನ ಮೇಲೆ ನಡೆಸಿದ ದಾಳಿ ಮೂರನೇ ಮೈಸೂರು ಯುದ್ಧಕ್ಕೆ ಕಾರಣವಾಯಿತು. ಇಂಗ್ಲಷರೊಂದಿಗೆ 1790 ರಲ್ಲಿ ಆರಂಭವಾದ ಈ ಯುದ್ಧವು ಎರಡು ವರ್ಷಗಳ ನಂತರ ಶ್ರೀರಂಗಪಟ್ಟಣ ಒಪ್ಪಂದದೊಂದಿಗೆ ಕೊನೆಗೊಂಡಿತು.
- 1798 ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಆಗಮಿಸಿದ ಲಾರ್ಡ್ ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಹೇರಲು ಪ್ರಯತ್ನಿಸಿದಾಗ ಟಪ್ಪು ಅದನ್ನು ತಿರಸ್ಕರಿಸಿ ಯುದ್ಧಕ್ಕೆ ತಯಾರಿಯನ್ನು ನಡೆಸಿದಾಗ ವೆಲ್ಲೆಸ್ಲಿ ಅವನ ವಿರುದ್ಧ ಯುದ್ಧ ಸಾರಿದನು. ನಾಲ್ಕನೇ ಆಂಗ್ಲೋ– ಮೈಸೂರು ಯುದ್ಧವೆಂದು ಕರೆಯಲಾದ ಈ ಯುದ್ಧದಲ್ಲಿ ಟಿಪ್ಪು ಸಾವನ್ನಪ್ಪಿದನು.
- ಈ ಯುದ್ಧದ ಪರಿಣಾಮವಾಗಿ ಮೈಸೂರು ರಾಜ್ಯದ ಪ್ರದೇಶವನ್ನು ಬ್ರಿಟಿಷರು ಮತ್ತು ನಿಜಾಮರು ಹಂಚಿಕೊಂಡು ಹಳೇ ಮೈಸೂರಿನ ಭಾಗವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಲಾಯಿತು.
- ಯದುರಾಯ ಮತ್ತು ಕೃಷ್ಣರಾಯರಿಂದ ಪ್ರಾರಂಭವಾದ ಮೈಸೂರು ಒಡೆಯರ ಆಳ್ವಿಕೆ 1947 ರವರೆಗೂ ನಡೆಯಿತು.



Use e-papers for save trees-InyaTrust.com

- ಕಂಠೀರವ ನರಸರಾಜ ಒಡೆಯರು, ಚಿಕ್ಕದೇವರಾಜ ಒಡೆಯರು ,ಕೃಷ್ಣರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು, ಜಯಚಾಮರಾಜ ಒಡೆಯರು ಮೈಸೂರನ್ನು ಆಳಿದ ಒಡೆಯರು.
- ಬೀದರ್ ಮೊಘಲ್ ಸಾಮ್ರಾಟ ಔರಂಗಜೇಬನ ದಖನ್ ಪ್ರಾಂತ್ಯದ ಭಾಗವಾಗಿತ್ತು. ಅವನ ಮರಣ ನಂತರ ಇಡೀ ದಖನ್ ಪ್ರಾಂತ್ಯವು ಹೈದರಾಬಾದಿನ ನಿಜಾಮನ ಕೈವಶವಾದಾಗ ಕನ್ನಡ ಭಾಷಿಕ ಪ್ರದೇಶಗಳಾಗಿದ್ದ ಬೀದರ್, ಗುಲ್ಬರ್ಗಾ ಮತ್ತು ರಾಯಚೂರಿನ ಪ್ರದೇಶಗಳು ನಿಜಾಮನ ಆಳ್ವಿಕೆಗೆ ಒಳಪಟ್ಟವು.
- ಇಂದಿನ ಬೀದರ್, ಗುಲ್ಬರ್ಗಾ ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಭಾಗಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶಗಳೆಂದು ಗುರುತಿಸಲಾಗಿದೆ.
- ಕನ್ನಡ ಮಾತನಾಡುವ ಬಳ್ಳಾರಿ , ದಕ್ಷಿಣ ಕನ್ನಡ ಪ್ರದೇಶಗಳು 19ನೆಯ ಶತಮಾನದಲ್ಲಿ ಮದ್ರಾಸ್ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟವು.
- ಬೆಳಗಾವಿ, ಬಿಜಾಪುರ, ಧಾರವಾಡ ಹಾಗೂ ಉತ್ತರಕನ್ನಡದ ಭಾಗಗಳು ಮುಂಬೈ ಪ್ರಾಂತ್ಯದ ಆಳ್ಬಿಕೆಗೆ ಒಳಪಟ್ಟಿದ್ದವು.
- ಸುಮಾರು ಎಂಟು ಶತಮಾನಗಳ ಕಾಲ ಕೊಡಗನ್ನು ಆಳಿದ ಚೆಂಗಾಳ್ವರು 17ನೆ ಯ ಶತಮಾನದ ವೇಳೆಗೆ ತಮ್ಮ ಅಧಿಕಾರವನ್ನು ಕಳೆದುಕೋಡರು. ಇವರ ನಂತರ ಹಾಲೇರಿ ಅರಸರು ಆಳಿದರು. 18ನೆಯ ಶತಮಾನದ ವೇಳೆಗೆ ಕೊಡಗು ಹೈದರ್ – ಟಿಪ್ಪುವಿನ ಆಳ್ವಿಕೆಗೆ ಒಳಪಟ್ಟಾಗ ರಾಜ್ಯ ಕಳೆದುಕೊಂಡ ಹಾಲೇರಿ ಅರಸರಿಗೆ ಬ್ರಿಟಿಷರು ಆಶ್ರಯ ನೀಡಿದರು. ಟಿಪ್ಪುವಿನ ಮರಣ ನಂತರ ಮತ್ತೆ ಹಾಲೇರಿ ಅರಸರು ಕೊಡಗನ್ನು ಆಳಿದರು.
- ಗಡೀಪಾರಾದ ಚಿಕ್ಕವೀರರಾಜನ ಮರಣಾನಂತರ ಕೊಡಗು ಬ್ರಿಟಿಷರು ಕೈ ಸೇರಿತು.

<u>ಪ್ರಮುಖ ವ್ಯಕ್ತಿಗಳು</u>

| | |
|---|---|
| **ಹೈದರಾಲಿ** | ಮೈಸೂರು ರಾಜ್ಯದ ಸೈನ್ಯಾಧಿಕಾರಿ |
| **ಪೂರ್ಣಯ** | ಮೈಸೂರಿನ ಮೊದಲ ದಿವಾನರು |
| **ಲಾರ್ಡ್ ವೆಲ್ಲೆಸ್ಲಿ** | ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದರು |
| **ಯದುರಾಯ ಮತ್ತು ಕೃಷ್ಣರಾಯ** | ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಪ್ರಾರಂಭಿಸಿದರು. |
| **ಟಿಪ್ಪುಸುಲ್ತಾನ್** | ಹೈದರಾಲಿಯ ಮಗ ಹಾಗೂ ಮೈಸೂರಿನ ಹುಲಿ ಎಂದು ಹೆಸರು |
| **ಕೃಷ್ಣರಾಜ ಒಡೆಯರ್** | ಇವರ ಆಳ್ವಿಕೆಯಲ್ಲಿ ಮೈಸೂರು ರಾಮರಾಜ್ಯ ಎಂದು ಹೆಸರಾಯಿತು. |
| **ಜಯಚಾಮರಾಜ ಒಡೆಯರ್** | ಮೈಸೂರು ರಾಜ್ಯದ ಕೊನೆಯ ಅರಸರು |
| **ಲಾರ್ಡ್ ಡಾಲ್‌ಹೌಸಿ** | ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಕಾನೂನು ತಂದವನು |
| **ರಾಜ ವೆಂಕಟಪ್ಪ ನಾಯಕ** | ಸುರಪುರದ ನಾಯಕ (ಇಕ್ಕೇರಿ) |



Use e-papers for save trees-InyaTrust.com

**ವರ್ಷಗಳು ಮತ್ತು ಘಟನೆಗಳು**

**1767** ಮರಾಠರು ಹಾಗೂ ಹೈದರಾಬಾದಿನ ನಿಜಾಮನೊಂದಿಗೆ ಬ್ರಿಟಿಷರು ಸೇರಿ ಮೈಸೂರಿನ ಹೈದರಾಲಿಯ ಮೇಲೆ ಆಕ್ರಮಣ ನಡೆಸಿದರು.

**1761** ಹೈದರಾಲಿ ನಂಜರಾಜನನ್ನು ಪದಚ್ಯುತಿಗೊಳಿಸಿ ಮೈಸೂರಿನ ಮೇಲೆ ತನ್ನ ಹಿಡಿತವನ್ನು ಸಾಧಿಸಿದನು.

**1799** ಟಿಪ್ಪುವಿನ ಮರಣ

**1798** ಲಾರ್ಡ್ ವೆಲ್ಲೆಸ್ಲಿ ಗವರ್ನರ್ ಜನರಲ್ ಆಗಿ ಭಾರತಕ್ಕೆ ಆಗಮಿಸಿದನು.

**1857** ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

**1862** ಮಂಗಳೂರು ಬ್ರಿಟಿಷರ ಕೈವಶವಾಯಿತು.

**1700** ಮರಾಠರು ಕೆನರಾ ಪ್ರದೇಶವನ್ನು ಆಕ್ರಮಿಸಿಕೊಂಡರು

**1836** ಧಾರವಾಡದಿಂದ ಬೆಳಗಾವಿಯನ್ನು ಬೇರ್ಪಡಿಸಲಾಯಿತು.

**I. ಕೊಟ್ಟಿರುವ 4 ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**1. ಮರಾಠರು ಹಾಗೂ ಹೈದರಾಬಾದಿನ ನಿಜಾಮನೊಂದಿಗೆ ಬ್ರಿಟಿಷರು ಸೇರಿ ಮೈಸೂರಿನ ಹೈದರಾಲಿಯ ಮೇಲೆ ಆಕ್ರಮಣ ಮಾಡಿದ ವರ್ಷ**

(a) 1767 (b) 1676 (c) 1776 (d) 1667

**2. ಹೈದರಾಲಿ ನಂಜರಾಜನನ್ನು ಪದಚ್ಯುತಿ ಗೊಳಿಸಿದ ವರ್ಷ**

(a) 1771 (b) 1761 (c) 1781 (d) 1716

**3. ಮಂಗಳೂರಿನ ಶಾಂತಿ ಒಪ್ಪಂದ ನಡೆದದ್ದು**

(a) 1748 (b) 1781 (c) 1784 (d) 1874

**4. ________ ನೇತೃತ್ವದ ಇಂಗ್ಲೀಷ್ ಸೈನ್ಯವು ಹೈದರಾಲಿಯನ್ನು ಯುದ್ಧದಲ್ಲಿ ಸೋಲಿಸಿತು.**

**(a) ರಾಬರ್ಟ್ ಕ್ಲೈವ್** (b) ಸರ್ಐರ್‌ಕೂಟ್ (c) ಡೂಪ್ಲೆ (d) ಮರಾಠ



Use e-papers for save trees-InyaTrust.com

**5. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು**

(a) ಐರ್‌ಕೂಟ್ (b) ದೇವರಾಜ (c) ನಂಜರಾಜ **(d) ಲಾರ್ಡ್‌ವೆಲ್ಲೆಸ್ಲಿ**

**6. ವಿಜಯನಗರದ ಪ್ರತಿನಿಧಿ ಶ್ರೀರಂಗರಾಯರನ್ನು ಸೋಲಿಸಿದವರು**

(a) ಕಂಠೀರವ ನರಸರಾಜ ಒಡೆಯರ್ **(b) ರಾಜ ಒಡೆಯರ್**

(c) ಮುಮ್ಮಡಿ ಕೃಷ್ಣರಾಜ ಒಡೆಯರ್ (d) ಚಾಮರಾಜ ಒಡೆಯರ್

**7. ________ ರಲ್ಲಿ ಹೈದರಾಲಿಯು ಬಂದನೂರನ್ನು ವಶಪಡಿಸಿಕೊಂಡನು.**

(a) 1763 (b) 1780 (c) 1870 (d) 1862

**8. 1862 ರಲ್ಲಿ ಕುಂದಾಪುರದ ಉತ್ತರಕ್ಕಿರುವ ಪ್ರದೇಶಗಳನ್ನು ______ ವರ್ಗಾಯಿಸಲಾಯಿತು.**

(a) ಹೈದ್ರಾಬಾದ್ ಪ್ರಾಂತ್ಯ (b) ಬಾಂಬೆಪ್ರಾಂತ್ಯ

(c) ಮದ್ರಾಸ್ ಪ್ರಾಂತ್ಯ (d) ಕಲ್ಕತ್ತಾ ಪ್ರಾಂತ್ಯ

**9. ______ ರಲ್ಲಿ ಧಾರವಾಡದಿಂದ ಬೆಳಗಾವಿಯನ್ನು ಬೇರ್ಪಡಿಸಲಾಯಿತು.**

(a) 1368 (b) 1638 (c) 1683 (d) 1836

**10. ಹಾಲೇರಿ ಅರಸರಲ್ಲಿ ಪ್ರಮುಖನಾದವನು**

(a) (b)

(c) (d)

## II. ಸೂಕ್ತ ಪದಗಳಿಂದ ಬಿಟ್ಟ ಸ್ಥಳ ತುಂಬಿರಿ.

1. ಮೊದಲನೇ ಆಂಗ್ಲೋ–ಮೈಸೂರು ಯುದ್ದವು **ಮದ್ರಾಸ್** ಒಪ್ಪಂದದೊಂದಿಗೆ ಕೊನೆಗೊಂಡಿತು.
2. **ಮಾಹೆ** ಫ್ರೆಂಚರ ವಸಾಹತುವಾಗಿತ್ತು.
3. ಹೈದರಾಲಿಯ ಮಗ **ಟಿಪ್ಪುಸುಲ್ತಾನ್**
4. **ಚೆಂಗಾಳ್ವರು** ಸುಮಾರು 8 ಶತಮಾನಗಳ ಕಾಲ ಕೊಡಗನ್ನು ಆಳಿದರು



Use e-papers for save trees-InyaTrust.com

5. ಇಕ್ಕೇರಿಯ **ವೆಂಕಟಪ್ಪನಾಯಕನು** 17ನೆಯ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಕನ್ನಡವನ್ನು ವಶಪಡಿಸಿಕೊಂಡನು

6. ಮೈಸೂರು ರಾಜ್ಯದ ಕೊನೆಯ ಅರಸರು **ಜಯಚಾಮರಾಜ ಒಡೆಯರು**

7. ಮೈಸೂರು ಪ್ರಾಂತ್ಯದ ಇಬ್ಬರು ಮಂತ್ರಿಗಳೆಂದರೆ **ನಂಜರಾಜ ಮತ್ತು ದೇವರಾಜ**

8. ಶ್ರೀರಂಗಪಟ್ಟಣ ಒಪ್ಪಂದದ ಪ್ರಕಾರ 330 ಲಕ್ಷ ರೂಪಾಯಿಗಳನ್ನು ಯುದ್ಧ ಪರಿಹಾರ ಧನವಾಗಿ ಬ್ರಿಟಿಷರಿಗೆ ನೀಡಬೇಕಾಯಿತು.

9. ಹಲಗಲಿ **ಮುಧೋಳ ಸಂಸ್ಥಾನದ** ಆಳ್ವಿಕೆಗೆ ಒಳಪಟ್ಟಿತು.

10. 1862 ರಲ್ಲಿ **ಮಂಗಳೂರು** ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು.

11. **ಸ್ವಾಮಿ ಅಪರಾಂಪರ** ಎನ್ನುವ ಸನ್ಯಾಸಿಯು ಬ್ರಿಟಿಷರ ವಿರುದ್ಧ ರೈತರನ್ನು ಸಂಘಟಿಸಲು ಪ್ರಯತ್ನಿ ಬಂಧಿಸಲ್ಪಟ್ಟನು.

12. ಸ್ವತಂತ್ರ ಕೊಡಗು ರಾಜ್ಯವು **ಹಾಲೇರಿ ಅರಸರ** ಆಳ್ವಿಕೆಗೆ ಒಳಪಟ್ಟಿತು.

13. ಇಂಗ್ಲೀಷರು **ಮಾಹೆ**ಯನ್ನು ವಶಪಡಿಸಿಕೊಂಡದ್ದು, ಎರಡನೆಯ ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣವಾಯಿತು.

14. **1784** ರಲ್ಲಿ ಮಂಗಳೂರಿನ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

15. **1798** ರಲ್ಲಿ ಲಾರ್ಡ್ ವೆಲ್ಲೆಸ್ಲಿ ಭಾರತಕ್ಕೆ ಆಗಮಿಸಿದನು

16. **1799** ರಲ್ಲಿ ಟಿಪ್ಪು ಮರಣ ಹೊಂದಿದನು

17. **1769** ರಲ್ಲಿ ಹೈದರಾಲಿ ಮರಣ ಹೊಂದಿದನು

18. ಟಿಪ್ಪು ಸುಲ್ತಾನನ ರಾಜಧಾನಿ **ಶ್ರೀರಂಗಪಟ್ಟಣ**

19. ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ರಾಜ್ಯವು **ರಾಮರಾಜ್ಯ** ಎಂಬ ಕೀರ್ತಿಗೆ ಪಾತ್ರವಾಯಿತು.

20. ನರಗುಂದ ನಾಯಕರ ನೇತೃತ್ವದಲ್ಲಿ ಇಂಗ್ಲೀಷರ ವಿರುದ್ಧ ನಡೆದ ಪ್ರತಿಭಟನೆಯನ್ನು **ನರಗುಂದದ ಬಂಡಾಯ** ಎಂದು ಕರೆಯುತ್ತಾರೆ.

21. ಕೊಡಗಿನ ವಿಂಗಡಣೆಯ ನಂತರ ಕೆಳಕೊಡಗು ಪ್ರದೇಶವನ್ನು ಮದ್ರಾಸ್ **ಪ್ರೆಸಿಡೆನ್ಸಿಗೆ** ಸೇರಿಸಲಾಯಿತು.



Use e-papers for save trees-InyaTrust.com

**III.** **ಹೊಂದಿಸಿ ಬರೆಯಿರಿ.**

| | A | B | ಉತ್ತರ |
|---|---|---|---|
| 1. | **ಮೊದಲನೆ ಆಂಗ್ಲೋ ಮೈಸೂರು ಯುದ್ಧ** | a) 1781 | **e)** |
| 2. | **ಎರಡನೇ ಆಂಗ್ಲೋ ಮೈಸೂರು ಯುದ್ಧ** | b) 1783 | **a)** |
| 3. | **ಪೂರ್ಣಯುದ್ಧ** | c) 1862 | **f)** |
| 4. | **ಬಿಜಾಪುರದ ಪತನ** | d**) 1686** | **d)** |
| | | e) ಮದ್ರಾಸ್ ಶಾಂತಿ ಒಪ್ಪಂದ | |
| | | **f)** ಮೈಸೂರಿನ ಮೊದಲ ದಿವಾನ | |

**IV.** **ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. **ಹೈದರಾಲಿಯು ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದನು.**

- ❖ 1767ರಲ್ಲಿ ಮರಾಠರು ಹಾಗೂ ಹೈದರಾಬಾದಿನ ನಿಜಾಮನೊಂದಿಗೆ ಬ್ರಿಟಿಷರು ಸೇರಿ ಮೈಸೂರಿನ
- ❖ ಹೈದರಾಲಿಯ ಮೇಲೆ ಆಕ್ರಮಣ ನಡೆಸಿದರು.
- ❖ ಆದರೆ ಹೈದರಾಲಿಯು ಚಾಣಾಕ್ಷತನದಿಂದ ಮರಾಠರನ್ನು ಹಾಗೂ ಹೈದರಾಬಾದಿನ ನಿಜಾಮನನ್ನೂ ತನ್ನ ಕಡೆಗೆ ಒಲಿಸಿಕೊಳ್ಳುವಲ್ಲಿ ಸಫಲನಾದನು.
- ❖ ಹೈದರಾಲಿಯು ಬ್ರಿಟಿಷರನ್ನು ಎದುರಿಸಿ ಮುಂದೆ ಮದ್ರಾಸಿನವರೆಗೂ ತಲುಪಿದನು.
- ❖ ಇದರಿಂದ ಬ್ರಿಟಿಷರು ಮದ್ರಸ್ ಶಾಂತಿ ಒಪ್ಪಂದ ಸಹಿ ಹಾಕುವುದು ಅನಿವಾರ್ಯವಾಯಿತು.
- ❖ ಈ ಒಪ್ಪಂದದೊಂದಿಗೆ ಮೊದಲನೆ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಂಡಿತು.

2. **ಎರಡನೇ ಮೈಸೂರು ಯುದ್ಧಕ್ಕೆ ಕಾರಣವೇನು**?

ಮಾಹೆಯು ಫ್ರೆಂಚರ ವಸಾಹತುವಾಗಿದ್ದು, ಹೈದರಾಲಿಯ ನಿಯಂತ್ರಕ್ಕೊಳಪಟ್ಟಿತ್ತು. ಇಂಗ್ಲೀಷರು ಮಾಹೆಯನ್ನು ವಶಪಡಿಸಿಕೊಂಡದ್ದು ಎರಡನೆಯ ಮೈಸೂರು ಯುದ್ಧಕ್ಕೆ ಕಾರಣವಾಯಿತು.

3. **ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪುವಿಗೆ ಅನಿವಾರ್ಯವಾಗಿತ್ತು. ವಿಮರ್ಶಿಸಿ.**

- ❖ ಇಂಗ್ಲೀಷರು ಟಿಪ್ಪುವನ್ನು ದಕ್ಷಿಣ ಭಾರತದ ಪ್ರಬಲ ವೈರಿ ಎಂದು ಪರಿಗಣಿಸಿದ್ದರು.
- ❖ ಟಿಪ್ಪು ಇಂಗ್ಲೀಷರ ಸ್ನೇಹಿತನಾದ ತಿರುವಾಂಕೂರಿನ ಮೇಲೆ ದಾಳಿ ನಡೆಸಿದಾಗ ಇಂಗ್ಲೀಷರೊಂದಿಗಿನ ಸಂಘರ್ಷವು ಮತ್ತೆ ಆರಂಭವಾಯಿತು.



Use e-papers for save trees-InyaTrust.com

- ❖ ಇದು ಮೂರನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣವಾಯಿತು.
- ❖ 1790 ರಲ್ಲಿ ಆರಂಭವಾದ ಈ ಯುದ್ಧವು ಎರಡು ವರ್ಷಗಳ ನಂತರ 1792 ರಲ್ಲಿ 'ಶ್ರೀರಂಗಪಟ್ಟಣ ಒಪ್ಪಂದ' ದೊಂದಿಗೆ ಕೊನೆಗೊಂಡಿತು.
- ❖ ಈ ಯುದ್ಧದಲ್ಲಿ ಟಿಪ್ಪು ತೀವ್ರವಾದ ಸೋಲನ್ನು ಅನುಭವಿಸಿದನು.
- ❖ ಪರಿಣಾಮವಾಗಿ ಅವನು ತನ್ನ ಅರ್ಧ ರಾಜ್ಯವನ್ನು ಬ್ರಿಟಿಷರಿಗೆ ಕೊಡುವುದರ ಜೊತೆಗೆ 330 ಲಕ್ಷ ರೂಪಾಯಿಗಳನ್ನು ಯುದ್ಧ ಪರಿಹಾರ ಧನವಾಗಿ ಬ್ರಿಟಿಷರಿಗೆ ನೀಡಬೇಕಾಯಿತು.
- ❖ ಅದನ್ನು ನೀಡುವವರೆಗೂ ಟಿಪ್ಪುವಿನ ಇಬ್ಬರು ಮಕ್ಕಳನ್ನು ಇಂಗ್ಲೀಷರು ಒತ್ತೆಯಾಳುಗಳಾಗಿ ಇಟ್ಟುಕೊಂಡರು. ಮೈಸೂರಿನ ಅಧೀನದಲ್ಲಿದ್ದ ತಮಿಳುನಾಡಿನ ಕೆಲವು ಪ್ರದೇಶಗಳು ಮತ್ತು ಮಲಬಾರ್ ಬ್ರಿಟಿಷರ ವಶವಾಯಿತು.

**4. ಹೈದರಾಬಾದ್ ಕರ್ನಾಟಕದ ಪ್ರದೇಶಗಳಾವುವು?**

ಹೈದರಾಬಾದಿನ ನಿಜಾಮನ ನೇರ ಆಳ್ವಿಕೆಗೆ ಒಳಪಟ್ಟಿದ್ದ ಇಂದಿನ ಬೀದರ್, ಗುಲ್ಬರ್ಗಾ, ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಭಾಗಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶಗಳೆಂದು ಗುರುತಿಸಲಾಗಿದೆ.

**5. ಬ್ರಿಟಿಷರು ಮತ್ತು ಇಕ್ಕೇರಿಯ ವೆಂಕಟಪ್ಪ ನಾಯಕರ ಭಾಂಧವ್ಯವನ್ನು ವಿವರಿಸಿ.**

- ❖ ಇಕ್ಕೇರಿಯ ವೆಂಕಟಪ್ಪ ನಾಯಕನು 17ನೆಯ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಕನ್ನಡವನ್ನು ವಶಪಡಿಸಿಕೊಂಡನು.
- ❖ ತದನಂತರದಲ್ಲಿ ಈತನು ತನ್ನ ರಾಜಧಾನಿಯನ್ನು ಬಿದನೂರಿಗೆ ವರ್ಗಾಯಿಸಿದನು,
- ❖ 18ನೆಯ ಶತಮಾನದ ಮಧ್ಯಭಾಗದವರೆಗೂ ಈ ನಾಯಕನ ಅಧೀನದಲ್ಲಿದ್ದ ಕೆಳದಿ ದೊರೆಗಳ ಆಳ್ವಿಕೆ ಮುಂದುವರೆಯಿತು.
- ❖ ದಕ್ಷಿಣ ಕನ್ನಡದೊಂದಿಗೆ ಇಂಗ್ಲೀಷರ ಸಂಬಂಧವು 1737ರಲ್ಲಿ ಪ್ರಾರಂಭವಾಯಿತು.
- ❖ ಇವರು ಬಿದನೂರಿನ ರಾಜನಿಂದ ವ್ಯಾಪಾರಿ ಅನುಕೂಲವನ್ನು ಪಡೆದುದಲ್ಲದೆ ಮೆಣಸು ಮತ್ತು ಏಲಕ್ಕಿಯ ವ್ಯಾಪಾರದಲ್ಲಿಯೂ ಏಕಸ್ವಾಮ್ಯತೆಯನ್ನು ಕೆಲವು ಪ್ರದೇಶಗಳಲ್ಲಿ ಪಡೆದುಕೊಂಡನು.

**6. ಕೊಡಗಿನ ದಂಗೆಯಲ್ಲಿ ಗುಡ್ಡೇಮನೆ ಅಪ್ಪಯ್ಯಗೌಡರ ಪಾತ್ರವನ್ನು ವಿವರಿಸಿ.**

- ❖ ಕೊಡಗಿನ ಒಳಗೂ ಕೂಡ ಗುಡ್ಡೇಮನೆ ಅಪ್ಪಯ್ಯಗೌಡನ ನೇತೃತ್ವದಲ್ಲಿ ಹೋರಾಟ ನಡೆಯಿತು.
- ❖ ಈ ಹೋರಾಟವನ್ನು ಬ್ರಿಟಿಷರು ತಮ್ಮ ಕೊಡಗು ದಿವಾನರ ಮೂಲಕ ಹತ್ತಿಕ್ಕಿದರು.
- ❖ ಇದನ್ನು ಬ್ರಿಟಿಷರು ದಂಗೆ ಎಂದು ಬಿಂಬಿಸಿದರು
- ❖ ಹೋರಾಟದ ಪ್ರಮುಖರಲ್ಲಿ ಕೆಲವರನ್ನು ನೇಣುಹಾಕಲಾಯಿತು. ಮತ್ತೆ ಕೆಲವರನ್ನು ನೇಣುಹಾಕಲಾಯಿತು.
- ❖ ಕೆಳಕೊಡಗು ಮತ್ತು ಕರಾವಳಿಯಲ್ಲಿನ ಈ ಹೋರಾಟವು 1857 ರ ಸ್ವಾತಂತ್ರ್ಯ ಹೋರಾಟಕ್ಕಿಂತ ಮೊದಲೇ ಜರುಗಿತು ಎನ್ನುವುದು ಗಮನಾರ್ಹವಾದುದು. ಬ್ರಿಟಿಷರು ಮತ್ತಷ್ಟು ಪ್ರಬಲರಾಗಿ ಕೊಡಗನ್ನು ಸ್ವಾತಂತ್ರ್ಯ ನೀಡುವವರೆಗೂ ಆಳಿದರು.



Use e-papers for save trees-InyaTrust.com

**7. ಮುಂಬೈ-ಕರ್ನಾಟಕವು ಹೇಗೆ ಬ್ರಿಟಿಷರ ವಶವಾಯಿತು? ವಿಶ್ಲೇಷಿಸಿ.**

- ❖ ಟಿಪ್ಪು ಇಂಗ್ಲೀಷರ ವಿರುದ್ಧ ಯುದ್ಧ ಮಾಡುತ್ತಿದ್ದ ಸಂದರ್ಭದಲ್ಲಿ ಹೊನ್ನಾವರವನ್ನು ಕಳೆದುಕೊಂಡನು.
- ❖ ಟಿಪ್ಪುವಿನ ಮರಣದ ನಂತರ ಸೊಂದಾವನ್ನು ಇಂಗ್ಲೀಷರು ಸ್ವಾಧೀನ ಪಡಿಸಿಕೊಂಡರು.
- ❖ ಮುಂಬೈ ಪ್ರದೇಶದೊಂದಿಗಿನ ಸಾಮಿಪ್ಯದಿಂದಾಗಿ ಸೋಂರಾವನ್ನು ಒಳಗೊಂಡಂತೆ ಕೆನರಾದ ಉತ್ತರ ಭಾಗವನ್ನು ಮುಂಬೈ ಪ್ರಾಂತ್ಯಕ್ಕೆ 1861 ರಲ್ಲಿ ವರ್ಗಾಯಿಸಲಾಯಿತು.
- ❖ ಹೀಗಾಗಿ ಕೆನರಾದ ಭೂಭಾಗವು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಪ್ರದೇಶಗಳಾಗಿ ವಿಭಜನೆಗೊಂಡವು.

**8. ಮೂರನೇ ಆಂಗ್ಲೋ ಮೈಸೂರು ಯುದ್ಧದ ಪರಿಣಾಮಗಳೇನು?**

- ❖ ಈ ಯುದ್ಧರಲ್ಲಿ ಟಿಪ್ಪು ತೀವ್ರವಾದ ಸೋಲನ್ನು ಅನುಭವಿಸಿದನು.
- ❖ ಪರಿಣಾಮವಾಗಿ ಅವನು ತನ್ನ ಅರ್ಧ ರಾಜ್ಯವನ್ನು ಬ್ರಿಟಿಷರಿಗೆ ಕೊಡುವುದರ ಜೊತೆಗೆ 330 ಲಕ್ಷ ರೂಪಾಯಿಗಳನ್ನು ಯುದ್ಧ ಪರಿಹಾರ ಧನವಾಗಿ ಬ್ರಿಟಿಷರಿಗೆ ನೀಡಬೇಕಾಯಿತು.
- ❖ ಅದನ್ನು ನೀಡುವವರೆಗೂ ಟಿಪ್ಪುವಿನ ಇಬ್ಬರು ಮಕ್ಕಳನ್ನು ಇಂಗ್ಲೀಷರು ಒತ್ತೆಯಾಳುಗಳಾಗಿ ಇಟ್ಟುಕೊಂಡರು.
- ❖ ಮೈಸೂರಿನ ಅಧೀನದಲ್ಲಿದ್ದ ತಮಿಳುನಾಡಿನ ಕೆಲವು ಪ್ರದೇಶಗಳು ಮತ್ತು ಮಲಬಾರ್ ಬ್ರಿಟಿಷರ ವಶವಾಯಿತು.
- ❖ ತುಂಗಭದ್ರಾವರೆಗಿನ ಪ್ರದೇಶವು ಮರಾಠರಿಗೆ ದೊರೆಯಿತು.
- ❖ ಬಳ್ಳಾರಿ, ಕಡಪ, ತುಂಗಭದ್ರಾ, ದೋ-ಅಬ್ ಪ್ರದೇಶವು ನಿಜಾಮನಿಗೆ ದೊರೆಯಿತು.

**9. ಲಾರ್ಡ್ ವೆಲ್ಲೆಸ್ಲಿ ಟಿಪ್ಪುವಿನ ಮೇಲೆ ಏಕೆ ಯುದ್ಧ ಸಾರಿದನು?**

- ❖ 1798 ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಆಗಮಿಸಿದ ಲಾರ್ಡ್ ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಟಿಪ್ಪುವಿನ ಮೇಲೆ ಹೇರಲು ಯತ್ನಿಸಿದನು.
- ❖ ಬ್ರಿಟಿಷರ ಬದ್ಧ ವೈರಿಯಾಗಿದ್ದ ಟಿಪ್ಪು ಸಹಾಯಕ ಸೈನ್ಯ ಪದ್ಧತಿಯನ್ನು ತಿರಸ್ಕರಿಸಿ ಯುದ್ಧ ತಯಾರಿಯನ್ನು ನಡೆಸಿದನು.
- ❖ ಟಿಪ್ಪುವು ಬ್ರಿಟಿಷರನ್ನು ಎದುರಿಸಲು ಮತ್ತು ತನ್ನ ರಾಜಧಾನಿಯ ರಕ್ಷಣೆಗಾಗಿ ಕ್ರಮ ಕೈಗೊಂಡನು.
- ❖ ಫ್ರೆಂಚರಿಂದ ತನ್ನ ಸೈನ್ಯಕ್ಕೆ ತರಬೇತಿಯನ್ನು ಕೊಡಿಸಿದನು.
- ❖ ಟಿಪ್ಪು ಫ್ರಾನ್ಸ್ ಟರ್ಕಿ ಮುಂತಾದ ದೇಶಗಳನ್ನು ಸಂಪರ್ಕಿಸಿ ಸಹಾಯವನ್ನು ಪಡೆಯಲು ಯತ್ನಿಸಿದನು.
- ❖ ಈ ಸಮಯದಲ್ಲಿ ಬ್ರಿಟಿಷ್ ಗವರ್ನರ್ ಜನರಲ್ ಲಾರ್ಡ್ ವೆಲ್ಲಸ್ಲಿಯು ಟಿಪ್ಪುವಿನ ವಿರುದ್ಧ ಯುದ್ಧ ಸಾರಿದನು



Use e-papers for save trees-InyaTrust.com

**10. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಫಲಿತಾಂಶಗಳೇನು?**

- ❖ ಟಿಪ್ಪುವು ವೀರಾವೇಶದಿಂದ ಹೋರಾಡಿ ರಣರಂಗದಲ್ಲಿಯೇ ಸಾವನ್ನಪ್ಪಿದನು.
- ❖ ಯುದ್ಧದ ನಂತರ ಮೈಸೂರು ರಾಜ್ಯದ ಪ್ರದೇಶವನ್ನು ಬ್ರಿಟಿಷರು ಮತ್ತು ನಿಜಾಮನು ಹಂಚಿಕೊಂಡು ಹಳೇ ಮೈಸೂರಿನ ಭಾಗವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಲಾಯಿತು.
- ❖ ಟಿಪ್ಪುವಿನ ಹಿಡಿತದಲ್ಲಿದ್ದ ಕೊಡಗಿನ ಅನೇಕ ಪ್ರದೇಶಗಳನ್ನು ಕೊಡಗಿನ ರಾಜರಿಗೆ ನೀಡಲಾಯಿತು.

**11. ಮೈಸೂರು ಒಡೆಯರ್ ಆಡಳಿತವನ್ನು ಪ್ರಾರಂಭಿಸಿದವರು ಯಾರು?**

ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಯದುರಾಯ ಮತ್ತು ಕೃಷ್ಣರಾಯರಿಂದ ಪ್ರಾರಂಭವಾಯಿತು.

**12. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನಿಯಮವನ್ನು ವಿರೋಧಿಸಿದ ದೇಶೀಯ ಆಡಳಿತಗಾರರು ಯಾರು?**

ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ ಮುಂತಾದವರು.



Use e-papers for save trees-InyaTrust.com

# ಅಧ್ಯಾಯ – 3

# ಜನಪದ ಚರಿತ್ರೆ

- ✓ ಬ್ರಿಟಿಷರು ಭಾರತಕ್ಕೆ ಬಂದ ಮೆಲೆ ಚರಿತ್ರೆ ಬರವಣಿಗೆಯ ಮೇಲೆ ಸಹಜವಾಗಿಯೆ ಪ್ರಭಾವ ಉಂಟಾಯಿತು.
- ✓ ಯಾವುದೇ ಘಟಣೆಗಳನ್ನು ನಿರೂಪಿಸುವಾಗ ಚರಿತ್ರೆಕಾರ ಅದಕ್ಕೋಂದು ತಾತ್ವಿಕ ರೂಪ ಕೊಡಲು ಆರಂಬಿಸಿ ಅದನ್ನು ಚರಿತ್ರೆ ಎಂದು ಅರ್ಥೈಸಲಾಯಿತು.
- ✓ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೆಲೆ ಭಾರತೀಯರು ರೂಪಿಸಿದ ಘಟನೆಗಳು, ವಿವರಗಳು, ಸಿದ್ಧಾಂತಗಳು ಹೊಸ ಚರಿತ್ರೆ ಬರವಣಿಗೆಗೆ ನಾಂದಿಯಾದವು.
- ✓ ಜಗತ್ತಿನಾದ್ಯಂತ ಇತಿಹಾಸಕಾರರು ಚರಿತ್ರೆ ಬರವಣಿಗೆಗೆ ಪೂರಕ ಆಕರ ಮುಖ್ಯ ಎಂದು ನಂಬಿದ ಹಾಗೆಯೇ ಭಾರತೀಯ ಚರಿತ್ರೆಕಾರರು ಕೂಡ ಚರಿತ್ರೆಗೆ ಸಮರ್ಥನೀಯ ದಾಖಲೆಗಳು ಮುಖ್ಯ ಎಂದು ತಿಳಿದರು.
- ✓ ಇತ್ತೀಚಿನ ದಶಕಗಳಲ್ಲಿ ಚರಿತ್ರೆಕಾರರು ಯಾವುದೇ ದಾಖಲೆಗಳನ್ನು ಹೋಂದಿರದ ರೈತಾಪಿ ಜನರ ಸಾಮಾನ್ಯ ಜನರ ಚರಿತ್ರೆಯನ್ನು ಗಂಭೀರವಾಗಿ ಅಧ್ಯಯನ ಮಾಡುವ ಪ್ರವೃತ್ತಿ ಹೆಚ್ಚಾಯಿತು.
- ✓ ಐಹಿತ್ಯ, ಲಾವಣಿ, ಜನಪದಗೀತೆ, ಕಾವ್ಯಗಳನ್ನು ಅಧ್ಯಯನ ಮಾಡುವ ಮೂಲಕ ಸಮಾಜದ ಸಂಪ್ರದಾಯ, ನಡಾವಳಿ ಇತ್ಯಾದಿಗಳನ್ನು ಅಭ್ಯಸಿಸುವ ಮೂಲಕ ಮೌಖಿಕ ಚರಿತ್ರೆಯನ್ನು ಚರಿತ್ರೆಕಾರರು ರಚಿಸುತ್ತಿದ್ದಾರೆ.
- ✓ ಪಾಶ್ಚಿಮಾತ್ಯರಿಂದ ತೀವ್ರವಾಗಿ ಪ್ರಭಾವಕ್ಕೆ ಒಳಗಾದ ಚರಿತ್ರೆ ಬರವಣಿಗೆಯು ಸರಳ ರೇಖಾತ್ಮಕ ಮಾದರಿಯನ್ನು ಹೊಂದಿದೆ.
- ✓ ಭಾರತೀಯ ಪರಂಪರೆಯಲ್ಲಿ ಇದಕ್ಕೆ ಹೊರತಾದ ನೋಟವಿದೆ ಅದು ಚರಿತ್ರೆಯನ್ನು ಚಕ್ರೋಪಾದಿಯಲ್ಲಿ ನೋಡುತ್ತದೆ ಅದನ್ನು ಕಾಲಚಕ್ರವೆಂದು ಕರೆಯುವುದುಂಟು.

## I. ಬಿಟ್ಟ ಸ್ಥಳವನ್ನು ಸೂಕ್ತ ಉತ್ತರಗಳಿಂದ ತುಂಬಿ

1. ಬಳ್ಳಾರಿ ಪ್ರದೇಶದ ಜನ ಸಾಮಾನ್ಯರಲ್ಲಿ ಕೃಷ್ಣದೇವರಾಯನಿಗಿಂತ ಹೆಚ್ಚು ಜನಜನಿತವಾಗಿರುವ ರಾಜ **ಕುಮಾರರಾಮ**.
2. ಜನಪದ ಆಕರಗಳು **ಚರಿತ್ರೆಕಾರರಿಗೆ** ವರಪ್ರಸಾದವಾಗಿದೆ.
3. ಚರಿತ್ರೆಯನ್ನು ಚಕ್ರದೋಪಾದಿಯಲ್ಲಿ ನೋಡುವುದನ್ನು **ಕಾಲಚಕ್ರ** ಎಂದು ಕರೆಯುತ್ತೇವೆ.
4. ಒಂದು ಕಾಲಚಕ್ರದ ಆವರ್ತನ ಮುಗಿದರೆ ಅದನ್ನು ಯುಗ ಎನ್ನುವರು.
5. **ಬ್ರಿಟಿಷರು** ಭಾರತಕ್ಕೆ ಬಂದ ಮೇಲೆ ಚರಿತ್ರೆ ಬರವಣಿಗೆಯ ಮೇಲೆ ಸಹಜವಾಗಿಯೇ ಪ್ರಭಾವ ಉಂಟಾಯಿತು.

5\. ಚರಿತ್ರೆಕಾರರು ಜನಸಾಮಾನ್ಯರ ಚರಿತ್ರೆಯನ್ನು ರೂಪಿಸಲು **ಮೌಖಿಕ ಆಕರಗಳನ್ನು** ಆಶ್ರಯಿಸುತ್ತಾರೆ.



Use e-papers for save trees-InyaTrust.com

6 ಬ್ರಿಟಿಷ್ ಬರಹಗಳನ್ನು ಭಾರತೀಯರ ಎಲ್ಲಾ ಸ್ವಾತಂತ್ರ್ಯ ಹೋರಾಟಗಳನ್ನು **ದಂಗೆಗಳು** ಎಂದು ಬಿಂಬಿಸಿದವು.

7. ಬಳ್ಳಾರಿ ಪ್ರದೇಶದ ಜನಸಾಮಾನ್ಯರಲ್ಲಿ **ಕೃಷ್ಣದೇವರಾಯನಿಗಿಂತ** ಕುಮಾರರಾಮ ಹೆಚ್ಚು ಜನಜನಿತ

***II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.***

**1. ಬ್ರಿಟಿಷರ ಆಗಮನದಿಂದ ಚರಿತ್ರೆಯ ಬರವಣಿಗೆಯ ಮೇಲಾದ ಪ್ರಭಾವಗಳೇನು?**

- ಯಾವುದೇ ಘಟನೆಗಳನ್ನು ನಿರೂಪಿಸುವಾಗ ಚರಿತ್ರೆಕಾರ ಅದಕ್ಕೊಂದು ತಾತ್ವಿಕ ರೂಪ ಕೊಡಲು ಪ್ರಾರಂಭಿಸಿದ, ಇದನ್ನು ಚರಿತ್ರೆ ಎಂದು ಅರ್ಥೈಸಲಾಯಿತು.
- ಒಂದೊಂದು ಘಟನೆಗಳನ್ನು ತಮಗೆ ಕಂಡಂತೆ ತಮ್ಮ ಅನುಕೂಲಕ್ಕೆ ಒಗ್ಗುವಂತೆ ನಿರೂಪಿಸಲಾಯಿತು.

**2. ಚರಿತ್ರೆಯನ್ನು ಸೈದ್ಧಾಂತಿಕತೆಯ ಹಿನ್ನೆಲೆಯಲ್ಲಿ ಅಭ್ಯಸಿಸುವುದು ಸವಾಲು ವಿಶ್ಲೇಷಿಸಿ.**

- ಜನಸಾಮಾನ್ಯರ ಅದರಲ್ಲಿಯೂ ರೈತಾಪಿ ವರ್ಗಗಳ ಕೃಷಿಕೂಲಿಕಾರರ ಚರಿತ್ರೆಯನ್ನು ಭಿನ್ನ ಬಗೆಯ ಸೈದ್ಧಾಂತಿಕತೆಯ ಹಿನ್ನೆಲೆಯಲ್ಲಿ ಅಭ್ಯಾಸ ಮಾಡುವುದು ಚರಿತ್ರೆಕಾರರಿಗೆ ಸವಾಲಾಯಿತು.
- ಐತಿಹಾಸಿಕ ದಾಖಲೆಗಳಿಲ್ಲದ ಜನಸಾಮಾನ್ಯರಲ್ಲಿ ಹುದುಗಿದ್ದ ನೆನಪುಗಳನ್ನು ದಾಖಲಿಸುವ ಪ್ರಯತ್ನ ಆರಂಭವಾಯಿತು.
- ಅವುಗಳು ಭೂತ ಹಾಗೂ ವರ್ತಮಾನಗಳಿಗೆ ಸಂಬಂಧಪಟ್ಟವಾಗಿರುತ್ತಿದ್ದವು.

**3. ಚರಿತ್ರೆ ಬರವಣಿಗೆಯ ರೇಖಾತ್ಮಕ ಮಾದರಿಯನ್ನು ವಿವರಿಸಿ.**

- ಪಾಶ್ಚಿಮಾತ್ಯರಿಂದ ತೀವ್ರವಾಗಿ ಪ್ರಭಾವಕ್ಕೆ ಒಳಗಾದ ಚರಿತ್ರೆ ಬರವಣಿಗೆಯು ಸರಳ ರೇಖಾತ್ಮಕ ಕಾಲದ ಮಾದರಿಯನ್ನು ಹೊಂದಿದೆ.
- ಈ ಮಾದರಿಯ ಪ್ರಕಾರ ಒಂದನೇ ಇಸವಿ ಆದ ಮೇಲೆ ಎರಡನೆಯ ಇಸವಿ ಬರಬೇಕು.
- 17 ನೇಯ ಶತಮಾನದ ಘಟನೆಯ ನಂತರವೇ 18 ನೆಯ ಶತಮಾನದ ಘಟನೆಯ ಬಗ್ಗೆ ಬರೆಯಬೇಕು.

**4. ಮೌಖಿಕ ಆಕರಗಳಿಂದ ಚರಿತ್ರೆ ಬರವಣಿಗೆಯನ್ನು ಹೇಗೆ ನಿರೂಪಿಸಬಹುದು?**

- ಮೌಖಿಕ ಆಕರಗಳು ಅನೇಕ ಬಾರಿ ಸಂದರ್ಭಾನುಸಾರ ಹಿಗ್ಗುತ್ತವೆ. ಮಾರ್ಪಾಡುಗುತ್ತವೆ ಮತ್ತು ಅನೇಕ ಬಾರಿ ಕೆಲವು ವ್ಯಕ್ತಿಗಳು ಕಾಲವನ್ನು ಮೀರಿರುವುದುಂಟು.
- ಒಪ್ಪಿತ ಚರಿತ್ರೆಯಲ್ಲಿ ಅವರ ಅಂತ್ಯ ಯಾವತ್ತೋ ಆಗಿದ್ದರೂ ಮೌಖಿಕ ಪರಂಪರೆಯಲ್ಲಿ ಅವರಿಗೆ ಅಂತ್ಯವಿರುವುದಿಲ್ಲ.
- ಈ ಸೂಕ್ಷ್ಮಗಳನ್ನು ಅರಿತುಕೊಂಡು ಆಧುನಿಕ ಚರಿತ್ರೆಕಾರ ಇತಿಹಾಸ ಲೇಖನವನ್ನು ಹರಿತಗೊಳಿಸಿದ್ದಾನೆ. ಈ ಎಲ್ಲಾ ಸಂದರ್ಭದಲ್ಲಿ ಮೌಖಿಕ ಆಕರಗಳ್ನ್ನು ಚರಿತ್ರೆಯನ್ನು ರೂಪಿಸಲು ಸಹಾಯವಾಗುತ್ತದೆ.

**5. ಚರಿತ್ರೆ ಬರವಣಿಗೆಯಲ್ಲಿ ಚಕ್ರದೋಪಾದಿಯನ್ನು ವಿವರಿಸಿ.**

- ಭಾರತೀಯ ಪರಂಪರೆ ಚರಿತ್ರೆಯನ್ನು ಚಕ್ರದೋಪಾದಿಯಾಗಿ ನೋಡುತ್ತದೆ.ಅದನ್ನು ಕಾಲಚಕ್ರವೆಂತಲೂ ಕರೆಯುವರು.



Use e-papers for save trees-InyaTrust.com

- ಕಾಲಚಕ್ರಕ್ಕೆ ಕೊನೆ ಎಂಬುದೇ ಇಲ್ಲ.
- ಒಂದು ಕಾಲಚಕ್ರದ ಆವರ್ತನ ಮುಗಿದರೆ ಅದನ್ನು ಯುವ ಎನ್ನುವರು.
- ಹೀಗಾಗಿ ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗಗಳ ಮೂಲಕ ಚಾರಿತ್ರೆಯನ್ನು ಹೇಳುವುದುಂಟು.
- ಇಂತಹ ಸಂದರ್ಭಗಳಲ್ಲಿ ಅನೇಕ ಹೊಸ ಘಟನೆಗಳು, ಹೊಸ ಅವತಾರಗಳು ಇಲ್ಲಿ ಸೇರಿಹೋಗುವುದುಂಟು.
- ಅವು ಕಾಲದಿಂದ ಕಾಲಕ್ಕೆ ಪರಿಷ್ಕಾರ ಆಗುತ್ತಿರುತ್ತವೆ.

**6. ಮೌಖಿಕ ಚರಿತ್ರೆಯನ್ನು ರಚಿಸಲು ಚರಿತ್ರೆಕಾರರು ಹೇಗೆ ಪ್ರಯತ್ನಿಸಿದ್ದಾರೆ?**

ಐತಿಹ್ಯ ಲಾವಣಿ, ಜಾನಪದ ಗೀತೆ, ಕಾವ್ಯಗಳನ್ನು ಅಧ್ಯಯನ ಮಾಡುವ ಮೂಲಕ ಸಮಾಜದ ಸಂಪ್ರದಾಯ, ನಡಾವಳಿ ಇತ್ಯಾದಿಗಳನ್ನು ಅಭ್ಯಸಿಸುವ ಮೂಲಕ ಮೌಖಿಕ ಚರಿತ್ರೆಯನ್ನು ರಚಿಸಲು ಚರಿತೆಕಾರರು ಪ್ರಯತ್ನಿಸಿದ್ದಾರೆ.

**7. ಜನಪದ ಚರಿತ್ರೆ ಎಂದರೇನು?**

ಮೌಖಿಕ ಆಕರಗಳನ್ನು ರೂಪುಗೊಂಡ ಜನಸಾಮಾನ್ಯರ ಚರಿತ್ರೆಯನ್ನು ಜನಪದ ಚರಿತ್ರೆ ಎನ್ನುವರು.



Use e-papers for save trees-InyaTrust.com

# ಅಧ್ಯಾಯ – 4

# ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು

- ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ಅವಧಿಯಲ್ಲಿ ಇಂಗ್ಲಿಷರು ತಮ್ಮ ಅಧಿಪತ್ಯವನ್ನು ಸ್ಥಾಪಿಸುವುದು ನಿಶ್ಚಿತವಾಗಿ ದೇಶೀಯ ಶಕ್ತಿಗಳ ವಿರುದ್ಧ ತಮ್ಮ ಅಕ್ರಮಣಕಾರಿ ಹೋರಾಟವನ್ನು ಮುಂದುವರಿಸಿದಾಗ ಗವರ್ನರ್ ಜನರಲ್ ಆಗಿ ಬಂದಂತಹ ಲಾರ್ಡ್ ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು.
- ಈ ನೀತಿಯು ಇಂಗ್ಲಿಷರು ದೇಶೀಯ ರಾಜರುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿತು.
- ಮರಾಠರಲ್ಲಿ ಪ್ರಾರಂಭವಾದ ಒಳಜಗಳ, ಮರಾಠ ನಾಯಕರ ಆಂತರಿಕ ಯುದ್ಧಗಳು ಮೊದಲನೇ, ಎರಡನೇ ಹಾಗೂ ಮೂರನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣವಾದವು.
- ಈ ಯುದ್ಧಗಳಲ್ಲಿ ಮರಾಠರ ಸೈನ್ಯಗಳನ್ನು ಸೋಲಿಸಿದ ಬ್ರಿಟಿಷರು ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು.
- ಸಿಖ್‌ರಲ್ಲಿ ಪ್ರಸಿದ್ಧ ದೊರೆಯಾದ ರಣಜಿತ್ ಸಿಂಗ್‌ನ ನಂತರ ಅವನ ಮಗ ದುಲೀಪ್‌ಸಿಂಗ್ ನು ಅಧಿಕಾರಕ್ಕೆ ಬಂದಾಗ ಪ್ರಧಾನಿಯಾಗಿದ್ದ ಲಾಲ್‌ಸಿಂಗ್ ನು ಸಿಖ್ಖರ ಖಾಲ್ಸಾ ಸೈನ್ಯದೊಂದಿಗೆ ಬ್ರಿಟಷರ ಮೇಲೆ ಯುದ್ಧಕ್ಕಿಳಿದು ಸೋತ ಪರಿಣಾಮವಾಗಿ ಸಹಾಯಕ ಸೈನ್ಯ ಪದ್ಧತಿಯನ್ನು ದುಲೀಪ್ ಸಿಂಗ್ ಒಪ್ಪಬೇಕಾಯಿತು. ಇದರಿಂದ ಅಸಮಾಧಾನಗೊಂಡ ಖಾಲ್ಸಾ ಸೈನಿಕರು ಬ್ರಿಟಿಷರ ವಿರುದ್ಧ ದಂಗೆಯೆದ್ದರು.
- ಮುಂದೆ ನಡೆದ ಯುದ್ಧಗಳಿಂದಾಗಿ ಪಂಜಾಬ್ ಪ್ರದೇಶವು ಬ್ರಿಟಷರ ವಶವಾಯಿತು.
- ಬ್ರಿಟಿಷರು ತಮ್ಮ ಅಧಿಪತ್ಯವನ್ನು ವಿಸ್ತರಿಸುವ ಜೊತೆಯಲ್ಲಿಯೇ ಆಡಳಿತಾತ್ಮಕ ಸುಧಾರಣೆಗಳನ್ನು ತರುವ ಪ್ರಯತ್ನ ನಡೆಸಿದರು.

***I. ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.***

**1. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು**

(a) ಲಾರ್ಡ್ ಡಾಲ್‌ಹೌಸಿ | **(b) ಲಾರ್ಡ್ ವೆಲ್ಲೆಸ್ಲಿ**

(c) ಲಾರ್ಡ್ ಕರ್ಜನ್ | (d) ಲಾರ್ಡ್ ಕ್ಯಾನಿಂಗ್

**2. ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ಭಾರತದ ಮೊದಲ ರಾಜ**

**(a) ಹೈದರಾಬಾದಿನ ನಿಜಾಮ** | (b) ಅವಧ್‌ನ ನವಾಬ

(c) ಬಂಗಾಳದ ನವಾಬ | (d) ಮರಾಠರ ಪೇಶ್ವ



Use e-papers for save trees-InyaTrust.com

**3.** **ಎರಡನೇ ಆಂಗ್ಲೋ – ಮರಾಠ ಯುದ್ಧದಲ್ಲಿ ಸಿಂಧಿಯಾ ಮತ್ತು ಎರಡನೇ ಪೇಶ್ವೆ ಬಾಜಿರಾವ್ ಅವರನ್ನು ಸೋಲಿಸಿದವರು**

(a) ಟಿಪ್ಪುಸುಲ್ತಾನ್ (b) ಗಾಯಕ್‌ವಾಡ್ (c) ಹೋಲ್ಕರ್ (d) ಹೈದರಾಲಿ

**4.** **ರಣಜಿತ್ ಸಿಂಗ್ ________ ಎಂದು ಪ್ರಸಿದ್ಧಿಯಾಗಿದ್ದಾನೆ**

(a) ಮೈಸೂರಿನ ಹುಲಿ (b) ಪಂಜಾಬಿನ ಸಿಂಹ (c) ಆಫ್ರಿಕಾದ ಆನೆ (d) ಪಂಜಾಬಿನ ಹುಲಿ

**5.** **ಖಾಲ್ಸಾ ಎಂದರೆ**

(a) ಸಿಖ್ಖರ ಸೈನ್ಯ (b) ಪೇಶ್ವೆಗಳ ಸೈನ್ಯ (c) ಟಿಪ್ಪುವಿನ ಸೈನ್ಯ (d) ಮರಾಠ ಸೈನ್ಯ

**6.** **ದುಲೀಪ್‌ಸಿಂಗ್‌ನ ಪ್ರಧಾನ ಮಂತ್ರಿ ________**

(a) ರಣಜಿತ್ ಸಿಂಗ್ (b) ನಾನಾಫಡ್ನಾವಿಸ್ (c) ಮಾಧವರಾವ್ (d) ಲಾಲ್‌ಸಿಂಗ್

**7.** **ದ್ವಿಮುಖ ಸರ್ಕಾರವನ್ನು ಜಾರಿಗೆ ತಂದವರು ________**

(a) ಲಾರ್ಡ್ ವೆಲ್ಲೆಸ್ಲಿ (b) ಲಾರ್ಡ್ ಕಾರ್ನ್‌ವಾಲಿಸ್ (c) ರಾಬರ್ಟ್ ಕ್ಲೈವ್ (d) ವಾರನ್‌ಹೇಸ್ಟಿಂಗ್

**8.** **ರೆಗ್ಯುಲೇಟಿಂಗ್ ಶಾಸನವನ್ನು ಜಾರಿಗೊಳಿಸಿದ ವರ್ಷ ________**

(a) 1784 (b) 1773 (c) 1377 (d) 1857

**9.** **1909 ರ ಶಾಸನವನ್ನು ________ ಎಂದೂ ಕರೆಯುವರು.**

(a) ಮಿಂಟೋ ಮಾರ್ಲೆ ಸುಧಾರಣೆ (b) ರೆಗ್ಯೂಲೇಟಿಂಗ್ ಶಾಸನ

(c) ಮಾಂಟೆಗ್ಯೂ ಚೆಮ್ಸ್‌ಫರ್ಡ್ ಸುಧಾರಣೆ (d) ಇಂಡಿಯನ್ ಕೌನ್ಸಿಲ್

**10.** **ಭಾರತದ ಸರ್ವೋಚ್ಚ ನ್ಯಾಯಾಲಯ ಸ್ಥಾಪನೆಗೆ ಕಾರಣವಾದ ಶಾಸನ**

(a) 1935 ರ ಭಾರತ ಸರ್ಕಾರದ ಕಾಯ್ದೆ (b) ಪಿಟ್ಸ್ ಇಂಡಿಯಾ ಶಾಸನ

(c) 1773 ರ ರೆಗ್ಯೂಲೇಟಿಂಗ್ ಶಾಸನ (d) 1861 ರ ಇಂಡಿಯನ್ ಕೌನ್ಸಿಲ್ ಕಾಯ್ದೆ

***II.*** ***ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿ***

1. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು **ಲಾರ್ಡ್ ವೆಲ್ಲೆಸ್ಲಿ**
2. ಎರಡನೇ ಆಂಗ್ಲೋ ಮರಾಠ ಯುದ್ಧ **ಬಸ್ಸಿನ್ ಒಪ್ಪಂದ**ದೊಂದಿಗೆ ಕೊನೆಗೊಂಡಿತು.



**Use e-papers for save trees-InyaTrust.com**

3. ಭಾರತದ ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆಗೆ ಕಾರಣವಾದ ಶಾಸನ **ರೆಗ್ಯೂಲೇಟಿಂಗ್ ಶಾಸನ**
4. ಮತೀಯ ಆಧಾರದ ಚುನಾವಣೆಗೆ ಶಿಫಾರಸ್ಸು ಮಾಡಿದ **ಮಿಂಟೋ–ಮಾರ್ಲೆ ಸುಧಾರಣೆ**

***III. ಈ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ.***

**1. ಸಹಾಯಕ ಸೈನ್ಯ ಪದ್ಧತಿಯನ್ನು** ವಿವರಿಸಿ.

- ❖ 19ನೆಯ ಶತಮಾನದ ಪ್ರಾರಂಭದ ಅವಧಿಯಲ್ಲಿ ಇಂಗ್ಲೀಷರು ತಮ್ಮ ಅಧಿಪತ್ಯವನ್ನು ಭಾರತದಲ್ಲಿ ಸ್ಥಾಪಿಸುವುದು ನಿಶ್ಚಿತವಾಗಿತ್ತು.
- ❖ ಬ್ರಿಟಿಷರು ದೇಶೀಯ ಶಕ್ತಿಗಳ ವಿರುದ್ಧ ತಮ್ಮ ಆಕ್ರಮಣಕಾರಿ ಹೋರಾಟವನ್ನು ಮುಂದುವರೆಸಿದ್ದರು.
- ❖ ಆಗ ಗವರ್ನರ್ ಜನರಲ್ ಆಗಿ ಬಂದಂತಹ ಲಾರ್ಡ್ ವೆಲ್ಲಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು.
- ❖ ಈ ನೀತಿಯು ಇಂಗ್ಲೀಷರು ದೇಶೀಯ ರಾಜರುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿತು.

**2. ಮೊದಲನೇ ಆಂಗ್ಲೋ – ಮರಾಠ ಯುದ್ಧ ನಡೆದ ರೀತಿಯನ್ನು** ವಿವರಿಸಿ.

- ❖ ಪೇಶ್ವೆನಾರಾಯಣರಾವ್‌ನ ನಂತರ ಉತ್ತರಾಧಿಕಾರತ್ವಕ್ಕಾಗಿ ಮರಾಠರಲ್ಲಿ ಒಳಜಗಳ ಪ್ರಾರಂಭವಾಯಿತು.
- ❖ ರಘುನಾಥರಾವ್‌ನನ್ನು ಪಟ್ಟಕ್ಕೇರಿಸದೆ ನಾನಾ ಫಡ್ನವೀಸನು ಬಾಲಕನಾಗಿದ್ದ ಎರಡನೇ ಪೇಶ್ವೆ ಮಾಧವರಾವ್‌ನನ್ನು ಬೆಂಗಲಿಸಿದನು.
- ❖ ರಘುನಾಥರಾವ್ ಬ್ರಿಟಿಷರ ಬೆಂಬಲ ಕೋರಿದನು.
- ❖ ಬ್ರಿಟಿಷರು ಈ ಸಂಧರ್ಭವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡು ಯುದ್ಧ ನಡೆಸಿದರು.
- ❖ ಪ್ರಾರಂಭದಲ್ಲಿ ಸೋತರೂ ಕೂಡ ಅಹಮದಾಬಾದನ್ನು ವಶಪಡಿಸಿಕೊಂಡರು.
- ❖ ನಂತರ ಸಾಲ್‌ಬಾಯಿ ಒಪ್ಪಂದ ಏರ್ಪಟ್ಟು ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು.
- ❖ ಇದು ಮೊದಲನೆಯ ಆಂಗ್ಲೋ–ಮರಾಠ ಯುದ್ಧವಾಗಿದೆ.

**3. ಪಂಜಾಬ್ ಪ್ರಾಂತ್ಯದಲ್ಲಿ ಬ್ರಿಟಿಷರು ತಮ್ಮ ಅಧಿಪತ್ಯವನ್ನು ಹೇಗೆ ಸ್ಥಾಪಿಸಿದರು?**

- ❖ ಬ್ರಿಟಿಷರು ದಕ್ಷಿಣಾ ಭಾರತದಲ್ಲಿ ಮರಾಠ ಪ್ರಾಂತ್ಯ ಮೈಸೂರು ಪ್ರಾಂತ್ಯಗಳಲ್ಲಿ ತಮ್ಮ ಅಧಿಪತ್ಯ ಸ್ಥಾಪಿಸಿದಂತೆಯೇ
- ❖ ಪಂಜಾಬ್ ಪ್ರಾಂತ್ಯದಲ್ಲಿಯೂ ಅಧಿಪತ್ಯ ಸ್ಥಾಪಿಸಬಹುದಾದ ಅವಕಾಶಗಳು ಬಂದವು.
- ❖ ಸಿಖ್‌ರಲ್ಲಿ ಪ್ರಸಿದ್ಧ ದೊರೆ ಮತ್ತು 'ಪಂಜಾಬಿನ ಸಿಂಹ' ನೆಂದೇ ಪ್ರಸಿದ್ಧನಾಗಿದ್ದವನು ರಣಜಿತ್ ಸಿಂಗ್, ಈತನ ಕಾಲದಲ್ಲಿ
- ❖ ಸಿಖ್ಖರು ಅಮೃತಸರ, ಲೂಧಿಯಾನಗಳ ಮೇಲೆ ಹಿಡಿತ ಸಾಧಿಸಿದ್ದರು.
- ❖ ರಣಜಿತ್ ಸಿಂಗ್‌ನ ನಂತರ ಮಗನಾದ ದುಲೀಪ್ ಸಿಂಗ್‌ನ ಅಧಿಕಾರಕ್ಕೆ ಬಂದನು.
- ❖ ಅವನ ಪ್ರಧಾನ ಮಂತ್ರಿಯಾಗಿದ್ದ ಲಾಲ್‌ಸಿಂಗನು ಸಿಖ್ಖರ ಖಾಲ್ಸಾ ಸೈನ್ಯದೊಂದಿಗೆ ಬ್ರಿಟಿಷರ ಮೇಲೆ ಯುದ್ಧಕ್ಕಿಳಿದು ಸೋತನು.
- ❖ ಇದರ ಪರಿಣಾಮವಾಗಿ ದುಲೀಪ್‌ಸಿಂಗನು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಬೇಕಾಯಿತು.
- ❖ ಇದರಿಂದ ಅಸಮಾಧಾನಗೊಂಡ ಖಾಲ್ಸಾ ಸೈನಿಕರು ಬ್ರಿಟಿಷರ ವಿರುದ್ಧ ದಂಗೆಯೆದ್ದರು. ಮುಂದೆ ನಡೆದ
- ❖ ಯುದ್ಧಗಳಿಂದಾಗಿ ಪಂಜಾಬ್ ಪ್ರದೇಶವು ಬ್ರಿಟಿಷರ ವಶವಾಯಿತು.



**Use e-papers for save trees-InyaTrust.com**

**4. ರೆಗ್ಯೂಲೇಟಿಂಗ್ ಶಾಸನದಲ್ಲಿನ ಪ್ರಮುಖಾಂಶಗಳು ಯಾವುವು?**

- ❖ ರಾಬರ್ಟ್ ಕ್ಲೈವನು ಜಾರಿಗೆ ತಂದಿದ್ದ ದ್ವಿಮುಖ ಸರ್ಕಾರ ರದ್ದಾಯಿತು.
- ❖ ಬಂಗಾಳದ ಗವರ್ನರ್ ಹುದ್ದೆಯನ್ನು ಭಾರತದ ಗವರ್ನರ್ ಜನರಲ್ ಎಂದು ಕರೆಯಲಾಯಿತು.
- ❖ ವಾರನ್‌ಹೇಸ್ಟಿಂಗ್ಸ್ ಭಾರತದ ಮೊದಲನೆಯ ಗವರ್ನರ್ ಜನರಲ್ ಆಗಿದ್ದನು.
- ❖ ಆಡಳಿತದಲ್ಲಿ ಸಲಹೆ ನೀಡಲು ಸಲಹಾ ಸಮಿತಿಯನ್ನು ನೇಮಿಸಲಾಯಿತು.
- ❖ ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಭಾರತದ ವ್ಯವಹಾರದ ಕಾರ್ಯದರ್ಶಿಗೆ ಕಳುಹಿಸಬೇಕಾಯಿತು.
- ❖ ಭಾರತದಲ್ಲಿ ಒಂದು ಸರ್ವೋಚ್ಚ ನ್ಯಾಯಲಯವನ್ನು ಕಲ್ಕತ್ತಾದಲ್ಲಿ ಸ್ಥಾಪಿಸಲಾಯಿತು.

**5. 1909 ರ ಶಾಸನದ ಸುಧಾರಣೆಗಳಾವುವು?**

- ❖ ಈ ಶಾಸನವನ್ನು 1909 ರಲ್ಲಿ ಭಾರತದ ವೈಸರಾಯ್ ಮಿಂಟೋ ಮತ್ತು ಕಾರ್ಯದರ್ಶಿ ಮಾರ್ಲೆರವರು ರೂಪಿಸಿದರು. ಇದರ ಮುಖ್ಯಾಂಶಗಳೆಂದರೆ
- ❖ ಕೇಂದ್ರ ಶಾಸಕಾಂಗದ ವಿಸ್ತರಣೆ
- ❖ ಪ್ರಾಂತ್ಯಗಳ ಶಾಸನ ಸಭೆಯ ವಿಸ್ತರಣೆ
- ❖ ಪ್ರಾಂತೀಯ ಶಾಸನ ಸಭೆಗಳಲ್ಲಿ ಚುನಾಯಿತರಿಗೂ ಅವಕಾಸ ನೀಡುವಿಕೆ
- ❖ ಮತೀಯ ಆಧಾರದಲ್ಲಿ ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಆರಂಭ



**Use e-papers for save trees-InyaTrust.com**

# ಅಧ್ಯಾಯ–5

# ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

**I ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ**

**1. ರಾಮ್ ಮೋಹನ್‌ರಾಯರಿಂದ ಸ್ಥಾಪಿಸಲ್ಪಟ್ಟಿರುವುದು**

ಅ. ಆರ್ಯ ಸಮಾಜ ಬ. ಸತ್ಯ ಶೋಧಕ ಸಮಾಜ

ಕ. **ಬ್ರಹ್ಮ ಸಮಾಜ** ಡ. ಪ್ರಾರ್ಥನಾ ಸಮಾಜ

**2. ಭಾರತೀಯ ನವೋದಯದ ಜನಕ**

ಅ. ದಯಾನಂದ ಸರಸ್ವತಿ ಬ. ವಿವೇಕಾನಂದ

ಕ. ಜ್ಯೋತಿ ಭಾ ಪುಲೆ ಡ. **ರಾಮ್ ಮೋಹನ್‌ರಾಯ್**

**3. ಸತಿ ಸಹಗಮನ ಪದ್ಧತಿ ವಿರುದ್ಧದ ಕಾಯ್ದೆಯನ್ನು ಸಂಶೋಧಿಸಿದವರು.**

ಅ. **ಲಾರ್ಡ್‌ವಿಲಿಯಂ ಬೆಂಟಿಂಕ್** ಬ. ರಾಬರ್ಟ್ ಕ್ಲೈವ

ಕ. ಲಾರ್ಡ್ ಡಾಲ್‌ಹೌಸಿ ಡ. ಸರ್ ಐರ್ ಕೂಟ್

**4. ಬಂಗಾಳದಲ್ಲಿ ರಾಮ್ ಮೋಹನ್‌ರಾಯ್‌ರಿಂದ ಆರಂಭಿಸಲ್ಪಟ್ಟ ಪತ್ರಿಕೆ**

ಅ. ಸತ್ಯಾರ್ಥ ಪ್ರಕಾಶ ಬ. ನ್ಯೂ ಇಂಡಿಯಾ

ಕ. ಗುಲಾಮಗಿರಿ ಡ. **ಸಂವಾದ ಕೌಮುದಿ**

**5. ಆರ್ಯ ಸಮಾಜದ ಸ್ಥಾಪಕರು**

ಅ. ರಾಮ್‌ಮೋಹನ್‌ರಾಯ್ ಬ. **ದಯಾನಂದ ಸರಸ್ವತಿ**

ಕ. ಸರ್ ಸೈಯದ್ ಅಹ್ಮದ್‌ಖಾನ್ ಡ. ಅನಿಬೆಸೆಂಟ್

**6. ಸತ್ಯ ಶೋಧಕ ಸಮಾಜದ ಸ್ಥಾಪಕರು**

ಅ. ದಯಾನಂದ ಸರಸ್ವತಿ ಬ. ರಾಮ್ ಮೋಹನ್‌ರಾಯ್

ಕ. **ಜ್ಯೋತಿಭಾಪುಲೆ** ಡ. ವಿವೇಕಾನಂದ



Use e-papers for save trees-InyaTrust.com

**7. ಹೆಣ್ಣು ಮಕ್ಕಳಿಗಾಗಿ ಮೊದಲ ಪ್ರೌಢಶಾಲೆಯನ್ನು ಸ್ಥಾಪಿಸಿದವರು**

ಅ. **ಎಂ.ಜಿ.ರಾನಡೆ** ಬ. ಸರ್ ಸಯ್ಯದ್ ಅಹ್ಮದ್‌ಖಾನ್

ಕ. ರಾಮಕೃಷ್ಣ ಪರಮಹಂಸ ಡ. ದಯಾನಂದ ಸರಸ್ವತಿ

**8. ಆಂಗ್ಲೋ–ಓರಿಯಂಟಲ್ ಕಾಲೇಜನ್ನು________ಎಂದು ಕರೆಯಲಾಯಿತು.**

ಅ. ಹಿಂದೂ ಬನಾರಸ್ ಕಾಲೇಜ್ ಬ. **ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ**

ಕ. ಹೋಂ ರೂಲ್ ಚಳುವಳಿ ಡ. ಡೆಕ್ಕನ್ ಎಜುಕೇಷನ್ ಸಂಸ್ಥೆ

**9. ಚಿಕಾಗೋ ವಿಶ್ವಧರ್ಮ ಸಮ್ಮೇಳನ ನಡೆದ ವರ್ಷ**

ಅ. 1983 ಬ. **1893** ಕ. 1885 ಡ. 1857

**10. ಅನಿಬೆಸೆಂಟ್‌ರವರು ಪ್ರಾರಂಭಿಸಿದ ಪತ್ರಿಕೆ**

ಅ. **ನ್ಯೂ ಇಂಡಿಯಾ** ಬ. ಸಂವಾದ ಕೌಮುದಿ ಕ. ಶೂದ್ರರು ಡ. ಗುಲಾಮಗಿರಿ

**11. 1917 ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು**

ಅ. ವಿವೇಕಾನಂದ ಬ. **ಅನಿ ಬೆಸೆಂಟ್**

ಕ. ಮ್ಯಾಡಮ್ ಬ್ಲಾವಬಿಸ್ಕಿ ಡ. ಆತ್ಮಾರಾಮ್ ಪಾಂಡುರಂಗ

**12. ಅನಿಬೆಸೆಂಟರು ಹೋಂ ರೂಲ್ ಚಳುವಳಿಯನ್ನು ಪ್ರಾರಂಭಿಸಿದ ವರ್ಷ**

ಅ. 1906 ಬ. 1970 ಕ. **1916** ಡ. 1924

13. **'ವೇದಗಳಿಗೆ ಹಿಂದಿರುಗಿ' ಎಂದು ಘೋಷಣೆ ಮಾಡಿದವರು**

ಅ. **ದಯಾನಂದ ಸರಸ್ವತಿ** ಬ. ಶಾಹು ಮಹಾರಾಜ್

ಕ. ಜ್ಯೋತಿ ಭಾಪುಲೆ ಡ. ಡಾ॥ ಬಿ.ಆರ್ ಅಂಬೇಡ್ಕರ್

14. **ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಬಾಗವಹಿಸಿದ್ದ ಭಾರತದ ಪ್ರತಿನಿಧಿ**

ಅ. ರಾಮಕೃಷ್ಣ ಪರಮಹಂಸ ಬ. ದಯಾನಂದ ಸರಸ್ವತಿ

ಕ. **ಸ್ವಾಮಿ ವಿವೇಕಾನಂದ** ಡ. ರಾಮ್ ಮೋಹನ್‌ರಾಯ್



**Use e-papers for save trees-InyaTrust.com**

## II. ಸೂಕ್ತ ಉತ್ತರಗಳಿಂದ ಬಿಟ್ಟ ಸ್ಥಳ ತುಂಬಿರಿ

1. 19 ನೆಯ ಶತಮಾನವನ್ನು ಭಾರತೀಯ **ನವೋದಯ** ಕಾಲ ಎಂದು ಕರೆಯಲಾಗಿದೆ.
2. ರಾಜಾರಾಮ್ ಮೋಹನ್‌ರಾಯ್‌ರವರು ಪ್ರಾರಂಭಿಸಿದ ಪತ್ರಿಕೆ **ಸಂವಾದ ಕೌಮುದಿ**
3. ಪ್ರಾರ್ಥನಾ ಸಮಾಜದ ಸ್ಥಾಪಕರು **ಆತ್ಮಾರಾಮ್‌ಪಾಂಡುರಂಗ**
4. ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ ಎಂದು ಹೇಳಿದವರು **ಜ್ಯೋತಿಭಾಪುಲೆ**
5. ಸ್ವಾಮಿ ವಿವೇಕಾನಂದರ ಗುರು **ರಾಮಕೃಷ್ಣ ಪರಮಹಂಸರು**
6. ಬೇರೆ ಧರ್ಮಕ್ಕೆ ಮತಾಂತರಗೊಂಡಿದ್ದ ಜನರನ್ನು ಮತ್ತೆ ಹಿಂದೂ ಧರ್ಮದ ತೆಕ್ಕೆಗೆ ತಂದುಕೊಳ್ಳಲು ದಯಾನಂದ ಸರಸ್ವತಿಯವರು **ಶುದ್ಧಿ ಚಳುವಳಿಯನ್ನು** ಪ್ರಾರಂಭಿಸಿದರು
7. ಮಾನವನ ಸೇವೆಯೇ ಪರಮಾತ್ಮನ ಸೇವೆ ಎಂದು ಹೇಳಿದ ಸಮಾಜ **ಪ್ರಾರ್ಥನಾ ಸಮಾಜ**
8. **'**ಸತ್ಯಾರ್ಥ ಪ್ರಕಾಶ**'** ಎಂಬ ಕೃತಿಯನ್ನು ರಚಿಸಿದವರು **ದಯಾನಂದ ಸರಸ್ವತಿ**
9. ಪ್ರಾರ್ಥನಾ ಸಮಾಜವನ್ನು ಜನಪ್ರಿಯಗೊಳಿಸದವರು **ಎಂ.ಜಿ.ರಾನಡೆ**
10. **ಶಾಹು ಮಹಾರಾಜರು** ಸತ್ಯ ಶೋಧಕ ಸಮಾಜದಿಂದ ಹೆಚ್ಚು ಪ್ರಭಾವಿತರಾದರು.
11. ಜ್ಯೋತಿಭಾಪುಲೆಯವರು ಶೋಷಣೆಯ ಬಗ್ಗೆ ತಮ್ಮ **ಗುಲಾಮಗಿರಿ** ಪುಸ್ತಕದಲ್ಲಿ ತಿಳಿಸಿದ್ದಾರೆ.
12. ರಾಮಕೃಷ್ಣ ಪರಮಹಂಸರು **ದಕ್ಷಿಣೇಶ್ವರಲ್ಲಿನ** **ಕಾಳಿದೇವಾಲಯದ** ಅರ್ಚಕರಾಗಿದ್ದರು.
13. ಆನಿಬೆಸೆಂಟ್‌ರವರು **ಐರ್ಲೆಂಡ್** ದೇಶದ ಮಹಿಳೆ.
14. ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ, ಯೋಗ ಸಾಧನೆಗಳಲ್ಲದೇ ಸಮಾಜ ಸೇವೆಯು ಮುಖ್ಯ ಎಂದು ಹೇಳಿದವರು **ಸ್ವಾಮಿ ವಿವೇಕಾನಂದರು**
15. ಥಿಯಾಸಾಫಿಕಲ್ ಸೊಸೈಟಿಯ ಮೂಲ ಸ್ಥಾಪಕರು ಮ್ಯಾಡಮ್ **ಬ್ಲಾವಟ್ಸ್ಕಿ ಮತ್ತು ಕರ್ನಲ್ ಎಚ್.ಎಸ್.ಅಲ್ಕಾಟ್**



**Use e-papers for save trees-InyaTrust.com**

**III. ಹೊಂದಿಸಿ ಬರೆಯಿರಿ**

| | A | | B | ಉತ್ತರ. |
|---|---|---|---|---|
| | ಬ್ರಹ್ಮಸಮಾಜ | 1. | ದಯಾನಂದ ಸರಸ್ವತಿ | 4 |
| 2. | ಶುದ್ಧಿ ಚಳುವಳಿ | 2. | ಸರ್ ಸಯ್ಯದ್ ಅಹ್ಮದ್‌ಖಾನ್ | 1 |
| 3. | ಸತಿ ಪದ್ಧತಿ ವಿರೋಧ ಕಾಯ್ದೆ | 3. | ಬಾಲ ಗಂಗಾದರ ತಿಲಕ | 5 |
| 4. | ಆಲಿಘರ್ ಚಳುವಳಿ | 4. | ರಾಮ್ ಮೋಹನ್‌ರಾಯ್ | 2 |
| 5. | ಮರಾಠ ಕೇಸರಿ | 5. | ವಿಲಿಯಂ ಬೆಂಟಿಂಕ್ | 3 |

**IV. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ**

**1. ಬ್ರಹ್ಮ ಸಮಾಜದ ಬೋಧನೆಗಳಾವವು?**

- ❖ ಬ್ರಹ್ಮ ಸಮಾಜ ಹಿಂದೂ ಧರ್ಮದಲ್ಲಿದ್ದ ವಿಚಾರಗಳ ಸುಧಾರಣೆಗಾಗಿ ಪ್ರಯತ್ನಿಸಿತು.
- ❖ ವಿಗ್ರಹಾರಾಧನೆ ಮತ್ತು ಬಹು ದೇವತಾ ಆರಾಧನೆಯನ್ನು ವಿರೋಧಿಸಿ ಏಕದೇವತಾ ಆರಾಧನೆಯನ್ನು ಪ್ರೋತ್ಸಾಹಿಸಿತು.
- ❖ ಈ ಸಮಾಜ ಯಜ್ಞಯಾಗಾದಿಗಳನ್ನು ಖಂಡಿಸಿ ಪುರೋಹಿತ ಶಾಹಿಯನ್ನು ವಿರೋಧಿಸಿತು.
- ❖ ಇಂಗ್ಲೀಷ್ ಶಿಕ್ಷಣದ ಮೂಲಕ ಭಾರತೀಯರು ಪಾಶ್ಚಿಮಾತ್ಯ ರಾಜಕೀಯ ಚಿಂತನೆಯನ್ನು ತಿಳಿಯಲು ಸಾಧ್ಯವಾಗಿ ಅದು ಭಾರತೀಯರಲ್ಲಿ ರಾಷ್ಟ್ರಪ್ರಜ್ಞೆಯನ್ನು ಮೂಡಿಸಲು ಸಹಾಯವಾಯಿತು.

**2. ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ**

- ❖ ಆರ್ಯ ಸಮಾಜವನ್ನು ದಯಾನಂದ ಸರಸ್ವತಿಯವರು ಸ್ಥಾಪಿಸಿದರು.
- ❖ ಇವರು ದೇಶಾದ್ಯಂತ ಉಪನ್ಯಾಸ ನೀಡುತ್ತಾ ವೇದಗಳು ಸತ್ಯ ಮತ್ತು ಜ್ಞಾನದ ಮೂಲವೆಂದು ತಿಳಿಸಿದರು.
- ❖ ಈ ಹಿನ್ನೆಲೆಯಲ್ಲಿ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆ ಮಾಡಿದರು.

**3. ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.**

- ❖ ಸತ್ಯಶೋಧಕ ಸಮಾಜವು ಪಾನ ನಿಷೇಧವನ್ನು ಒತ್ತಾಯಿಸಿತು.
- ❖ ಇದು ಸ್ತ್ರೀ ಪುರುಷರ ಅಸಮಾನತೆ, ಮಾನವ ಹಕ್ಕುಗಳ ನಿರಾಕರಣೆ ಜನರನ್ನು ಶೋಷಿಸುವುದು, ಅಸ್ಪೃಶ್ಯತಾ ಆಚರಣೆಗಳನ್ನು ವ್ಯಾಪಕವಾಗಿ ವಿರೋಧಿಸಿತು.
- ❖ ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿಯನ್ನು ನಡೆಸಿತು.
- ❖ ಜ್ಯೋತಿಭಾಪುಲೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಶಾಲೆಯನ್ನೂ ತೆರೆದರು.



Use e-papers for save trees-InyaTrust.com

- ❖ ಶೂದ್ರರು ಮತ್ತು ಅತಿಶೂದ್ರರು ಅನುಭವಿಸುದ್ದ ಗುಲಾಮಗಿರಿಯನ್ನು ಹಾಗೂ ಅದಕ್ಕೆ ಕಾರಣರಾದವರನ್ನು ಉಗ್ರವಾಗಿ ಖಂಡಿಸಿತು.
- ❖ ಸಮಾಜದ ವ್ಯವಸ್ಥೆಯ ಸುಧಾರಣೆಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನೂ ಈ ಸಮಾಜ ಪ್ರತಿಪಾದಿಸಿತು.

**4. ಆಲಿಘರ್ ಚಳುವಳಿಯ ಉದ್ದೇಶಗಳನ್ನು ವಿವರಿಸಿ.**

ಮುಸಲ್ಮಾನರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ತಾತ್ವಿಕ ವಿಚಾರಗಳನ್ನು ಬದಲಿಸಿಕೊಂಡು ಪೂರ್ವ ಪಶ್ಚಿಮಗಳ ವಿಚಾರಗಳ ಸಂಗಮಕ್ಕೆ ಬೆಂಬಲಿಸುವುದು ಆಲಿಘರ್ ಚಳುವಳಿಯ ಉದ್ದೇಶವಾಗಿತ್ತು.

**5. ರಾಮಕೃಷ್ಣಮಿಷನ್‌ನ ದೃಷ್ಟಿಕೋನವನ್ನು ವಿವರಿಸಿ**

ಸರ್ವಧರ್ಮ ಸಮನ್ವಯ ತತ್ವವನ್ನು ಪ್ರಚಾರ ಮಾಡುವುದು ಮತ್ತು ಅನುಷ್ಠಾನಗೊಳಿಸುವುದು ರಾಮಕೃಷ್ಣಮಿಷನ್‌ನ ಮುಖ್ಯ ದೃಷ್ಟಿಕೋನವಾಗಿತ್ತು

**6. ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು, ಹೇಗೆ ಎಂಬುದನ್ನು ವಿವರಿಸಿ.**

1893 ರಲ್ಲಿ ಸ್ವಾಮಿ ವಿವೇಕಾನಂದರು ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಸರ್ವಧರ್ಮ ಸಹಿಷ್ಣುತೆ, ಸಕಲಧರ್ಮಗಳು ಸತ್ಯ ಎಂದು ಪ್ರತಿಪಾದಿಸಿದ ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರಿದರು. ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದರು. ಇವರು ಯುವಕರಿಗೆ ಪ್ರೇರಕ ಶಕ್ತಿಯಾಗಿದ್ದರು.

**7. ಆನಿಬೆಸೆಂಟರ ಸುಧಾರಣಾ ಕ್ರಮಗಳಾವವು?**

- ❖ ಐರ್ಲೆಂಡ್ ದೇಶದ ಮಹಿಳೆ ಆನಿಬೆಸೆಂಟ್‌ರವರು ಥಿಯಾಸಾಫಿಕಲ್ ಸೊಸೈಟಿಯ ಕಾರ್ಯಚಟುವಟಿಕೆಗಳನ್ನು ಭಾರತದಲ್ಲಿ ಆರಂಭಿಸಿ ಅದಕ್ಕೆ ನವ ಚೈತನ್ಯ ನೀಡಿದರು.
- ❖ ಉಪನ್ಯಾಸಗಳ ಮೂಲಕ ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಬಿತ್ತಿದರು. ಸಮಾಜದಲ್ಲಿ ಸಮಾನತೆ ಮತ್ತು ಸಹೋದರತೆಯನ್ನು ವೃದ್ಧಿಸುವುದು ಮತ್ತು ಸಾಮರಸ್ಯ ಸಾಧಿಸಲು ಪ್ರಯತ್ನಿಸಿದರು.
- ❖ ಆನಿಬೆಸೆಂಟ್‌ರು ಸ್ವಾತಂತ್ರ್ಯ ಚಳುವಳಿಯನ್ನು ವ್ಯಾಪಕವಾಗಿ ಬೆಂಬಲಿಸಿದರು.
- ❖ ಇವರು 'ನ್ಯೂ ಇಂಡಿಯಾ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. 1916 ರಲ್ಲಿ ಹೋಂ ರೂಲ್ ಚಳುವಳಿಯನ್ನು ಪ್ರಾರಂಭಿಸಿದರು.
- ❖ 1917ರ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷೆಯಾಗಿದ್ದರು
- ❖ ಭಾರತೀಯ ತಾತ್ವಿಕತೆಗೆ ಮತ್ತು ಸ್ವಾತಂತ್ರ್ಯ ಚಳುವಳಿಗೆ ಇವರು ಅಪಾರ ಕೊಡುಗೆಯನ್ನು ನೀಡಿದರು



Use e-papers for save trees-InyaTrust.com

**8. ಭಾರತೀಯ ಸಮಾಜವನ್ನು ಸುಧಾರಿಸಲು ಪ್ರಯತ್ನಿಸುವ ಸಮಾಜ ಸುಧಾರಕರನ್ನು ಹೆಸರಿಸಿ.**

ಮೋಹನ್‌ರಾಯ್, ದಯಾನಂದ ಸರಸ್ವತಿ, ಮಹಾದೇವ ಗೋವಿಂದ ರಾನಡೆ, ಜ್ಯೋತಿಭಾಪುಲೆ, ಸ್ವಾಮಿ ವಿವೇಕಾನಂದ, ಅನಿಬೆಸೆಂಟ್, ಸರ್ ಸಯ್ಯದ್ ಅಹ್ಮದ್‌ಖಾನ್ ಮುಂತಾದವರು ಭಾರತೀಯ ಸಮಾಜ ಸುಧಾರಣೆಗೆ ಶ್ರಮಿಸಿದರು

**9. ದಯಾನಂದ ಸರಸ್ವತಿಯವರ ಬೋಧನಗಳಾವವು?**

ದಯಾನಂದ ಸರಸ್ವತಿಯವರು ವಿಗ್ರಹಾರಾಧನೆ, ಜಾತಿಪದ್ಧತಿಯನ್ನು ಖಂಡಿಸಿದರು.
ಅನೇಕ ಅರ್ಥಹೀನ ಪದ್ಧತಿಗಳನ್ನು ಹಾಗೂ ಪುರೋಹಿತಶಾಹಿಯ ಅಧಿಕಾರವನ್ನು ತಿರಸ್ಕರಿಸಿದರು
ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು.
ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು
ಜಾತಿಯು ಯೋಗ್ಯತೆಯಿಂದ ಹೊರತೇ ಹುಟ್ಟಿನಿಂದಲ್ಲ ಎಂದು ಪ್ರತಿಪಾದಿಸಿದರು

**10. ಶುದ್ಧಿ ಚಳುವಳಿಯ ಬಗ್ಗೆ ಟಿಪ್ಪಣಿ ಬರೆಯಿರಿ**

- ❖ ಹಿಂದೂ ಧರ್ಮದಲ್ಲಿದ್ದ ಜಾತಿ ವ್ಯವಸ್ಥೆ ಮತ್ತು ಕಂದಾಚಾರಗಳು ಜನರನ್ನು ಅನ್ಯಧರ್ಮದೆಡೆಗೆ ನೂಕಿದ್ದವು.
- ❖ ಇಂತಹ ಸಂದಿಗ್ಧ ಸಂದರ್ಭದಲ್ಲಿ ಹಿಂದೂ ಸಮಾಜವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ವೇದಗಳನ್ನು ಮರು ವ್ಯಾಖ್ಯಾನಿಸಿ ಲಿಂಗ ಮತ್ತು ಜಾತಿ ಸಮಾನತೆಯನ್ನು ಪ್ರತಿಪಾದಿಸಿದರು.
- ❖ ಹಿಂದೂ ಧರ್ಮದಿಂದ ಹೊರಹೋಗುವ ಅವಕಾಶವಿತ್ತೇ ಹೊರತು ಒಳಗೆ ಬರುವ ಅವಕಾಶಗಳೇ ಇರಲಿಲ್ಲ
- ❖ ಈ ಹಿನ್ನೆಲೆಯಲ್ಲಿ ಮತಾಂತರಗೊಂಡಿದ್ದ ಜನರನ್ನು ಮತ್ತೆ ಹಿಂದೂ ಧರ್ಮದ ತೆಕ್ಕೆಗೆ ತಂದುಕೊಳ್ಳಲು ದಯಾನಂದ ಸರಸ್ವತಿಯವರು ಶುದ್ಧಿ ಚಳುವಳಿಯನ್ನು ಪ್ರಾರಂಭಿಸಿದರು
- ❖ ಮತಾಂತರಗೊಂಡವರನ್ನು ಶುದ್ಧಿ ಮಾಡಿ ಮತ್ತೆ ಹಿಂದೂ ಧರ್ಮಕ್ಕೆ ತಂದುಕೊಳ್ಳುವುದರ ಮೂಲಕ ಹಿಂದೂ ಧರ್ಮವನ್ನು ಗಟ್ಟಿಗೊಳಿಸಿದರು

**11. ಪ್ರಾರ್ಥನಾ ಸಮಾಜದ ತತ್ವಗಳೇನು?**

- ❖ ಮಾನವನ ಸೇವೆಯೇ ಪರಮಾತ್ಮನ ಸೇವೆ ಎಂಬುದು ಈ ಸಮಾಜದ ಮುಖ್ಯ ತತ್ವ
- ❖ ಈ ಸಮಾಜವು ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಆದ್ಯತೆ ನೀಡಿತು
- ❖ ಡೆಕ್ಕನ್ ಶಿಕ್ಷಣ ಸಂಸ್ಥೆಯ ಮೂಲಕ ಶಿಕ್ಷಣ ಕ್ಷೇತ್ರದ ಪ್ರಗತಿಗೆ ಪ್ರಯತ್ನಿಸಿತು.
- ❖ ವಿಧವಾ ವಿವಾಹ, ಸ್ತ್ರೀ ಶಿಕ್ಷಣ, ಅಂತರ್ಜಾತಿ ವಿವಾಹ, ಸಹಭೋಜನ ಕಾರ್ಯಕ್ರಮಗಳನ್ನೂ ಪ್ರೋತ್ಸಾಹಿಸಿತು.
- ❖ ಬಾಲ್ಯ ವಿವಾಹ, ಜಾತಿಪದ್ದತಿ, ವಿಗ್ರಹಾರಾಧನೆ, ಪರದಾ ಪದ್ಧತಿಯನ್ನು ವಿರೋಧಿಸಿತು



Use e-papers for save trees-InyaTrust.com

**12. ಸಾಮಾಜಿಕ ಧಾರ್ಮಿಕ ಸುಧಾರಣೆಯಲ್ಲಿ ಸತ್ಯಶೋಧಕ ಸಮಾಜದ ಪಾತ್ರವೇನು?**

- ಸತ್ಯ ಶೋಧಕ ಸಮಾಜವು ಪಾನ ನಿಷೇಧವನ್ನು ಒತ್ತಾಯಿಸಿತು
- ಸ್ತ್ರೀ ಪುರುಷರ ಅಸಮಾನತೆ, ಮಾನವ ಹಕ್ಕುಗಳ ನಿರಾಕರಣೆ, ಜನರನ್ನು ಶೋಷಿಸುವುದು, ಅಸ್ಪೃಶ್ಯತಾ ಆಚರಣೆಗಳನ್ನು ವ್ಯಾಪಕವಾಗಿ ವಿರೋಧಿಸಿತು.
- ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿಯನ್ನು ನಡೆಸಿತು.

**13. ಸ್ವಾಮಿ ವಿವೇಕಾನಂದರ ಬೋಧನೆಗಳಾವವು?**

- ಸ್ವಾಮಿ ವಿವೇಕಾನಂದರು ಜೀವನ ಪ್ರತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಭಾರತೀಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ.
- ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥ್ಯಕ್ಕೆ ಮಹತ್ವ ನೀಡಲು ಬಯಸಿದರು.
- ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ, ಯೋಗ ಸಾಧನೆಗಳಲ್ಲದೆ ಸಮಾಜ ಸೇವೆಯು ಮುಖ್ಯವೆಂದರು.

**ನೆನಪಿನಲ್ಲಿಡಬೇಕಾದ ಪ್ರಮುಖ ಅಂಶಗಳು**

**ರಾಮ ಮೋಹನ್‌ರಾಯ್:** ಭಾರತೀಯ ನವೋದಯದ ಜನಕ, ಬ್ರಹ್ಮ ಸಮಾಜದ ಸ್ಥಾಪಕ, ಬಂಗಾಳಿ ಭಾಷೆಯಲ್ಲಿ 'ಸಂವಾದ ಕೌಮುದಿ' ಎನ್ನುವ ಪತ್ರಿಕೆಯನ್ನು ಆರಂಭಿಸಿದರು

**ಲಾರ್ಡ್ ವಿಲಿಯಂ ಬೆಂಟಿಂಕ್:** ಸತಿ ಸಹಗಮನ ಪದ್ಧತಿ ವಿರೋಧಿ ಕಾಯ್ದೆಯನ್ನು ಜಾರಿಗೆ ತಂದರು.

**ಆತ್ಮಾರಾಮ್ ಪಾಂಡುರಂಗ:** ಪ್ರಾರ್ಥನಾ ಸಮಾಜದ ಸ್ಥಾಪಕ, ಡೆಕ್ಕನ್ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದರು

**ದಯಾನಂದ ಸರಸ್ವತಿ:** ಆರ್ಯ ಸಮಾಜದ ಸ್ಥಾಪಕರು, 'ಸತ್ಯಾರ್ಥ ಪ್ರಕಾಶ' ಎಂಬ ಕೃತಿಯಲ್ಲಿ ತಮ್ಮ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ. 'ವೇದಗಳಿಗೆ ಹಿಂದಿರುಗಿ' ಎಂಬ ಘೋಷಣೆ ನೀಡಿದವರು, ಶುದ್ಧಿ ಚಳುವಳಿಯನ್ನು ಆರಂಭಿಸಿದರು

**ಜ್ಯೋತಿಭಾಪುಲೆ :–** ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಶಾಲೆಯನ್ನೂ ತೆರೆದರು, ಗುಲಾಮಗಿರಿ ಎಂಬ ಪುಸ್ತಕ ರಚಿಸಿದ್ದಾರೆ.

**ಸರ್ ಸೈಯ್ಯದ್ ಅಹ್ಮದ್‌ಖಾನ್:** ಅಲಿಘರ್ ಚಳುವಳಿಯನ್ನು ಆರಂಭಿಸಿದರು, ಆಂಗ್ಲೋ ಒರಿಯಂಟಲ್ ಕಾಲೇಜನ್ನು ಪ್ರಾರಂಭಿಸಿದರು. ಮುಂದೆ ಇದು ಆಲಿಘರ್ ಮುಸ್ಲಿಂ ವಿಶ್ವ ವಿದ್ಯಾನಿಲಯ ಎಂದು ಹೆಸರು ಪಡೆಯಿತು

**ರಾಮಕೃಷ್ಣ ಪರಮಹಂಸ :** ಕಲ್ಕತ್ತಾ ಬಳಿಯ ದಕ್ಷಿಣೇಶ್ವರದಲ್ಲಿನ ಕಾಳಿದೇವಾಲಯದಲ್ಲಿ ಅರ್ಚಕರಾಗಿದ್ದರು

**ಸ್ವಾಮಿ ವಿವೇಕಾನಂದ:–** ರಾಮಕೃಷ್ಣ ಮಿಷನ್‌ನ ಸ್ಥಾಪಕ, ಭಾರತದ ಕ್ರಾಂತಿಕಾರಿ ಸನ್ಯಾಸಿ, ೧೮೯೩ರಲ್ಲಿ ಚಿಕಾಗೋದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

**ಆನಿಬೆಸೆಂಟ್:** ೧೯೧೬ ರಲ್ಲಿ ಹೋಂರೂಲ್ ಚಳುವಳಿಯನ್ನು ಆರಂಬಿಸಿದರು. 'ನ್ಯೂ ಇಂಡಿಯಾ' ಎಂಬ ಪತ್ರಿಕೆಯನ್ನು ಆರಂಭಿಸಿದರು.



**Use e-papers for save trees-InyaTrust.com**

## ಪಾಠ – ೬

# ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**I. ಬಿಟ್ಟಿರುವ ಸ್ಥಳವನ್ನು ಸೂಕ್ತ ಪದದಿಂದ ತುಂಬಿರಿ.**

೧. ೧೮೫೭ರ ದಂಗೆಯನ್ನು ಬ್ರಿಟಿಷ್ ಇತಿಹಾಸಕಾರರು **ಸಿಪಾಯಿ ದಂಗೆ** ಎಂದು ಕರೆದಿದ್ದಾರೆ.

೨. ಡಾಲ್ ಹೌಸಿಯು ಜಾರಿಗೆ ತಂದ ನೀತಿ **ದತ್ತು ಮಕ್ಕಳಿಗೆ ಹಕ್ಕಿಲ್ಲ**

೩. ೧೮೫೭ರ ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು **ಮಂಗಲ ಪಾಂಡೆ**

೪. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ **ಗ್ವಾಲಿಯರ್**ನ್ನು ವಶಕ್ಕೆ ಪಡೆದಳು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

**೧. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು ಯಾವುವು? ವಿಶ್ಲೇಷಿಸಿ.**

ಬ್ರಿಟಿಷರು ಜಾರಿಗೆ ತಂದಿದ್ದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾಗಿ ಹಲವು ದೇಶೀ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು. ಈ ನೀತಿಯಿಂದಾಗಿ ಸತಾರ, ಜೈಪುರ, ಝಾನ್ಸಿ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು.

**೨. ೧೮೫೭ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.**

ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕರಕುಶಲತೆ ಮತ್ತು ದೇಶಿಯ ಕೈಗಾರಿಕೆಗಳು ಕ್ಷೀಣಿಸಿದವು. ಇಂಗ್ಲೆಂಡ್ ವ್ಯಾಪಾರಿ ರಾಷ್ಟ್ರವಾಗಿರದೆ ಕೈಗಾರಿಕೆಗಳ ಕಾರ್ಯಾಗಾರವಾಯಿತು. ಭಾರತದಲ್ಲಿದ್ದಂತಹ ಕರಕುಶಲಗಾರರು ನಿರುದ್ಯೋಗಿಗಳಾದರು. ವಿಶೇಷವಾಗಿ ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿ ನೇಕಾರಿಕೆ ವೃತ್ತಿಯವರು ಉದ್ಯೋಗ ಕಳೆದುಕೊಂಡರು. ಗೃಹಕೈಗಾರಿಕೆಗಳು ಇದೇ ಬಗೆಯ ತೀವ್ರ ಆರ್ಥಿಕನಷ್ಟ ಅನುಭವಿಸಿ ಶಿಥಿಲಗೊಂಡವು. ಭಾರತದ ವಸ್ತುಗಳನ್ನು ಇಂಗ್ಲೆಂಡಿನಲ್ಲಿ ಮಾರಲು ಇಂಗ್ಲಿಷರು ದುಬಾರಿ ಸುಂಕವನ್ನು ಹೇರಿದರು. ಕಂದಾಯ ವಸೂಲಿ ಮಾಡಲು ತಾಲ್ಲೂಕುದಾರರಿಗೆ ನೀಡಿದ್ದ ಹಕ್ಕುಗಳನ್ನುಹಿಂಪಡೆಯಲಾಯಿತು. ಇನಾಂ ಆಯೋಗ ನೇಮಿಸಿ ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು. ಇದರಿಂದಾಗಿ ಕೃಷಿಕರು ತೀವ್ರವಾಗಿ ಅವಮಾನ ಮತ್ತು ಆರ್ಥಿಕಸಂಕಷ್ಟ ಅನುಭವಿಸಿದರು.



Use e-papers for save trees-InyaTrust.com

**೩. ೧೮೫೭ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು?**

ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.
ಈ ಸನ್ನಿವೇಶದಲ್ಲಿ ಸೈನಿಕರಿಗೆ 'ರಾಯಲ್ ಎನ್‌ಫೀಲ್ಡ್' ಎಂಬ ನವೀನ ಬಂದೂಕುಗಳನ್ನು ನೀಡುತ್ತಿದ್ದರು. ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು. ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು.

**೪. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳಾವುವು?**

ಇಂಗ್ಲಿಷ್ ಸೇನೆಯಲ್ಲಿದ್ದ ಹೆಚ್ಚಿನ ಪ್ರಮಾಣದ ಭಾರತೀಯ ಸಿಪಾಯಿಗಳು ತಾವೆಲ್ಲರೂ ಒಂದಾಗಿ

ಹೋರಾಡಿದರೆ ಇಂಗ್ಲಿಷರನ್ನು ಭಾರತದಿಂದ ಓಡಿಸಬಹುದು ಎಂಬ ಆತ್ಮವಿಶ್ವಾಸವನ್ನು ಹೊಂದಿದ್ದರು.

ಈ ಸನ್ನಿವೇಶದಲ್ಲಿ ಸೈನಿಕರಿಗೆ 'ರಾಯಲ್ ಎನ್‌ಫೀಲ್ಡ್' ಎಂಬ ನವೀನ ಬಂದೂಕುಗಳನ್ನು ನೀಡುತ್ತಿದ್ದರು. ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು. ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು. ಇದರಿಂದಾಗಿ ಈ ಘಟನೆಯು ದಂಗೆಗೆ ತಕ್ಷಣದ ಕಾರಣವಾಯಿತು.

**೫. ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ.**

ದಂಗೆಯು ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ. ಇದು ದೇಶದ ಬಿಡುಗಡೆಗಾಗಿ ನಡೆದದ್ದಕ್ಕಿಂತ ಅವರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದಿತ್ತು. ಇದು ಯೋಜಿತ ದಂಗೆಯಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರೇಪಿತವಾಗಿತ್ತು. ಬ್ರಿಟಿಷ್ ಸೈನಿಕರಲ್ಲಿನ ಒಗಟ್ಟು ಮತ್ತು ಭಾರತೀಯ ಸೈನಿಕರಲ್ಲಿದ್ದ ಭಿನ್ನತೆಯು ದಂಗೆಯ ವಿಫಲತೆಗೆ ಕಾರಣವಾಗಿದೆ. ದಂಗೆಗೆ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು. ಹಾಗೆಯೇ ಯುದ್ದ ತಂತ್ರ, ಸೈನಿಕ ಪರಿಣಿತಿ, ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ ಇತ್ತು, ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ. ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆಯಿಂದಾಗಿ ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ. ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು.

**೬. ೧೮೫೮ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?**

- ✓ ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ✓ ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ✓ ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.



Use e-papers for save trees-InyaTrust.com

✓ ಕಾನೂನಿನ ಮುಂದೆ ಸಮಾನತೆ.
✓ ಧಾರ್ಮಿಕ ಸಹಿಷ್ಣುತೆಯೊಂದಿಗೆ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

**೭. ೧೮೫೭ ರ ದಂಗೆಯು ಕಾಳ್ಗಿಚ್ಚಿನಂತೆ ಹರಡಲು ಕಾರಣವೇನು?**

ಮೀರತ್ ಬ್ರಿಟಿಷರ ಪ್ರಬಲ ಸೇನಾ ನೆಲೆಯಾಗಿತ್ತು. ಇಲ್ಲಿಯೂ ಕೂಡಾ ಇಂಗ್ಲಿಷರು ಭಾರತೀಯ ಸೈನಿಕರಿಗೆ ತುಪಾಕಿಗಳನ್ನು ಬಳಸಲು ಆದೇಶಿಸಿದಾಗ ಭಾರತೀಯ ಸೈನಿಕರು ಅದನ್ನು ನಿರಾಕರಿಸಿದರು. ಆಗ ಸಿಪಾಯಿಗಳನ್ನು ಬಂಧಿಸಲಾಯಿತು. ಇದರಿಂದಾಗಿ ಮೀರತನಲ್ಲಿ ದಂಗೆ ಉಂಟಾಯಿತು. ಪರಿಣಾಮವಾಗಿ ಸೈನಿಕರು ಸೆರಮನೆಗೆ ನುಗ್ಗಿ ಈಗಾಗಲೇ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದರು. ಇದು ಸ್ವಾತಂತ್ರ್ಯ ಸಂಗ್ರಾಮದ ಬೀಜಾಂಕುರಕ್ಕೆ ನಾಂದಿಯಾಯಿತು. ನಂತರ ಸೈನಿಕರ ಗುಂಪು ಮೀರತ್‌ನಿಂದ ದೆಹಲಿಗೆ ತಲುಪಿತು. ಅವರು ಕೆಂಪುಕೋಟೆಗೆ ಮುತ್ತಿಗೆ ಹಾಕಿ ಮೊಘಲ್ ದೊರೆ ಎರಡನೇ ಬಹುದ್ದೂರ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು. ಹಲವಾರು ಭಾಗಗಳಿಂದ ಪ್ರತಿಭಟನಾ ನಿರತ ಸಿಪಾಯಿಗಳು ದೆಹಲಿಗೆ ತಲುಪಿದರು. ಇದರಿಂದಾಗಿ ಪ್ರತಿಭಟನೆಯು ತೀವ್ರ ಸ್ವರೂಪ ತಾಳಿತು. ಕಾಳ್ಗಿಚ್ಚಿನಂತೆ ಪ್ರತಿಭಟನೆಯು ದೆಹಲಿ, ಕಾನ್ಪುರ ಮತ್ತು ಝಾನ್ಸಿಗಳಲ್ಲಿ ಹರಡಿತು.

**೮. ೧೮೫೭ ರ ದಂಗೆಯಲ್ಲಿ ರಾಣಿ ಝಾನ್ಸಿಯ ಪಾತ್ರವನ್ನು ವಿವರಿಸಿ.**

ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಝಾನ್ಸಿ ರಾಣಿ ಲಕ್ಷ್ಮಿಭಾಯಿಯು ಇಂಗ್ಲಿಷರ ವಿರುದ್ಧ ಯುದ್ಧ ಸಾರಿದಳು. ಯುದ್ಧ ಮಾಡಿ ಗ್ವಾಲಿಯರ್‌ನ್ನು ವಶಕ್ಕೆ ಪಡೆದಳು. ಮತ್ತೊಮ್ಮೆ ಬ್ರಿಟಿಷರ ವಿರುದ್ಧ ನಡೆದ ಹೋರಾಟದಲ್ಲಿ ಶೌರ್ಯದಿಂದ ಹೋರಾಡಿ ರಾಣಿಯು ಅಸುನೀಗಿದಳು. ಇಂದಿಗೂ ರಾಣಿಯು ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದಲ್ಲಿ ಹೆಮ್ಮೆಯ ಸ್ಥಾನವನ್ನು ಹೊಂದಿದ್ದಾಳೆ.

**೯. ದಂಗೆಗೆ ಆಡಳಿತಾತ್ಮಕ ಕಾರಣಗಳಾವುವು?**

ಇಂಗ್ಲಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು. ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು. ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು. ಇಂಗ್ಲಿಷ್ ನ್ಯಾಯಾಧೀಶರು ಬಹುತೇಕವಾಗಿ ಇಂಗ್ಲಿಷರ ಪರವಾಗಿ ನ್ಯಾಯ ನೀಡುತ್ತಿದ್ದರು. ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

**೧೦. ೧೮೫೭ ರ ದಂಗೆಗೆ ಸೈನಿಕ ಕಾರಣಗಳಾವುವು?**

ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು. ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ. ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.



Use e-papers for save trees-InyaTrust.com

೧೧. **ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಕಾರಣಗಳನ್ನು ವಿಶ್ಲೇಷಿಸಿ.**

ಬ್ರಿಟಿಷರು ಜಾರಿಗೆ ತಂದಿದ್ದ **'**ದತ್ತು ಮಕ್ಕಳಿಗೆ ಹಕ್ಕಿಲ್ಲ**'** ಎಂಬ ನೀತಿಯಿಂದಾಗಿ ಹಲವು ದೇಶೀ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು. ಈ ನೀತಿಯಿಂದಾಗಿ ಸತಾರ, ಜೈಪುರ, ಝಾನ್ಸಿ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು. ಡಾಲ್‌ಹೌಸಿಯು ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿಗಳನ್ನು ರದ್ದುಪಡಿಸಿದನು. ಮೊಘಲ್ ಚಕ್ರವರ್ತಿ, ಔದ್‌ನ ನವಾಬ ಮೊದಲಾದ ರಾಜರುಗಳನ್ನು ಇಂಗ್ಲಿಷರು ಅಧಿಕಾರದಿಂದ ಪದಚ್ಯುತಗೊಳಿಸಿದರು ಪರಿಣಾಮವಾಗಿ ಇವರನ್ನು ಅವಲಂಬಿಸಿದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು. ಇದು ಬ್ರಿಟಿಷರ ವಿರುದ್ಧದ ೧೮೫೭ರ ಪ್ರತಿಭಟನೆಗೆ ಪ್ರೇರಕವಾಯಿತು.

* * *



Use e-papers for save trees-InyaTrust.com

# ಪಾಠ – 7

# ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು

## I. ಕೆಳಗಿನ ವಾಕ್ಯಗಳಲ್ಲಿ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.

**೧. ಬ್ರಿಟಿಷ್ ಏಕರೂಪದ ಆಡಳಿತ ವ್ಯವಸ್ಥೆಯು ಭಾರತೀಯರಲ್ಲಿ ಹೇಗೆ ರಾಷ್ಟ್ರೀಯತೆಯನ್ನು ಬೆಳೆಸಿತು?**

ಬ್ರಿಟಿಷರು ತಮ್ಮ ಒಡೆದು ಆಳುವ ನೀತಿ, ದತ್ತು ಮಕ್ಕಳಿಗೆ ಹಕ್ಕಿಲ್ಲ, ಸಹಾಯಕ ಸೈನ್ಯ ಪದ್ದತಿಯಂತಹ ಪ್ರಯೋಗಗಳಿಂದ ಭಾರತದ ಮೇಲೆ ನಿಯಂತ್ರಣವನ್ನು ಸಾಧಿಸುವಲ್ಲಿ ಯಶಸ್ವಿಯಾದರು. ಇದರಿಂದಾಗಿ ಇಡೀ ಭಾರತಕ್ಕೆ ಏಕರೂಪದ ಆಡಳಿತ ಜಾರಿಗೆ ಬಂದಿತು. ದೇಶದಲ್ಲಿ ಹಲವಾರು ಸಂಸ್ಥಾನಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಮೇಲೆ ಸಹ ಬ್ರಿಟಿಷರು ನಿಯಂತ್ರಣ ಹೊಂದಿದ್ದರು. ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಏಕರೂಪತೆಯನ್ನು, ಕಾನೂನು ಸುವ್ಯವಸ್ಥೆಯನ್ನು ತರುವಲ್ಲಿ ಬ್ರಿಟಿಷರು ಸಫಲರಾದರು. ಇದರಿಂದ ದೇಶದಲ್ಲಿ ಸಮಾನತೆ ಮತ್ತು ಏಕರೂಪದ ಅಧಿಕಾರಶಾಹಿತ್ವ ಅಸ್ತಿತ್ವಕ್ಕೆ ಬಂದಿತು.

**೨. ಕೈಗಾರಿಕಾ ಕ್ರಾಂತಿಯಿಂದ ಭಾರತದಲ್ಲಾದ ಬದಲಾವಣೆಗಳೇನು?**

೧೮ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯು ದೇಶೀ ಕೈಗಾರಿಕೆಗಳ ಮೇಲೆ ತೀವ್ರವಾಗಿ ಪರಿಣಾಮ ಬೀರಿತು. ಇದರಿಂದಾಗಿ ಐರೋಪ್ಯ ಮಾರುಕಟ್ಟೆಯಲ್ಲಿ ತೀವ್ರ ಅಂತರ ಉಂಟಾಗಿ ಅಸಮತೋಲನ ಬೆಳೆಯಿತು. ಒಂದು ಕಾಲದಲ್ಲಿ ಭಾರತದ ಸಿದ್ದವಸ್ತುಗಳ ರಫ್ತು ಸದಾಕಾಲ ಆಮದಿಗಿಂತ ಹೆಚ್ಚಾಗಿರುತ್ತಿತ್ತು. ಕೈಗಾರಿಕಾ ಕ್ರಾಂತಿಯಿಂದಾಗಿ ಉತ್ಪಾದನಾ ಕೇಂದ್ರವಾಗಿದ್ದ ಭಾರತ ಕೇವಲ ಕಚ್ಚಾ ವಸ್ತುಗಳನ್ನು ರಫ್ತು ಮಾಡುವ ಸ್ಥಿತಿ ತಲುಪಿತು. ಬ್ರಿಟಿಷರು ಸಿದ್ದವಸ್ತುಗಳನ್ನು ಭಾರತಕ್ಕೆ ತಂದು ಕಡಿಮೆ ಬೆಲೆಗೆ ಮಾರಲು ಪ್ರಾರಂಭಿಸಿದರು. ಯಂತ್ರಗಳ ಮೂಲಕ ಅತಿ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಲ್ಪಟ್ಟ ಇಂಗ್ಲೆಂಡಿನ ಸರಕುಗಳೊಂದಿಗೆ ಭಾರತದ ಸರಕುಗಳು ಸ್ಪರ್ಧಿಸಲಾರದೆ ಸೋತವು. ಇದರಿಂದಾಗಿ ಕೈಗಾರಿಕೆಗಳು ತೀವ್ರ ನಷ್ಟವನ್ನು ಅನುಭವಿಸಿ, ಕಾರ್ಮಿಕರು ನಿರುದ್ಯೋಗಿಗಳಾದರು. ಇದು ಭಾರತದ ಅರ್ಥ ವ್ಯವಸ್ಥೆಯ ಮೇಲೆ ಗಂಭೀರವಾದ ಪರಿಣಾಮವನ್ನು ಬೀರಿತು.

**೩. ಮಹಲ್‌ವಾರಿ ಪದ್ದತಿ ಎಂದರೇನು?**

ಈ ಪದ್ಧತಿಯನ್ನು ಆರ್. ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು. 'ಮಹಲ್' ಎಂದರೆ ತಾಲ್ಲೂಕು ಎಂದರ್ಥ. ಇಲ್ಲಿ ಕಂದಾಯ ವಸೂಲಿಗಾಗಿ ಜಮೀನ್ದಾರರ ಬದಲು ಮಹಲ್ದಾರರನ್ನು ನೇಮಿಸಲಾಯಿತು. ಮಹಲ್ದಾರರು ನಿಗಧಿತ ಕಂದಾಯವನ್ನು ಭೂ ಅಳತೆಯ ಆಧಾರದ ಮೇಲೆ ರೈತರಿಂದ ವಸೂಲಿ ಮಾಡಿ ಸರ್ಕಾರಕ್ಕೆ ನೀಡಬೇಕಾಗಿತ್ತು. ಜಮೀನ್ದಾರರುಗಳಂತೆಯೇ ಮಧ್ಯವರ್ತಿಗಳಾಗಿ ಕೆಲಸ ಮಾಡಿದ ಇವರು ಅಪಾರ ಸಂಪತ್ತನ್ನು ಕ್ರೂಢೀಕರಿಸಿ ರೈತರ ಶೋಷಣೆಗೆ ಕಾರಣರಾದರು.



Use e-papers for save trees-InyaTrust.com

**೪. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುಧಾರಣೆಗಳಾವುವು?**

ಪರಂಪರಾನುಗತವಾಗಿ ಪಾಠಶಾಲೆಗಳು ಮತ್ತು ಮದರಸಾಗಳು ನೀಡುವ ಧಾರ್ಮಿಕ ಶಿಕ್ಷಣವು ಕೆಲವರಿಗಷ್ಟೆ ಸೀಮಿತವಾಗಿತ್ತು. ಇಂಗ್ಲಿಷರು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಪಾಶ್ಚಾತ್ಯ ಶಿಕ್ಷಣ ನೀಡಬೇಕಿತ್ತು. ಇದರಿಂದಾಗಿ ಪಾಶ್ಚಿಮಾತ್ಯ ವಿಚಾರಗಳ ಪ್ರಯೋಗಗಳಿಂದ ಅರಿವುಂಟಾಯಿತು. ಕಂಪನಿಯು ಕ್ರಮಬದ್ದವಾದ ಶಿಕ್ಷಣವನ್ನು ಜಾರಿಗೊಳಿಸಿತು. ಲಾರ್ಡ್‌ವಿಲಿಯಂ ಬೆಂಟಿಂಕನು ಮೆಕಾಲೆ ವರದಿಯಂತೆ ಇಂಗ್ಲಿಷ್ ಶಿಕ್ಷಣಕ್ಕೆ ಬುನಾದಿ ಹಾಕಿದನು. ಇದು ಆಂಗ್ಲ ಶಿಕ್ಷಣವನ್ನು ಬಲಪಡಿಸಿ ಪಾಶ್ಚಿಮಾತ್ಯ ಸಾಹಿತ್ಯದ ಮತ್ತು ವಿಚಾರಗಳ ಅಧ್ಯಯನವನ್ನು ಬೆಂಬಲಿಸಿತು.

**೫. 'ಸಾರಿಗೆ– ಸಂಪರ್ಕವು ಸ್ವಾತಂತ್ರ್ಯ ಚಳುವಳಿಯ ಮೂಲ'. ವಿವರಿಸಿ.**

ಬ್ರಿಟಿಷರು ತಾವು ಹೋದಲ್ಲೆಲ್ಲಾ ಸಾರಿಗೆ ಮತ್ತು ಸಂಪರ್ಕವನ್ನು ತಮ್ಮ ಸ್ವಹಿತಾಸಕ್ತಿಗಾಗಿ ನಿರ್ಮಿಸಿಕೊಂಡರು. ಭಾರತದ ಮೂಲೆ ಮೂಲೆಗಳನ್ನು ಶೀಘ್ರವಾಗಿ ತಲುಪಲು ರಸ್ತೆ ಮತ್ತು ರೈಲಿನ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ೧೮೫೩ರಲ್ಲಿ ಮುಂಬೈ–ಥಾಣಗಳ ನಡುವೆ ಪ್ರಥಮ ರೈಲು ಸಂಚಾರ ಪ್ರಾರಂಭವಾಯಿತು. ಮೂಲದಲ್ಲಿ ಈ ವ್ಯವಸ್ಥೆಗಳನ್ನು ಕಚ್ಚಾವಸ್ತು ಹಾಗೂ ಸಿದ್ಧವಸ್ತುಗಳ ಸಾಗಾಣಿಕೆ ಮತ್ತು ಸೇನೆಯು ಸಂಚರಿಸಲು ನಿರ್ಮಿಸಲಾಯಿತು. ಪರೋಕ್ಷವಾಗಿ ಇವು ದೇಶೀಯರನ್ನು ಸಂಘಟಿಸಲು, ಸಂಚರಿಸಲು ಸಹಾಯವಾಗಿ ಪರಸ್ಪರ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಲು, ಪ್ರಚಾರಮಾಡಲು ಸಾಧ್ಯವಾಯಿತು. ಇದು ದೇಶೀಯರನ್ನು ಒಂದುಗೂಡಿಸಿ ರಾಷ್ಟ್ರೀಯತೆಗೆ ಕಾರಣವಾಯಿತು.

**೬. ಭಾರತದಲ್ಲಿ ಪತ್ರಿಕೋದ್ಯಮ ಆರಂಭಗೊಂಡು ಬೆಳೆದು ಬಂದ ರೀತಿಯನ್ನು ವಿವರಿಸಿ.**

ಭಾರತದಲ್ಲಿ ಪತ್ರಿಕೋದ್ಯಮದ ಉಗಮ ಹಾಗೂ ಅದರ ಪಾತ್ರವು ಬಹುತೇಕವಾಗಿ ಸ್ವಾತಂತ್ರ್ಯ ಹೋರಾಟದ ಚರಿತ್ರೆಯೊಂದಿಗೆ ಬೆಸೆದು ಕೊಂಡಿದೆ. ಭಾರತದಲ್ಲಿ ನವಜಾಗೃತಿಯ ಉದಯಕ್ಕೆ ಅವುಗಳು ನಿರ್ವಹಿಸಿದ ಪಾತ್ರ ಅಮೋಘವಾಗಿದೆ. ಭಾರತದಲ್ಲಿ ಭಾಷಾ ಪತ್ರಿಕೆಗಳ ಪ್ರಾರಂಭವನ್ನು ೧೮೧೮ರಿಂದ ಕಾಣಬಹುದು. 'ದಿಗ್ಧರ್ಶನ' ಎಂಬ ಮಾಸ ಪತ್ರಿಕೆ, 'ಸಮಾಚಾರ ದರ್ಪಣ' ಎಂಬ ವಾರಪತ್ರಿಕೆ ಬಂಗಾಳಿ ಭಾಷೆಯಲ್ಲಿ ಹೊರಬಂದವು. ರಾಮ್ ಮೋಹನರಾಯರವರು 'ಸಂವಾದ ಕೌಮುಧಿ' ಎಂಬ ವಾರಪತ್ರಿಕೆಯನ್ನು ಆರಂಭಿಸಿದರು.

**೭. ರೈತವಾರಿ ಪದ್ಧತಿಯನ್ನು ಎಲ್ಲೆಲ್ಲಿ ಜಾರಿಗೆ ತರಲಾಯಿತು?**

ಮದ್ರಾಸ್, ಮುಂಬೈ, ಸಿಂಧ್, ಬಿರಾರ್, ಅಸ್ಸಾಂ ಭಾಗಗಳಲ್ಲಿ ಜಾರಿಗೆ ತರಲಾಯಿತು.

**೮. ರೈತವಾರಿ ಪದ್ಧತಿಯ ಲಕ್ಷಣಗಳೇನು?**

ಈ ಪದ್ಧತಿಯನ್ನು ಅಲೆಕ್ಸಾಂಡರ್ ರೀಡ್ ಪ್ರಯೋಗಿಸಿದರೆ ಥಾಮಸ್ ಮನ್ರೋ ಇದನ್ನು ಮುಂದುವರಿಸಿದನು. ಈ ಪದ್ಧತಿಯಲ್ಲಿ ಭೂಒಡೆತನದ ಹಕ್ಕನ್ನು ರೈತರು ಪಡೆದು ಕಂದಾಯವನ್ನು



Use e-papers for save trees-InyaTrust.com

ಭೂಅಳತೆಯ ಆಧಾರದ ಮೇಲೆ ಪಾವತಿ ಮಾಡಬೇಕಿತ್ತು. ರೈತರು ಕಂದಾಯವನ್ನು ಕಟ್ಟಲು ವಿಫಲನಾದಾಗ ಭೂಮಿಯ ಹಕ್ಕನ್ನು ಕಳೆದುಕೊಳ್ಳುತ್ತಿದ್ದನು. ಆಗ ಭೂಮಿಯನ್ನು ಸರ್ಕಾರವು ಮಾರಾಟಮಾಡುವ ಅಧಿಕಾರವನ್ನು ಹೊಂದಿತ್ತು. ಈ ಪದ್ಧತಿಯ ಪ್ರಕಾರ ಜಮೀನುಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಗ್ರಾಮಪಂಚಾಯಿತಿಯ ಬದಲು ನ್ಯಾಯಾಲಯಗಳಲ್ಲಿ ನಡೆಸಬೇಕಿತ್ತು.

**೯. ಜಮೀನ್ದಾರಿ ಪದ್ದತಿ ಎಲ್ಲೆಲ್ಲಿ ಜಾರಿಯಲ್ಲಿತ್ತು?**

ಬಂಗಾಳ , ಬಿಹಾರ, ಒರಿಸ್ಸಾಗಳಲ್ಲಿ ಜಾರಿಯಲ್ಲಿತ್ತು.

**೧೦. ರಾಜರುಗಳ ಆಳ್ವಿಕೆಯ ಕಾಲದಲ್ಲಿದ ಜಮೀನ್ದಾರಿ ಪದ್ಧತಿಯನ್ನು ವಿವರಿಸಿ.**

ರಾಜರುಗಳ ಆಳ್ವಿಕೆಯ ಕಾಲದಲ್ಲಿ ರಾಜರು ಕಂದಾಯ ವಸೂಲಾತಿಯ ಹಕ್ಕನ್ನು ಹೊಂದಿದ್ದರು ಕಂದಾಯವನ್ನು ರೈತರು ಬೆಳೆಸ ಬೆಳೆಯ ಪ್ರಮಾಣದ ಆಧಾರದಲ್ಲಿ ನಿಗಧಿಪಡಿಸಲಾಗುತ್ತಿತ್ತು. ಹರಾಜು ಮಾಡುವ ಪದ್ಧತಿ ಜಾರಿಗೆ ಬಂದ ನಂತರದಲ್ಲಿ ಹರಾಜಾದ ಮೊತ್ತವನ್ನು ಹಳ್ಳಿಯು ವಹಿಸಿಕೊಳ್ಳುತ್ತಿತ್ತು. ಭೂ ಒಡೆತನವು ಹಳ್ಳಿಯಲ್ಲಿಯೇ ಉಳಿದಿತ್ತು.

**೧೧. ಭೂಕಂದಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ಬ್ರಿಟಿಷರು ಹಲವು ಹೊಸಪದ್ಧತಿಗಳನ್ನು ಜಾರಿಗೆ ತರಲು ಕಾರಣವೇನು?**

ಬ್ರಿಟಿಷರ ಮೂಲ ಉದ್ದೇಶವು ಲಾಭಗಳಿಸಿಕೊಳ್ಳುವುದ್ದಾದರಿಂದ ಆಡಳಿತವನ್ನು ಅವರ ಹಿತಾಸಕ್ತಿಗನುಗುಣವಾಗಿ ರೂಪಿಸಿಕೊಂಡರು. ಇದರಿಂದಾಗಿ ಭೂಕಂದಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ಹಲವು ಹೊಸಪದ್ಧತಿಗಳನ್ನು ಇವರು ಜಾರಿಗೆ ತಂದರು.

**೧೨. ಬ್ರಿಟಿಷರು ಜಾರಿಗೆ ತಂದ ಭೂಕಂದಾಯ ವ್ಯವಸ್ಥೆಗಳು ಯಾವುವು?**

ಜಮೀನ್ದಾರಿ ಪದ್ದತಿ, ರೈತವಾರಿ ಪದ್ಧತಿ ,ಮಹಲ್ವಾರಿ ಪದ್ಧತಿ.

**೧೩. ಕೈಗಾರಿಕೆಗಳಲ್ಲಿ ವಿದೇಶಿ ಬಂಡವಾಳ ಮತ್ತು ವಿದೇಶಿ ಮಾಲೀಕತ್ವ ಪರಿಣಾಮವೇನು?**

ಕೈಗಾರಿಕೆಗಳಲ್ಲಿ ವಿದೇಶಿ ಬಂಡವಾಳ ಮತ್ತು ವಿದೇಶಿ ಮಾಲೀಕತ್ವ ಬಂದಿತು. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿ ಮತ್ತು ತಾಂತ್ರಿಕತೆಯ ಬೆಳವಣಿಗೆಯ ಪರಿಣಾಮವಾಗಿ ಹತ್ತಿ ಬಟ್ಟೆ, ಸೆಣಬು ಮತ್ತು ಕಾಗದ ತಯಾರಿಕೆ, ಕಾಫಿ ತೋಟಗಳು, ಉದ್ಯಮಗಳು ನಿಧಾನವಾಗಿ ಬೆಳೆದವು. ದೇಶದ ಪ್ರಮುಖ ಪಟ್ಟಣಗಳಲ್ಲಿ ನವೀಕೃತ, ಯಾಂತ್ರಿಕತೆಯಿಂದ ಕೂಡಿರುವ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದವು. ಭವಿಷ್ಯದಲ್ಲಿ ಇವುಗಳ ವ್ಯಾಪ್ತಿಯು ಹೆಚ್ಚಿತು.



Use e-papers for save trees-InyaTrust.com

# ಅಧ್ಯಾಯ – 8

# ಸ್ವಾತಂತ್ರ್ಯ ಹೋರಾಟ

## I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ.

1) ಭಾರತೀಯ ರಾಷ್ಟ್ರೀಯ ಕಾಂಗ್ರೇಸನ್ನು **1885ರಲ್ಲಿ** ಸ್ಥಾಪಿಸಲಾಯಿತು.

2) ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ತಿಳಿಸಿದವರು **ದಾದಾಬಾಯಿ ನವರೋಜಿ**

3) ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ಎಂದು **ಬಾಲಗಂಗಾಧರ್ ತಿಲಕ್** ರವರು ಘೋಷಿಸಿದರು.

4) ಅಲಿ ಸಹೋದರರು ನಡೆಸಿದ ಚಳುವಳಿ **ಖಿಲಾಫತ್**

5) ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು **ಮಹಮದ್ ಆಲಿ ಜಿನ್ನಾ** ರವರು ಮಂಡಿಸಿದರು.

6) 1929ರ ಲಾಹೋರ್‌ನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದ ಅಧ್ಯಕ್ಷರಾಗಿದ್ದವರು **ಜವಾಹರಲಾಲ್ ನೆಹರು**

7) ಮಹದ್ ಮತ್ತು ಕಾಲರಾಂ ದೇವಾಲಯ ಚಳುವಳಿಯನ್ನು ರೂಪಿಸಿದವರು **ಡಾ. ಬಿ ಆರ್ ಅಂಬೇಡ್ಕರ್**

8) ಭಾರತೀಯ ರಾಷ್ಟ್ರೀಯ ಸೇನೆಯ ಝಾನ್ಸಿ ರೆಜಿಮೆಂಟಿನ ನೇತೃತ್ವವನ್ನು **ಕ್ಯಾಪ್ಟನ್ ಲಕ್ಷ್ಮಿಸೆಹಗಲ್** ರವರು ವಹಿಸಿದರು.

9) ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿಯವರು **ದಂಡಿ** ಎಂಬಲ್ಲಿ ನಡೆಸಿದರು.

10) ಕ್ವಿಟ್ ಇಂಡಿಯಾ ಚಳುವಳಿಯು **1942** ರಲ್ಲಿ ನಡೆಯಿತು.

## II ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳವನ್ನು ನೀಡಿರುವ ಆಯ್ಕೆಗಳನ್ನು ಸರಿಯಾದುದನ್ನು ಆರಿಸಿ ಭರ್ತಿ ಮಾಡಿ.

**1) ಭಾರತೀಯ ರಾಷ್ಟ್ರೀಯ ಕಾಂಗ್ರೆಸನ ಸ್ಥಾಪಕರು**

ಎ)ಮಹಾತ್ಮ ಗಾಂಧೀಜಿ **ಬಿ)ಎ.ಓ.ಹ್ಯೂಮ್**

ಸಿ)ಬಾಲಗಂಗಾಧರ ತಿಲಕ್ ಡಿ)ಗೋಪಾಲಕೃಷ್ಣ ಗೋಖಲೆ



Use e-papers for save trees-InyaTrust.com

**2) 'ಮರಾಠ' ಪತ್ರಿಕೆಯನ್ನು ಪ್ರಕಟಿಸಿದವರು**

ಎ) ಜವಾಹರಲಾಲ್ ನೆಹರು ಬಿ) ರಾಸ್ ಬಿಹಾರಿ ಬೋಸ್

**ಸಿ) ಬಾಲಗಂಗಾಧರ ತಿಲಕ್** ಡಿ) ವಿ. ಡಿ. ಸಾವರ್ಕರ್

**3) ಸ್ವರಾಜ್ ಪಕ್ಷ ಸ್ಥಾಪಿಸಿದ ವರ್ಷ**

ಎ) 1924 **ಬಿ) 1922** ಸಿ) 1929 ಡಿ) 1906

**4) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು**

ಎ) ಸರ್ದಾರ್ ವಲ್ಲಭ ಬಾಯಿ ಪಟೇಲ್ ಬಿ) ಡಾ. ಬಿ.ಆರ್.ಅಂಬೇಡ್ಕರ್

ಸಿ) ಲಾಲ ಲಜಪತ ರಾಯ್ **ಡಿ) ಸುಭಾಷ್ ಚಂದ್ರಬೋಸ್**

**5) ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು**

ಎ)ಭಗತ್ ಸಿಂಗ್ ಬಿ) ಚಂದ್ರಶೇಖರ್ ಅಜಾದ್

ಸಿ) ಅಬುಲ್ ಕಲಾಂ ಅಜಾದ್ **ಡಿ) ಸರ್ದಾರ್ ವಲ್ಲಭ ಭಾಯಿ ಪಟೇಲ್**

**6. ಮೊದಲನೆಯ ದುಂಡು ಮೇಜಿನ ಪರಿಷತ್ ನಡೆದ ವರ್ಷ**

ಅ)1928 ಆ)1979 **ಇ)1930** ಈ)1931

**7. 1946ರ ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಿದ್ದು**

ಅ)ಕಾಂಗ್ರೆಸ್ **ಆ) ಮುಸ್ಲಿಂ ಲೀಗ್**

ಇ)ಫಾರ್ವರ್ಡ್ ಬ್ಲಾಕ್ ಈ) ಭಾರತೀಯ ರಾಷ್ಟ್ರೀಯ ಸೇನೆ

**III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ. ಉತ್ತರಿಸಿ.**

**1) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಗೆ ಮೊದಲು ಇದ್ದ ಸಂಘಟನೆಗಳು ಯಾವುವು?**

'ದಿ ಹಿಂದೂ ಮೇಳ', 'ದಿ ಈಸ್ಟ್ ಇಂಡಿಯಾ ಅಸೋಸಿಯೇಷನ್', 'ಪೂನಾ ಸಾರ್ವಜನಿಕ ಸಭಾ' ಮತ್ತು 'ದಿ ಇಂಡಿಯನ್ ಅಸೋಸಿಯೇಷನ್'



**Use e-papers for save trees-InyaTrust.com**

**2) ಬ್ರಿಟಿಷ್ ಸರ್ಕಾರದ ಮುಂದಿಟ್ಟ ಮಂದಗಾಮಿಗಳ ಬೇಡಿಕೆಗಳಾವುವು?**

ದೇಶದ ಕೈಗಾರಿಕೆಗಳ ಅಭಿವೃದ್ಧಿ,ಸೈನಿಕ ವೆಚ್ಚ ಕಡಿಮೆ ಮಾಡುವುದು, ಉತ್ತಮ ಶಿಕ್ಷಣ ಕೊಡುವುದು, ಬಡತನದ ಬಗ್ಗೆ ಅಧ್ಯಯನ ನಡೆಸಲು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸುವುದು ಇವೇ ಮೊದಲಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು.

**3) ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ.**

ಆಮದನ್ನು ಹೆಚ್ಚಿಸಿ ರಫ್ತನ್ನು ಕಡಿಮೆ ಮಾಡಿದ್ದರಿಂದ ಪ್ರತಿಕೂಲ ಸಂದಾಯ ಉಂಟಾಗಿ ದೇಶದ ಸಂಪತ್ತು ಇಂಗ್ಲೆಂಡಿಗೆ ಹರಿಯಲು ಕಾರಣವಾಯಿತೆಂದು ಅವರು ಪ್ರತಿಪಾದಿಸಿದರು. ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ, ನಿವೃತ್ತಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಾದ ಹಿನ್ನೆಲೆಯಲ್ಲಿ ಅಪಾರವಾದ ಸಂಪತ್ತು ಬ್ರಿಟನ್ನಿಗೆ ಹರಿದು ಹೋಗುತ್ತಿತ್ತು ಎಂಬುದು ಸಂಪತ್ತಿನ ಸೋರಿಕೆ ಸಿದ್ಧಾಂತದ ವಿವರ.

**4) ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳನ್ನು ಹೆಸರಿಸಿ.**

ವಿ.ಡಿ. ಸಾವರ್ಕರ್, ಅರಬಿಂದೋ ಘೋಷ್, ಶ್ಯಾಮಾಜಿ ಕೃಷ್ಣವರ್ಮ, ರಾಸ್ ಬಿಹಾರಿ ಘೋಷ್, ಮೇಡಂ ಕಾಮಾ, ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್.

**5) ಸ್ವಾತಂತ್ರ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.**

ತಿಲಕರು 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದರು.

ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಬಳಸಿಕೊಂಡರು. ಈ ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು. ಅವರ ಕ್ರಾಂತಿಕಾರಕ ಬರವಣಿಗೆಗಳು ಜನರ ಉದ್ರೇಕಕ್ಕೆ ಕಾರಣವಾಯಿತು ಎಂಬ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿತು.

**6) ಬಂಗಾಳ ವಿಭಜನೆಯನ್ನು ಹಿಂಪಡೆಯಲು ಕಾರಣಗಳೇನು?**

ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧಗಳು ವ್ಯಕ್ತವಾದವು. ಪ್ರತಿರೋಧದ ಒಂದು ಬಗೆಯಾಗಿ ಸ್ವದೇಶಿ ಚಳುವಳಿಯನ್ನು ಪ್ರಾರಂಭಿಸಲಾಯಿತು. ಇದನ್ನು ದೇಶದಾದ್ಯಂತ ಕೊಂಡೊಯ್ದುವರು ತೀವ್ರವಾದಿಗಳು. ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲು ಸ್ವದೇಶಿ ಆಂದೋಲನವು ಕರೆ ನೀಡಿತು. ಸ್ವದೇಶಿ ವಸ್ತುಗಳನ್ನು ಬಳಸುವಂತೆ ಅವರು ಭಾರತೀಯರನ್ನು ಪ್ರೇರೇಪಿಸಿದರು. ಭಾರತೀಯರ ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಬಂಗಾಳದ ವಿಭಜನೆಯನ್ನು 1911ರಲ್ಲಿ ಬ್ರಿಟಿಷ್ ಸರ್ಕಾರವು ಹಿಂಪಡೆಯಿತು.



Use e-papers for save trees-InyaTrust.com

**7) ಚೌರಿ ಚೌರ ಘಟನೆಯನ್ನು ವಿವರಿಸಿ.**

ಉತ್ತರ ಪ್ರದೇಶದ ಚೌರಿಚೌರ ಎಂಬಲ್ಲಿ ಸಾವಿರಾರು ಸ್ವಾತಂತ್ರ್ಯ ಯೋಧರು ಚಳುವಳಿಗೆ ಧುಮುಕಿದರು. 1922ರಲ್ಲಿ ಶಾಂತಿಯುತವಾಗಿ ಚಳುವಳಿ ನಡೆಸುತ್ತಿದ್ದ ಚಳುವಳಿಗಾರರ ಮೇಲೆ ಪೋಲಿಸರು ಹಲ್ಲೆ ಮಾಡಿದರು. ಇದರಿಂದ ರೊಚ್ಚಿಗೆದ್ದ ಜನರು ಠಾಣೆಗೆ ನುಗ್ಗಲೆತ್ನಿಸಿದಾಗ ಪೋಲಿಸರು ಗೋಲಿಬಾರ್ ನಡೆಸಿದರು. ಪೋಲಿಸರ ಬಳಿ ಇದ್ದ ಶಸ್ತ್ರಾಸ್ತ್ರಗಳು ಖಾಲಿಯಾದ ಕಾರಣದಿಂದ ಪೋಲಿಸರು ಠಾಣೆಯೊಳಗೆ ಓಡಿದರು. ಕುಪಿತರಾದ ಚಳುವಳಿಗಾರರು ಪೋಲಿಸ್ ಠಾಣೆಗೆ ಬೆಂಕಿ ಹಚ್ಚಿದರು. ಇದರಿಂದ 22 ಜನ ಪೋಲಿಸರು ಸಜೀವ ದಹನವಾದರು. ಈ ಘಟನೆಯನ್ನು ಇತಿಹಾಸದಲ್ಲಿ ಚೌರಿಚೌರ ಘಟನೆ ಎನ್ನುತ್ತಾರೆ.

**8) ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ.**

ಕಾನೂನು ಭಂಗ ಚಳುವಳಿಯ ನೇತೃತ್ವ ವಹಿಸಿಕೊಂಡ ಗಾಂಧೀಜಿಯವರು ವೈಸರಾಯ್ ಇರ್ವಿನ್ನನ ಮುಂದೆ ಉಪಿ ್ಪನ ಮೇಲಿನ ತೆರಿಗೆ ರದ್ದತಿಯು ಸೇರಿದಂತೆ ಹನ್ನೊಂದು ಬೇಡಿಕೆಗಳನ್ನುಸಲ್ಲಿಸಿದ್ದರು. ಈ ಬೇಡಿಕೆಗಳು ಈಡೇರದೇ ಹೋದಲ್ಲಿ ಕಾನೂನು ಭಂಗ ಚಳುವಳಿ ಆರಂಭಿಸುವುದಾಗಿ ಗಾಂಧೀಜಿಯವರು ಘೋಷಿಸಿದರು. ಆದರೆ ಇರ್ವಿನ್ ಅವರ ಬೇಡಿಕೆಗಳನ್ನು ಪರಿಗಣಿಸಲಿಲ್ಲ. ಇದರ ಪರಿಣಾಮವಾಗಿ ಗಾಂಧೀಜಿಯವರು 1930ರಲ್ಲಿ ಸಬರಮತಿ ಆಶ್ರಮದಿಂದ ಸೂರತ್ ಸಮೀಪದ ಸಮುದ್ರ ತೀರದ ದಂಡಿಯವರೆಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ಹೊರಟು ದಂಡಿಯ ಕಡಲ ತೀರದಲ್ಲಿ ತಾವೇ ಉಪ್ಪು ತಯಾರಿಸಿ ಕಾನೂನು ಭಂಗ ಚಳುವಳಿಯನ್ನು ಪ್ರಾರಂಭಿಸಿದರು. ಈ ಘಟನೆಯನ್ನು ಇತಿಹಾಸದಲ್ಲಿ 'ದಂಡಿ ಸತ್ಯಾಗ್ರಹ' ಎಂದು ಕರೆಯುತ್ತಾರೆ.

**9) ಕ್ವಿಟ್ ಇಂಡಿಯಾ ಚಳುವಳಿಯು ವಿಫಲವಾಗಲು ಕಾರಣಗಳೇನು?**

ಕ್ವಿಟ್ ಇಂಡಿಯಾ ಚಳುವಳಿಯ ಆರಂಭದಲ್ಲಿ ಗಾಂಧೀಜಿಯವರು ದೇಶಬಾಂಧವರಿಗೆ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ನೀಡಿದರು. ಈ ಕರೆ ನೀಡಿದ ಹಿನ್ನೆಲೆಯಲ್ಲಿ ಗಾಂಧೀಜಿ ,ನೆಹರು ರಾಜೇಂದ್ರಪ್ರಸಾದ್ , ಅಬ್ದುಲ್ ಕಲಾಂ ಅಜಾದ್ ಸರ್ದಾರ್ ವಲ್ಲಭ ಭಾಯಿ ಪಟೇಲ್, ಆಚಾರ್ಯ ಕೃಪಲಾನಿ ಕಸ್ತೂರ ಬಾ ಗಾಂದಿ ಮೊದಲಾದ ನಾಯಕರನ್ನು ಬ್ರಿಟಿಷ್ ಸರ್ಕಾರವು ಬಂಧಿಸಿ ಜೈಲಿನಲ್ಲಿಟ್ಟಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಹುತೇಕ ನಾಯಕರು ಬಂಧನದಲ್ಲಿದ್ದ ಕಾರಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು. ಮುಸ್ಲಿಂ ಲೀಗ್ ಆ ಚಳುವಳಿಯಲ್ಲಿ ಭಾಗವಹಿಸಲಿಲ್ಲಿ. ಅದು ಭಾರತದ ವಿಭಜನೆಯ ಪ್ರಸ್ತಾವನೆಯನ್ನು ಮುಂದಿಟ್ಟಿತ್ತು.

**10) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾಗಿ ಕಂಡುಬರುವ ತೀವ್ರಗಾಮಿಗಳ ಹೆಸರುಗಳನ್ನು ಬರೆಯಿರಿ.**

ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಲ ಲಜಪತ ರಾಯ್ ಮತ್ತು ಬಾಲಗಂಗಾಧರ್ ತಿಲಕ್ ಮುಂತಾದವರು ಪ್ರಮುಖ ತೀವ್ರವಾದಿ ನಾಯಕರು.



Use e-papers for save trees-InyaTrust.com

**11) ಎರಡನೆಯ ದುಂಡು ಮೇಜಿನ ಪರಿಷತ್ತಿನ ಸಮಾವೇಶದ ಫಲಿತಾಂಶವೇನು?**

ಎರಡನೆಯ ದುಂಡು ಮೇಜಿನ ಸಮಾವೇಶದಲ್ಲಿ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ಪ್ರಸ್ತಾಪ ಮುಂದಿಟ್ಟರು. ಈ ಪ್ರಸ್ತಾಪವನ್ನು ಗಾಂಧೀಜಿಯವರು ಒಪ್ಪಲಿಲ್ಲ. ಇದರಿಂದ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಉಂಟಾಯಿತು. ಹೀಗಾಗಿ ಎರಡನೆಯ ದುಂಡು ಮೇಜಿನ ಪರಿಷತ್ತು ಸಮಾವೇಶ ಕೂಡ ಯಾವುದೇತೀರ್ಮಾನವಿಲ್ಲದೆ ಮುಕ್ತಾಯಗೊಂಡಿತು.

**12) ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.**

ಬ್ರಿಟಿಷ್ ವಿರೋಧಿ ಶಕ್ತಿಗಳೊಡಗೂಡಿ ಬ್ರಿಟಿಷರ ವಿರುದ್ಧ ಹೊರಾಡಲು ಬಯಸಿ ಅವರು ವಿರುದ್ದ ಹೋರಾಡಲು ಬಯಸಿ ಅವರು ಗೃಹ ಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಇವರಿಗೆ ಎಲ್ಲಾ ಸಹಾಯವನ್ನು ನೀಡುವ ಭರವಸೆಯನ್ನು ವ್ಯಕ್ತಪಡಿಸಿದನು ಬೋಸರು ಜರ್ಮನಿಯಲ್ಲಿ ಭಾರತೀಯ ಯುದ್ಧ ಕೈದಿಗಳನ್ನು ಸಂಘಟಿಸಿದರು. 'ಅಜಾದ್ ಹಿಂದ್ ರೇಡಿಯೋ' ಮೂಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದರು. ಯುದ್ದದಲ್ಲಿ ಜಪಾನಿನ ಯಶಸ್ಸನ್ನು ತಿಳಿದು ಅದರ ಸಹಾಯದಿಂದ ಭಾರತದ ಬಿಡುಗಡೆಯ ಸಾಧ್ಯತೆಗೆ ಸಂಬಂಧಿಸಿದಂತೆ ಭಾರತೀಯರನ್ನು ಸಂಘಟಿಸಿದ್ದ ರಾಸ್ ಬಿಹಾರಿ ಬೋಸರ ಜೊತೆಗೆ ಸುಭಾಷರು ಕೈಜೋಡಿಸಿದರು. ರಾಸ್ ಬಿಹಾರಿ ಬೋಸರವರು ಟೋಕಿಯೋದಲ್ಲಿ ಸ್ಥಾಪಿಸಿದ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ನ ಸೇನಾವಿಭಾಗವನ್ನು ಭಾರತೀಯ ರಾಷ್ಟ್ರೀಯ ಸೇನೆ (INA) ಎಂದು ಕರೆಯುತ್ತಿದ್ದರು. ನಂತರದ ದಿನಗಳಲ್ಲಿ ಐ.ಎನ್.ಎ ಯ ಮುಖಂಡತ್ವವನ್ನು ಸುಭಾಷ್ ಚಂದ್ರ ಬೋಸರವರಿಗೆ ವಹಿಸಿದರು. ಸುಭಾಷ್ ಚಂದ್ರ ಬೋಸರು ಈ ಸಂದರ್ಭದಲ್ಲಿ 'ದೆಹಲಿ ಚಲೋ'ಗೆ ಕರೆಯನ್ನು ನೀಡಿದರು. 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು. ಸುಭಾಷರು ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿಯನ್ನು ವಶಪಡಿಸಿ ಕೊಳ್ಳಲು ಯುದ್ಧ ತಂತ್ರವನ್ನು ರೂಪಿಸಿದ್ದರು. ಆ ಹೊತ್ತಿಗೆ ಭಾರತದಿಂದ ಐ.ಎನ್.ಎ ಗೆ ಸೇರ್ಪಡೆಯಾದ ಸಾವಿರಾರು ಯೋಧರು ದೆಹಲಿಯನ್ನು ಆಕ್ರಮಿಸಲು ತಯಾರಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಸುಭಾಷರ ಆದೇಶದಂತೆ ಸಶಸ್ತ್ರ ಹೋರಾಟವನ್ನು ಅವರು ಬರ್ಮಾದ ಗಡಿಯಲ್ಲಿ ಆರಂಭಿಸಿದರು. ಬ್ರಿಟಿಷರು ಮತ್ತು ಐ.ಎನ್.ಎ ನಡುವೆ ತೀವ್ರವಾದಂತಹ ಯುದ್ಧ ನಡೆದ್ದಿದ್ದ ಸಂದರ್ಭದಲ್ಲಿ ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು.

**13) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟುವರ್ಗಗಳ ಬಂಡಾಯಗಳನ್ನು ವಿವರಿಸಿ.**

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗೆ ನೇರವಾಗಿ ಪ್ರೇರಣೆಯಾದವು. ಬುಡಕಟ್ಟು ಬಂಡಾಯಗಳಲ್ಲಿ ಸಂತಾಲರ ದಂಗೆ, ಮುಂಡ ಚಳುವಳಿ ಪ್ರಮುಖವಾಗಿವೆ. ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಈ ನಿಟ್ಟಿನಲ್ಲಿ ಗಮನಾರ್ಹವಾಗಿದೆ. ಸಂತಾಲ ಬುಡಕಟ್ಟು ದಂಗೆಯನ್ನು ಭಾರತದ ಆದ್ಯ



**Use e-papers for save trees-InyaTrust.com**

ಹೋರಾಟ ಎಂದು ಗುರುತಿಸಿದೆ. ಈ ಬುಡಕಟ್ಟು ಜನರನ್ನು ಬಂಗಾಳಿ ಮತ್ತು ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಗುರುತಿಸಬಹುದು. ಬ್ರಿಟಿಷರು ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ದತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು. ಬುಡಕಟ್ಟು ಜನರ ಭೂಮಿಯು ಜಮೀನ್ದಾರರ ಕೈಸೇರಿತು. ಬಂಗಾಳಿ ಜಮೀನ್ದಾರರು, ಲೇವಾದೇವಿಗಾರರು ಮತ್ತು ಕಂಪನಿ ಸರ್ಕಾರವು ಸಂತಾಲರ ನೇರ ಶೋಷಣೆಗೆ ಕಾರಣರಾದರು. ಸಂತಾಲರ ಶಾಂತಿ ಪ್ರಿಯತೆ ಮತ್ತು ಸಭ್ಯತೆಯನ್ನು ಕಂಪನಿ ಸರ್ಕಾರವು ಶೋಷಣೆಗೆ ಉಪಯೋಗಿಸಿಕೊಂಡಿತು. ಇದರಿಂದ ಅಸಮಾಧಾನಗೊಂಡ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರು ಮತ್ತು ಮಹಾಜನರನ್ನು ಲೂಟಿ ಮಾಡಲು ನಿರ್ಧರಿಸಿದರು. ದಂಗೆಯು ಬಾರಹತ್ ಪ್ರದೇಶದಲ್ಲಿ ತೀವ್ರವಾಯಿತು. ಬಾಗತಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು. ಪರಿಣಾಮವಾಗಿ ಬುಡಕಟ್ಟು ಜನರು ಅವರ ಶತ್ರುಗಳನ್ನು ಹತ್ಯೆ ಮಾಡಿದರು. ಇದರಿಂದಾಗಿ ಜಮೀನ್ದಾರರು, ಲೇವಾದೇವಿದಾರರು ಪಲಾಯನ ಮಾಡಿದರು.ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು. ಸಂತಾಲರ ದಂಗೆಯು ಕೊನೆಗೊಂಡರೂ ಅದರ ಸ್ಪೂರ್ತಿಯು ಮುಂದಿನ ಅನೇಕ ಹೋರಾಟಗಳಿಗೆ ಪ್ರೇರಣೆಯಾಯಿತು.

**14) ನೆಹರುರವರು ಪ್ರಧಾನಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ?**

ನೆಹರೂರವರ ದೇಶದ ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸನ್ನು ಕಂಡರು. ಇವುಗಳ ರೂವಾರಿಯಾಗಿ ನಾವು ನೆಹುರುವರನ್ನು ಕಾಣಬಹುದು. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಭಾರತವು ಬಣಗಳ ಧ್ರುವೀಕೃತ ವ್ಯವಸ್ಥೆಯಿಂದ ವಿಮುಕ್ತಗೊಂಡು ಅಲಿಪ್ತ ನೀತಿಯನ್ನು ಪ್ರತಿಪಾದಿಸಿತು. ಪಂಚಶೀಲ ತತ್ವಗಳ ಆಧಾರದ ಮೇಲೆ ಶಕ್ತಿ ರಾಜಕಾರಣದಿಂದ ದೂರವೇ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಠಾನಕ್ಕೆ ತರಲು ಕಾರಣರಾದರು.

**11. ಡಾ. ಬಿ.ಆರ್. ಅಂಬೇಡ್ಕರ್ ಆರಂಭಿಸಿದ ಪತ್ರಿಕೆಗಳನ್ನು ಹೆಸರಿಸಿ.**

ಪ್ರಬುದ್ಧ ಭಾರತ , ಜನತಾ, ಮೂಕನಾಯಕ ಮತ್ತು 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು.

**12. ಪ್ರಮುಖ ಮಂದಗಾಮಿಗಳು ನಾಯಕರನ್ನು ಹೆಸರಿಸಿ.**

ಎಂ.ಜಿ. ರಾನಡೆ ಸುರೇಂದ್ರನಾಥ ಬ್ಯಾನರ್ಜಿ, ದಾದಾ ಬಾಯಿ ನವರೋಜಿ, ಗೋಖಲೆ ಪ್ರಮುಖ ಮಂದಗಾಮಿ ನಾಯಕರು.

**13. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಕಾರಣಗಳೇನು?**

ಉನ್ನತ ವರ್ಗದ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕಲಿತ ಹೊಸ ಪೀಳಿಗೆಯ ಭಾರತೀಯರು ಸಂವಿಧಾನಾತ್ಮಕವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲು ಆರಂಭಿಸಿದರು. ಇವರ ಒಟ್ಟಾರೆ ಪ್ರಯತ್ನಗಳ ಪ್ರತಿಫಲವೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ನಾಂದಿಯಾಯಿತು.



**Use e-papers for save trees-InyaTrust.com**

**14. ತಿಲಕರು ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಹೇಗೆ ಪ್ರೇರೇಪಿಸಿದರು.**

ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಬಳಸಿಕೊಂಡರು. ಈ ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು.

**15. ಯಾರು ಮತ್ತು ಯಾವಾಗ 'ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರು?**

1922 ರಲ್ಲಿ ಸಿ.ಆರ್ ದಾಸ್ ಮತ್ತು ಮೋತಿಲಾಲ್ ನೆಹರು ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರು.

**16. ಮಹಾತ್ಮ ಗಾಂಧೀಜಿಯವರ ಪ್ರವೇಶದಿಂದ ಸ್ವಾತಂತ್ರ್ಯ ಚಳುವಳಿ ಹೇಗೆ ಹೊಸ ಆಯಾಮವನ್ನು ಪಡೆಯಿತು?**

ಮಹಾತ್ಮ ಗಾಂಧೀಜಿಯವರ ಪ್ರವೇಶದಿಂದಾಗಿ ಸ್ವಾತಂತ್ರ್ಯ ಚಳುವಳಿಯು ಹೊಸ ಆಯಾಮವನ್ನು ಪಡೆಯಿತು. ಗಾಂಧೀಜಿಯವರು ತಮ್ಮ ಹೋರಾಟದಲ್ಲಿ 'ಪರೋಕ್ಷ ಪ್ರತಿರೋಧ', 'ಅಹಿಂಸೆ' ಮತ್ತು 'ಸತ್ಯಾಗ್ರಹವನ್ನು' ಪ್ರಮುಖ ತಂತ್ರಗಳನ್ನಾಗಿ ಬಳಸಿಕೊಂಡರು. ತಮ್ಮ ಸಿದ್ಧಾಂತಗಳನ್ನು ಅವರು 'ಹಿಂದ್ ಸ್ವರಾಜ್' ಪತ್ರಿಕೆಯಲ್ಲಿ ವ್ಯಕ್ತಪಡಿಸುತ್ತಿದ್ದರು. ಸತ್ಯಾಗ್ರಹವು ಇವರ ಹೋರಾಟದ ಪ್ರಮುಖ ಅಸ್ತ್ರವಾಯಿತು.

**17. ಯಾವ ಕಾಲವನ್ನು 'ಗಾಂಧಿಯುಗ' ಎಂದು ಕರೆಯಲಾಗುತ್ತದೆ?**

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 1920ರಿಂದ 1947ರ ಕಾಲವನ್ನು 'ಗಾಂಧಿಯುಗ' ವೆಂದು ಕರೆಯಲಾಗಿದೆ.

**18. " ಜಲಿಯನ್‌ವಾಲಾಬಾಗ್ ಹತ್ಯಾಕಾಂಡ" ಕುರಿತು ಒಂದು ಟಿಪ್ಪಣಿ ಬರೆಯಿರಿ.**

ಜಲಿಯನ್‌ವಾಲಾಬಾಗ್‌ನಲ್ಲಿ ಸಭೆ ಸೇರಲು ಹೋರಾಟಗಾರರು ಮೊದಲೇ ನಿರ್ಧರಿಸಿದ್ದರು. ಅವರಿಗೆ ಈ ನಿಷೇಧದ ಬಗ್ಗೆ ಪೂರ್ಣ ತಿಳುವಳಿಕೆ ಇರಲಿಲ್ಲ. ಸುಮಾರು 20 ಸಾವಿರ ಜನ ರೌಲತ್ ಕಾಯ್ದೆಯ ವಿರುದ್ಧದ ಪ್ರತಿಭಟನಾ ಸಭೆಯಲ್ಲಿ ಸೇರಿದ್ದರು. ಸುತ್ತಲೂ ಎತ್ತರವಾದ ಗೋಡೆಗಳಿಂದ, ಕಿರಿದಾದ ಪ್ರವೇಶದಿಂದ ಕೂಡಿದ ಜಲಿಯನ್ ವಾಲಾಬಾಗ್‌ನಲ್ಲಿ ಸಭೆಯು ಶಾಂತಿಯಿಂದ ನಡೆಯುತ್ತಿತ್ತು. ತನ್ನ ಸೈನ್ಯದೊಂದಿಗೆ ಬಂದ ಜನರಲ್ ಡಯರ್‌ನು ಯಾವ ಮುನ್ಸೂಚನೆಯನ್ನು ನೀಡದೆ ಶಾಂತಿಯುತವಾಗಿ ಪ್ರತಿಭಟನಾ ಸಭೆ ಸೇರಿದ್ದ ಜನರ ಮೇಲೆ ಅಮಾನುಷವಾಗಿ ಗುಂಡಿನ ಮಳೆಗರೆದನು. ಈ ಹತ್ಯಾಕಾಂಡದಲ್ಲಿ 379 ಪ್ರತಿಭಟನಾಕಾರರು ಪ್ರಾಣ ಕಳೆದುಕೊಂಡರು. ಸಹಸ್ರಾರು ಜನರು ಗಾಯಗೊಂಡರು. ಈ ಘಟನೆಯನ್ನು ಜಲಿಯನ್ ವಾಲಾಬಾಗ್ ದುರಂತ ಎಂದು ಕರೆಯುತ್ತಾರೆ.

**19. ಖಿಲಾಫತ್ ಚಳುವಳಿಯ ಬಗ್ಗೆ ಬರೆಯಿರಿ.**

ಮಹಮದ್ ಅಲಿ ಮತ್ತು ಶೌಕತ್ ಅಲಿ ಸಹೋದರರು ಭಾರತದಲ್ಲಿ ಟರ್ಕರ ಪರವಾದ ಖಿಲಾಫತ್ ಚಳುವಳಿಯನ್ನು ಪ್ರಾರಂಭಿಸಿದರು. ಹಿಂದೂ ಮುಸ್ಲಿಮರು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಬಂಡೆದ್ದರೆ ಮಾತ್ರ ಬ್ರಿಟಿಷರು ಹಿಮ್ಮೆಟ್ಟುತ್ತಾರೆ ಎನ್ನುವುದು ಗಾಂಧೀಜಿಯವರ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಮುಸ್ಲಿಮರ



Use e-papers for save trees-InyaTrust.com

ಸಹಭಾಗಿತ್ವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಬಹಳ ಮುಖ್ಯ ಎಂದು ಗಾಂಧೀಜಿಯವರು ಭಾವಿಸಿದ್ದರು. ಪರಿಣಾಮವಾಗಿ ಗಾಂಧೀಜಿಯವರು ಖಿಲಾಫತ್ ಚಳುವಳಿಗೆ ತಮ್ಮ ಬೆಂಬಲವನ್ನು ನೀಡಿದರು. ಈ ಚಳುವಳಿಯು ಹಿಂದೂ ಮುಸ್ಲಿಮರು ಒಂದುಗೂಡಿ ನಡೆಸಿದ ರಾಷ್ಟ್ರವ್ಯಾಪೀ ಆಂದೋಲನವಾಗಿದೆ. ಅನೇಕ ರಾಷ್ಟ್ರೀಯ ನಾಯಕರು ಮತ್ತು ಕಾಂಗ್ರೆಸ್ ಸಂಘಟನೆಯು ಖಿಲಾಫತ್ ಚಳುವಳಿಯ ಬೆಂಬಲಕ್ಕೆ ನಿಂತಿತು.

**20. ರಾಷ್ಟ್ರೀಯ ಹೋರಾಟದಲ್ಲಿ ಕಾಂಗ್ರೆಸ್ ರೈತರನ್ನು ಹೇಗೆ ಸಂಘಟಿಸಿತು?**

ರಾಷ್ಟ್ರೀಯ ಹೋರಾಟದ ಭಾಗವಾಗಿ ರೈತರನ್ನು ಸಂಘಟಿಸುವ ಪ್ರಯತ್ನವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಾಡಿತು. ಚಂಪಾರಣ್ಯ, ಖೇಡಾ, ಮೊದಲಾದ ಪ್ರದೇಶಗಳ ರೈತರ ಕಾರ್ಯ ಚಟುವಟಿಕೆಗಳಲ್ಲಿ ಗಾಂಧೀಜಿಯವರ ಪ್ರಭಾವವಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಭಾವದಿಂದ ತೇಭಾಗ, ಮಲಬಾರ್ ಮೊದಲಾದೆಡೆ ಶೋಷಣೆಗೊಳಗಾಗಿದ್ದ ರೈತರು ತೀವ್ರವಾಗಿ ಜಮೀನ್ದಾರರು ಹಾಗೂ ಬ್ರಿಟಿಷರ ವಿರುದ್ಧ ಬಂಡೆದ್ದರು. ಅಸಹಕಾರ ಆಂದೋಲನ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ರೈತರ ಸಮಸ್ಯೆಗಳು ಬೆರೆತವು. ಹಲವಾರು ಹೋರಾಟಗಳು ಎಡಪಂಥೀಯ ವಿಚಾರಧಾರೆಗಳಿಂದ ರಚನೆಗೊಂಡ ಕಿಸಾನ್ ಸಭಾದಡಿಯಲ್ಲಿ ಸಂಘಟಿತವಾದವು. ಹೋರಾಟಗಳು ಕೆಲವೊಮ್ಮೆ ಕಾಂಗ್ರೆಸ್‌ನೊಂದಿಗೆ ಮತ್ತು ಕೆಲವೊಮ್ಮೆ ಕಾಂಗ್ರೆಸ್ ವಿರುದ್ಧವಾದ ನಿಲುವನ್ನು ಹೊಂದುತ್ತಿದ್ದವು. ತೆಲಂಗಾಣದ ರೈತ ಹೋರಾಟವು ಜಮೀನ್ದಾರರು ಹಾಗೂ ನಿಜಾಮನ ರಜಾಕರ ವಿರುದ್ಧಪ್ರತಿಭಟಿಸಿತು. ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು. ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳುವಳಿ ನಡೆಸಿದರು.

**21. ಸ್ವದೇಶಿ ಚಳುವಳಿ ಎಂದರೇನು?**

ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧಗಳು ವ್ಯಕ್ತವಾದವು. ಪ್ರತಿರೋಧದ ಒಂದು ಬಗೆಯಾಗಿ ಸ್ವದೇಶಿ ಚಳುವಳಿಯನ್ನು ಪ್ರಾರಂಭಿಸಲಾಯಿತು.ಇದನ್ನು ದೇಶದಾದ್ಯಂತ ಕೊಂಡೊಯ್ದವರು ತೀವ್ರವಾದಿಗಳು. ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲು ಸ್ವದೇಶಿ ಆಂದೋಲನವು ಕರೆ ನೀಡಿತು. ಸ್ವದೇಶಿ ವಸ್ತುಗಳನ್ನು ಬಳಸುವಂತೆ ಅವರು ಭಾರತೀಯರನ್ನು ಪ್ರೇರೇಪಿಸಿದರು.



Use e-papers for save trees-InyaTrust.com

## ಅಧ್ಯಾಯ – 9

## ಸ್ವಾತಂತ್ರ್ಯೋತ್ತರ ಭಾರತ

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ.**

1) ಕಂಪನಿಯ ಕೊನೆಯ ಗೌರ್ನರ್ ಜನರಲ್ **ಮೌಂಟ್ ಬ್ಯಾಟನ್** ಆಗಿದ್ದನು.

2) ಭಾರತದ ಪ್ರಥಮ ಗೃಹ ಮಂತ್ರಿ **ವಲ್ಲಭ ಭಾಯ್ ಪಟೇಲ್** ಆಗಿದ್ದರು.

3) ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಡಾ.ಬಾಬು ರಾಜೇಂದ್ರ ಪ್ರಸಾದ್

4) ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಗಿ **1963** ರಲ್ಲಿ ಸೇರಿತು.

5) ರಾಜ್ಯ ಪುನರ್ವಿಂಗಡಣಾ ಕಾನೂನು **1956** ರಲ್ಲಿ ಜಾರಿಗೆ ಬಂದಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1) ಭಾರತವು ಸ್ವಾತಂತ್ರಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?**

ಭಾರತದ ಸ್ವಾತಂತ್ರ್ಯದ ಜೊತೆಯಲ್ಲೇ ಹಲವಾರು ಜ್ವಲಂತ ಸಮಸ್ಯೆಗಳು ರೂಪ ಪಡೆದವು. ಲಕ್ಷಾಂತರ ನಿರಾಶ್ರಿತರ ಸಮಸ್ಯೆ, ಕೋಮುಗಲಭೆಗಳು, ಸರ್ಕಾರದ ರಚನೆ, ದೇಶೀಯ ಸಂಸ್ಥಾನಗಳ ವಿಲೀನೀಕರಣ, ಆಹಾರದ ಉತ್ಪಾದನೆ, ಕೃಷಿ ಬೆಳವಣಿಗೆ, ಕೈಗಾರಿಕೆಗಳ ಬೆಳವಣಿಗೆ ಮುಂತಾದ ಸಮಸ್ಯೆಗಳನ್ನು ನಿವಾರಿಸಬೇಕಾಗಿತ್ತು.

**2) ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?**

ಭಾರತದ ವಿಭಜನೆಯು ಸೃಷ್ಟಿಸಿದ ಘೋರ ಪರಿಣಾಮಗಳಲ್ಲಿ ನಿರಾಶ್ರಿತರ ಸಮಸ್ಯೆಯೂ ಒಂದು. ಭಾರತದಿಂದ ಪಾಕಿಸ್ತಾನಕ್ಕೆ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ಲಕ್ಷಾಂತರ ಜನ ತಮ್ಮ ತಮ್ಮ ಹುಟ್ಟಿದ ಊರುಗಳನ್ನು, ಬೆಳೆದ ಪರಿಸರವನ್ನು, ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡು ತಮ್ಮದಲ್ಲದ ಪ್ರದೇಶಗಳಿಗೆ ವಲಸೆ ಹೋಗಬೇಕಾಯಿತು. ಈ ರೀತಿಯಾಗಿ ನಿರಾಶ್ರಿತರಾದ ಜನರಿಗೆ ವಸತಿ, ಉದ್ಯೋಗ, ಭೂಮಿ, ಶಿಕ್ಷಣ, ಆರೋಗ್ಯ, ಸಾಮಾಜಿಕ ವಾತಾವರಣ ಎಲ್ಲವನ್ನೂ ನಿರ್ಮಿಸಿಕೊಡಬೇಕಾದ ಬೃಹತ್ ಜವಾಬ್ದಾರಿ ಸರ್ಕಾರದ ಮೇಲೆ ಬಿದ್ದಿತು.

**3) ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿಯನ್ನು ವಿವರಿಸಿ.**

ಸ್ವಾತಂತ್ರ್ಯದ ನಂತರದಲ್ಲಿ ಫ್ರೆಂಚ್ ವಸಾಹತುಶಾಹಿಗಳು ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳ ಮೇಲಿನ ಹಿಡಿತವನ್ನು ಮುಂದುವರಿಸಿದ್ದರು. ಇವು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್,66 ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 1954ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು. 1963ರಲ್ಲಿ ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು.



Use e-papers for save trees-InyaTrust.com

**4) ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?**

ಪೋರ್ಚುಗೀಸರ ವಸಾಹತು ಆಡಳಿತದಲ್ಲಿ ಮುಂದವರಿದ ಗೋವಾ, ಭಾರತಕ್ಕೆ ಸೇರಬೇಕೆಂದು ನಿರಂತರವಾದ ಚಳುವಳಿ ನಡೆಯಿತು. ಗೋವಾವನ್ನು ತೆರವುಗೊಳಿಸಬೇಕೆಂದು ಆದೇಶ ನೀಡಿದರೂ ಬಗ್ಗದ ಪೋರ್ಚುಗೀಸರು, ಆಫ್ರಿಕಾ ಮತ್ತು ಯುರೋಪಿನಿಂದ ಹೆಚ್ಚಿನ ಸೈನ್ಯವನ್ನು ತರಿಸಿಕೊಂಡು ಚಳುವಳಿಯನ್ನು ದಮನ ಮಾಡಿ ಅಧಿಕಾರವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸಿದರು. 1955ರಲ್ಲಿ ಭಾರತದ ವಿವಿಧ ಬಾಗಗಳಂದ ಸತ್ಯಾಗ್ರಹಿಗಳು ಬಂದು ಗೋವಾದಿಂದ ವಸಾಹತುಶಾಹಿಗಳು ತೊಲಗಬೇಕೆಂದು ವಿಮೋಚನಾ ಹೋರಾಟ ಪ್ರಾರಂಭಿಸಿದರು. 1961ರಲ್ಲಿ ಭಾರತದ ಸೈನ್ಯ ಮಧ್ಯಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು. 1987ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ನಂತರ ರಾಜ್ಯವಾಯಿತು.

**5) ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಕುರಿತು ಬರೆಯಿರಿ.**

1953ರಲ್ಲಿ ಸರ್ಕಾರವು ಜಸ್ಟೀಸ್ ಫಜಲ್ ಅಲಿ ಆಯೋಗವನ್ನು ರಚಿಸಿತು ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿ, ಕೆ.ಎಂ.ಪಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಸದಸ್ಯರಾಗಿದ್ದರು. ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರಪ್ರದೇಶ ರಚನೆಯಾಯಿತು. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು. ಈ ಕಾನೂನಿನ ಪ್ರಕಾರ ಅಂದು ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು. ಕನ್ನಡ ಮಾತನಾಡುವ ಪ್ರದೇಶಗಳು ಹಲವು ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದವು. ಇವೆಲ್ಲವನ್ನೂ ಒಟ್ಟುಗೂಡಿಸುವ ಬೇಡಿಕೆಯಿಟ್ಟು 'ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು' ನೇತೃತ್ವದಲ್ಲಿ ಚಳುವಳಿ ನಡೆಯಿತು. ಅಂತಿಮವಾಗಿ 1956 ನವೆಂಬರ್ 1 ರಂದು 'ಮೈಸೂರು ರಾಜ್ಯ'ವು ಅಸ್ತಿತ್ವಕ್ಕೆ ಬಂದಿತು.

**6) ಹೈದರಾಬಾದ್ ಸಂಸ್ಥಾನವನ್ನು ನಿಜಾಂರಿಂದ ಹೇಗೆ ಮುಕ್ತಗೊಳಿಸಲಾಯಿತು?**

ಈ ಸಂಸ್ಥಾನವು ನಿಜಾಮನ ಅಧೀನದಲ್ಲಿತ್ತು. ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಿಸಿದನು. ಇದೇ ಸಂದರ್ಭದಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟವು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ನಡೆಯುತ್ತಿತ್ತು. ನಿಜಾಮನ ಕ್ರೂರ ಪಡೆ ಯಾದ ರಜಾಕರ ವಿರುದ್ಧ ಜನತೆಯಲ್ಲಿ ವ್ಯಾಪಕ ಪ್ರತಿರೋಧವಿತ್ತು. ಆಗ ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಲಾಯಿತು.



Use e-papers for save trees-InyaTrust.com

# ಅಧ್ಯಾಯ –10

# 20ನೆಯ ಶತಮಾನದ ರಾಜಕೀಯ ಆಯಾಮಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿ ಮಾಡಿರಿ.**

1. ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಿದವರು **ಲೆನಿನ್**
2. ಮೊದಲನೇ ಮಹಾಯುದ್ಧವು **1918** ರಲ್ಲಿ ಅಂತ್ಯಗೊಂಡಿತು.
3. ವರ್ಸೈಲ್ಸ್ ಒಪ್ಪಂದವು **1919** ರಲ್ಲಿ ಏರ್ಪಟ್ಟಿತು.
4. ಪ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವನು **ಮುಸೋಲಿನಿ.**
5. ಜರ್ಮನಿಯಲ್ಲಿ ನಾಜಿ ಪಕ್ಷದ ನಾಯಕನಾಗಿದ್ದವನು **ಹಿಟ್ಲರ್**
6. ಎರಡನೆಯ ಮಹಾಯುದ್ಧವು **1939** ರಲ್ಲಿ ಆರಂಭವಾಯಿತು.
7. ಅಮೆರಿಕಾದ ನೌಕಾ ಕೇಂದ್ರವಾಗಿದ್ದ **ಪರ್ಲ್‌ಹಾರ್ಬರ್**ಮೇಲೆ ಜಪಾನ್ ದಾಳಿ ಮಾಡಿತು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :**

**1. ರಷ್ಯಾದ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವನ್ನು ವಿವರಿಸಿ.**

ಲೆನಿನ್ ರೈತರು ಮತ್ತು ಕಾರ್ಮಿಕರಿಗೆ ಕ್ರಾಂತಿಕಾರಿ ಮಾರ್ಗದರ್ಶನವನ್ನು ನೀಡಿದರು. ಇದರಿಂದಾಗಿ ದುಡಿಯುವ ಜನ ಹೋರಾಟಗಳಲ್ಲಿ ಹೆಚ್ಚೆಚ್ಚು ತೊಡಗಿಸಿಕೊಂಡರು. ಇದೇ ಸಂದರ್ಭದಲ್ಲಿ ಲೆನಿನ್ ದೇಶ ಭ್ರಷ್ಟನಾಗಿದ್ದನು. ಮುಷ್ಕರಗಳ ತೀವ್ರತೆ ಹೆಚ್ಚಾಗಿ ರಷ್ಯಾದ ಕೊನೆಯ ದೊರೆ ಎರಡನೆಯ ನಿಕೋಲಸ್‌ನು ದೇಶ ತ್ಯಜಿಸಿ ಓಡಿಹೋದನು. ಇದನ್ನೇ 1917ರ **'ಫೆಬ್ರವರಿ ಕ್ರಾಂತಿ'** ಎನ್ನುತ್ತಾರೆ. ಅಧಿಕಾರವನ್ನು ಉದಾರವಾದಿಗಳಾದ **'**ಮೆನ್ಶವಿಕ್**'**ನು ಪಡೆದುಕೊಂಡರು. ಇವರು ರಷ್ಯಾವನ್ನು ಪ್ರಜಾಪ್ರಭುತ್ವ ಗಣರಾಜ್ಯವೆಂದು ಘೋಷಿಸಿದರು.

**2. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವುವು ?**

ಜೋಸೆಫ್ ಸ್ಟಾಲಿನ್ ರಷ್ಯಾವನ್ನು ಅಮೆರಿಕಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದನು. ಈತ ಜಾರಿಗೊಳಿಸಿದ ಪಂಚವಾರ್ಷಿಕ ಯೋಜನೆಗಳು ರಷ್ಯಾದ ಅಭಿವೃದ್ಧಿಯ ಪಥವನ್ನೇ ಬದಲಾಯಿಸಿತು.



Use e-papers for save trees-InyaTrust.com

**3. ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವನ್ನು ವಿವರಿಸಿ.**

ಜುಲೈ 28 ರಂದು ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯಾಯಿತು. ಈ ಘಟನೆಯು ಆಸ್ಟ್ರೀಯಾ ಮತ್ತು ಸರ್ಬಿಯಾ ದೇಶಗಳ ನಡುವೆ ತಕ್ಷಣವೇ ಬಿಕ್ಕಟ್ಟನ್ನು ಸೃಷ್ಟಿಸಿತು. ಈ ಮೂಲಕ ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವಾಯಿತು.

**4. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆ ವಿವರಿಸಿ.**

ಜಗತ್ತಿನಲ್ಲಿ ಶ್ರೇಷ್ಟವಾದ ಜನಾಂಗವೆಂದರೆ ಆರ್ಯ ಜರ್ಮನ್ ಜನಾಂಗ. ಜಗತ್ತನ್ನುಆಳ್ವಿಕೆ ಮಾಡಲು ಕೇವಲ ಜರ್ಮನ್ನರು ಮಾತ್ರ ಯೋಗ್ಯರು. ಜನಾಂಗಗಳು ಕೇವಲ ಆಳಿಸಿಕೊಳ್ಳಲು ಮಾತ್ರ ಯೋಗ್ಯರು. ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯೆಹೂದಿಗಳೇ ಕಾರಣ.ಇವರು ಬದುಕಲು ಯೋಗ್ಯರಲ್ಲ ಎಂಬ ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು'

**5. ಎರಡನೆಯ ಮಹಾಯುದ್ಧಕ್ಕೆ ಕಾರಣಗಳಾವುವು?**

ಮೊದಲ ಮಹಾಯುದ್ಧದ ಸೋಲು, ಅವಮಾನಕರ ಒಪ್ಪಂದಗಳು, ಅಪಾರವಾದ ನಷ್ಟಗಳ ಹಿನ್ನೆಲೆಯಲ್ಲಿ ಜರ್ಮನಿ ಮತ್ತು ಯುರೋಪಿನ ಹಲವು ದೇಶಗಳಲ್ಲಿ ರಾಷ್ಟ್ರೀಯವಾದದ ಉಗ್ರತೆ ತೀವ್ರಗೊಂಡಿತು. ಜರ್ಮನಿ ಮತ್ತು ಯುರೋಪಿನ ಇತರ ದೇಶಗಳಲ್ಲಿ ಬೃಹತ್ ಕೈಗಾರಿಕೋದ್ಯಮಿಗಳು ಉಗ್ರ ರಾಷ್ಟ್ರೀಯತೆಯನ್ನು ಬೆಳಸಲು ದೊಡ್ಡ ಪ್ರಮಾಣದಲ್ಲಿ ಹಣವನ್ನು ನೀಡಿದರು. ಇದನ್ನೇ ಬಳಸಿಕೊಂಡು ಸೇಡಿನ ಮತ್ತು ದುರಭಿಮಾನದ ಚಳುವಳಿಗಳು ಬೆಳೆದವು. ಜರ್ಮನಿಯಲ್ಲಿ ಹಿಟ್ಲರ್ ಮತ್ತು ಇಟಲಿಯಲ್ಲಿ ಮುಸೋಲಿನಿಯಂತಹ ಸರ್ವಾಧಿಕಾರಿಗಳು ಬೆಳೆದರು. ಪೂರ್ವ ಏಷ್ಯಾದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಚೀನಾದ ಮೇಲೆ ಜಪಾನ್ ದಾಳಿಗಳನ್ನು ನಡೆಸುತ್ತಿತ್ತು. ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ಮಾಡುವುದರೊಂದಿಗೆ ಪ್ರಾರಂಭವಾಯಿತು.

**6. ಶೀತಲ ಸಮರ ಎಂದರೇನು ?**

ಎರಡನೆಯ ಮಹಾಯುದ್ಧದ ನಂತರ ಜಾಗತಿಕವಾಗಿ ಎರಡು ಬಣಗಳ ನಡುವೆ ರಾಜಕೀಯ, ಆರ್ಥಿಕ, ಮಿಲಿಟರಿ ಮುಂತಾದ ವಿಷಯಗಳಲ್ಲಿ ಉದ್ಭವಿಸಿದ ನಿರಂತರ ಭಯ, ದ್ವೇಷ, ಅಸೂಯೆ ಮತ್ತು ಆತಂಕದ ಪರಿಸ್ಥಿತಿಯೇ ಶೀತಲ ಸಮರ.

**7. ಚೀನಾ ಕ್ರಾಂತಿಯ ಪರಿಣಾಮಗಳಾವುವು ?**

ಷಿಯಾಂಗ್–ಕೈ–ಷೇಕ್‌ನು ಸೋತು ತೈವಾನ್‌ಗೆ ಪಲಾಯನ ಮಾಡಿದನು. 1949ರ ಅಕ್ಟೋಬರ್ 1 ರಂದು ಜನತಾ ವಿಮೋಚನಾ ಸೈನ್ಯ ಪ್ರವೇಶಿಸಿತು.ಚೀನಾದಲ್ಲಿ ಪೀಕಿಂಗ್ (ಈಗಿನ ಬೀಜಿಂಗ್) ಜನತಾ ಗಣತಂತ್ರ ಸ್ಥಾಪನೆಯಾಯಿತು. ಮಾವೋತ್ಸೆ ತುಂಗ್ ಅದರ ಅಧ್ಯಕ್ಷನಾದನು.



Use e-papers for save trees-InyaTrust.com

**8. ಅಮೆರಿಕಾವು ಆರ್ಥಿಕ ಮಹಾಕುಸಿತದಿಂದ ಹೇಗೆ ಹೊರ ಬಂದಿತು ವಿವರಿಸಿ.**

1927ರಲ್ಲಿ ಉಂಟಾದ ಆರ್ಥಿಕ ಮಹಾಕುಸಿತ ದಿಂದಾಗಿ ಅಮೇರಿಕಾದಲ್ಲಿನ ರಾಜಕೀಯದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತ್ತು. ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜಪಾನ್ ಅಮೆರಿಕಾದ ನೌಕಾನೆಲೆ ಪರ್ಲ್‌ಹಾರ್ಬರ್ ಮೇಲೆ ದಾಳಿ ನಡೆಸಿತು. ಇದರಿಂದಾಗಿ ಅಮೆರಿಕಾ ಮಿತ್ರರಾಷ್ಟ್ರಗಳ ಪರವಾಗಿ ಯುದ್ಧ ಪ್ರವೇಶಿಸುವಂತಾಯಿತು. ಜನತೆಯನ್ನು ಸೈನ್ಯವಾಗಿ ರೂಸ್‌ವೆಲ್ಟ್‌ನು ಯುದ್ಧಕ್ಕೆ ಸನ್ನದ್ದಗೊಳಿಸಿದನು. ಮಹಿಳೆಯರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಲು ಪ್ರೋತ್ಸಾಹಿಸಿದನು. ಅಮೆರಿಕಾ ಯುದ್ಧದಲ್ಲಿ ಜಯಗಳಿಸಿತು. ದ್ವಿತೀಯ ಮಹಾಯುದ್ಧ ನಡೆಯುತ್ತಿರುವಾಗಲೇ ವಿಶ್ವಸಂಸ್ಥೆಯ ಸ್ಥಾಪನೆಗೆ ಸಹಕರಿಸಿ, ಅದರ ಸ್ಥಾಪನೆಗೂ ಕಾರಣವಾಯಿತು. 1945ರ ನಂತರ ಅಮೆರಿಕಾ ಜಗತ್ತಿನ ಬಲಿಷ್ಟ ರಾಷ್ಟ್ರವಾಗಿ ಹೊರಹೊಮ್ಮಿದೆ.



**Use e-papers for save trees-InyaTrust.com**

# ರಾಜ್ಯಶಾಸ್ತ್ರ



Use e-papers for save trees-InyaTrust.com

# ಅಧ್ಯಾಯ –1
# ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

**ಮುಖ್ಯಾಂಶಗಳು**

- ಭಾರತವು ಇಂದು ಕೋಮುವಾದ, ಪ್ರಾದೇಶಿಕವಾದ, ಅನಕ್ಷರತೆ, ಭ್ರಷ್ಟಾಚಾರ, ಮಹಿಳೆಯರ ಸ್ಥಾನಮಾನ ಆರ್ಥಿಕ ಅಸಮಾನತೆ, ಜನಸಂಖ್ಯಾ ಹೆಚ್ಚಳ, ಬಡತನ, ಲಾಭ ಬಡುಕುತನ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದೆ.
- ಕೋಮುವಾದವು ಭಾರತೀಯ ಸಮಾಜದ ಒಂದು ದೊಡ್ಡ ಅನಿಷ್ಠ ಸಂಗತಿಯಾಗಿದ್ದು ಸಾಮಾಜಿಕವಾಗಿ ವಿಭಿನ್ನತೆಯನ್ನು ವೈಭವೀಕರಿಸಿ ಪರಸ್ಪರ ಅಪನಂಬಿಕೆ ಹಾಗು ಭಯದ ವಾತಾವರಣವನ್ನು ಸಷ್ಟಿಸುತ್ತದೆ.
- ಪ್ರಾದೇಶಿಕ ವಾದವು ರಾಷ್ಟ್ರದ ಏಕತೆ ಹಾಗು ಹಿತಾಸಕ್ತಿಗಳಿಗೆ ಧಕ್ಕೆ ಒದಗಿಸುತ್ತದೆ.
- ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಅನಕ್ಷರತೆಯು ಒಂದಾಗಿದ್ದು ಇದರ ನಿರ್ಮೂಲನಕ್ಕೆ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ತುಂಬಾ ಶ್ರಮಿಸುತ್ತಿವೆ.
- ಭಾರತದ ಸಾರ್ವಜನಿಕ ಜೀವನದಲ್ಲಿ ಒಂದು ಮುಖ್ಯ ಪಿಡುಗಾಗಿರುವ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಪ್ರಬಲ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾರ್ವಜನಿಕ ಸಹಕಾರ ತೀರಾ ಅಗತ್ಯವಾಗಿದೆ.
- ಸ್ತ್ರೀಯರ ಸ್ಥಾನಮಾನ ಅದರಲ್ಲೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಪ್ರಗತಿ ಕಂಡಿಲ್ಲ. ಮಹಿಳೆಯರ ಹಿಂದುಳಿಯುವಿಕೆಗೆ ಹಲವಾರು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿದ್ದು ಅವುಗಳ ನಿವಾರಣೆಗಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಲವಾರು ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುತ್ತಿವೆ.
- ತೀವ್ರಗತಿಯಲ್ಲಿ ಕಂಡುಬರುತ್ತಿರುವ ಆರ್ಥಿಕ ಅಸಮಾನತೆ ಇನ್ನೊಂದು ಗಮನಾರ್ಹ ಸಮಸ್ಯೆಯಾಗಿದ್ದು ಇದನ್ನು ಕಡಿಮೆಗೊಳಿಸುವುದು ಸರಕಾರದ ಕರ್ತವ್ಯವಾಗಿದೆ.
- ಜನಸಂಖ್ಯಾ ಹೆಚ್ಚಳವು ದೇಶದ ಮತ್ತೊಂದು ಸಮಸ್ಯೆಯಾಗಿದ್ದು, ಸಮರ್ಪಕ ಹಾಗೂ ಪರಿಣಾಮಕಾರಿ ಜನಸಂಖ್ಯಾ ಧೋರಣೆಯನ್ನು ಕಾರ್ಯಗತಗೊಳಿಸುವ ಅವಶ್ಯಕತೆ ನಮ್ಮ ಪಾಲಿಗಿದೆ.
- ಬಡತನ ಅಥವಾ ದಾರಿದ್ರ್ಯ ಭಾರತದ ಇನ್ನೊಂದು ಬೃಹತ್ ಸಮಸ್ಯೆಯಾಗಿದ್ದು ಇದನ್ನು ಹೋಗಲಾಡಿಸಲು ಸ್ವಾತಂತ್ರ್ಯ ನಂತರ ಹಲವಾರು ಯೋಜನೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೆ ತಂದಿವೆ.
- ಸರಕಾರದ ಸಮರ್ಪಕವಾದ ಕ್ರಮದಿಂದ ಲಾಭ ಬಡುಕತವೆಂಬ ಸಮಸ್ಯೆಗೆ ನಿಯಂತ್ರಣ ಸಾಧಿಸಬೇಕಾಗಿದೆ.

**I. ಕೊಟ್ಟಿರುವ ಪರ್ಯಾಯಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**1) ಕೆಳಗಿನವುಗಳಲ್ಲಿ ಯಾವುದನ್ನು ಭಾರತೀಯ ಸಮಾಜದ ಒಂದು ದೊಡ್ಡ ಸಮಸ್ಯೆ ಎಂದು ಪರಿಗಣಿಸಲಾಗಿದೆ.**
**ಅ) ಕೋಮುವಾದ** ಆ) ಪ್ರಾದೇಶಿಕತೆ ಇ) ಕಮ್ಯುನಿಸಂ ಈ) ಜಾತ್ಯಾತೀತತೆ

**2) "ಭಾರತದ ಪ್ರಜೆಗಳಾದ ನಾವು….." ಎಂಬ ವಾಕ್ಯ ಏನನ್ನು ಬಿಂಬಿಸುತ್ತದೆ?**
ಅ) ಪ್ರಾದೇಶಿಕತೆ ಆ) ಕೋಮುವಾದ **ಇ) ರಾಷ್ಟ್ರೀಯತೆ** ಈ) ಸಾಮ್ರಾಜ್ಯವಾದ

**3) "ರಾಷ್ಟ್ರೀಯ ಸಾಕ್ಷರತಾ ಮಿಷನ್" ಸ್ಥಾಪನೆಯಾದ ವರ್ಷ**
ಅ) 1985 ಆ) 1987 ಇ) 1986 **ಈ) 1988**

**4) ಲೋಕಾಯುಕ್ತ ಎಂಬ ಸಂಸ್ಥೆ ಕೆಳಗಿನ ಯಾವುದನ್ನು ನಿಯಂತ್ರಿಸಲು ಸ್ಥಾಪನೆಯಾಗಿದೆ.**
ಅ) ಬಡತನ **ಆ) ಭ್ರಷ್ಟಾಚಾರ** ಇ) ಜನಸಂಖ್ಯಾ ಈ) ಆರ್ಥಿಕ ಅಸಮಾನತೆ



Use e-papers for save trees-InyaTrust.com

**5) 2001ರಲ್ಲಿ ಭಾರತದ ಸಾಕ್ಷರತಾ ಪ್ರಮಾಣ**

ಅ) 64% ಆ) 62% ಇ) 68% **ಈ) <u>66%</u>**

**6) ಯಾರ ಅಭಿವೃದ್ಧಿಗೆ ಸ್ತ್ರೀ ಶಕ್ತಿ ಸಂಘಗಳು ಸ್ಥಾಪನೆಯಗಿವೆ.**

ಅ) ಗ್ರಾಮೀಣ ಮಕ್ಕಳು ಆ) ಗ್ರಾಮೀಣ ಅನಾಥರು

**ಇ) <u>ಗ್ರಾಮೀಣ ಮಹಿಳೆಯರು</u>** ಈ) ಗ್ರಾಮೀಣ ಅಸಮರ್ಥರು

**7) ಸಮಾಜದ ಶ್ರೀಮಂತರ ಹಾಗೂ ಬಡವರ ಮಧ್ಯೆ ಇರುವ ಅಂತರದ ಹೆಚ್ಚಳವೇ**

ಅ) ಆರ್ಥಿಕ ಅಸಮತೋಲನ **ಆ) <u>ಆರ್ಥಿಕ ಅಸಮಾನತೆ</u>**

ಇ) ಆರ್ಥಿಕ ಇಳಿತ ಈ) ಆರ್ಥಿಕ ಕುಸಿತ

**8) ನಿರುದ್ಯೋಗ, ಬಡತನ, ಅನಕ್ಷರತೆ ಮತ್ತು ನೀರಿನ ಅಭಾವ ಮುಂತಾದವು ಕೆಳಗಿನ ಯಾವುದರ ಮುಖ್ಯ ಪರಿಣಾಮಗಳಾಗಿವೆ.**

ಅ) ಲಾಭ ಬಡುಕತನ **ಆ) <u>ಜನಸಂಖ್ಯಾ ಹೆಚ್ಚಳ</u>**

ಇ) ಪ್ರಾದೇಶಿಕತೆ ಈ) ಕೋಮುವಾದ

**9) ಬಡತನವನ್ನು ಕಡಿಮೆ (ನಿರ್ಮೂಲನೆ) ಮಾಡಲು ಸರ್ಕಾರವು ಜಾರಿಗೆ ತಂದಿರುವ ಯೋಜನೆ**

ಅ) ಸರ್ವ ಶಿಕ್ಷಣ ಅಭಿಯಾನ ಆ) ಯಶಸ್ವಿನಿ ಕಾರ್ಯಕ್ರಮ

ಇ) ಯುವತಿ ಮಂಡಲ **ಈ) <u>ಜವಾಹರ ರೋಜ್‌ಗಾರ್ ಯೋಜನೆ</u>**

**10) ಕಳ್ಳ ಸಾಗಾಣಿಕೆಯನ್ನು ತಡೆಗಟ್ಟುವ ಒಂದು ವಿಧಾನ**

**ಅ) <u>ಆಮದು–ರಫ್ತು ಧೋರಣೆ</u>** ಆ) ಒಡೆದು ಆಳುವ ನೀತಿ

ಇ) ಸಾಮಾಜಿಕ ನೀತಿ ಈ) ವಿತ್ತೀಯ ನೀತಿ

**II ಬಿಟ್ಟ ಸ್ಥಳ ತುಂಬಿರಿ**

1. ಭಾರತದಲ್ಲಿ ಬ್ರಿಟೀಷರ **<u>ಒಡೆದು ಆಳುವ ನೀತಿ</u>**ಯಿಂದ ಕೋಮುವಾದ ಪ್ರಾರಂಭವಾಯಿತು.
2. ನಮ್ಮ **<u>ಸಂವಿಧಾನವು</u>** ವಿವಿಧತೆಯಲ್ಲಿ ಏಕತೆಗೆ ಪ್ರಾಧಾನ್ಯತೆ ನೀಡಿದೆ.
3. ವಿಕಲಚೇತನರ ಶಿಕ್ಷಣ ಹಾಗೂ ಮಹಿಳಾ ಶಿಕ್ಷಣಕ್ಕೆ ಆದ್ಯತೆ ಕೊಡಲು 2001ರಲ್ಲಿ **<u>ಸರ್ವಶಿಕ್ಷಣ ಅಭಿಯಾನ</u>** ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು.
4. ರಾಜಕೀಯ ಭ್ರಷ್ಟಾಚಾರವು **<u>ವ್ಯವಸ್ಥಿತ ಅಪರಾಧಗಳಿಗೆ</u>** ಎಡೆಮಾಡಿಕೊಡುತ್ತದೆ.
5. ಕರ್ನಾಟಕ ಸರ್ಕಾರವು **<u>‘ಸ್ತ್ರೀ ಶಕ್ತಿ’</u>** ಎಂಬ ಕಾರ್ಯಕ್ರಮವನ್ನು ರೂಪಿಸಿ ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದೆ.
6. ಕಳ್ಳ ಸಾಗಾಣಿಕೆಯ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದರ ಮೂಲಕ **<u>ಕಳ್ಳಸಾಗಾಣಿಕೆಯ</u>**ನ್ನು ತಡೆಗಟ್ಟಬಹುದು.
7. ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು **<u>ಪ್ರಾದೇಶಿಕವಾದ</u>** ಎನ್ನುತ್ತೇವೆ.
8. ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ವಿಭಜನೆಯು **<u>1956ರ</u>** ಇಸವಿಯಲ್ಲಿ ಆಯಿತು.
9. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು **<u>ಲೋಕಾಯುಕ್ತ</u>** ಸಂಸ್ಥೆ ಅಸ್ತಿತ್ವದಲ್ಲಿದೆ.
10. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯು **<u>121</u>** ಕೋಟಿ ದಾಟಿದೆ.
11. ಬಳಕೆದಾರರಿಂದ ಹೆಚ್ಚಿನ ಲಾಭ ಗಳಿಸುವ ಧೋರಣೆಯನ್ನು **<u>ಲಾಭ ಬಡುಕತನ</u>** ಎಂದು ಕರೆಯುತ್ತಾರೆ.



Use e-papers for save trees-InyaTrust.com

**III ಹೊಂದಿಸಿ ಬರೆಯಿರಿ.**

| | ಅ | ಬ | ಉತ್ತರ |
|---|---|---|---|
| 1. | **ಸರ್ವಶಿಕ್ಷಣ ಅಭಿಯಾನ** | ಅ) ಕ್ರಿ.ಶ. 2009 | **ಉ) ಕೇಂದ್ರ ಸರ್ಕಾರ** |
| 2. | **ಶಿಕ್ಷಣ ಹಕ್ಕು** | ಆ) ಬ್ರಿಟಿಷ್ ಸರ್ಕಾರ | **ಅ) ಕ್ರಿ.ಶ. 2009** |
| 3. | **ರಾಷ್ಟ್ರೀಯ ಸಾಕ್ಷರತಾ ಮಿಷನ್** | ಇ) ಕ್ರಿ.ಶ. 1956 | **ಈ) 1988** |
| 4. | **ಒಡೆದು ಆಳುವ ನೀತಿ** | ಈ) 1988 | **ಆ) ಬ್ರಿಟಿಷ್ ಸರ್ಕಾರ** |
| 5. | **ರಾಜ್ಯಗಳ ಪುನರ್‌ವಿಂಗಡಣೆ** | ಉ) ಕೇಂದ್ರ ಸರ್ಕಾರ | **ಇ) ಕ್ರಿ.ಶ. 1956** |
| | | ಊ) ಕ್ರಿ.ಶ. 2001 | |

**IV ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಕೋಮುವಾದ ದೇಶದ ಐಕ್ಯತೆಗೆ ಮಾರಕ ಹೇಗೆ ?**

- ❖ ಧರ್ಮದ ಆಧಾರದಲ್ಲಿ ಸಮಗ್ರ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲಿ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದೇ ಕೋಮುವಾದ.
- ❖ ಇದು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣವನ್ನು ಸೃಷ್ಟಿಸುತ್ತದೆ.
- ❖ ಇದು ಸಮಾಜದಲ್ಲಿ ಗುಂಪುಗಾರಿಕೆ, ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿಯನ್ನು ಉಂಟುಮಾಡುತ್ತದೆ.
- ❖ ಇದು ಸಮಾಜದ ನೆಮ್ಮದಿಯನ್ನು ಕೆಡಿಸುವುದಲ್ಲದೆ ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗಿದೆ.
- ❖ ಇದು ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ ದೈಹಿಕ ಹಲ್ಲೆ ಮುಂತಾದ ಅನಗತ್ಯ ತೊಂದರೆಗಳಿಗೂ ಕಾರಣವಾಗುತ್ತದೆ.
- ❖ ಭಾರತದ ಮಟ್ಟಿಗೆ ಈ ಕೋಮುವಾದ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗ ಪಡಿಸುವ ಅಪಾಯ ತಂದೊಡ್ಡುವ ಶಕ್ತಿಯಾಗಿದೆ.

ಆದ್ದರಿಂದ ಕೋಮುವಾದ ಅಥವಾ ಮತೀಯವಾದ ದೇಶದ ಐಕ್ಯತೆಗೆ ಮಾರಕ ಎಂದು ಹೇಳಬಹುದು.

**2) ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕವಾಗುತ್ತದೆ. ಚರ್ಚಿಸಿ.**

- ❖ ಒಂದು ನಿರ್ಧಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶವನ್ನೇ ಅತ್ಯಂತ ಗಾಢವಾಗಿ ಪ್ರೀತಿಸಿ ಕೇವಲ ಆ ಭಾಗದ ಬಗ್ಗೆಯೇ ಅತಿಯಾದ ಅಭಿಮಾನವನ್ನು ಬೆಳೆಸಿಕೊಂಡರೆ ಅದನ್ನು ಪ್ರಾದೇಶಿಕವಾದ ಎನ್ನುವರು.
- ❖ ಪ್ರಾದೇಶಿಕ ಮನೋಭಾವ ತೀರಾ ಹೆಚ್ಚು ಎನಿಸಿದರೆ ಅದು ರಾಷ್ಟ್ರದ ಏಕತೆ ಹಾಗೂ ಹಿತಾಸಕ್ತಿಗಳಿಗೆ ಧಕ್ಕೆ ಒದಗಿಸುತ್ತವೆ.
- ❖ ಪ್ರಾದೇಶಿಕವಾದವನ್ನು ವೈಭವೀಕರಿಸುವುದರಿಂದ ದೇಶದ ಏಕತೆಗೆ ಹಾಗೂ ಅಭಿವೃದ್ಧಿಗೆ ತೊಡಕುಂಟಾಗುತ್ತದೆ.
- ❖ ಪ್ರಾದೇಶಿಕವಾದವು ಅಂತರರಾಜ್ಯ ಗಡಿ ಸಮಸ್ಯೆ, ಅಂತರರಾಜ್ಯ ನದಿ ನೀರಿನ ಸಮಸ್ಯೆಯನ್ನು ಉಂಟುಮಾಡುತ್ತದೆ.

ಈ ಮೇಲಿನ ಅಂಶಗಳಿಂದ ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕ ಎಂದು ಹೇಳಬಹುದು.

**3) ಸಾಕ್ಷರತೆಯನ್ನು ವೃದ್ಧಿಸಲು ಕೈಗೊಂಡಿರುವ ಕ್ರಮಗಳಾವುವು?**

- ❖ 2001 ರಿಂದ ಇಡೀ ದೇಶಾದ್ಯಂತ 6 ರಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆಗಾಗಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಇದರಲ್ಲಿ ವಿಕಲ ಚೇತನರ ಶಿಕ್ಷಣ ಮತ್ತು ಮಹಿಳಾ ಶಿಕ್ಷಣ ಹಾಗೂ ಮಹಿಳಾ ಜಾಗೃತಿಗೆ ಕೂಡ ಆದ್ಯತೆ ನೀಡಲಾಗಿದೆ.
- ❖ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲು ಭಾರತ ಸರ್ಕಾರವು 1988ರಲ್ಲಿ 'ರಾಷ್ಟ್ರೀಯ ಸಾಕ್ಷರತೆ ಮಿಷನ್' ಸ್ಥಾಪಿಸಿದೆ.
- ❖ 'ಸಾಕ್ಷರ ಭಾರತ' ಎಂಬ ಕಾರ್ಯಕ್ರಮದ ಮೂಲಕ ಅನಕ್ಷರತೆಯನ್ನು ಹೋಗಲಾಡಿಸಲು ಕ್ರಮ ಕೈಗೊಂಡಿದೆ.
- ❖ ಸಂವಿಧಾನದ 21ನೇ ವಿಧಿಯನ್ವಯ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದೆ.
- ❖ 2009ರಲ್ಲಿ ದೇಶದಾದ್ಯಂತ ಶಿಕ್ಷಣ ಹಕ್ಕು ಕಾಯ್ದೆಯನ್ನು (RTE–2009) ಜಾರಿಗೊಳಿಸಿ, 6 ರಿಂದ 14 ವರ್ಷವಯೋಮಾನದವರಿಗೆ ಶಿಕ್ಷಣವನ್ನು ಕಡ್ಡಾಯಗೊಳಿಸಿವೆ.



Use e-papers for save trees-InyaTrust.com

**4) ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ನಿಮ್ಮ ಸಲಹೆಗಳೇನು?**

- ❖ ಮಹಿಳೆಯರ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಉತ್ತಮ ಪಡಿಸಲು ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ.
- ❖ ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷಣ ಬಾಲ್ಯವಿವಾಹ ನಿಷೇಧ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿದೆ.
- ❖ ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿ, ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದ್ದಾರೆ.
- ❖ ಮಹಿಳೆಯರ ಸ್ವ–ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.
- ❖ ಮಹಿಳಾ ಮಂಡಲಗಳು ಯುವತಿ ಮಂಡಲಗಳು ಸ್ತ್ರೀ ಶಕ್ತಿ ಸಂಘಗಳು, ಸ್ವಸಹಾಯ ಸಂಘಗಳು, ಮಹಿಳಾ ಸಹಕಾರಿ ಸಂಘಗಳು ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.
- ❖ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಿದ್ದು, ಮಹಿಳೆಯರ ದೂರು ದುಮ್ಮಾನಗಳನ್ನು ಇವು ಪರಿಶೀಲಿಸಿ ನ್ಯಾಯ ಒದಗಿಸಿಕೊಡುತ್ತಿವೆ.
- ❖ ಗ್ರಾಮ ಪಂಚಾಯ್ತಿ ಹಂತದಿಂದ ಸಂಸತ್ತಿನವರೆಗೂ ರಾಜಕೀಯದಲ್ಲಿ ಮಹಿಳಾ ಮೀಸಲಾಗಿ ನೀಡುವಂತಹ ಪ್ರಯತ್ನ ನಡೆಯುತ್ತಿದ್ದು, ಕರ್ನಾಟಕದಲ್ಲಿ ಈಗಾಗಲೇ ಸ್ಥಳೀಯ ಸಂಸ್ಥೆಗಳಲ್ಲಿನ ಮಹಿಳಾ ಮೀಸಲಾತಿಯನ್ನು ಶೇ. 33ರ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.
- ❖ ಸರ್ಕಾರಿ ಉದ್ಯೋಗಗಳಲ್ಲಿ ಕೂಡಾ ಮಹಿಳೆಯರಿಗೆ ನಿಗಧಿತ ಪ್ರಮಾಣದ ಮೀಸಲಾತಿಯನ್ನು ನೀಡಲಾಗುತ್ತದೆ.

**5) ದೇಶದ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವೆಂದು ಪರಿಗಣಿಸಬಹುದಾಗಿದೆ. ಇದನ್ನು ಸಮರ್ಥಿಸಿ.**

- ❖ ಭಾರತದ ಅಪಾರ ಜನಸ್ತೋಮವನ್ನು ರಾಷ್ಟ್ರೀಯ ಪ್ರಗತಿಗೆ ಅವಶ್ಯಕವಾದ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸುವ ಎಲ್ಲಾ ಸಾಧ್ಯತೆಗಳನ್ನೂ ಹೊಂದಿದೆ.
- ❖ ರಾಷ್ಟ್ರೀಯ ಮಟ್ಟದ ಯೋಜನೆಗಳು ಪ್ರಕೃತಿ ಸಂಪತ್ತು ಹಾಗೂ ಮಾನವ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಹೊಂದಾಣಿಕೆಯೊಂದಿಗೆ ಉಪಯೋಗಿಸಿಕೊಳ್ಳಲು ಮಾನವ ಸಂಪನ್ಮೂಲ ಇಲಾಖೆಯನ್ನು ಸ್ಥಾಪಿಸಲಾಗಿದೆ.
- ❖ ದೇಶದ ಪ್ರಗತಿ ಎನ್ನುವುದು ಹೆಚ್ಚೆಚ್ಚು ಜನತೆಯ ಪಾಲ್ಗೊಳ್ಳುವಿಕೆಯ ಮುಖಾಂತರ ಆಗಬೇಕಾಗಿದೆ. ಆದ್ದರಿಂದ ಜನಸಂಖ್ಯೆಯನ್ನು ಒಂದು ಹೊರೆ ಎನ್ನದೆ ಪೂರಕ ಆಸ್ತಿ ಎಂದು ಪರಿಗಣಿಸಬಹುದಾಗಿದೆ.

**6) ಕರ್ನಾಟಕದಲ್ಲಿ ರಾಜ್ಯದಲ್ಲಿ ಬಡತನ ನಿವಾರಣೆಗಾಗಿ ರೂಪಿಸಿರುವ ಯೋಜನೆಗಳನ್ನು ವಿವರಿಸಿ.**

- ❖ ಬಡ ಕುಟುಂಬಗಳಿಗೆ ಬಿಪಿಎಲ್ ಕಾರ್ಡುಗಳನ್ನು ವಿತರಿಸಲಾಗಿದೆ.
- ❖ ಪಂಚವಾರ್ಷಿಕ ಯೋಜನೆಗಳ ಮೂಲಕ ಬಡತನ ನಿರ್ಮೂಲನೆ ಹಾಗೂ ತಲಾ ಆದಾಯದ ಹೆಚ್ಚಳಕ್ಕೆ ಪ್ರಯತ್ನಿಸಲಾಗಿದೆ.
- ❖ ಜವಾಹರ ರೋಜ್‌ಗಾರ್ ಯೋಜನೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆಗಳನ್ನು ಜಾರಿಗೆ ತರಲಾಗಿದೆ.
- ❖ ದೇಶದ ಜನಸಂಪತ್ತು ಹಾಗೂ ನೈಸರ್ಗಿಕ ಸಂಪತ್ತಿನ ಸದ್ಬಳಕೆ ಕ್ರಮ ಕೈಗೊಳ್ಳಲಾಗಿದೆ.

**7) ಕಳ್ಳ ಸಾಗಾಣಿಕೆ ಎಂದರೇನು? ನಿಯಂತ್ರಣಕ್ಕೆ ನಿಮ್ಮ ಸಲಹೆಗಳೇನು?**

ಯಾವುದೇ ಆಮದು ಸುಂಕವನ್ನು ಸರ್ಕಾರಕ್ಕೆ ನೀಡದೆ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಕಳ್ಳಸಾಗಾಣಿಕೆ ಎನ್ನುವರು.

ಕಳ್ಳ ಸಾಗಾಣಿಕೆ ನಿಯಂತ್ರಣಕ್ಕೆ ಕ್ರಮಗಳು:–

1) ದೇಶದೊಳಗೆಯೇ ಪರ್ಯಾಯ ವಸ್ತುಗಳ ಪೂರೈಕೆಗೆ ಕ್ರಮ
2) ರಾಷ್ಟ್ರದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವುದು.
3) ಸುಯೋಗ್ಯ ಆಮದು ರಫ್ತು ಧೋರಣೆ



Use e-papers for save trees-InyaTrust.com

4) ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ಕಾರ್ಯಾಚರಣೆ
5) ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷೆ
6) ಅಂತರರಾಷ್ಟ್ರೀಯ ಹಾಗೂ ಆಂತರಿಕ ರಾಜ್ಯಗಳ ಪರಸ್ಪರ ವ್ಯಾಪಾರ ಒಪ್ಪಂದ
7) ಕಳ್ಳ ಸಾಗಾಣಿಕೆಯ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದು.

**8) "ಲಾಭ ಬಡುಕತನದಿಂದ ಉತ್ಪಾದಕ ಮತ್ತು ಗ್ರಾಹಕನಿಗೆ ನಷ್ಟವಾಗುತ್ತದೆ" ಈ ಹೇಳಿಕೆಯನ್ನು ಹೇಗೆ ಸಮರ್ಥಿಸುತ್ತೀರಿ?**

ಜನಸಾಮಾನ್ಯರ ಅಥವಾ ಬಳಕೆದಾರರಿಂದ ಅತ್ಯಂತ ಹೆಚ್ಚಿನ ಲಾಭಗಳಿಸುವ ಧೋರಣೆಯನ್ನು ಲಾಭ ಬಡಕುತನ ಅಥವಾ ಲಾಭಕೋರತನ ಎನ್ನುತ್ತಾರೆ.

1) ಇದು ಆರ್ಥಿಕ ಅಸಮಾನತೆ ಹಾಗೂ ಬಡತನ ಹೆಚ್ಚಾಗಲು ಕಾರಣವಾಗುತ್ತದೆ
2) ಇದು ಸಮಾಜದಲ್ಲಿ ಅಪರಾಧಗಳ ಏರಿಕೆಗೆ ಕಾರಣವಾಗಿದೆ.
3) ಆರ್ಥಿಕ ರಂಗದಲ್ಲಿ ಲಾಭ ಬಡುಕತನ ಅನೈತಿಕ ವ್ಯಾಪಾರ ವಹಿವಾಟಿಗೆ ಪ್ರಚೋದನೆ ನೀಡುತ್ತದೆ.
4) ಲಾಭಕೋರತನದಿಂದ ಬೆಲೆ ಏರಿಕೆ ಸತತವಾಗಿ ನಡೆದು ಹಣದುಬ್ಬರಕ್ಕೂ ಎಡೆಮಾಡಿಕೊಡುತ್ತದೆ.
5) ಬೆಲೆಗಳ ಮೇಲೆ ಹತೋಟಿ ಇಲ್ಲದೆ ಇರುವುದು ಮಿತಿಮೀರಿದ ಲಾಭಕೋರತನಕ್ಕೆ ಮುಖ್ಯ ಕಾರಣ
6) ಉತ್ಪಾದಕರು ಅದರಿಂದಲೂ ಹೆಚ್ಚಾಗಿ ವಿತರಕರು ಬಹುವಾಗಿ ಲಾಭದ ಪರಿಮಿತಿ ಹೊಂದುವುದರಿಮ್ದ ಈ ಲಾಭ ಬಡುಕುತನ ಹೆಚ್ಚುವಂತಾಗಿದೆ.

## ಹೆಚ್ಚುವರಿ ಪ್ರಶ್ನೆಗಳು

**1) ಕೋಮುವಾದ ಎಂದರೇನು?**

ಧರ್ಮದ ಆಧಾರದಲ್ಲಿ ಸಮಗ್ರ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದನ್ನು ಕೋಮುವಾದ ಅಥವಾ ಮತೀಯವಾದ ಎನ್ನುವರು.

**2) ಪ್ರಾದೇಶಿಕವಾದ ಎಂದರೇನು?**

ಒಂದು ನಿರ್ದಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶವನ್ನೇ ಅತ್ಯಂತ ಗಾಢವಾಗಿ ಪ್ರೀತಿಸಿ, ಕೇವಲ ಆ ಭಾಗ್ಯದ ಬಗ್ಗೆಯೇ ಅತಿಯಾದ ಅಭಿಮಾನವನ್ನು ಬೆಳೆಸಿಕೊಳ್ಳುವುದಕ್ಕೆ ಪ್ರಾದೇಶಿಕವಾದ ಎನ್ನುವರು.

**3) ಭ್ರಷ್ಟಾಚಾರ ಎಂದರೇನು?**

ಎಲ್ಲಾ ವಿಧಿವಿಧಾನಗಳನ್ನು ಬದಿಗೆ ಸರಿಸಿ ಸ್ವಾರ್ಥದ ದೃಷ್ಟಿಯಿಂದ ಸ್ವಂತ ಲಾಭಕ್ಕಾಗಿ ಅಧಿಕಾರ ದುರುಪಯೋಗ ಮಾಡಿಕೊಳ್ಳುವುದನ್ನು ಭ್ರಷ್ಟಾಚಾರ ಎನ್ನುವರು.

**4) ಲಾಭ ಬಡುಕತನ ಎಂದರೇನು?**

ಜನಸಾಮಾನ್ಯರ ಅಥವಾ ಬಳಕೆದಾರದಿಂದ ಅತ್ಯಂತ ಹೆಚ್ಚಿನ ಲಾಭಗಳಿಸುವ ಧೋರಣೆಯನ್ನು ಲಾಭ ಬಡುಕುತನ ಅಥವಾ ಲಾಭಕೋರತನ ಎನ್ನುವರು.

**5) 'ಸಾಕ್ಷರ ಭಾರತ' ಕಾರ್ಯಕ್ರಮವನ್ನು ಯಾವ ಉದ್ದೇಶಕ್ಕೆ ಪ್ರಾರಂಭಿಸಲಾಗಿದೆ?**

ಅನಕ್ಷರತೆಯನ್ನು ಹೋಗಲಾಡಿಸಲು.

**6) ಬಡತನ ಎಂದರೇನು?**

ಜನರು ಸರಿಯದ ಆಹಾರ, ಬಟ್ಟೆ, ವಸತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದದೇ ಪಡುವ ಕಷ್ಟವನ್ನು ಬಡತನ ಎನ್ನುವರು.

**7) ಭ್ರಷ್ಟಾಚಾರದ ಪರಿಧಿಯೊಳಗೆ ಬರುವ ಆಚರಣೆಗಳು ಯಾವುವು?**

1) ಲಂಚಗುಳಿತನ 2) ಸ್ವಜನ ಪಕ್ಷಪಾತ 3) ಜಾತೀಯತೆ
4) ನಿಧಾನ ದ್ರೋಹ 5) ತೆರಿಗೆ ಕಳ್ಳತನ 6) ಅಕ್ರಮ ದಾಸ್ತಾನು



Use e-papers for save trees-InyaTrust.com

7) ಕಳ್ಳ ಸಾಗಾಣಿಕೆ 8) ಆರ್ಥಿಕ ಸಾಗಾಣಿಕೆ 9) ಮೋಸಗಾರಿಕೆ
10) ವಿದೇಶಿ ವಿನಿಮಯದ ಕಾನೂನು ಉಲ್ಲಂಘನೆ 11) ಔದ್ಯೋಗಿಕ ವಂಚನೆ

**8) ಭಾರತದಲ್ಲಿ ಜನಸಂಖ್ಯಾ ಹೆಚ್ಚಳಕ್ಕೆ ಕಾರಣವಾದ ಅಂಶಗಳಾವುವು?**

1) ಜನನ ಪ್ರಮಾಣದಲ್ಲಿ ಮಿತಿ ಮೀರಿದ ಹೆಚ್ಚಳ
2) ಮರಣದ ಪ್ರಮಾಣದಲ್ಲಿ ಇಳಿಕೆ
3) ಜೀವಿತ ಕಾಲಮಾನದಲ್ಲಿ ಗಣನೀಯ ಪ್ರಮಾಣದ ಏರಿಕೆ
4) ಶಿಶು ಮರಣದ ನಿಷ್ಪತ್ತಿಯಲ್ಲಿ ಕಡಿತ

**9) ಜನಸಂಖ್ಯಾ ಹೆಚ್ಚಳದಿಂದ ಉಂಟಾಗಿರುವ ಸಮಸ್ಯೆಗಳಾವುವು?**

1) ನಿರುದ್ಯೋಗ
2) ಅನಕ್ಷರತೆ
3) ಬಡತನ
4) ವಸತಿ ಸೌಲಭ್ಯ ಹಾಗೂ ಆರೋಗ್ಯ ಸಮಸ್ಯೆ
5) ನೀರಿನ ಪೂರೈಕೆಯಲ್ಲಿ ಕೊರತೆ ಮುಂತಾದವು.

**10) ಜನಸಂಖ್ಯಾ ಹೆಚ್ಚಳದಿಂದಾಗುವ ಸಮಸ್ಯೆಯನ್ನು ಪರಿಹರಿಸುವ ಮಾರ್ಗೋಪಾಯಗಳಾವುವು?**

- ಅಕ್ಷರ ಪ್ರಸರಣ
- ತಾಂತ್ರಿಕ ಶಿಕ್ಷಣ
- ಕೃಷಿ ಅಭಿವೃದ್ಧಿ
- ಕೈಗಾರಿಕಾ ಪ್ರಗತಿ
- ರಫ್ತು ಹೆಚ್ಚಳ
- ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗಗಳ ಸೃಷ್ಟಿ

**11) ಲಾಭ ಬಡುಕತನಕ್ಕೆ ಕಾರಣವಾಗಿರುವ ಅಂಶಗಳನ್ನು ಹೆಸರಿಸಿ.**

ಏಕಸ್ವಾಮ್ಯ ವ್ಯವಸ್ಥೆ
ಬಹುರಾಷ್ಟ್ರಿಯ ಕಂಪನಿಗಳ ವ್ಯಾಪಕತೆ
ಅನಾರೋಗ್ಯಕರ ಮಾರುಕಟ್ಟೆ ನಿಯಮಗಳು
ಅಕ್ರಮ ದಾಸ್ತಾನು
ಕಳ್ಳ ವ್ಯಾಪಾರ
ಬೆಲೆಯ ಬಗ್ಗೆ ಸರಿಯಾದ ನಿಯಂತ್ರಣ ಇಲ್ಲದಿರುವುವಿಕೆ

**12) ಲಾಭಕೋರತನವನ್ನು ನಿಯಂತ್ರಿಸಬಹುದಾದ ಕೆಲವು ಪರಿಹಾರ ಕ್ರಮಗಳನ್ನು ಹೆಸರಿಸಿ.**

ಕಟ್ಟುನಿಟ್ಟಿನ ಸರಕಾರಿ ನಿಯಂತ್ರಣ
ಬೆಲೆ ಸೂಚ್ಯಾಂಕಗಳ ಪರಿಶಿಲನೆ
ಸಹಕಾರೀ ಮಾರುಕಟ್ಟೆಗಳ ವಿಸ್ತರಣೆ
ಸರಿಯಾದ ತೆರಿಗೆ ಧೋರಣೆ

**13) ಸಮಾಜದ ಆರ್ಥಿಕ ಅಸಮಾನತೆಗೆ ಕಾರಣವಾದ ಅಂಶಗಳನ್ನು ಹೆಸರಿಸಿ.**

ಖಾಸಗಿ ಕ್ಷೇತ್ರದ ಅತ್ಯಂತ ಹೆಚ್ಚಿನ ಮೊತ್ತದ ವೇತನ ಶ್ರೇಣಿ
ಬಹುರಾಷ್ಟ್ರೀಯ ಕಂಪನಿಗಳ ಕಾರ್ಯಕ್ಷೇತ್ರ
ಶ್ವೇತಧಾರಿ ಅಂದರೆ ಮೇಲುಸ್ತರದ ನೌಕರಿಗಳು
ಲಾಭ ಬಡುಕತನ ಮತ್ತು ಭ್ರಷ್ಟಾಚಾರ



Use e-papers for save trees-InyaTrust.com

**14) ಅನಕ್ಷರತೆಗೆ ಕಾರಣಗಳಾವುವು?**

ಬಡತನ
ವಲಸೆ ಹೋಗುವಿಕೆ
ಬಾಲ ಕಾರ್ಮಿಕ ಪದ್ಧತಿ
ಬಾಲ್ಯ ವಿವಾಹ
ಚಿಕ್ಕ ಮಕ್ಕಳ ಲಾಲನೆ ಪಾಲನೆಗೆ ಹಿರಿಯ ಮಕ್ಕಳನ್ನು ಬಳಸಿಕೊಳ್ಳುವುದು.
ಶಿಕ್ಷಣ ಕೊಡಿಸಬೇಕೆಂಬ ಆಸಕ್ತಿಯ ಕೊರತೆ

**15) ಬಡತನವನ್ನು ಹೋಗಲಾಡಿಸಲು ಭಾರತ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳಾವುವು?**

ಜವಾಹರ ರೋಜ್‌ಗಾರ್ ಯೋಜನೆ
ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ

**16) ನೆನಪಿನಲ್ಲಿಡಬೇಕಾದ ಅಂಶಗಳು**

1956 – ಭಾಷಾವಾರು ಪ್ರಾಂತ್ಯ ವಿಭಜನೆ
2001 – ಸಾಕ್ಷರತೆಯ ಪ್ರಮಾಣ 66%
2011 – ಸಾಕ್ಷರತೆಯ ಪ್ರಮಾಣ 74%
2001 – ಸರ್ವಶಿಕ್ಷಣ ಅಭಿಯಾನ್
1988 – ರಾಷ್ಟ್ರೀಯ ಸಾಕ್ಷರತಾ ಮಿಷನ್
2009 – 21ನೇ ವಿಧಿಯನ್ವಯ ಶಿಕ್ಷಣ ಹಕ್ಕು ಕಾಯ್ದೆ
1991 – 2001 – ದೇಶದ ಜನಸಂಖ್ಯೆ 84 ದಶಲಕ್ಷ ಕೋಟಿಯಿಂದ 102.7 ದಶಲಕ್ಷ ಕೋಟಿಗೆ ಏರಿತು.
2011 – ಜನಗಣತಿ ಪ್ರಕಾರ ಜನಸಂಖ್ಯೆ 121 ಕೋಟಿ
ಜಯಪ್ರಕಾಶ ನಾರಾಯಣ ಹಾಗೂ ಅಣ್ಣಾ ಹಜಾರೆ – ಭ್ರಷ್ಟಾಚರ ನಿರ್ಮೂಲನೆ
ಕರ್ನಾಟಕ – ಸ್ಥಳೀಯ ಸಂಸ್ಥೆಗಳಲ್ಲಿನ ಚುನಾವಣೆಯಲ್ಲಿ ಮಹಿಳಾ ಮೀಸಲಾಗಿತಿಯನ್ನು ಶೇ. 33 ರ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿದೆ.



Use e-papers for save trees-InyaTrust.com

# ಅಧ್ಯಾಯ 2
# ಭಾರತ ವಿದೇಶಾಂಗ ನೀತಿ

**ಮುಖ್ಯಾಂಶಗಳು**

- ಒಂದು ರಾಷ್ಟ್ರ ಇತರ ರಾಷ್ಟ್ರಗಳೊಂದಿಗೆ ವ್ಯವಹರಿಸುವಾಗ ಅನುಸರಿಸುವ ಸಮಗ್ರ ತತ್ವಗಳನ್ನು ಹಾಗು ಅನುಸಂಧಾನಗಳನ್ನು ವಿದೇಶಾಂಗ ನೀತಿ ಅಥವಾ ವಿದೇಶಾಂಗ ಧೋರಣೆ ಎಂದು ಕರೆಯುತ್ತೇವೆ.
- ಭಾರತ ಸ್ವಾತಂತ್ರ್ಯ ಪಡೆದ ನಂತರ ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿದೆ.
- ಭಾರತದ ವಿದೇಶಾಂಗ ನೀತಿಯನ್ನು ನಿರೂಪಿಸಿದವರು ಪಂಡಿತ್ ಜವಾಹರಲಾಲ್ ನೆಹರೂರವರು.
- ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳೆಂದರೆ : ಪಂಚಶೀಲ ತತ್ವಗಳು, ಅಲಿಪ್ತ ನೀತಿ, ವಸಾಹತುಶಾಹಿತ್ವಕ್ಕೆ ವಿರೋಧ, ವರ್ಣದ್ವೇಷ ನೀತಿಗೆ ವಿರೋಧ, ನಿಶ್ಯಸ್ತ್ರೀಕರಣ.
- ಭಾರತ ಕಾಮನ್‌ವೆಲ್ತ್ ಆಫ್ ನೇಷನ್ಸ್ ಹಾಗು ಸಾರ್ಕ್ ಈ ಎರಡು ಸಂಸ್ಥೆಗಳ ಸದಸ್ಯತ್ವ ಹೊಂದಿದೆ.

**I ಕೆಳಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**1) ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶ**
1) ಪರಸ್ಪರ ಆಕ್ರಮಣ ಮಾಡದಿರುವುದು 2) ಶಾಂತಿಯುತ ಸಹಬಾಳ್ವೆ
3) ಪರಸ್ಪರ ಸಹಕಾರ ಮತ್ತು ಸಮಾನತೆ **4) ರಾಷ್ಟ್ರದ ಭದ್ರತೆ**

**2) ಪಂಚಶೀಲ ಒಪ್ಪಂದವನ್ನು ಅಳವಡಿಸಿಕೊಂಡ ರಾಷ್ಟ್ರಗಳು**
1) ಭಾರತ ಮತ್ತು ಪಾಕಿಸ್ತಾನ **2) ಭಾರತ ಮತ್ತು ಚೀಣಾ**
3) ಭಾರತ ಮತ್ತು ಶ್ರೀಲಂಕಾ 4) ಭಾರತ ಮತ್ತು ನೇಪಾಳ

**3) ಒಂದು ಜನಾಂಗದ ಜನಸಮುದಾಯ ಇನ್ನೊಂದು ಜನಾಂಗದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಕಡೆಗಣಿಸುವ ನೀತಿ.**
1) ವಸಾಹತು ನೀತಿ 2) ನಿಶ್ಯಸ್ತ್ರೀಕರಣ **3) ವರ್ಣಬೇದ ನೀತಿ** 4) ಅಲಿಪ್ತ ನೀತಿ

**4) 'ಆಫ್ರಿಕಾದ ಗಾಂಧಿ' ಎಂದು ಕರೆಯಲ್ಪಡುವವರು**
**1) ನೆಲ್ಸನ್ ಮಂಡೇಲ** 2) ಮಹಾತ್ಮ ಗಾಂಧೀಜಿ 3) ಮಾರ್ಟಿನ್ ಲೂಥರ್‌ಕಿಂಗ್ 4) ಅಬ್ರಹಾಂ ಲಿಂಕನ್

**5) ಸಂವಿಧಾನ ಯಾವ ವಿಧಿಯು ವಿದೇಶಾಂಗ ನೀತಿಯನ್ನು ಅಳವಡಿಸಿಕೊಳ್ಳಲು ನಿರ್ದೇಶನ ನೀಡಿದೆ.**
1) 50ನೇ ವಿಧಿ 2) 52ನೇ ವಿಧಿ **3) 51ನೇ ವಿಧಿ** 4) 53ನೇ ವಿಧಿ

**6) ಕೇಂದ್ರ ಸರ್ಕಾರದ ಯಾವ ಮಂತ್ರಿ ದೇಶದ ವಿದೇಶಾಂಗ ನೀರಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.**
1) ರಕ್ಷಣಾ ಮಂತ್ರಿ 2) ಪ್ರಧಾನ ಮಂತ್ರಿ **3) ವಿದೇಶಾಂಗ ಸಚಿವರು** 4) ಗೃಹಖಾತೆ ಸಚಿವರು

**7) ಭಾರತದ ಯಾವ ಪ್ರಧಾನಮಂತ್ರಿ ಪ್ರಥಮ ವಿದೇಶಾಂಗ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ?**
**1) ಜವಾಹರ್‌ಲಾಲ್ ನೆಹರು** 2) ದೇವೇಗೌಡ
3) ಇಂಧಿರಾಗಾಂಧಿ 4) ಲಾಲ್ ಬಹದ್ದೂರ್ ಶಾಸ್ತ್ರಿ



Use e-papers for save trees-InyaTrust.com

**8)** **'ಈ ಜಗತ್ತು ಕ್ರೂರವಾಗಿದೆ. ನಾವು ಶಾಂತಿ ಪ್ರಸರಣ ಧ್ವಜವನ್ನು ಎಲ್ಲೆಡೆಯು ಎತ್ತಿ ಹಿಡಿಯಲು ಬಸಸಿದೆವು, ಆದರೆ ಮುಗ್ಧರಾದ ನಾವು ವಂಚಿತರಾದೆವು' ಎಂದು ಹೇಳಿದವರು.**

1) ಡಾ॥ ಮನಮೋಹನ್ ಸಿಂಗ್ 2) ಇಂದಿರಾಗಾಂಧಿ
3) ಅಟಲ್ ಬಿಹಾರಿ ವಾಜಪೇಯಿ **4) ಜವಾಹರ್‌ಲಾಲ್ ನೆಹರು**

**9)** **ಸಾರ್ಕ್ (SAARC) ಸಂಘಟನೆ ಅಸ್ತಿತ್ವಕ್ಕೆ ಬಂದದ್ದು**

1) ಡಿಸೆಂಬರ್ 8, 1986 2) ಡಿಸೆಂಬರ್ 8, 1985
3) ನವೆಂಬರ್ 8, 1985 4) ನವೆಂಬರ್ 8, 1984

## II ಬಿಟ್ಟ ಸ್ಥಳ ತುಂಬಿರಿ

1) ವಿಶ್ವದಲ್ಲಿ ಸುಮಾರು **200** ರಾಷ್ಟ್ರಗಳಿವೆ.
2) ಆಂತರಿಕವಾಗಿ ಅಥವಾ ಬಾಹ್ಯವಾಗಿ ಸ್ವತಂತ್ರವಾಗಿರುವ ರಾಷ್ಟ್ರವೇ **ಸಾರ್ವಭೌಮ ರಾಷ್ಟ್ರ**
3) **1946ರ ಸೆಪ್ಟೆಂಬರ್ 7** ರಂದು ಜವಾಹರಲಾಲ್ ನೆಹರು ಅವರು ನೀಡಿದ ರೇಡಿಯೋ ಭಾಷಣದಲ್ಲಿ ವಿದೇಶಾಂಗ ನೀತಿಯ ರೂಪುರೇಷೆಗಳ ಬಗ್ಗೆ ಅರಿವು ಮೂಡಿಸಿದರು.
4) ಚೀನಾದ ಚೌ ಎನ್ ಲಾಯ್ ಮತ್ತು ಭಾರತದ ಜವಾಹರಲಾಲ್ ನೆಹರೂ ನಡುವೆ **1954 ಜೂನ್** ತಿಂಗಳಲ್ಲಿ ಪಂಚಶೀಲ ಒಪ್ಪಂದ ಏರ್ಪಟ್ಟಿತು.
5) **ಅಟಲ್ ಬಿಹಾರಿ ವಾಜಪೇಯಿ**ಯವರು ನಮ್ಮ ದೇಶದ ಪ್ರಧಾನಿಯಾಗಿದ್ದಾಗ ಅಲಿಪ್ತ ನೀತಿಯನ್ನು ಸುಧಾರಿಸಿ ಪಾಕಿಸ್ತಾನದೊಂದಿಗೆ ಮೈತ್ರಿಗೆ ಪ್ರಯತ್ನಿಸಿದರು.
6) **ನೆಲ್ಸನ್ ಮಂಡೇಲ** ಅವರನ್ನು ಆಫ್ರಿಕಾದ ಗಾಂಧಿ ಎನ್ನುವರು.
7) ಕೇಂದ್ರ ಸರ್ಕಾರದ **ವಿದೇಶಾಂಗ ಖಾತೆ** ನಮ್ಮ ದೇಶದ ವಿದೇಶಾಂಗ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
8) ಭಾರತದ ವಿದೇಶಾಂಗ ನೀತಿಯನ್ನು ವಿಶೇಷವಾಗಿ **ಜವಾಹರಲಾಲ್ ನೆಹರು** ಅವರು ರೂಪಿಸಿದ್ದಾರೆ.
9) ವಿಶ್ವದ ಯಾವುದೇ ಬಣಕ್ಕೂ ಸೇರದೇ ತಟಸ್ಥವಾಗಿ ಉಳಿಸುವ ನೀತಿಯೇ **ಅಲಿಪ್ತ ನೀತಿ.**
10) ಸ್ವಾತಂತ್ರಕ್ಕೂ ಮೊದಲು ಭಾರತ **ಬ್ರಿಟೀಷರ** ವಸಾಹತುವಾಗಿತ್ತು.

## III ಹೊಂದಿಸಿ ಬರೆಯಿರಿ.

| | ಅ | ಆ | ಉತ್ತರ |
|---|---|---|---|
| 1. | **ಜವಾಹರಲಾಲ್ ನೆಹರು** | ಅ) ವಸಾಹತು ಶಾಹಿತ್ವಕ್ಕೆ ವಿರೋಧ | ಆ |
| 2. | **ಚೌ. ಎನ್. ಲಾಯ್** | ಆ) ಭಾರತದ ವಿದೇಶಾಂಗ ನೀತಿ | ಈ |
| 3. | **ನೆಲ್ಸನ್ ಮಂಡೇಲ** | ಇ) ಶೀತಲ ಸಮರ | ಉ |
| 4. | **ರಷ್ಯಾ ಮತ್ತು ಅಮೆರಿಕಾ** | ಈ) ಚೀನಾ | ಇ |
| 5. | **ದೆಹಲಿ ಮತ್ತು ಬಾಂಡೂಂಗ್** | ಉ) ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ | ಅ |
| | | ಊ) ಆಕ್ರಮಣ ಮಾಡದಿರುವುದು | |

## IV ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

**1) ವಿದೇಶಾಂಗ ನೀತಿ ಎಂದರೇನು?**

ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಕರಿಸುವ ನೀತಿಯೇ ವಿದೇಶಾಂತ ನೀತಿ.



Use e-papers for save trees-InyaTrust.com

2) **ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ?**
ಯಾವುದೇ ಪ್ರಾಕೃತಿಕ ಸಂಪತ್ತು, ಪರಿಣಿತ ಬೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯ, ತಾಂತ್ರಿಕ ಸಾಮರ್ಥ್ಯ, ಬಲಾಢ್ಯ ಸೈನಿಕ ಬಲ, ವಿಪುಲ ಜನಸಂಖ್ಯೆ ಮುಂತಾದವುಗಳೊಂದಿಗೆ ಉತ್ತಮ ವಿದೇಶಾಂಗಗಳೊಂದಿಗೆ ಉತ್ತಮ ಸಂಬಮ್ಧ ಇಲ್ಲದಿದ್ದರೆ ರಾಷ್ಟ್ರದ ಪ್ರಗತಿ ಕುಂಠಿತವಾಗುತ್ತದೆ.

3) **ಭಾತರದ ವಿದೇಶಾಂಗ ನೀತಿಯ ಗುರಿಗಳಾವುವು?**
- ❖ ರಾಷ್ಟ್ರದ ಭದ್ರತೆ
- ❖ ರಾಷ್ಟ್ರದ ಆರ್ಥಿಕ ಸಂವರ್ಧನೆ
- ❖ ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
- ❖ ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿರಾಷ್ಟ್ರಗಳನ್ನು ನಿರ್ಬಂದಿಸುವುದು ಅಥವಾ ಹತ್ತಿಕ್ಕುವುದು
- ❖ ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು

4) **ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?**
ವಸಾಹತು ಶಾಹಿತ್ವವನ್ನು ವಿರೋಧಿಸಲು ಸ್ವತಂತ್ರಗಳಿಸಿಕೊಂಡ ಭಾರತ ಸ್ವಾಭಾವಿಕವಾಗಿ ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತು ಶಾಹಿತ್ವ ಇರಕೂಡದು ಎಂದು ಪ್ರತಿಪಾದಿಸಿದೆ. ಆದ್ದರಿಂದ ಭಾರತದ ವಿದೇಶಾಂಗ ನೀತಿಯಲ್ಲಿ ವಸಾಹತು ಶಾಹಿತ್ವಕ್ಕೆ ವಿರೋಧ ವ್ಯಕ್ತಗೊಂಡಿದೆ.

5) **ಪಂಚಶೀಲ ತತ್ವಗಳಾವುವು?**
- ❖ ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ
- ❖ ಪರಸ್ಪರ ಆಕ್ರಮಣ ಮಾಡದಿರುವುದು.
- ❖ ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ
- ❖ ಪರಸ್ಪರ ಸಹಕಾರ ಮತ್ತು ಸಮಾನತೆ
- ❖ ಶಾಂತಿಯುತ ಸಹಬಾಳ್ವೆ

6) **ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತದೆ? ವಿವರಿಸಿ.**
ಭಾರತ ಶಾಂತಿಪ್ರಿಯ ರಾಷ್ಟ್ರವಾಗಿದ್ದು ಗುಣಾತ್ಮಕ ಹಾಗೂ ಗಾತ್ರದ ಪರಿಮಿತಿಯಲ್ಲಿನ ನಿಶ್ಶಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ. ಶಾಂತಿ ಸೌಹಾರ್ದತೆಗೆ ಒತ್ತು ನೀಡಿದ ಭಾರತದ ಪ್ರಧಾನಿ ನೆಹರೂರವರ ಕಾಲದಲ್ಲಿ ಸಹಜವಾಗಿಯೇ ನಿಶ್ಶಸ್ತ್ರೀಕರಣಕ್ಕೆ ಬೆಂಬಲವನ್ನು ಸೂಚಿಸಿತು. ಸಂಪೂರ್ಣ ನಿಶ್ಶಸ್ತ್ರೀಕರಣ ಸಾಧ್ಯವಾಗದ ವಿಚಾರವಾಗಿದೆ. ಏಕೆಂದರೆ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ರಕ್ಷಣಾವ್ಯೂಹ ಅತ್ಯಗತ್ಯ. ಆದರೂ ಭಾರತ ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಪೂರಕವಾದ ವಿದೇಶಾಂತ ನೀತಿಗೆ ವಿಶೇಷವಾಗಿ ಒತ್ತು ನೀಡಿದೆ.

V **ಹೆಚ್ಚುವರಿ ಪ್ರಶ್ನೆಗಳು:–**

1) **ಭಾರತದ ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ ಎಂದು ಹೇಗೆ ಹೇಳುವಿರಿ.**
ಭಾರತವು ವಿಪುಲ ಜನಸಂಖ್ಯೆ, ಅಪಾರ ಪ್ರಾಕೃತಿಕ ಸಂಪತ್ತು, ಪರಿಣಿತ ಬೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯ, ಬಲಾಢ್ಯ ಸೈನಿಕ ಬಲ ಮುಂತಾದವುಗಳನ್ನು ಹೊಂದಿದ್ದು, ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ. ಪ್ರಸ್ತುತ ಜಗತ್ತಿನ ಕೆಲವೇ ರಾಷ್ಟ್ರಗಳು ತಮ್ಮದೇ ಆದ ನಿರ್ದಿಷ್ಟ ಹಾಗೂ ಉತ್ತಮ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದ್ದು ಅವುಗಳಲ್ಲಿ ಭಾರತವು ಒಂದಾಗಿದೆ.

2) **ಸಾರ್ವಭೌಮ ರಾಷ್ಟ್ರ ಎಂದರೇನು?**
ಯಾವ ರಾಷ್ಟ್ರ ಆಂತರಿಕವಾಗಿ ಹಾಗೂ ಬಾಹ್ಯವಾಗಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದೋ ಅಂತಹ ರಾಷ್ಟ್ರವನ್ನು ಸಾರ್ವಭೌಮರಾಷ್ಟ್ರ ಎನ್ನುವರು.



Use e-papers for save trees-InyaTrust.com

**3)** **ನಮ್ಮ ವಿದೇಶಾಂಗ ನೀತಿಯನ್ನು ಪ್ರಭಾವಿಸುವ ಅಂಶಗಳನ್ನು ಹೆಸರಿಸಿ.**

ನಮ್ಮ ವಿದೇಶಾಂಗ ನೀತಿಯು ಹಲವಾರು ಅಂಶಗಳಿಂದ ಪ್ರಭಾವಿಸಲ್ಪಟ್ಟಿದೆ. ಅವುಗಳೆಂದರೆ ರಾಷ್ಟ್ರೀಯ ಹಿತಾಸಕ್ತಿ, ರಾಜಕೀಯ ಪರಿಸ್ಥಿತಿ, ಆರ್ಥಿಕ ವ್ಯವಸ್ಥೆ, ರಕ್ಷಣಾ ಸಾಮರ್ಥ್ಯ, ಜನಾಭಿಪ್ರಾಯ, ಅಂತರರಾಷ್ಟ್ರೀಯ ಪರಿಸರ ಮುಂತಾದವು.

**4)** **ಅಲಿಪ್ತ ನೀತಿ ಎಂದರೇನು?**

ದ್ವಿತೀಯ ಮಹಾಯುದ್ಧದ ಬಳಿಕ ವಿಶ್ವವು ಎರಡು ಶಕ್ತಿ ಬಣಗಳಾಗಿ ವಿಭಾಗವಾಗಿತ್ತು. ಅಮೆರಿಕಾದ ಸಂಯುಕ್ತ ಸಂಸ್ಥಾನದ ನೇತೃತ್ವದ ಪ್ರಜಾಪ್ರಭುತ್ವ ರಾಷ್ಟ್ರಗಳು ಹಾಗೂ ಸೋವಿಯತ್ ರಷ್ಯಾದ ನೇತೃತ್ವದ ಕಮ್ಯುನಿಸ್ಟ್ ರಾಷ್ಟ್ರಗಳು ಎಂದು ಎರಡು ಬಣಗಳಾಗಿದ್ದವು. ಈ ಎರಡೂ ಬಣಗಳ ನಡುವೆ ಶೀತಲ ಸಮರ ಪ್ರಾರಂಭವಾಯಿತು. ಇಂತಹ ಸಂದರ್ಭದಲ್ಲಿ ಭಾರತ ಯಾವ ಬಣಕ್ಕೂ ಸೇರದೇ ತಟಸ್ಥವಾಗಿ ಉಳಿಯಿತು. ಈ ತಟಸ್ಥ ನೀತಿಗೆ ಅಲಿಪ್ತ ನೀತಿ ಎನ್ನುವರು.

**5)** **ವಸಾಹತು ಶಾಹಿತ್ವ ಎಂದರೇನು?**

ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾದೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ವಸಾಹತು ಶಾಹಿತ್ವ ಎನ್ನುವರು.

**6)** **ವರ್ಣಭೇದ ನೀತಿ ಎಂದರೇನು?**

ಒಂದು ವರ್ಣದ ಜನಸಮುದಾಯ ಇನ್ನೊಂದು ವರ್ಣದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಅವರನ್ನು ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ ವರ್ಣಭೇದ ನೀತಿ ಎನ್ನುವರು.

**7)** **ನಿಶ್ಶಸ್ತ್ರೀಕರಣ ಎಂದರೇನು?**

ಕೆಲವು ನಿರ್ದಿಷ್ಟ ಬಗೆಯ ಅಥವಾ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದಕ್ಕೆ ನಿಶ್ಶಸ್ತ್ರೀಕರಣ ಎನ್ನುವರು.



Use e-papers for save trees-InyaTrust.com

# ಅಧ್ಯಾಯ–3
# ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

## I. ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ

**1 1947ರ ಭಾರತ ವಿಭಜನೆ_______ಎನ್ನುವ ರಾಷ್ಟ್ರದ ಉದಯಕ್ಕೆ ಕಾರಣವಾಯಿತು.**
ಅ. ನೇಪಾಳ ಆ. **ಪಾಕಿಸ್ತಾನ** ಇ. ಬಾಂಗ್ಲಾದೇಶ ಈ. ಚೀನಾ

**2. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾರ್ಗಿಲ್ ಯುದ್ಧ ನಡೆದ ವರ್ಷ**
ಅ. **1999** ಆ.1997 ಇ. 1998 ಈ.1996

**3. ಪರ್ವತಗಳಿಂದ ಅವೃತವಾದ ಭಾರತದ ನೆರೆಯ ರಾಷ್ಟ್ರ**
ಅ. ಮಯನ್ಮಾರ್ ಆ.ಭೂತಾನ್ ಇ. ಬಾಂಗ್ಲಾದೇಶ ಈ.**ನೇಪಾಳ**

**4. ಬಾಂಗ್ಲಾದೇಶವನ್ನು ಈ ಹೆಸರಿನಿಂದಲೂ ಕರೆಯುತ್ತಾರೆ.**
ಅ. ಉತ್ತರ ಪಾಕಿಸ್ತಾನ ಆ. **ಪೂರ್ವ ಪಾಕಿಸ್ತಾನ** ಇ. ದಕ್ಷಿಣ ಪಾಕಿಸ್ತಾನ ಈ.ಪಶ್ಚಿಮ ಪಾಕಿಸ್ತಾನ

**5. ಚರಿತ್ರೆಯ ಕಾಲಘಟ್ಟದಲ್ಲಿ ಭಾರತೀಯ ಭಿಕ್ಷುಗಳು ಶ್ರೀಲಂಕಾದಲ್ಲಿ ಪಸರಿಸಿದ ಧರ್ಮ**
ಅ. ಕ್ರಿಶ್ಚಿಯನ್ ಧರ್ಮ ಆ. **ಬೌದ್ಧ ಧರ್ಮ** ಇ. ಜೈನ ಧರ್ಮ ಈ. ಹಿಂದೂ ಧರ್ಮ

**6. ತಾಷ್ಕೆಂಟ್ ಒಪ್ಪಂದಕ್ಕೆ ಸಹಕರಿಸಿದ ರಾಷ್ಟ್ರ**
ಅ. **ರಷ್ಯಾ** ಆ. ಬಾಂಗ್ಲಾದೇಶ ಇ. ಶ್ರೀಲಂಕಾ ಈ. ಚೀನಾ

**7. ಭಾರತ ಮತ್ತು ರಷ್ಯಾಗಳ ನಡುವೆ________ವರ್ಷಗಳ ಶಾಂತಿ ಒಪ್ಪಂದ ಏರ್ಪಟ್ಟಿತ್ತು**
ಅ. 10 ಆ. 18 ಇ. 12 ಈ. **20**

**8. ಕೆಳಗಿನ ಯಾರ ವಿರುದ್ಧ ಹೋರಾಡಲು ಭಾರತ ಶ್ರೀಲಂಕಾಕ್ಕೆ ಮಿಲಿಟರಿ ಸಹಾಯ ನೀಡಿತು.**
ಅ. **ಎಲ್‌ಟಿಟಿಇ** ಆ.ನಕ್ಸಲರು ಇ. ಮಾವೋದಿಗಳು ಈ. ಭಯೋತ್ಪಾದಕರು

## II. ಬಿಟ್ಟಸ್ಥಳ ತುಂಬಿರಿ

1. ವಿಶ್ವದ ಎಲ್ಲಾ ಖಂಡಗಳಲ್ಲಿ ಸುಮಾರು **198** ಸಾರ್ವಭೌಮ ರಾಷ್ಟ್ರಗಳಿವೆ.
2. **1947** ರ ಭಾರತ ವಿಭಜನೆ ಪಾಕಿಸ್ತಾನ ಎನ್ನುವ ರಾಷ್ಟ್ರದ ಉದಯಕ್ಕೆ ಕಾರಣವಾಯಿತು.
3. **ಅಕ್ಟೋಬರ್ 1949** ರಲ್ಲಿ ಚೈನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಉದಯಿಸಿದಾಗ ಅದನ್ನು ಮಾನ್ಯತೆ ಮಾಡಿದ ಪ್ರಪ್ರಥಮ ರಾಷ್ಟ್ರ ಭಾರತ
4. ಭೌಗೋಳಿಕವಾಗಿ ಸಮೀಪದಲ್ಲಿರುವ **ನೇಪಾಳಕ್ಕೆ** ಭಾರತ ಸಂಪೂರ್ಣ ಸಹಾಯ ನೀಡುತ್ತಿದೆ
5. ಭಾರತ ವಿದೇಶಿ ವ್ಯಾಪಾರ, ವಿಜ್ಞಾನ ಮತು ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ **ಅಮೇರಿಕಾದೊಂದಿಗೆ** ಉತ್ತಮ ಬಾಂಧವ್ಯ ಹೊಂದಿದೆ.



Use e-papers for save trees-InyaTrust.com

**6.** <u>**1971**</u> ರಲ್ಲಿ ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು

**7.** ಭಾರತ <u>**ಏಷ್ಯಾ**</u> ಖಂಡದಲ್ಲಿದೆ

**8.** ಬಾಂಗ್ಲಾದೇಶ ಭಾರತದ <u>**ಪೂರ್ವಭಾಗದಲ್ಲಿದೆ.**</u>

**9.** ಚರಿತ್ರೆಯ ಕಾಲಘಟ್ಟದಲ್ಲಿ ಭಾರತೀಯ ಭಿಕ್ಷುಗಳು <u>**ಶ್ರೀಲಂಕಾದಲ್ಲಿ**</u> ಬೌದ್ಧ ಧರ್ಮವನ್ನು ಪಸರಿಸಿದರು

**10.** ಭಾರತದ ಭಿಲೈ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ <u>**ಸೋವಿಯತ್ ರಷ್ಯಾ**</u> ಸಹಕರಿಸಿತು

## III. ಹೊಂದಿಸಿ ಬರೆಯಿರಿ

| | A | B | ಉತ್ತರ |
|---|---|---|---|
| 1. | **ಕಾರ್ಗಿಲ್ ಯುದ್ಧ** | ಅಕ್ಟೋಬರ್ 1949 | **1999** |
| 2. | **ಚೀನಾದ ಆಕ್ರಮಣ** | 1961 | **1962** |
| 3. | **ತಾಷ್ಕೆಂಟ್ ಒಪ್ಪಂದ** | 1971 | **1966** |
| 4. | **ಗೋವಾದ ವಿಮೋಚನೆ** | 1966 | **1961** |
| 5. | **ಭಾರತ ಚೀನಾವನ್ನುಕಮ್ಯುನಿಸ್ಟ್– –ರಾಷ್ಟ್ರವೆಂದು ಮಾನ್ಯತೆ ಮಾಡಿದ್ದು** | 1962 | **ಅಕ್ಟೋಬರ್ 1949** |
| | | 1999 | |

## IV <u>ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ</u>

**1. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ ಏಕೆ?**

- ❖ಪ್ರಚಲಿತ ಪ್ರಪಂಚವನ್ನು ವಿಶ್ವ ಕುಟುಂಬ ಎಂದು ಕರೆಯುತ್ತೇವೆ.
- ❖ಭಾರತ ಸ್ವತಂತ್ರ ಸಾರ್ವಬೌಮ ರಾಷ್ಟ್ರ ಅರ್ಥಾತ್ ಆಂತರಿಕ ಹಾಗೂ ಬಾಹ್ಯ ವಿಚಾರಗಳಲ್ಲಿ ಸ್ವಯಂ ನಿರ್ಧಾರದ ಹಕ್ಕು ಹೊಂದಿದ ದೇಶ
- ❖ಭಾರತ ಒಂದು ಸ್ವತಂತ್ರ ರಾಷ್ಟ್ರವಾಗಿದ್ದು ಎಲ್ಲಾ ವಿದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದಬೇಕಾಗಿದೆ
- ❖ಮುಖ್ಯವಾಗಿ ಭಾರತ ಏಷ್ಯಾ ಖಂಡದ ನೆರೆಯ ರಾಷ್ಟ್ರಗಳೊಂದಿಗೆ ಒಳ್ಳೆಯ ಬಾಂಧವ್ಯ ಹೊಂದಬೇಕಾಗಿದೆ.
- ❖ರಾಷ್ಟ್ರೀಯ ಹಿತಾಸಕ್ತಿಗಳೆನಿಸಿದ ಗಡಿ ಭದ್ರತೆ, ವಿದೇಶ ವ್ಯಾಪಾರ,ಆರ್ಥಿಕ ಲಾಭ, ರಾಷ್ಟ್ರದ ಗೌರವ ಮುಂತಾದವುಗಳನ್ನು ಜೋಪಾನವಾಗಿ ಕಾಯ್ದುಕೊಳ್ಳಲಾಗಿದೆ.
- ❖ಆದ್ದರಿಂದ ಜಗತ್ತಿನ ಎಲ್ಲಾ ದೇಶಗಳೊಂದಿಗೆ ಭಾರತ ಶಾಶ್ವತ ರಾಯಭಾರಿ ಸಂಪರ್ಕ ಇರಿಸಿಕೊಳ್ಳಬೇಕಾಗಿದೆ

**2. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವವು?**

- ❖ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ 1947–48, 1965, 1971 ಹಾಗೂ 1999 ರಲ್ಲಿ ಯುದ್ಧಗಳು ಸಂಭವಿಸಿದವು
- ❖ಕಾಶ್ಮೀರ ಸಮಸ್ಯೆ ಹಾಗೂ ಭಯೋತ್ಪಾದನೆ ಈ ಎರಡು ರಾಷ್ಟ್ರಗಳ ನಡುವೆ ಇರುವ ಮುಖ್ಯ ವಿದ್ಯಮಾನಗಳಾಗಿವೆ.



**Use e-papers for save trees-InyaTrust.com**

❖ಸುಮಾರು $\frac{1}{3}$ ಒಂದರಷ್ಟು ಕಾಶ್ಮೀರದ ಭೂಭಾಗ ಈಗಲೂ ಪಾಕಿಸ್ತಾನದ ಅಧೀನದಲ್ಲಿದೆ

❖ಪಾಕಿಸ್ತಾನ ಭಯೋತ್ಪಾದಕತೆಯನ್ನು ಪ್ರಚೋದಿಸಬಾರದು ಹಾಗೂ ನಮ್ಮ ರಾಷ್ಟ್ರೀಯ ಹಿತಾಸಕ್ತಿಗೆ ತೊಂದರೆಯಾಗದಂತೆ ವ್ಯವಹರಿಸಬೇಕೆಂದು ಭಾರತ ಒತ್ತಾಯಿಸುತ್ತಿದೆ

3. **ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವವು?**

❖ಭಾರತದ ಧೋರಣೆಯ ವಿರುದ್ಧ ಚೀನಾ ಟಿಬೇಟನ್ನು ವಶಪಡಿಸಿಕೊಂಡಿತು

❖1962 ರಲ್ಲಿ ಚೀನಾ ಭಾರತವನ್ನು ಆಕ್ರಮಿಸಿತು ಹಾಗೂ ಯುದ್ಧದಲ್ಲಿ ಭಾರತವನ್ನು ಸೋಲಿಸಿತು

❖ನಮ್ಮ ರಾಜ್ಯಗಳಲ್ಲೊಂದಾದ ಅರುಣಾಚಲ ಪ್ರದೇಶವನ್ನು ತನ್ನದೆಂದು ಚೀನಾ ಪ್ರತಿಪಾದಿಸುತ್ತಿದ್ದು ಈ ವಿಷಯ ಎರಡು ರಾಷ್ಟ್ರಗಳ ಸಂಬಂಧಕ್ಕೆ ಧಕ್ಕೆ ತಂದಿದೆ

❖ಮಾವೋವಾದಿಗಳು ಭಾರತದಲ್ಲಿ ನಕ್ಸಲವಾದವನ್ನು ಪಸರಿಸುವುದರಿಂದ ಈ ಎರಡು ರಾಷ್ಟ್ರಗಳ ನಡುವೆ ಮನಸ್ತಾಪವಿದೆ

❖ಭಾರತ ಮತ್ತು ಚೀನಾದ ಮಧ್ಯೆ ಇರುವ ಗಡಿಯೂ ಅಂತಿಮವಾಗಿ ನಿರ್ಣಯವಾಗಿಲ್ಲ

❖ಅಣ್ವಸ್ತ್ರಗಳ ತಯಾರಿ, ವಿದೇಶಿ ವ್ಯಾಪಾರದ ಸವಾಲುಗಳು, ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ ಇವೆಲ್ಲಾ ಚೈನಾದ ಬಗೆಗೆ ಭಾರತದ ನೀತಿಯ ಮೇಲೆ ಪರಿಣಾಮ ಬೀರುತ್ತದೆ.

4. **ಭಾರತ–ಶ್ರೀಲಂಕಾದ ಬಾಂಧವ್ಯವು ಐತಿಹಾಸಿಕವಾದುದು ಈ ಹೇಳಿಕೆಯ ಹಿನ್ನೆಲೆಯಲ್ಲಿ ಈ ರಾಷ್ಟ್ರಗಳ ಬಾಂಧವ್ಯವನ್ನು ವಿವರಿಸಿ.**

❖ ಇತಿಹಾಸ ಪೂರ್ವದಿಂದಲೂ ಭಾರತ–ಶ್ರೀಲಂಕಾ ಮಧ್ಯೆ ಉತ್ತಮ ಸಂಬಂಧವಿತ್ತು

❖ ಶ್ರೀಲಂಕಾ ಭಾರತದಂತೆಯೇ ಸಾರ್ಕ್(ಚಿಚಿಡಿಛಿ) ರಾಷ್ಟ್ರ ಸಂಘದ ಸದಸ್ಯತ್ವ ಹೊಂದಿದೆ.

❖ ರಾಜಕೀಯ ಹಾಗೂ ಆರ್ಥಿಕ ರಂಗದಲ್ಲಿ ಭಾರತ ಶ್ರೀಲಂಕಾದೊಂದಿಗೆ ಉತ್ತಮ ಬಾಂಧವ್ಯಹೊಂದಿದೆ

❖ ಶ್ರೀಲಂಕಾದ ಜಾಫ್ನಾ ಭಾಗದ 'ಎಲ್‌ಟಿಟಿಇ' ಎಂಬ ತಮಿಳು ಪ್ರತ್ಯೇಕತಾ ವಾದಿಗಳನ್ನು ಹಿಮ್ಮೆಟ್ಟಿಸಲು ಒಮ್ಮೆ ನಾವು ಮಿಲಿಟರಿ ಸಹಾಯ ನೀಡಿದ್ದೆವು

❖ ಭಾರತವು ತಮಿಳರ ಆಂದೋಲನವನ್ನು ಸೂಕ್ತವಾಗಿ ಗಮನಿಸುತ್ತಿದೆ ಹಾಗೂ ಶ್ರೀಲಂಕಾದ ಸಿಂಹಳಿಯರ ಹಾಗೂ ತಮಿಳರ ಮಧ್ಯೆ ಉತ್ತಮ ಬಾಂಧವ್ಯವಿರಲಿ ಎಂದು ಹಾರೈಸುತ್ತದೆ.

❖ ಚರಿತ್ರೆಯ ಕಾಲಘಟ್ಟದಲ್ಲಿ ಭಾರತದ ಭಿಕ್ಷುಗಳು ಶ್ರೀಲಂಕಾದಲ್ಲಿ ಬೌದ್ಧ ಧರ್ಮವನ್ನು ಪಸರಿಸಿವೆ.

❖ ಭಾರತ ಶ್ರೀಲಂಕಾದೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದೆ

5. **ಭಾರತ ಮತ್ತು ಅಮೇರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು, ಇವುಗಳ ಪರಸ್ಪರ ಸೌಹಾರ್ದತೆಯು ಹೇಗಿದೆ ಎಂಬುದನ್ನು ವಿವರಿಸಿ**

❖ ಭಾರತ ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅಮೇರಿಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ

❖ ವಿಶ್ವ ಸಂಸ್ಥೆಯನ್ನು ಬಲಪಡಿಸುವ ಹಾಗೂ ಜಾಗತಿಕ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ಎರಡೂ ರಾಷ್ಟ್ರಗಳು ಸಮಾನ ಧೋರಣೆ ಹೊಂದಿವೆ.



**Use e-papers for save trees-InyaTrust.com**

❖ ಅಮೇರಿಕಾದ ರಿಪಬ್ಲಿಕ್‌ನ್ ಹಾಗೂ ಡೆಮಾಕ್ರೆಟಿಕ್ ಪಕ್ಷಗಳಿಗೆ ಸೇರಿದ ರಾಷ್ಟ್ರಾಧ್ಯಕ್ಷದ ಧೋರಣೆಗಳನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದ್ದು ಹಾಗೂ ಅದಕ್ಕನುಗುಣವಾಗಿ ಭಾರತವು ತನ್ನ ವಿದೇಶಾಂಗ ನೀತಿಯನ್ನು ಸಿದ್ಧಪಡಿಸುತ್ತಿದೆ.

6. **ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ**

❖ ಭಾರತ ರಷ್ಯಾ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ ಹಾಗೂ ಅದರ ಹಿಂದಿನ ಸೋವಿಯತ್ ರಷ್ಯಾ ಒಕ್ಕೂಟದೊಂದಿಗೂ ಅಂತಹದೇ ಒಳ್ಳೆಯ ಸಂಬಂಧ ಹೊಂದಿತ್ತು.

❖ ಭಾರತ ಅಲಿಪ್ತ ನೀತಿ ಹೊಂದಿದ್ದರೂ, ಭಾರತ–ಸೋವಿಯತ್ ಒಪ್ಪಂದವು ರಾಜಕೀಯ, ಆರ್ಥಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿಯನ್ನು ಕಂಡಿತು.

❖ 1961 ರಲ್ಲಿ ಗೋವಾ ವಿಮೋಚನೆಯ ಸಂದರ್ಭದಲ್ಲಿ ರಷ್ಯಾ ಭಾರತವನ್ನು ಬೆಂಬಲಿಸಿತು.

❖ 1966 ರ ತಾಷ್ಕೆಂಟ್‌ನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.

❖ 1971 ರಲ್ಲಿ ಭಾರತ ಹಾಗೂ ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು.

❖ ಭಾರತದ ಭಿಲ್ಮಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸೋವಿಯತ್ ರಷ್ಯಾ ಸಹಕರಿಸಿತ್ತು

❖ ನಮ್ಮ ರಾಷ್ಟ್ರದ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ರಷ್ಯಾದಿಂದ ಹೆಚ್ಚಿನ ನೆರವು ಪಡೆದಿದ್ದೇವೆ.

❖ ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

7. **ಪಾಕಿಸ್ತಾನ ಭಾರತದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿಲ್ಲ, ಏಕೆ?**

ಪಾಕಿಸ್ತಾನದ ಮಿಲಿಟರಿ–ಶಾಹಿತ್ವ ಹಾಗೂ ರಾಜಕೀಯ ಅಸ್ಥಿರತೆಯಿಂದಾಗಿ ಆ ರಾಷ್ಟ್ರ ನಮ್ಮೊಂದಿಗೆ ಒಳ್ಳೆಯ ಸಂಬಂಧವನ್ನು ಇರಿಸಿಕೊಂಡಿಲ್ಲ.

8. **ಚೈನಾವನ್ನು ಭಾರತ ಯಾವಾಗ ಕಮ್ಯುನಿಸ್ಟ್ ರಾಷ್ಟ್ರವೆಂದು ಮಾನ್ಯತೆ ಮಾಡಿತು?**

ಅಕ್ಟೋಬರ್ 1949 ರಲ್ಲಿ ಚೈನಾವನ್ನು ಭಾರತ ಕಮ್ಯುನಿಸ್ಟ್ ರಾಷ್ಟ್ರವೆಂದು ಮಾನ್ಯತೆ ಮಾಡಿತು.

9. **ಭಾರತ ನೇಪಾಳಕ್ಕೆ ಯಾವ ರೀತಿಯ ನೆರವನ್ನು ನೀಡುತ್ತಿದೆ?**

ನೇಪಾಳ ರಾಜಕೀಯ ಸ್ಥಿರತೆಗೆ ಪೂರಕವಾಗಿ ರಾಜ ತಾಂತ್ರಿಕ ನೆರವು ಹಾಗೂ ಆರ್ಥಿಕ ಸಹಕಾರವನ್ನು ಭಾರತ ನೀಡುತ್ತಿದೆ

10. **ಭಾರತ ಮತ್ತು ಬಾಂಗ್ಲಾದೇಶಗಳ ನಡುವೆ ಇರುವ ಸಮಸ್ಯೆಗಳಾವವು?**

❖ ಬಾಂಗ್ಲಾದೇಶೀಯರ ಅಕ್ರಮ ಪ್ರವೇಶ

❖ ಶಸ್ತ್ರಾಸ್ತ್ರಗಳ ಹಾಗೂ ಮಾದಕ ಪದಾರ್ಥಗಳ ಅಕ್ರಮ ಸಾಗಾಣಿಕೆ

❖ ಭಯೋತ್ಪಾದಕತೆ.

11. **ಅಮೇರಿಕಾದೊಂದಿಗೆ ಭಾರತದ ಸಂಬಂಧ ಕ್ಷೀಣಿಸಲು ಕಾರಣವೇನು?**

❖ ಭಾರತ–ಪಾಕಿಸ್ತಾನ ಯುದ್ಧಗಳ ವೇಳೆ ಅಮೇರಿಕಾದ ರಾಜಕೀಯ ಮುಖಂಡರು ಪಾಕಿಸ್ತಾನಕ್ಕೆ ಸಹಾಯ ಮಾಡಿದರು



Use e-papers for save trees-InyaTrust.com

❖ ಅನೇಕ ಬಾರಿ ಅಮೇರಿಕಾದ ವಿದೇಶಾಂಗ ನೀತಿ ಭಾರತದ ವಿರುದ್ಧವಿದ್ದು ಪಾಕಿಸ್ತಾನದ ಪರವಾಗಿತ್ತು.

**ನೆನಪಿನಲ್ಲಿಡಬೇಕಾದ ಅಂಶಗಳು**

1947– ಭಾರತದ ವಿಭಜನೆ

1947–48, 1965, 1971–ಭಾರತ–ಪಾಕಿಸ್ತಾನ ಯುದ್ಧ

1999– ಕಾರ್ಗಿಲ್ ಯುದ್ಧ

ಅಕ್ಟೋಬರ್ 1949– ಚೈನಾವನ್ನು ಕಮ್ಯುನಿಸ್ಟ್ ರಾಷ್ಟ್ರವೆಂದು ಭಾರತ ಮಾನ್ಯ ಮಾಡಿತು.

1971–ಬಾಂಗ್ಲಾದೇಶದ ಉದಯ

1962–ಚೈನಾದ ಆಕ್ರಮಣ

1961– ಗೋವಾದ ವಿಮೋಚನೆ

1966–ತಾಷ್ಕೆಂಟ್ ಒಪ್ಪಂದ

1971– ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು.

ಸಾರ್ಕ್–ಸೌತ್ ಏಷಿಯನ್ ಅಸೋಸಿಯೇಶನ್ ಆಫ್ ರೀಜಿನಲ್ ಕೋ–ಆಪರೇಷನ್

LAC-ವಾಸ್ತವಿಕ ನಿಯಂತ್ರಣ ರೇಖೆ

IB–ಅಂತರಾಷ್ಟ್ರೀಯ ಗಡಿ

NAM– ಅಲಿಪ್ತನೀತಿ ಚಳುವಳಿ



Use e-papers for save trees-InyaTrust.com

## ಅಧ್ಯಾಯ–೪
## ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

**ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

೧. ಮಾನವ ಹಕ್ಕುಗಳ ದಿನವನ್ನು **ಡಿಸೆಂಬರ್ ೧೦** ರಂದು ಆಚರಿಸುತ್ತೇವೆ.
೨. ಭಾರತವು ನಿರಂತರವಾಗಿ **ಸಾರ್ವತ್ರಿಕ** ಮಾನವ ಹಕ್ಕುಗಳನ್ನು ಪ್ರತಿ ಪಾದಿಸುತ್ತಾ ಬಂದಿದೆ.
೩. ಆಫ್ರಿಕಾದಲ್ಲಿ ವರ್ಣಭೇಧ ನೀತಿಯ ವಿರುದ್ಧ ಹೋರಾಡಿದವರು **ನೆಲ್ಸನ್ ಮಂಡೇಲಾ**
೪. ಮಾನವ ಹಕ್ಕು ಎಂಬುದು **ವರ್ಣ ಬೇಧ ರಹಿತ** ಸಮಾನತೆಯನ್ನು ಒಳಗೊಂಡಿದೆ.

**ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

೧. **ದ್ವಿತೀಯ ಮಹಾಯುದ್ಧ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?**
ಜಾಗತಿಕವಾಗಿ ಮಾನವ ಹಕ್ಕುಗಳು, ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ, ವರ್ಣಭೇಧ ನೀತಿ ಹಾಗೂ ಭಯೋತ್ಪಾದಕತೆಯಂತಹ ಹಲವಾರು ಸಮಸ್ಯೆಗಳು ಇನ್ನೂ ಹಾಗೆಯೇ ಉಳಿದುಕೊಂಡಿವೆ

೨. **ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನೆಡೆಸುತ್ತಿರುವ ಹೋರಾಟವನ್ನು ವಿವರಿಸಿ**
ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರ ಪ್ರತಿಪಾದಿಸುತ್ತಾ ಬಂದಿದೆ. ಭಾರತ ತನ್ನ ಸಂವಿಧಾನದಲ್ಲಿಯೂ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ ಹಾಗೂ ಈ ವಿಚಾರದ ಬಗೆಗೆ ಬೆಳಕು ಚೆಲ್ಲಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿಯೂ ವಿಶ್ವದಾದ್ಯಂತ ಮಾನವ ಹಕ್ಕುಗಳು ಸುರಕ್ಷಿತವಾಗಿರಬೇಕೆಂಬುದನ್ನು ಭಾರತ ಸಮರ್ಥಿಸುತ್ತಾ ಬಂದಿದೆ. ಗುಲಾಮಗಿರಿ ಪದ್ಧತಿ, ಮಾನವರ ಮಾರಾಟ, ಮಕ್ಕಳ ದುಡಿಮೆ, ಮಹಿಳಾ ಶೋಷಣೆ ಇತ್ಯಾದಿಗಳನ್ನು ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ನಿಷೇಧಿಸಿದೆ.

೩. **ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವುವು?**
ಒಂದು ಪ್ರಸಿದ್ಧ ಮಾತಿದೆ 'ಅಣ್ವಸ್ತ್ರಯುಗದಲ್ಲಿ ನಾವು ಯುದ್ಧವನ್ನು ಕೊನೆಗಾಣಿಸಬೇಕು; ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ'. ಪ್ರಚಲಿತ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿ ಒಂದು ಭಯಾನಕ ವಿದ್ಯಮಾನ ಎಂಬುದಾಗಿ ಕಾಣಿಸುತ್ತದೆ. ನಿಶ್ಶಸ್ತ್ರೀಕರಣ ವಿಶ್ವದ ಇಂದಿನ ಹಾಗೂ ಮುಂದಿನ ಉಳಿವಿಗೆ ಅತ್ಯಗತ್ಯ ಎನಿಸುತ್ತದೆ. ಶಸ್ತ್ರಾಸ ್ತ್ರಗಳ ತೀವ್ರ ಪೈಪೋಟಿಯನ್ನು ನಿಲ್ಲಿಸಲು ನಿಶ್ಶಸ್ತ್ರೀಕರಣವೊಂದೇ ಪ್ರಮುಖ ಉಪಾಯ ಎಂದು ಭಾಸವಾಗುತ್ತಿದೆ. ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಾದ್ಯಂತ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧದ ಸಂಭವ ತಲೆದೋರುತ್ತದೆ. ಈ ಎಲ್ಲಾ ಅನಿಷ್ಟಗಳನ್ನು ದೂರವಿರಿಸುವ ದೃಷ್ಟಿಯಿಂದ ನಿಶ್ಶಸ್ತ್ರೀಕರಣ ಪ್ರಚಲಿತ ಜಗತ್ತಿನ ಅವಶ್ಯಕತೆ ಎಂಬುದಾಗಿ ಭಾವಿಸಲ್ಪಡುತ್ತದೆ.

೪. **ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು? ಈ ರೀತಿ ಹಿಂದುಳಿಯುವಿಕೆಯ ಕಾರಣಗಳಾವುವು?**
ವಿಶ್ವ ಕುಟುಂಬದ ಸದಸ್ಯರಲ್ಲಿ ಪರಸ್ಪರ ಆರ್ಥಿಕ ಅಸಮಾನತೆಯ ಒಂದು ಪ್ರಮುಖ ಸಮಸ್ಯೆಯಿದೆ. ಇದು ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವದ ಒಂದು ಐತಿಹಾಸಿಕ ನೆಲೆಯ ಬಳುವಳಿ ಎಂದೂ



Use e-papers for save trees-InyaTrust.com

ಭಾವಿಸಬಹುದಾಗಿದೆ. ಐರೋಪ್ಯ ರಾಷ್ಟ್ರಗಳು ಆಫ್ರಿಕಾ, ಏಷ್ಯಾ ಹಾಗೂ ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದವು. ಈ ಸಾಮ್ರಾಜ್ಯ ಶಾಹಿತ್ವದ ಕೈಕೆಳಗೆ ಇದ್ದಂತಹ ರಾಷ್ಟ್ರಗಳು ಆರ್ಥಿಕವಾಗಿ ತೀರಾ ಹಿಂದುಳಿದವು. ೨೦ನೇ ಶತಮಾನದ ಪೂರ್ವ ಭಾಗದವರೆಗೆ ಅವರ ಪ್ರಗತಿ ತೀರಾ ಕುಂಠಿತವಾಗಿತ್ತು. ಸ್ವಾತಂತ್ರ್ಯಾನಂತರ ಏಷ್ಯಾ ಹಾಗೂ ಆಫ್ರಿಕಾದ ರಾಷ್ಟ್ರಗಳು ಅಭಿವೃದ್ಧಿ ಸಾಧಿಸಲು ಪ್ರಯತ್ನಿಸಿದವು. ಆದರೆ ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಆರ್ಥಿಕ ಅಡಚಣೆ ತಲೆದೋರಿತ್ತು. ಹಾಗಾಗಿ ವಿದೇಶೀ ಆರ್ಥಿಕ ಸಹಕಾರ ಇವುಗಳಿಗೆ ತೀರಾ ಅವಶ್ಯಕ ಎಂದು ಕಂಡು ಬಂತು.

**೫. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರನಾ ಆರ್ಥಿಕ ಸುಧಾರಣಾ ಕ್ರಮಗಳಾವುವು?**

ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಭಾರತ ಅಲಿಪ್ತ ನೀತಿಯನ್ನು ಜಗತ್ತಿನಲ್ಲಿ ಮುಂದುವರಿಸಿತು. ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು. ತನ್ಮೂಲಕ ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು. ಅದರೊಂದಿಗೇ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು.

**೬. ವರ್ಣಭೇದ ನೀತಿಯು ಮಾನವತ್ವವಾದಕ್ಕೆ ವಿರೋಧವಾದುದು ಇದನ್ನು ನಿಮ್ಮ ದೃಷ್ಟಿಕೋನದಲ್ಲಿ ಸಮರ್ಥಿಸಿ.**

ಮಾನವರೆಲ್ಲರೂ ಹುಟ್ಟಿನಿಂದ ಸರಿಸಮಾನರು ಮತ್ತು ಸ್ವತಂತ್ರರು, ಜಾತಿ, ವರ್ಣ, ಲಿಂಗ, ಭಾಷೆ, ಧರ್ಮ,ಆಸ್ತಿ ಅಥವಾ ಹುಟ್ಟಿನಿಂದ ಯಾವ ಭೇದ ಬಾವನೆಗಳಿಗೆ ಗುರಿಯಾಗದೆ ಸಮಾನ ಹಕ್ಕು ಹಾಗೂ ಗೌರವಗಳಿಗೆ ಪಾತ್ರರಾಗಿರುವುದರಿಂದ ಈ ಹಕ್ಕುಗಳನ್ನು ಯಾರೂ ಕಿತ್ತುಕೊಳ್ಳುವಂಇಲ್ಲ.ಎಲ್ಲಾ ಮಾನವ ಜೀವಿಗಳು ಹುಟ್ಟಿನಿಂದ ಘನತೆ ಮತ್ತು ಹಕ್ಕುಗಳಲ್ಲಿ ಸಮಾನ ಮತ್ತು ಪ್ರತಿಯೊಬ್ಬನಿಗೂ ಯಾವುದೇ ತರಹದ ತಾರತಮ್ಯ ಇಲ್ಲದ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಹೊಂದುವ ಕಾನೂನುವುಳ್ಳವನಾಗಿರುವುದರಿಂದ ವರ್ಣಭೇದ ನೀತಿಯು ಮಾನವತವಾದಕ್ಕೆ ವಿರುದ್ಧವಾದುದೆಂದು ಹೇಳಬಹುದು.

**೭. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು?**

ಭಯೋತ್ಪಾದಕತೆಯನ್ನು ಭೀತಿವಾದ ಅಥವಾ ಉಗ್ರಗಾಮಿತ್ವ ಎಂದೂ ಕರೆಯಬಹುದು. ಇದು ಒಂದು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ. ರಾಜಕೀಯ, ಧಾರ್ಮಿಕ, ಅಥವಾ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಗುರಿಹೊಂದಿದ ಭಯೋತ್ಪಾದಕತೆಯು ವ್ಯಕ್ತಿಗಳಿಗೆ ಮತ್ತು ಸೊತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ. ಅದರಿಂದಲೂ ಹೆಚ್ಚಾಗಿ ಉಗ್ರಗಾಮಿತ್ವ ಮಾನಸಿಕ ವೇದನೆಯನ್ನು ನೀಡುತ್ತದೆ. ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ.

**೮. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?**

ಭಾರತ ಭಯೋತ್ಪಾದಕತೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತದೆ. ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಯೋತ್ಪಾದಕತೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿವೆ ಹಾಗೂ ತನ್ಮೂಲಕ ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಯತ್ನಿಸುತ್ತಿದೆ. ಭೀತಿವಾದಿಗಳನ್ನು ನಿಗ್ರಹಿಸಲು ವಿಶೇಷ ಪರಿಣತಿ ಪಡೆದ ಪಡೆಗಳನ್ನು ರಚಿಸಲಾಗುತ್ತಿದೆ. ಕೆಲವೊಮ್ಮೆ ರಕ್ಷಣಾ ಪಡೆಗಳನ್ನು ಈ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಗೆ ಬಳಸಲಾಗುತ್ತದೆ. ಶಾಂತಿಪ್ರಿಯ ರಾಷ್ಟ್ರವೆನಿಸಿದ ನಾವು ಭಯೋತ್ಪಾದಕತೆಯನ್ನು ವಿರೋಧಿಸುತ್ತೇವೆ.



Use e-papers for save trees-InyaTrust.com

# ಅಧ್ಯಾಯ–೫
# ಜಾಗತಿಕ ಸಂಸ್ಥೆಗಳು

**ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

೧. ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ __________

೨. ವಿಶ್ವಸಂಸ್ಥೆಯ ಮುಖ್ಯ ಕಚೇರಿ __________ ನಗರದಲ್ಲಿದೆ.

೩. ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ __________

೪. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಅವಧಿ __________ ವರ್ಷಗಳು

೫. ಅಂತರರಾಷ್ಟ್ರೀಯ ನ್ಯಾಯಾಲಯದವು __________ ಎಂಬಲ್ಲಿ ಇದೆ.

೬. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರು __________ .

೭. ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾದ ವರ್ಷ __________.

೮. ಸಾರ್ಕ್ ಸ್ಥಾಪನೆಯಾದ ವರ್ಷ __________

**ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕು ಗುಂಪುಗಳಲ್ಲಿ ಚರ್ಚಿಸಿ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**೧. ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರ ಹೆಸರುಗಳನ್ನು ತಿಳಿಸಿ**

ಇಂಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೆರಿಕಾದ ಪ್ರಾಂಕ್ಲಿನ್ ಡಿ ರೂಸ್ ವೆಲ್ಟ್

**೨. ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಾವುವು?**

೧) ಸಾಮಾನ್ಯ ಸಭೆ
೨) ಭದ್ರತಾ ಸಮಿತಿ
೩) ಆರ್ಥಿಕ ಹಾಗೂ ಸಾಮಾಜಿಕ ಸಮಿತಿ
೪) ದತ್ತಿ ಸಮಿತಿ (ಟ್ರಸ್ಟಿಶಿಪ್ ಕೌನ್ಸಲ್)
೫) ಅಂತರರಾಷ್ಟ್ರೀಯ ನ್ಯಾಯಾಲಯ
೬) ಸಚಿವಾಲಯ

**೩. ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳು ಯಾವುವು?**

ಅಮೆರಿಕಾ ಸಂಯುಕ್ತ ಸಂಸ್ಥಾನ, ರಷ್ಯಾ, ಬ್ರಿಟನ್, ಫ್ರಾನ್ಸ್ ಹಾಗೂ ಚೈನಾ ಖಾಯಂ ಸದಸ್ಯತ್ವ ಹೊಂದಿದ ರಾಷ್ಟ್ರಗಳು

**೪. ವಿಶ್ವ ಆರೋಗ್ಯ ಸಂಸ್ಥೆಯು ಕಾರ್ಯ ಸೂಚಿಯಲ್ಲಿರುವ ವಿಷಯಗಳಾವುವು?**

ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕತೆಯ ಕೊರತೆ ಮುಂತಾದ ವಿಷಯಗಳು ಈ ಸಂಸ್ಥೆಯ ಕಾರ್ಯ ಸೂಚಿಯಲ್ಲಿದೆ.



Use e-papers for save trees-InyaTrust.com

**೫. ಅಂತರ ರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳನ್ನು ಪಟ್ಟಿ ಮಾಡಿ**

ಕಾರ್ಮಿಕ ವರ್ಗದ ಸಾಮಾಜಿಕ ಭದ್ರತೆ, ಆರೋಗ್ಯ ಸಂರಕ್ಷಣೆ, ಉತ್ತಮ ಜೀವನ ಮಟ್ಟ ಇತ್ಯಾದಿ ವಿಚಾರಗಳು ಈ ಸಂಸ್ಥೆಯ ಕಾರ್ಯ ವ್ಯಾಪ್ತಿಗೆ ಸೇರುತ್ತದೆ. ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ, ಕನಿಷ್ಠ ವೇತನ ಜಾರಿ, ವಸತಿ ನಿರ್ಮಾಣ, ಇತ್ಯಾದಿ ವಿಚಾರಗಳು ಈ ಸಂಸ್ಥೆಯ ಕಾರ್ಯ ಪರಿಧಿಯೊಳಗೆ ಸೇರಿದೆ.

**೬. SAARಅ ನ್ನು ವಿಸ್ತರಿಸಿ.**

**South Asian Association of Regional co-operation**

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳ ಗುಂಪಿನಲ್ಲಿ ಚರ್ಚಿಸಿ ಆದರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**೧. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿಮಾಡಿರಿ.**

೧) ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು;
೨) ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು,
೩) ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು,
೪) ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತರರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡು ಹುಡುಕುವುದು.
೫) ಅಂತರರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು
೬) ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

**೨. ಸಾಮಾನ್ಯ ಸಭೆಯ ರಚನೆಯನ್ನು ವಿವರಿಸಿ.**

ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗ ಸಂಸ್ಥೆ ಇದಾಗಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವು ೫ ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ. ಆದರೆ ಅವರಿಗೆ ಒಂದು ಮತದ ಹಕ್ಕು ಮಾತ್ರ ಇರುತ್ತದೆ. ಈ ಸಾಮಾನ್ಯ ಸಭೆ ತನ್ನ ಪ್ರಥಮ ಅಧಿವೇಶನದಲ್ಲಿಯೇ ಒಂದು ವರ್ಷದ ಅವಧಿಗೆ ಓರ್ವ ಅಧ್ಯಕ್ಷನನ್ನು ಆರಿಸುತ್ತದೆ. ಅದೇ ರೀತಿ ೧೭ ಉಪಾಧ್ಯಕ್ಷರನ್ನು ಹಾಗೂ ೭ ಸ್ಥಾಯಿ ಸಮಿತಿಗಳಿಗೆ ಏಳು ಮಂದಿ ಅಧ್ಯಕ್ಷರನ್ನೂ ಇಲ್ಲಿ ಆರಿಸಲಾಗುತ್ತದೆ.

**೩. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳಾವುವು?**

ಅಂತರರಾಷ್ಟ್ರೀಯ ವಲಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಹಾಗೂ ಇನ್ನಿತರ ಸಂಬಂಧಿತ ವಿಷಯಗಳ ಅಧ್ಯಯನ ಹಾಗೂ ವರದಿ ಮಾಡುವಿಕೆ. ನಿರಾಶ್ರಿತರ ಬಗ್ಗೆ, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ಮುಂತಾದ ಹಲವಾರು ವಿಚಾರಗಳು ಈ ಸಮಿತಿಯ ಕಾರ್ಯವ್ಯಾಪ್ತಿಯೊಳಗೆ ಬರುತ್ತದೆ. ಮಾನವ ಹಕ್ಕುಗಳ ಬಗ್ಗೆ ಹಾಗೂ ಮೂಲಭೂತ ಸ್ವಾತಂತ್ರ್ಯಗಳ ಬಗೆಗೂ ಈ ಸಮಿತಿಯು ಶಿಫಾರಸ್ಸು ಮಾಡುತ್ತದೆ. ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವುದು. ವಿಶೇಷ ಪ್ರಾವಿಣ್ಯತೆಯ ಅಂಗ ಸಂಸ್ಥೆಗಳಾದ ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ಐ.ಎಲ್.ಒ), ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಒ), ಜಾಗತಿಕ ಆರೋಗ್ಯ ಸಂಸ್ಥೆ (ಡಬ್ಲ್ಯೂ ಹೆಚ್.ಒ)ಮುಂತಾದವುಗಳ ಕಾರ್ಯಗಳನ್ನು ಸಮನ್ವಯ ಮಾಡುವುದು.



Use e-papers for save trees-InyaTrust.com

**೪. 'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ' ಈ ಹೇಳಿಕೆಯನ್ನು ಸಮರ್ಥಿಸಿ.**

ವಿಶ್ವಸಂಸ್ಥೆ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ. ಸುಯೆಜ್‌ಕಾಲುವೆ ಬಿಕ್ಕಟ್ಟು, ಇರಾನ್ ಸಂಘರ್ಷ, ಇಂಡೋನೇಷ್ಯಾ, ಕಾಶ್ಮೀರ, ಪ್ಯಾಲೆಸ್ಟೈನ್, ಕೊರಿಯಾ, ಹಂಗೇರಿ, ಕಾಂಗೋ, ಸೈಪ್ರೆಸ್, ಅರಬ್–ಇಸ್ರೇಲ್, ನಮೀಬಿಯಾ, ಅಫಘಾನಿಸ್ತಾನ ಇತ್ಯಾದಿ ವಿವಾದಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆ ಶ್ರಮಿಸಿದೆ. ಅಣ್ವಸ್ತ್ರ ಹಾಗೂ ಸಾಂಪ್ರದಾಯಿಕ ನಿಶ್ಶಸ್ತ್ರೀಕರಣದ ನಿಟ್ಟಿನಲ್ಲಿಯೂ ವಿಶ್ವಸಂಸ್ಥೆ ನಿರಂತರ ಪ್ರಯತ್ನ ಮಾಡುತ್ತಿದೆ. ಇದೀಗ ಶೀತಲ ಸಮರದ ಕಾಲಘಟ್ಟ ಮುಗಿದಿದ್ದು, ವಿಶ್ವ ಶಾಂತಿಯ ನೆಲೆಯಲ್ಲಿ ವಿಶ್ವ ಸಂಸ್ಥೆಯ ಪ್ರಭಾವೀ ಕಾರ್ಯಕ್ಕೆ ಉತ್ತಮ ವಲಯ ನಿರ್ಮಾಣಗೊಂಡಿದೆ.

**೫. ಯುನೆಸ್ಕೋದ ಕಾರ್ಯಗಳಾವುವು?**

ಇದು ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿ ಮುಂತಾದುವುಗಳನ್ನು ಪ್ರೋತ್ಸಾಹಿಸಲು ಉದ್ದೇಶಿಸಿರುವ ಪ್ರಾವೀಣ್ಯತೆಯ ಸಂಸ್ಥೆ, ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರಗಳು ಹಾಗೂ ಪರಿಸರ ವಿಜ್ಞಾನದ ಬಗೆಗೆ ಇದು ಕಾರ್ಯೋನ್ಮುಖವಾಗುತ್ತದೆ. ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರದ ನಿಟ್ಟಿನಲ್ಲಿ ಇದು ಸರ್ಕಾರಗಳಿಗೆ ಹಾಗೂ ಸರ್ಕಾರೇತರ ಸ್ವಯಂ ಸೇವಾಸಂಸ್ಥೆಗಳಿಗೆ ಸಹಾಯ ನೀಡುತ್ತದೆ.

**೬. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳ ಪರಿಹಾಕಿದಲ್ಲಿ ಐ. ಎಮ್. ಎಫ್‌ನ ಪಾತ್ರವನ್ನು ವಿಶ್ಲೇಷಿಸಿ.**

೧೯೪೫ರಲ್ಲಿ ಆರಂಭಗೊಂಡ ಈ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ೧೯೪೭ರ ಬಳಿಕ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಿಸಿತು. ಇದರ ಮುಖ್ಯ ಕಛೇರಿ ಅಮೆರಿಕಾದ ವಾಷಿಂಗ್‌ಟನ್‌ನಲ್ಲಿದೆ. ಇದು ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತದೆ. ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ, ಆರ್ಥಿಕ ಸ್ಥಿರತೆ ಹಾಗೂ ಉತ್ತಮ ವಿದೇಶೀ ಪಾವತಿ ಸಮತೋಲನವನ್ನು ಕಾಯ್ದುಕೊಳ್ಳಲು ಇದು ಸಹಕರಿಸುತ್ತದೆ. ಇದರಲ್ಲಿ ಆಡಳಿತ ಮಂಡಳಿ, ಕಾರ್ಯನಿರ್ವಹಣಾ ನಿರ್ದೇಶಕ ಮಂಡಳಿ ಹಾಗೂ ಆಡಳಿತ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇದರ ಕಾರ್ಯ ನಿರ್ವಹಣೆಯ ಗುಣಮಟ್ಟ ಹಾಗೂ ಪಾರದರ್ಶಕತೆ ಸಾಕಷ್ಟು ಮನ್ನಣೆಯನ್ನು ಪಡೆದಿದೆ. ವಿವಿಧ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಇದೊಂದು ಕೇಂದ್ರ ಬ್ಯಾಂಕು ಎಂಬುದಾಗಿ ಇದನ್ನು ಕರೆಯಬಹುದಾಗಿದೆ. ಆರ್ಥಿಕವಾಗಿ ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧವನ್ನು ಬೆಸೆಯುವಲ್ಲಿ ಇದು ಪೂರಕ ಪಾತ್ರ ವಹಿಸುತ್ತದೆ.

**೭. ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳನ್ನು ಪಟ್ಟಿಮಾಡಿರಿ.**

ಪ್ರಜಾತಂತ್ರವನ್ನು ಎತ್ತಿ ಹಿಡಿಯುವುದು, ಸ್ವಾತಂತ್ರ್ಯದ ಸಂರಕ್ಷಣೆ, ಬಡತನ ನಿರ್ಮೂಲನ, ವಿಶ್ವಶಾಂತಿ ನೆಲೆಗೊಳಿಸುವಿಕೆ, ಕ್ರೀಡೆ, ವಿಜ್ಞಾನ, ಹಾಗೂ ಕಲೆಯ ಬೆಳವಣಿಗೆಗೆ ಹಾಗೂ ಆ ಬಗೆಗೆ ಸಂಬಂಧಗಳ ವೃದ್ಧಿ– ಇವು ಈ ಸಂಸ್ಥೆಯ ಪ್ರಮುಖ ಉದ್ದೇಶಗಳಾಗಿವೆ.

**೮. ಯುರೋಪಿಯನ್ ಯುನಿಯನ್ ಸಂಸ್ಥೆಯನ್ನು ವಿವರಿಸಿ.**

ಯುರೋಪಿಯನ್ ಯೂನಿಯನ್ ಸಂಸ್ಥೆ ೨೭ ಯುರೋಪಿನ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಸಂಸ್ಥೆಯಾಗಿದೆ. ಮ್ಯಾಸ್ಟ್ರಿಚ್ ಎಂಬಲ್ಲಿ ಯುರೋಪಿಯನ್ ಯೂನಿಯನ್ ಒಪ್ಪಂದದ ಅನುಗುಣವಾಗಿ ೧೯೯೨ರಲ್ಲಿ ಇದು ಉದಯವಾಯಿತು. ಇದು ಸದಸ್ಯ ರಾಷ್ಟ್ರಗಳ ಮಧ್ಯೆ ಸಮಾನ ಏಕ ಮಾರುಕಟ್ಟೆ, ಒಂದೇ



Use e-papers for save trees-InyaTrust.com

ಚಲಾವಣೆಯ ಕರೆನ್ಸಿ, ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಡುತ್ತದೆ.ಇದರಲ್ಲಿನ ಮುಖ್ಯ ಅಂಗ ಸಂಸ್ಥೆಗಳೆಂದರೆ (೧) ಸಮಿತಿ (೨) ಆಯೋಗ, (೩) ಯುರೋಪಿನ ಸಂಸತ್ತು, ಹಾಗೂ (೪) ಯುರೋಪಿನ ನ್ಯಾಯಾಲಯ. ಈ ಯುರೋಪಿಯನ್ ಯೂನಿಯನ್ ಒಂದು ಸಂಯುಕ್ತ ರಾಜ್ಯವನ್ನು ಹೋಲುವಂತಿದೆ. ಇದರ ಪ್ರತಿಪಾದಕರು ಹೇಳುವಂತೆ ಈ ಸಂಸ್ಥೆ ಶಾಂತಿ ಮತ್ತು ಪ್ರಜಾತಂತ್ರಕ್ಕಾಗಿ ಕಾರ್ಯ ನಿರ್ವಹಿಸುತ್ತದೆ. ಈ ಯುರೋಪಿಯನ್ ಯೂನಿಯನ್ ಈ ಹಿಂದಿನ ಯುರೋಪಿಯನ್ ಇಕಾನಾಮಿಕ್ ಕಮ್ಯುನಿಟೀ (ಇ.ಇ.ಸಿ)ಯ ವಾರಸುದಾರ ಸಂಸ್ಥೆಯಂತಿದೆ. ಇದರ ಸದಸ್ಯ ರಾಷ್ಟ್ರಗಳು ಸ್ವಯಂ ಇಚ್ಛೆಯಿಂದ ತಮ್ಮ ಸಾರ್ವಭೌಮ ಅಧಿಕಾರದ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿದ್ದಾರೆ.

೯. **ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಮುಖ ಉದ್ದೇಶಗಳು ಯಾವುವು?**

ಎ) ಕೃಷಿ ಕ್ಷೇತ್ರದ ಅಭಿವೃದ್ಧಿ

(ಬಿ) ಪೌಷ್ಟಿಕ ಆಹಾರ ಒದಗಿಸುವಿಕೆ

(ಸಿ) ಹಸಿವೆಯಿಂದ ಜಾಗತಿಕ ಜನಸಮುದಾಯದ ವಿಮುಕ್ತಿ

(ಡಿ) ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟದ ಸುಧಾರಣೆ.

೧೦. **ಐ.ಬಿ.ಆರ್.ಡಿ ಯ ಕಾರ್ಯಗಳನ್ನು ತಿಳಿಸಿ.**

ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ ಅಭಿವೃದ್ಧಿಗಾಗಿ ಅವಶ್ಯಕವಿರುವ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಈ ಬ್ಯಾಂಕ್ ಅಗಾಧ ಮೊತ್ತದ ಸಾಲ ನೀಡುತ್ತದೆ.

ಇದು ವಿಶ್ವ ವ್ಯಾಪಾರ ಹಾಗೂ ವಿದೇಶೀ ವಿನಿಮಯ ಪಾವತಿ ಸಮತೋಲನಕ್ಕೆ ಸಹಾಯ ಮಾಡುತ್ತದೆ.

ಎಲ್ಲಾ ಪ್ರಗತಿಪರ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಸಹಾಯ ಈ ಬ್ಯಾಂಕ್ ನೀಡುತ್ತದೆ.

೧೧. **ಭದ್ರತಾ ಸಮಿತಿಯ ಕಾರ್ಯಗಳೇನು?**

ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕಾಗಿ ಭದ್ರತಾ ಸಮಿತಿ ಯತ್ನಿಸುತ್ತದೆ. ಅವಶ್ಯಕವಿದ್ದರೆ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯನ್ನು ಅಂತರರಾಷ್ಟ್ರೀಯ ಶಾಂತಿ ಹಾಗೂ ಸುವ್ಯವಸ್ಥೆಗೆ ನಿಯೋಜಿಸುತ್ತದೆ. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಇದು ನೇಮಕ ಮಾಡುತ್ತದೆ ಹಾಗೂ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

೧೨. **'ಸಾರ್ಕ್' ಸದಸ್ಯತ್ವ ಹೊಂದಿದ ರಾಷ್ಟ್ರಗಳು ಯಾವುವು?**

ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್‌ಡೀವ್ಸ್, ಭೂತಾನ್ ಹಾಗೂ ಅಫಘಾನಿಸ್ತಾನ.

೧೩. **ಆಸಿಯನ್ ಮುಖ್ಯ ಉದ್ದೇಶಗಳೇನು?**

ಈ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ, ಸಾಮಾಜಿಕ ಬೆಳವಣಿಗೆಗೆ ಯತ್ನ ಹಾಗೂ ಸಾಂಸ್ಕೃತಿಕ ಪ್ರಗತಿ ಸಾಧಿಸುವಿಕೆ ಮತ್ತು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ, ವೈಜ್ಞಾನಿಕ, ಆಡಳಿತಾತ್ಮಕ ಇತ್ಯಾದಿ ಕ್ಷೇತ್ರಗಳಲ್ಲಿ ಪರಸ್ಪರ ನೆರವು ಹಾಗೂ ಸಹಭಾಗಿತ್ವ ಹೊಂದುವಿಕೆ ಇವು ಆಸಿಯನ್ ಮುಖ್ಯ ಉದ್ದೇಶಗಳು.



Use e-papers for save trees-InyaTrust.com

# ಸಮಾಜ ಶಾಸ್ತ್ರ



Use e-papers for save trees-InyaTrust.com

# ಅಧ್ಯಾಯ : 1

# ಸಾಮಾಜಿಕ ಸ್ತರ ವ್ಯವಸ್ಥೆ

- ಜನರನ್ನು ಇಲ್ಲವೇ ಸಮೂಹಗಳನ್ನು ವಿವಿಧ ಸ್ತರಗಳನ್ನಾಗಿ ಅಥವಾ ಶ್ರೇಣಿಗಳನ್ನಾಗಿ ವರ್ಗೀಕರಿಸುವ ಪದ್ಧತಿಗೆ ಸಾಮಾಜಿಕ ಸ್ತರ ವ್ಯವಸ್ಥೆ ಸಾಮಾಜಿಕ ವ್ಯವಸ್ಥೆ ಎನ್ನಬಹುದು.
- ಕೆಲವು ಭಿನ್ನತೆಗಳ ಕಾರಣದಿಂದ ಸಮಾಜದಲ್ಲಿ ವೈವಿಧ್ಯಮಯ ವೃತ್ತಿಗಳಿದ್ದು ಸಮಾಜದ ವಿವಿಧ ಕಾರ್ಯ ಮತ್ತು ಪಾತ್ರಗಳನ್ನು ನಿರ್ವಹಿಸುವುದು ಸಾಧ್ಯವಾಗಿದೆ.
- ಜಗತ್ತಿನ ಎಲ್ಲ ಸಮಾಜಗಳಲ್ಲೂ ಭಿನ್ನತೆಯಿಂದ ಕೂಡಿದ ಜನಸಮೂಹಗಳನ್ನು ನಾವು ಕಾಣಬಹುದು.
- ಭಿನ್ನತೆಗಳೊಂದಿಗೆ ಪೂರ್ವಾಗ್ರಹಗಳನ್ನು ಕಾಣಬಹುದು.
- ಪೂರ್ವಾಗ್ರಹ ಎಂದರೆ ವ್ಯಕ್ತಿ ಇಲ್ಲವೇ ಸಮೂಹ, ಸಮಾಜದ ದುರಾಭಿಪ್ರಾಯದ ಭಾವನೆಯನ್ನು ಹೊಂದಿರುವುದು ಎಂದರ್ಥ.
- ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗಾಗಿದ್ದು ಇದರ ನಿವಾರಣೆಗಾಗಿ ಸ್ವತಂತ್ರ ಭಾರತವು ವಿಶೇಷ ಆಸಕ್ತಿ ವಹಿಸಿ ಎಲ್ಲ ನಾಗರಿಕರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಲು ಶ್ರಮಿಸುತ್ತಾ ಬಂದಿದೆ.

**I ಬಹುಆಯ್ಕೆಯ ಪ್ರಶ್ನೆಗಳು:**

**1. ಸಂಪತ್ತು ಮತ್ತು ಸೌಕರ್ಯಗಳು ಕೆಲವರ ಕೈಯಲ್ಲಿ ಮಾತ್ರ ಕ್ರೋಢೀಕರಣಗೊಂಡರೆ ______ ಉಂಟಾಗುತ್ತದೆ.**
ಅ) ನಿಶ್ಯಸ್ತ್ರೀಕರಣ ಆ)ಸಮಾನ ಅವಕಾಶ **ಇ)ತಾರತಮ್ಯ** ಈ)ಉದ್ಯೋಗ ಅವಕಾಶ

**2. ಅಮೇರಿಕಾದಲ್ಲಿ ಕಪ್ಪು ಜನರು ಬಿಳಿಯ ಜನರ ಶಾಲೆಗಳಿಗೆ ಹೋಗಲು ಅವಕಾಶವಿರಲಿಲ್ಲ.ಇದರಿಂದ ವ್ಯವಸ್ಥೆಯಲ್ಲಿ __________ ಉಂಟಾಯಿತು.**
ಅ)ಆರ್ಥಿಕ ಸರ್ತವಿನ್ಯಾಸ **ಆ)ಸಾಮಾಜಿಕ ಸ್ತರವಿನ್ಯಾಸ** ಇ)ಧಾರ್ಮಿಕ ಸ್ತರವಿನ್ಯಾಸ ಈ)ರಾಜಕೀಯ ಸ್ತರವಿನ್ಯಾಸ

**3. ಅಸ್ಪೃಶ್ಯತೆಯನ್ನು 'ಹಿಂದೂ ಸಮಾಜಕ್ಕಕೆ ಹತ್ತಿದ ಕಳಂಕ' ಎಂದು ಅಭಿಪ್ರಾಯ ಪಟ್ಟವರು**
**ಅ) ಗಾಂಧೀಜಿ** ಆ)ಜ್ಯೋತಿಭಾ ಫುಲೆ ಇ)ವಿವೇಕಾನಂದ ಈ)ಅಂಬೇಡ್ಕರ್

**4. ಜಾತಿಯ ಸ್ತರವಿನ್ಯಾಸದಲ್ಲಿ _____________ ಸಮಾಜವು ಕಡೆಯ ಹಂತವೆಂದು ಪರಿಗಣಿಸತ್ತು**
ಅ)ನಿರುದ್ಯೋಗವನ್ನು ಆ) ಅನಕ್ಷರತೆಯನ್ನು ಇ)ಅಂಧಾನುಕರಣೆಯನ್ನು **ಈ)ಅಸ್ಪೃಶ್ಯರನ್ನು**

**5. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೆ ಬಂದ ವರ್ಷ**
ಅ)1950 **ಆ)1955** ಇ)1960 ಈ)1976 –

**6. ಸಂವಿಧಾನದ __________ನೇ ವಿಧಿಯು ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿದೆ.**
ಅ)15 ಆ)16 **ಇ)17** ಈ)38

7. **ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ತಿದ್ದುಪಡಿ ಮಾಡಿ 1976 ರಲ್ಲಿ __________ಕಾಯ್ದೆ ಎಂದು ಮಾರ್ಪಾಡುಗೊಳಿಸಲಾಯಿತು.**
**ಅ)ನಾಗರಿಕ ಹಕ್ಕುಗಳ ಸಂರಕ್ಷಣಾ** ಆ)ಉದ್ಯೋಗ ರಕ್ಷಣೆ ಇ)ಕರ್ತವ್ಯ ರಕ್ಷಣೆ ಈ)ಶಾಂತಿ ರಕ್ಷಣೆ



Use e-papers for save trees-InyaTrust.com

**8.** **_________ಎಂಬ ಸಾಮಜಿಕ ಪಿಡುಗನ್ನು ಹೋಗಲಾಡಿಸಲು ,ಜ್ಯೋತಿಭಾ ಫುಲೆ,ವಿವೇಕಾನಂದ,ಅಂಬೇಡ್ಕರ್ ಮೊದಲಾದವರು ತೀವ್ರ ಪ್ರಯತ್ತಪಟ್ಟರು**

ಅ)ಬಡತನ ಆ)ಭ್ರಷ್ಟಾಚಾರ **<u>ಇ) ಅಸ್ಪೃಶ್ಯತೆ</u>** ಈ)ಅನಕ್ಷರತೆ

**9.** **ಕೆಳಜಾತಿಗೆ ಸೇರಿದ ಕೆಲವು ಜನರನ್ನು __________ ಮತ್ತು ಅಸ್ಪೃಶ್ಯರು ಎಂದು ಪರಿಗಣಿಸಲಾಗಿತ್ತು**

ಅ)ಬ್ರಾಹ್ಮಣರು **<u>ಆ)ಶೂದ್ರರು</u>** ಇ)ಕ್ಷತ್ರಿಯರು ಈ)ದ್ರಾವಿಡರು

**II ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿ**

1. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೆ ಬಂದ ವರ್ಷ **<u>1955.</u>**
2. ಅಸ್ಪೃಶ್ಯತೆ 'ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' ಎಂದು ಅಭಿಪ್ರಾಯ ಪಟ್ಟವರು **<u>ಗಾಂಧೀಜಿ</u>**
3. ಸಂವಿಧಾನದ **<u>17ನೇ</u>** ವಿಧಿಯು ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿದೆ.
4. ಮಾನವಕುಲ ತಾನೊಂದೇ ವಲಂ ಎಂದು ಹೇಳಿದವರು **<u>ಪಂಪ</u>**
5. ಸಮಾಜ ಮಾಡಿರುವ ಸ್ತರವಿನ್ಯಾಸದ ಕೆಟ್ಟ ಪರಿಣಾಮಗಳನ್ನು **<u>ಮಕ್ಕಳು</u>** ಅನುಭವಿಸುತ್ತಾರೆ.
6. ಸಾಮಾಜಿಕ ಅಂತರವು ಸಾಮಾಜಿಕ **<u>ಸಂಘರ್ಷಕ್ಕೆ</u>** ಕಾರಣವಾಗುತ್ತದೆ.
7. **<u>330, 332,334 ನೇ</u>** ವಿಧಿಗಳು ರಾಜಕೀಯ ಕ್ಷೇತ್ರದಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಘೋಷಿಸಿವೆ

**III ಹೋಂದಿಸಿ ಬರೆಯಿರಿ**

| | ಅ | ಆ | ಉತ್ತರ |
|---|---|---|---|
| **1.** | **ಪಂಪ** | ಅ)ಸಾಮಾಜಿಕ ಸುಧಾರಕ | **ಊ)ಕನ್ನಡ ಕವಿ** |
| **2.** | **ಜ್ಯೋತಿಭಾಫುಲೆ** | ಆ)1976 | **ಅ)ಸಾಮಾಜಿಕ ಸುಧಾರಕ** |
| **3.** | **ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ** | ಇ) ಅಸ್ಪೃಶ್ಯತಾ ನಿರ್ಮೂಲನೆ | **ಉ)1955** |
| **4.** | **ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ** | ಈ) ಸಮಾನತೆ ಹಕ್ಕು | **ಆ)1976** |
| | | ಉ)1955 | |
| | | ಊ)ಕನ್ನಡ ಕವಿ | |

**IV. ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಿಸಿ.**

**1.** **ಸಾಮಾಜಿಕ ಸ್ತರ ವ್ಯವಸ್ಥೆ ಎಂದರೇನು?**

ಆನರನ್ನು ಆದಾಯ, ಶಿಕ್ಷಣ, ಜಾತಿ ಬಣ್ಣ, ಲಿಂಗ, ಉದ್ಯೋಗ, ಬುದ್ಧಿಶಕ್ತಿ ಮೋದಲಾದವುಗಳ ಆಧಾರದ ಮೇಲೆ ಮೇಲು – ಕೀಳು ಎಂದು ವಿಂಗಡಿಸುವುದಕ್ಕೆ ಸಾಮಾಜಿಕ ಸ್ತರ ವಿನ್ಯಾಸ ಎನ್ನುವರು.

**2.** **ಪೂರ್ವಾಗ್ರಹ ಎಂದರೇನು?**

ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೋಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವ ನೆಯೇ ಪೂರ್ವಾಗ್ರಹ.

**3.** **ಅಸ್ಪೃಶ್ಯತೆ ಎಂದರೇನು?**

ಸಮಾಜದ ಕೆಲವು ಜಾತಿಗಳನ್ನು ಹಲವಾರು ಬಗೆಯ ಅನರ್ಹತೆ ಹಾಗೂ ದೌರ್ಬಲ್ಯಗಳಿಗೆ ಒಳಪಡಿಸಿರುವ ವ್ಯವಸ್ಥೆಯನ್ನು ಅಸ್ಪೃಶ್ಯತೆ ಎನ್ನಲಾಗಿದೆ.



Use e-papers for save trees-InyaTrust.com

4. **ಅಸ್ಪೃಶ್ಯರು ಎಂದರೆ ಯಾರು?**

ಯಾವುದೇ ಬಗೆಯ ಸಂಪರ್ಕ ಹಾಗೂ ಸ್ಪರ್ಶಕ್ಕೂ ಯೋಗ್ಯರಲ್ಲದವರೆಂದು ಪರಿಗಣಿಸಲ್ಪಟ್ಟಿರುವ ಕೆಲವು ಜಾತಿಗಳವರನ್ನು ಅಸ್ಪೃಶ್ಯರು ಎನ್ನಲಾಗಿದೆ.

## V. ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಿಸಿ.

1. **ಅಸ್ಪೃಶ್ಯತಾ ನಿವಾರಣೆಯಲ್ಲಿ ಸಮಾಜ ಸುಧಾರಕರ ಪಾತ್ರವೇನು?**

19ನೇ ಮತ್ತು 20ನೇ ಶತಮಾನಗಳಲ್ಲಿ ಸಮಾಜ ಸುಧಾರಕರಾದ ಸ್ವಾಮಿ ದಯಾನಂದ ಸರಸ್ವತಿ , ಸ್ವಾಮಿ ವಿವೇಕಾನಂದ ಫುಲೇ, ಗಾಂಧೀಜಿ ಹಾಗೂ ಡಾ/ ಅಂಬೇಡ್ಕರ್ ಮುಂತಾದವರು ಅಸ್ಪೃಶ್ಯತೆಯಲ್ಲಿ ಖಂಡಿಸಿದರು. ಮಾನವರೆಲ್ಲರೂ ಸಮಾನರು ಎಂಬ ಸಂದೇಶ ಸಾರಿ ಅಸಮಾನತೆಯ ವಿರುದ್ಧ ಹೋರಾಟ ನಡೆಸಿದರು. ಅಸ್ಪೃಶ್ಯತಾ ನಿವಾರಣೆಯ ಜೊತೆಗೆ ಅಸ್ಪೃಶ್ಯರ ಏಳಿಗೆಗಾಗಿ ಶ್ರಮಿಸಿದರು.

2. **ಸಾಮಾಜಿಕ ಸ್ತರ ವಿನ್ಯಾಸವು ಹೇಗೆ ಉಂಟಾಗಿದೆ ?**

ಸ್ತರ ವಿನ್ಯಾಸವು ಸಮಾಜದೊಂದ ನಿರ್ಮಿಸಲ್ಪಟ್ಟಿದೆ. ಉದಾಹರಣೆಗೆ ಶ್ರೀಮಂತರ ಕುಟುಂಬದಲ್ಲಿ ಜನಿಸಿದ ಮಕ್ಕಳಿಗೆ ಉತ್ತಮವಾದ ಪೌಷ್ಟಿಕ ಆಹಾರ, ಶಾಲೆ, ಉದ್ಯೋಗ ದೊರಕುವ ಅವಕಾಶಗಳು ಹೆಚ್ಚಾಗಿರುತ್ತವೆ. ಆದರೆ ಬಡವರ ಮಕ್ಕಳಿಗೆ ಮಥಲಿನ ಅವಕಾಶಗಳು ಕಡಿಮೆ. ಶ್ರೀಮಂತರು, ಬಡವರು ಎಂದು ಸಮಾಜವು ವರ್ಗೀಕರಣವಾಗುವುದಕ್ಕೆ ಮಕ್ಕಳು ಕಾರಣವಲ್ಲ. ಆದರೆ ಸಮಾಜ ಮಾಡಿರುವ ಸ್ತರ ವಿನ್ಯಾಸದ ಕೆಟ್ಟ ಪರಿಣಾಮಗಳನ್ನು ಶೋಷಿತರು ಅನುಭವಿಸುತ್ತಾರೆ.

3. **ಅಸ್ಪೃಶ್ಯತಾ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು ?**

❖ ಅಸ್ಪೃಶ್ಯದ ಬಗ್ಗೆ ಎಲ್ಲರು ಸಮಾನ ಗೌರವವನ್ನು ಹೊಂದಿರಬೇಕು
❖ ಎಲ್ಲರಿಗು ಸಾಮಾನ್ಯ ಪೂಜಾಸ್ಥಳ ಇರಬೇಕು
❖ ಅಸ್ಪೃಶ್ಯರಿಗೆ ಸರ್ಕಾರದೊಂದ ಬರುವ ಎಲ್ಲ ಸನುಕೂಲಗಳು ದೊರೆಯುವಂತಾಗಬೇಕು
❖ ಅಸ್ಪೃಶ್ಯರ ಬಗ್ಗೆ ಮೇಲು ಜಾತಿಯವರು ಹೋಂದಿರುವ ಧೋರಣೆಗಳು ಬದಲಾಗಬೇಕು
❖ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಬೇಕು

4. **ಸಾಮಾಜಿಕ ಸ್ತರ ವಿನ್ಯಾಸದ ಪರಿಣಾಮವೇನು ?**

❖ ಸಾಮಾಜಿಕ ಸ್ತರ ವಿನ್ಯಾಸದ ವ್ಯವಸ್ಥೆಯು ಅಸಮಾನತೆಯನ್ನು, ಭಿನ್ನತೆಯನ್ನು ಉಂಟು ಮಾಡುತ್ತದೆ
❖ ಕೀಳು ಎಂದು ವರ್ಗೀಕರಿಸಲ್ಪಟ್ಟಿರುವ ಜನರನ್ನು ಅವಮಾನಿಸುತ್ತದೆ
❖ ಉದಾಹರಣೆಗೆ ಕಪ್ಪು ಜನರು ಬಿಳಿಯ ಜನರ ಶಾಲೆಗಳಿಗೆ ಹೋಗುವಂತಿರಲಿಲ್ಲ
❖ ಭಾರತದಲ್ಲಿ ಅಸ್ಪೃಶ್ಯರಿಗೆ ಸಾರ್ವಜನಿಕ ಬಾವಿ ಕೆರೆಯಲ್ಲಿನ ನೀರನ್ನು ಬಳಸಲು ಬಿಡುತ್ತಿರಲಿಲ್ಲ

5. **ಪೂವಾಗ್ರಹದ ಪರಿಣಾಮಗಳೇನು ?**

❖ ಪೂರ್ವಾಗ್ರಹ ಎಂದರೆ ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆ
❖ ಈ ಪೂರ್ವಾಗ್ರಹವು ಧನಾತ್ಮಕವಾಗಿಯೂ ಇರಬಹುದು, ಇಲ್ಲವೇ ಋಣಾತ್ಮಕವಾಗಿಯು ಇತಬಹುದು
❖ ತಾರತಮ್ಯದಿಂದ ಉಂಟಾದಂತಹ ಪೂರ್ವಾಗ್ರಹವು ಅಸಹನೆ, ತಿರಸ್ಕಾರ, ಅಗೌರವ, ದ್ವೇಷ ಮುಂತಾದ ಭಾವನೆಗಳನ್ನು ಬೆಳೆಸಿಕೊಳ್ಳಲು ಆಸ್ಪದ ಮಾಡಿಕೊಡುತ್ತದೆ
❖ ಇದರಿಂದ ಸಾಮಾಜಿಕ ಅಂತರ ಹೆಚ್ಚಿ ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುತ್ತದೆ



Use e-papers for save trees-InyaTrust.com

**6. ಮಾನವರು ಭಿನ್ನತೆಯಿಂದ ಕೂಡಿರಲು ಕಾರಣವೇನು?**

ಸಮಾಜದಲ್ಲಿ ವ್ಯಕ್ತಿಗಳು ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ಪರಸ್ಪರ ಭಿನ್ನರಾಗಿದ್ದಾರೆ. ಅಂತೆಯೇ ರೂಪ, ಎತ್ತರ, ಬಣ್ಣ, ಗುಣ, ದೇಹ ದಾರ್ಢ್ಯತೆ , ಲಿಂಗ ,ಸಾಧನೆ ,ಉದ್ಯೋಗ, ಆಸಕ್ತಿ, ಅಭಿರುಚಿ, ಭಾವನೆಗಳು, ಬುದ್ಧಿಶಕ್ತಿ, ಆದಾಯ, ಉಡುಗೆ–ತೊಡುಗೆ, ಶೈಕ್ಷಣಿಕೆ ಮಟ್ಟ ಮೊದಲಾದ ಅಂಶಗಳಲ್ಲಿ ಜನರು ಏಕರೀತಿಯಿಂದಿರದೆ ಪರಸ್ಪರ ಭಿನ್ನತೆಯಿಂದಿರುವುದನ್ನು ಕಾಣಬಹುದು.

ಈ ಭಿನ್ನತೆಗಳ ಕಾರಣದಿಂದಲೆ ಸಮಾಜದಲ್ಲಿ ಕೃಷಿಕರು, ಶಿಕ್ಷಕರು, ವ್ಯಾಪಾರಿಗಳು , ವಕೀಲರು, ವೈದ್ಯರು ಕಾಲಾಕಾರರು ಮುಂತಾದವರು ವೈವಿಧ್ಯನಯ ವೃತ್ತಿಗಳಲ್ಲಿದ್ದು ಸಮಾಜದ ವಿವಿಧ ಕಾರ್ಯ , ಸ್ಥಾನಮಾನ ಮತ್ತು ಪಾತ್ರಗಳನ್ನು ನಿರ್ವಹಿಸುವುದು ಸಾಧ್ಯವಾಗಿದೆ.

**7. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು ? ವಿವರಿಸಿ.**

- ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ತೊಡೆದುಹಾಕಿದ 1955 ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೊಳಿಸಲಾಯಿತು.
- ಈ ಕಾಯ್ದೆಯಲ್ಲಿ ಕಂಡುಬರುವ ಕೆಲವು ದೋಷಗಳನ್ನು ಸರಿಪಡಿಸಿ 1976 ರಲ್ಲಿ 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂದು ಅದನ್ನು ಮಾರ್ಪಾಡುಗೊಳಿಸಲಾಯಿತು.
- ಈ ಕಾಯ್ದೆಯ ಪ್ರಕಾರ ಅಸ್ಪೃಶ್ಯತಾ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ, ಅಲ್ಲದೆ ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲ ನಾಗರಿಕರಿಗೂ ನೀಡಲಾಗಿದೆ.
- ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ ರಾಜಕೀಯ, ಆರ್ಥಿಕ ಹಾಗೂ ಉದ್ಯೋಗಾವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ.
- 1989 ರ ಶಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಲಿಗೆ ವಹಿಸಿದೆ.
- ಹೀಗೆ ಸ್ವತಂತ್ರ ಭಾರತವು ಅಸ್ಪೃಶ್ಯತೆಯ ನಿವಾರಣೆಗಾಗಿ ವಿಶೇಷ ಆಸಕ್ತಿ ವಹಿಸಿ ಎಲ್ಲ ನಾಗರಿಕರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಲು ಶ್ರಮಿಸುತ್ತಾ ಬಂದಿದೆ.

**8. ಅಸ್ಪೃಶ್ಯತೆ – ಒಂದು ಸಾಮಾಜಿಕ ಪಿಡುಗು ಹೇಗೆ? ವಿವರಿಸಿರಿ.**

ಭಾರತದ ಜನ ಸಮುದಾಯವು ಸಾವಿರಾರು ಜಾತಿ ಸಮೂಹಗಳಲ್ಲಿ ಹಂಚಿ ಹೋಗಿದೆ .ಈ ಜಾತಿಗಳಲ್ಲಿ ಕೆಲವು ಮೇಲ್ ಜಾತಿಗಳು, ಎನಿಸಿಕೊಂಡಿದ್ದರೆ, ಮತ್ತೆ ಕೆಲವು ಕೆಳ ಜಾತಿಗಳು ಎನಿಸಿಕೊಂಡಿದವೆ. ಸೌಲಭ್ಯ ವಂಚಿತ 'ಕೆಳಜಾತಿಗಳು' ಹಲವಾರು ಸಮಸ್ಯೆಗಳಿಗೆ ಸಿಲುಕಿವೆ. ಕೆಳಜಾತಿಗಳಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ದಲಿತ ಜಾತಿಗಳನ್ನು ಕಾಡುತ್ತಿರುವ ಅಸ್ಪೃಶ್ಯತೆಯ ಆಚರಣೆ ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ.



**Use e-papers for save trees-InyaTrust.com**

# ಅಧ್ಯಾಯ – 2
# ದುಡಿಮೆ ಮತ್ತು ಆರ್ಥಿಕ ಜೀವನ

**ಮುಖ್ಯಾಂಶಗಳು**

- ❖ ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಂದ ಆತನಿಗೆ ಆರ್ಥಿಕ ಅಥವಾ ಭೌತಿಕ ರೂಪದ ಪ್ರತಿಫಲ ಸಿಗುವುದಿದ್ದರೆ ಅದನ್ನು ದುಡಿಮೆ ಎನ್ನಬಹುದು.
- ❖ ವ್ಯಕ್ತಿಗಳ ನಡುವಿನ ಹೋಲಿಕೆ, ವ್ಯತ್ಯಾಸಗಳು ಶ್ರಮವಿಭಜನೆ ಮತ್ತು ವರ್ಗಗಳ ಉಗಮಕ್ಕೆ ಕಾರಣವಾಗಿದೆ.
- ❖ ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಶೇಷ ಪರಿಣತಿ, ಕೌಶಲ್ಯ ಹಾಗು ಲಿಂಗ ಭೇದಗಳ ಅಧಾರದ ಮೇಲೆ ಹಂಚಿಕೊಂಡು ಮಾಡುವುದನ್ನು ಶ್ರಮ ವಿಭಜನೆ ಎನ್ನಲಾಗಿದೆ.
- ❖ ದುಡಿಮೆಯಲ್ಲಿ ಕೂಲಿ ಸಹಿತ ಮತ್ತು ಕೂಲಿ ರಹಿತ ದುಡಿಮೆ ಎಂಬ ಎರಡು ವಿಧಗಳಿವೆ.
- ❖ ಅನ್ಯಾನ್ಯ ಬಗೆಯ ಕೂಲಿ, ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲ ನೀಡುವ ದುಡಿಮೆಯ ಚಟುವಟಿಕೆ ಕೂಲಿ ಸಹಿತ ದುಡಿಮೆ.
- ❖ ಯಾವುದೇ ನಿಶಿತ್ಚ ಉದ್ದೇಶವಿಲ್ಲದೇ, ಭೌತಿಕ ಲಾಭದ ದೃಷ್ಟಿಯೂ ಇಲ್ಲದೆ ಮನ: ಸಂತೋಷದ ದೃಷ್ಟಿಯಿಂದ ಮಾನವನು ತೊಡಗುವ ಕ್ರಿಯೆಗಳೇ ಕೂಲಿ ರಹಿತ ದುಡಿಮೆ.
- ❖ ಸ್ತ್ರೀ–ಪುರುಷರಲ್ಲಿ ದುಡಿಮೆಯ ಪ್ರತಿಫಲದ ಹಂಚಿಕೆಯ ಕುರಿತಂತೆ ಬಹಳ ಹಿಂದಿನಿಂದಲೂ ತಾರತಮ್ಯಗಳಿವೆ.
- ❖ ಭಾರತದ ಆರ್ಥಿಕ, ಸಾಮಾಜಿಕ ವ್ಯವಸ್ಥೆಯನ್ನು ಕಾಡುತ್ತಿತುವ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆಯೂ ಒಂದು.
- ❖ ನಿರುದ್ಯೋಗದಲ್ಲಿ ಅರೆನಿರುದ್ಯೋಗ, ಮರೆಮಾಚಿದ ನಿರುದ್ಯೋಗ, ತಾಂತ್ರಿಕ ನಿರೊದ್ಯೋಗ, ಚಕ್ರೀಯ ನಿರುದ್ಯೋಗ, ಐಚ್ಛಿಕ ನಿರುದ್ಯೋಗ, ಶಿಕ್ಷಿತ ಮತ್ತು ಅಶಿಕ್ಷಿತ ನಿರುದ್ಯೋಗ ಮುಂತಾದ ಪ್ರಕಾರಗಳಿವೆ.
- ❖ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಹಲವಾರು ಕ್ರಮಗಳನ್ನು ಹಮ್ಮಿಕೊಂಡಿದೆ.
- ❖ ಕೆಲಸಗಾರರಲ್ಲಿ ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರೆಂಬ ಎರಡು ವಿಧಗಳಿದ್ದು ಇವರ ನಡುವೆ ಅನೇಕ ವ್ಯತ್ಯಾಸಗಳಿವೆ.

## I. ಬಹು ಆಯ್ಕೆ ಪ್ರಶ್ನೆಗಳು

1. **ಶ್ರಮ ವಿಭಜನೆಯುಜನರು ವಿವಿಧ ಕ್ಷೇತ್ರಗಳಲ್ಲಿ ಪರಿಶ್ರಮಿಸಿ ______ ಲಾಭ ಪಡೆಯಲು ಸಹಾಯಕವಾಗಿದೆ**
   ಅ)ಸಾಮಾಜಿಕ ಆ)ಧಾರ್ಮಿಕ ಇ)ರಾಜಕೀಯ **ಈ)ಆರ್ಥಿಕ**

2. **ಆಧುನಿಕ ಕಾಲದಲ್ಲಿ ವರ್ಗ ವ್ಯವಸ್ಥೆತು _______ ದಿಂದ ಉಂಟಾಗಿದೆ**
   ಅ)ತಾರತಮ್ಯ ಆ)ವಿಶೇಷ ಪರಿಣತಿ **ಇ)ಕೈಗಾರೀಕರಣ** ಈ)ನಗರೀಕರಣ

3. **ಭೌತಿಕ ರೂಪದ ಪ್ರತಿಫಲ ನೀಡುವ ದುಡಿಮೆಯ ಚಟುವಟಿಕೆಗೆ ________ ಎನ್ನುವರು**
   **ಅ)ಕೂಲಿ ಸಹಿತ ದುಡಿಮೆ** ಆ)ಸೇವಾ ದುಡಿಮೆ ಇ)ಕೂಲಿ ರಹಿತ ದುಡಿಮೆ ಈ)ಸಾಮಾಜಿಕ ದುಡಿಮೆ

4. **ಮನ: ಸಂತೋಷದ ದೃಷ್ಟಿಯಿಂದ ಮಾನವನು ತೊಡಗುವ ಕ್ರಿಯೆಗೆ ________ ಎನ್ನುವರು**
   **ಅ)ಕೂಲಿ ರಹಿತ ದುಡಿಮೆ** ಆ)ಸೇವಾ ದುಡಿಮೆ ಇ)ಸಾಮಾಜಿಕ ದುಡಿಮೆ ಈ)ಮೇಲಿನ ಎಲ್ಲವೂ



Use e-papers for save trees-InyaTrust.com

5. **'ಸಮಾನ ವೇತನ ಕಾಯ್ದೆ' ಯನ್ನು ಜಾರಿಗೆ ತಂದ ವರ್ಷ**
   **<u>ಅ)1976</u>** ಆ)1974 ಇ)1975 ಈ)1973

6. **ಸ್ತ್ರೀಯರಿಗೆ ನೀಡುವ ವೇತನದಲ್ಲಿ ತಾರತಮ್ಯ ಮಾಡುವುದು ಒಂದು ರೀತಿಯ**
   ಅ)ನಿರುದ್ಯೋಗ ಆ)ಬಡತನ **<u>ಇ)ಶೋಷಣೆ</u>** ಈ)ಶ್ರಮ ವಿಭಜನೆ

7. **ಭಾರತದ ಆರ್ಥಿಕ ಸಾಮಾಜಿಕ ವ್ಯವಸ್ಥೆಯನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿ ಪ್ರಮುಖವಾದುದು**
   ಅ)ಭ್ರಷ್ಟಾಚಾರ ಆ)ಕೋಮುವಾದ ಇ)ವೇಶ್ಯವಾಟಿಕೆ **<u>ಈ)ನಿರುದ್ಯೋಗ</u>**

8. **ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿ ವೇತನ, ವೈದ್ಯಕೀಯ ಸೌಲಭ್ಯವನ್ನು ಪಡೆಯುವ ಕೆಲಸಗಾರರು**
   ಅ)ಅಸಂಘಟಿತ ಕೆಲಸಗಾರರು **<u>ಆ)ಸಂಘಟಿತ ಕೆಲಸಗಾರರು</u>**
   ಇ)ಸಾಮಾಜಿಕ ಕೆಲಸಗಾರರು ಈ)ಸಾಮೂಹಿಕ ಕೆಲಸಗರರು

9. **ಸರ್ಕಾರದ ನಿಯಂತ್ರಣಕ್ಕೆ ಒಳಪಡದ ಕೆಲಸಗಾರರು**
   ಅ) ಅಸಂಘಟಿತ ಕೆಲಸಗಾರರು **<u>ಆ)ಸಂಘಟಿತ ಕೆಲಸಗಾರರು</u>**
   ಇ)ಕೂಲಿ ಸಹಿತ ಕೆಲಸಗಾರರು ಈ)ಮೇಲಿನ ಯಾವುದೂ ಅಲ್ಲ

10. **ಸಂಘಟಿತ ಕೆಲಸಗಾರರಿಗೆ ಸಂಬಂಧ ಪಟ್ಟಿಲ್ಲದಿರುವುದು**
    ಅ)ನಿಯಮಗಳು ಆ)ನಿವೃತ್ತಿ ವೇತನ ಇ)ನಿಗದಿತ ವೇತನ **<u>ಈ)ನಿಗದಿತವಲ್ಲದ ವೇತನ</u>**

## II. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.

1. ಶ್ರಮ ವಿಭಜನೆಯು **<u>ವಿಶೇಷ ಪರಿಣತಿ</u>** ಗೆ ಕಾರಣವಾಗುವುದು.
2. ವಿಶೇಷ ತರಬೇತಿ ಹೊಂದಿರದ ಕಾರ್ಮಿಕರನ್ನು **<u>ಅಸಂಘಟಿತ</u>** ಕೆಲಸಗಾರರು ಎಂದು ಕರೆಯುತ್ತಾರೆ.
3. ವಿಶೇಷ ತರಬೇತಿ, ಪರಿಣತಿ ಹೊಂದಿದ ಕಾರ್ಮಿಕರನ್ನು **<u>ಸಂಘಟಿತ</u>** ಕೆಲಸಗಾರರು ಎಂದೆ ಕರೆಯುತ್ತಾರೆ.
4. ಜೀವನ ನಿಭಾಯಿಸಲು **<u>ದುಡಿಮೆ</u>** ಅನಿವಾರ್ಯ
5. ಹೊಲದಲ್ಲಿ ಉಳುವುದು **<u>ಕೂಲಿ ಸಹಿತ</u>** ದುಡಿಮೆ ಎನ್ನಿಸಿಕೊಳ್ಳುವುದು
6. ಆತ್ಮ ಸಂತೋಷಕ್ಕಾಗಿ ಪರಿಶ್ರಮಿಸುವುದನ್ನು **<u>ದುಡಿಮೆ</u>** ಎನ್ನುವುದಿಲ್ಲ

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. **ಶ್ರಮ ವಿಭಜನೆ ಎಂದರೇನು ?**
   ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ,ವಯಸ್ಸು, ವಶೇಷ ಪರಿಣತಿ, ಕೌಶಲ್ಯ ಹಾಗು ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದನ್ನು ಶ್ರಮ ವಿಭಜನೆ ಎನ್ನಲಾಗಿದೆ.

2. **ಕೂಲಿ ಸಹಿತ ದುಡಿಮೆ ಎಂದರೇನು ?**
   ಅನ್ಯಾನ್ಯ ಬಗೆಯ ಕೂಲಿ, ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲ ನೀಡುವ ದುಡಿಮೆಯ ಚಟುವಟಿಕೆಯು ಕೂಲಿ ಸಹಿತ ದುಡಿಮೆ ಎನ್ನಿಸಿಕೊಳುವುದು.

3. **ನಿರುದ್ಯೋಗ ಎಂದರೇನು ?**
   ನಿರುದ್ಯೋಗ ಎಂದರೆ ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿ ಎಂದರ್ಥ.



Use e-papers for save trees-InyaTrust.com

**4. ನಿರುದ್ಯೋಗಕ್ಕೆ ಕಾರಣಗಳಾವುವು ?**

ಅರ್ಹತೆಯ ಕೊರತೆ ದೈಹಿಕ ಅಸಾಮರ್ಥ್ಯತೆ

ಮಿತಿಮೀರಿದ ಜನಸಂಖ್ಯೆ ಯಾಂತ್ರೀಕರಣ ಬಂಡವಾಳದ ಕೊರತೆ

ಮುಷ್ಕರ ಮತ್ತು ಕಾರ್ಖಾನೆಗಳ ಮುಚ್ಚುವಿಕೆ ಮುಂತಾದವುಗಳು ನಿರುದ್ಯೋಗಕ್ಕೆ ಕಾರಣವಾಗಿವೆ.

**5. ನಿರುದ್ಯೋಗದ ಪರಿಣಮಗಳಾವುವು ?**

ನಿರುದ್ಯೋಗವು ಬಡತನ, ಅನಾರೋಗ್ಯ, ಅಪರಾಧ, ಭ್ರಷ್ಟಾಚಾರ, ಕೌಟುಂಬಿಕ ವಿಘಟನೆ ಮೋಸ, ವಂಚನೆ, ಕಳ್ಳತನ, ವ್ಯಭಿಚಾರ ಮುಂತಾದ ಪರಿನಾಮಗಳಿಗೆ ಕಾರಣವಾಗುತ್ತದೆ.

## IV. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಉತ್ತರಿಸಿ.

**1. ಶ್ರಮ ವಿಭಜನೆ ಎಂದರೇನು ? ಉದಾಹರಣೆ ಕೊಡಿ.**

ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ ಅಭಿರುಚಿ, ಸಾಮರ್ಥ್ಯ,ವಯಸ್ಸು, ವಿಶೇಷ ಪರಿಣತಿ, ಕೌಶಲ್ಯ ಹಾಗು ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದನ್ನು ಶ್ರಮ ವಿಭಜನೆ ಎನ್ನಲಾಗಿದೆ. ಉದಾ :– ನಾವು ತೊಡುವ ಬಟ್ಟೆಗಳನ್ನು ಸಿದ್ಧಪಡಿಸಲು ಕೃಷಿಕರು, ನೇಕಾರರು, ಬಣ್ಣಹಾಕುವವರು, ವರ್ತಕರು ದರ್ಜಿಗಳು ಎಲ್ಲರೂ ಒಟ್ಟಿಗೆ ಆದರೆ ಬೇರೆ ಬೇರೆ ನೆಲೆಗಳಲ್ಲಿ ದುಡಿಯುವರು ಹಾಗೆಯೇ ಕುಟುಂಬದ ಸದಸ್ಯರು ಮನೆಯ ಕೆಲಸವನ್ನು ಬೇರೆ ಬೇರೆ ನೆಲೆಗಳಲ್ಲಿ ಹಂಚಿಕೊಂಡು ನಿರ್ವಹಿಸುವರು. ಕೃಷಿ ಕ್ಷೇತ್ರದಲ್ಲಿ ರೈತರು ಬೇರೆ ಬೇರೆ ಸ್ವರೂಪದಲ್ಲಿ ಹಂಚಿಕೊಂಡು ದುಡಿಯುವರು ಇತ್ಯಾದಿ.

**2. ಕೂಲಿ ರಹಿತ ದುಡಿಮೆ ಎಂದರೇನು ? ಉದಾಹರಣೆ ಕೊಡಿ.**

ಯಾವುದೇ ನಿಶಿಚ್ತ ಉದ್ದೇಶವಿಲ್ಲದೇ, ಭೌತಿಕ ಲಾಭದ ದೃಷ್ಟಿಯೂ ಇಲ್ಲದೆ ಮನ: ಸಂತೋಷದ ದೃಷ್ಟಿಯಿಂದ ಮಾನವನು ತೊಡಗುವ ಕ್ರಿಯೆಗಳೇ ಕೂಲಿ ರಹಿತ ದುಡಿಮೆ. ಉದಾಹರಣೆ :– ತಾಯಿಯಾದವಳು ಮನೆಯಲ್ಲಿ ಮನೆಮಂದಿಗಾಗಿ ಆಹಾರ ಸಿದ್ಧಪಡಿಸುವುದು. ಕಲಾಕಾರನೊಬ್ಬನು ಆತ್ಮ ಸಂತೋಷಕ್ಕಾಗಿ ಚಿತ್ರವೊಂದನ್ನು ಬಿಡಿಸುವ ಕಾರ್ಯದಲ್ಲಿ ತೊಡಗಿರುವುದು ಇತ್ಯಾದಿ.

**3. ನಿರುದ್ಯೋಗದ ಪ್ರಕಾರಗಳಾವುವು ?**

ಅರೆನಿರುದ್ಯೋಗ ಮರೆಮಾಚಿದ ನಿರುದ್ಯೋಗ

ತಾಂತ್ರಿಕ ನಿರೊದ್ಯೋಗ ಚಕ್ರೀಯ ನಿರುದ್ಯೋಗ

ಐಚ್ಛಿಕ ನಿರುದ್ಯೋಗ, ಶಿಕ್ಷಿತ ಮತ್ತು ಅಶಿಕ್ಷಿತ ನಿರುದ್ಯೋಗ ಮುಂತಾದ ಪ್ರಕಾರಗಳಿವೆ.

**4. ದುಡಿಮೆಯಲ್ಲಿನ ತಾರತಮ್ಯತೆಯ ಸ್ವರೂಪವನ್ನು ವಿವರಿಸಿ.**

- ಸ್ತ್ರೀ – ಪುರುಷರೀರ್ವರೂ ದುಡಿಮೆಯಲ್ಲಿ ತೊಡಗಿರಬಹುದಾದರೂ ಅವರ ಉದ್ಯೋಗಗಳು ಒಂದೇ ಸಮನಾಗಿಲ್ಲ.
- ಭಾರತವನ್ನೊಳಗೊಂಡಂತೆ ಜಗತ್ತಿನ ದೇಶಗಳಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತಿದೆ. ಹಾಗೆಯೇ ಹೆಚ್ಚಿನ ಹೊಣೆಗಾರಿಕೆ ಮತ್ತು ಸಂಬಳವನ್ನು ನೀಡಲಾಗುತ್ತಿದೆ.
- ಸ್ತ್ರೀಯರಿಗೆ ಕಡಿಮೆ ಮಟ್ಟದ ಉದ್ಯೋಗ, ಹೊಣೆಗಾರಿಕೆ ಮತ್ತು ಸಂಬಳವನ್ನು ನೀಡಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಮಾತ್ರ ಉದ್ಯೋಗ ನೀಡಿಕೆ ಕುರಿತಾದ ಇಂತಹ ತಾರತಮ್ಯಗಳು ಬಹಳಷ್ಟು ಕಡಿಮೆಯಾಗಿತ್ತಿದೆ.
- ಸ್ತ್ರೀ–ಪುರುಷರ ದುಡಿಮೆಗೆ ಸಂಬಂದಿಸಿದಂತೆ ಇನ್ನೊಂದೆ ಬಗೆಯ ತಾರತಮ್ಯವಿದೆ. ಉದ್ಯೋಗವಕಾಶಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಸ್ತ್ರೀಯರು ಬಹುದೊಡ್ಡ ಸಂಖ್ಯೆಯಲ್ಲಿ ಉದ್ಯೋಗಗಳಿಗೆ ಸೇರಿಕೊಳ್ಳುತ್ತಿದ್ದಾರೆ. ಆದರೆ



Use e-papers for save trees-InyaTrust.com

ಅವರಿಗೆ ನೀಡಲಾಗುವ ಸಂನಳದಲ್ಲಿ ಮಾತ್ರ ತಾರತಮ್ಯ ಮಾಡಲಾಗುತ್ತಿದೆ. ಪುರುಷರಿಗೆ ಸರಿಸಮಾನವಾಗಿ ಅವರು ದುಡಿಯುವ ಸಂದರ್ಬದಲ್ಲೂ ಅವರಿಗೆ ಕಡಿಮೆ ವೇತನ ನೀಡುವುದು ಒಂದು ಬಗೆಯ ಶೋಷಣೆಯೇ ಸರಿ.

- ಕೇಂದ್ರ ಸರ್ಕಾರವು "ಸಮಾನ ವೇತನ ಕಾಯ್ದೆ"(1976) ಯನ್ನು ಜಾರಿಗೆ ತಂದಿದೆ. ಆದ್ದರಿಂದ ನಗರದ ಸಂಘಟಿತ ವಲಯದಲ್ಲಿ ವೇತನ ಸಂಬಂದಿಸಿದ ಇಂತಹ ತಾರತಮ್ಯಗಳು ಕಡಿಮೆಯಾಗಿವೆ.
- ಕೃಷಿಕ ಸಮಾಜವು ಕೂಡ ಲಿಂಗ, ವಯಸ್ಸು, ಸಾಮರ್ಥ್ಯಗಳ ಆಧಾರದ ಮೇಲೆ ಕೆಲಸ ಕಾರ್ಯಗಳನ್ನು ಅಸಮಾನ ರೀತಿಯಲ್ಲಿ ಹಂಚಿಕೆ ಮಾಡುತ್ತದೆ. ಹಾಗೂ ಕೂಲಿ ನೀಡುವುದರಲ್ಲಿ ಇಲ್ಲಿಯೂ ತಾರತಮ್ಯತೆಯಿದೆ.
- ಶಿಕ್ಷಣದ ಪ್ರಸಾರ ಹೆಚ್ಚುತ್ತಿದ್ದಂತೆ ಇಂತಹ ತಾರತಮ್ಯತೆಗಳು ಕಡಿಮೆಯಾಗುತ್ತಾ ಬರುತ್ತಿವೆ.

**5. ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳಾವುವು ? ವಿವರಿಸಿ.**

ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಹಲವಾರು ಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳೆಂದರೆ,

ಜನಸಂಖ್ಯಾ ನಿಯಂತ್ರಣ ಕ್ರಮಗಳು    ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ
ಕೃಷಿ ಕ್ಷೇತ್ರದ ಅಭಿವೃದ್ಧಿ    ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ
ಶೈಕ್ಷಣಿಕ ಸುಧಾರಣಾ ಯೋಜನೆಗಳು    ಪಂಚವಾರ್ಷಿಕ ಯೋಜನೆಗಳು
ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ
ಗ್ರಾಮೀಣಾಭಿವೃದ್ಧಿ ಯೋಜನೆಗಳು ಉದ್ಯೋಗ ಖಾತರಿ ಯೋಜನೆ, ಇತ್ಯಾದಿ.

**6. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸವೇನು ?**

**ಸಂಘಟಿತ ಕೆಲಸಗಾರರು**

- ಸಂಘಟಿತ ಕೆಲಸಗಾರನ ಕಾರ್ಯದ ಬಗ್ಗೆ ನಿಶ್ಚಿತ ನಿಯಮಗಳಿರುತ್ತವೆ.
- ಸಂಘಟಿತ ಕೆಲಸಗಾರರಿಗೆ ವಿಶೇಷ ಪರಿಣತಿ, ತರಬೇತಿ, ಪ್ರತಿಭೆ, ಅನುಭವ ಮತ್ತು ಶೈಕ್ಷಣಿಕ ಅರ್ಹತೆಗಳಿಗೆ ಅವಕಾಶಗಳಿರುತ್ತವೆ.
- ಇವರ ಕೆಲಸದ ಎಲ್ಲ ವ್ಯವಹಾರಗಳು ಲಿಖಿತ ರೂಪದಲ್ಲಿರುತ್ತವೆ.
- ಇವರಿಗೆ ನಿಶ್ಚಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿ ವೇತನ ಸೌಲಭ್ಯಗಳನ್ನು ನೀಡಲಾಗುತ್ತದೆ. ಅಲ್ಲದೆ ವೈದ್ಯಕೀಯ ಸೌಲಭ್ಯವನ್ನು ಕೂಡ ಒದಗಿಸಲಾಗುತ್ತದೆ.
- ಇವರು ದಿನವೊಂದರಲ್ಲಿ ನಿಗದಿತ ಸಮಯದಲ್ಲಿ ಮಾತ್ರ ಕಾರ್ಯ ನಿರ್ವಹಿಸುವವರಾಗಿರುತ್ತಾರೆ.

**ಅಸಂಘಟಿತ ಕೆಲಸಗಾರರು**

- ಅಸಂಘಟಿತ ಕೆಲಸಗಾರರು ಯಾವುದೇ ನಿರ್ದಿಷ್ಟ ಕಾಯ್ದೆ –ಕಾನೂನು ಅಥವಾ ಸಂಘಟನೆಯ ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ತಮ್ಮ ಪಾಡಿಗೆ ವಿವಿಧ ಕಸುಬುಗಳಲ್ಲಿ ತೊಡಗಿಸಿಕೊಂಡು ದಿನಗೂಲಿ ಅಥವಾ ಇನ್ನಿತರ ರೂಪದ ಆರ್ಥಿಕ ಪ್ರತಫಲ ಪಡೆಯುವವರಾಗಿರುತ್ತಾರೆ.
- ಇವರ ದುಡಿಮೆಗೆ ಕಡಿಮೆ ಕೂಲಿ ನೀಡಲಾಗುತ್ತದೆಯಲ್ಲದೆ ಯಾವುದೇ ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ.
- ಇವರ ಕೆಲಸಕ್ಕೆ ಭದ್ರತೆ ಮತ್ತು ನಿಗದಿತ ವೇತನ ವಿರಾಮ ವೇತನ, ನಿವೃತ್ತಿ ವೇತನ ಹಾಗು ಭತ್ಯೆಗಳ ಸೌಲಭ್ಯಗಳಿರುವುದಿಲ್ಲ.
- ಇವರು ಉದ್ಯೋಗಪತಿಗಳಿಂದ ಹಲವಾರು ರೀತಿಗಳಲ್ಲಿ ಶೋಷಣೆಗೆ ಒಳಗಾಗುವ ಸಾದ್ಯತೆಗಳಿರುತ್ತವೆ.



**Use e-papers for save trees-InyaTrust.com**

**7. ವಿಶೇಷ ಪರಿಣತಿ ಎಂದರೇನು ?**

ಯಾವುದಾದರು ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣತಿ, ತರಬೇತಿ ಅಥವಾ ಕೌಶಲ್ಯ ಪಡೆಯುವುದು ಎಂದರ್ಥ.

**8. ದುಡಿಮೆಯ ತಾರತಮ್ಯ ಎಂರೇನು ?**

ದುಡಿಮೆ ಮತ್ತು ಕೂಲಿ ಹಂಚಿಕೆಯಲ್ಲಿ ಕಾಣಬರುವ ಅಸಮಾನತೆಯನ್ನು ದುಡಿಮೆಯ ತಾರತಮ್ಯ ಎನ್ನಬಹುದು.

**9. ಸಂಘಟಿತ ಕೆಲಸಗಾರರು ಕೆಲಸ ಮಾಡುವ ಕ್ಷೇತ್ರಗಳು ಯಾವುವು ?**

ಸಂಘಟಿತ ಕೆಲಸಗಾರರು ಖಾಸಗಿ ಕಂಪೆನಿಗಳು, ಕಾರ್ಖಾನೆ, ಕೈಗಾರಿಕೆಗಳು ಸರ್ಕಾರಿ ಇಲಾಖೆಗಳು, ಶಾಲಾ–ಕಾಲೇಜುಗಳು, ವಾಣಿಜ್ಯ ಬ್ಯಾಂಕುಗಳು, ವಿಮಾಕಂಪೆನಿಗಳು, ಸೈನ್ಯ, ಪೋಲೀಸು ಇಲಾಖೆ ಮುಂತಾದ ಕ್ಷೇತ್ರಗಳಲ್ಲಿ ದುಡಿಯುತ್ತಾರೆ.

**10. ದುಡಿಮೆ ಎಂದರೇನು ?**

ದುಡಿಮೆ ಎಂದರೆ ಉದ್ದೇಶವೊಂದರ ಸಾಧನೆಗಾಗಿ ನಡೆಸಲಾಗುವ ಕಾರ್ಯ. ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತು ರುಪದ ಸಿಗುವುದಿದ್ದರೆ ಅದನ್ನು **'ದುಡಿಮೆ'** ಎನ್ನುವರು.

**11. ಸರ್ಕಾರ 'ಸಮಾನ ವೇತನ ಕಾಯ್ದೆ' ಯನ್ನು ಏಕೆ ಜಾರಿಗೆ ತಂದಿದೆ ?**

ಪುರುಷರಿಗೆ ಸರಿಸಮಾನವಾಗಿ ಸ್ತ್ರೀಯರು ದುಡಿಯುವ ಸಂದರ್ಭದಲ್ಲೂ ಅವರಿಗೆ ಕಡಿಮೆ ವೇತನ ನೀಡಲಾಗುತ್ತಿತ್ತು. ಇದು ಒಂದು ಬಗೆಯ ಶೋಷಣೆಯಾಗಿತ್ತು. ಈ ತಾರತಮ್ಯವನ್ನು ತೊಡೆದು ಹಾಕಲು ಕೇಂದ್ರ ಸರ್ಕಾರವು 1976ರಲ್ಲಿ **'**ಸಮಾನ ವೇತನ ಕಾಯ್ದೆ**'** ಯನ್ನು ಜಾರಿಗೆ ತಂದಿತು.



**Use e-papers for save trees-InyaTrust.com**

# ಅಧ್ಯಾಯ – 3
# ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

**ಮುಖ್ಯಾಂಶಗಳು**

❖ ಸಮೂಹದಲ್ಲಿ ಇರುವಾಗ ಮಾನವ ಮಾಡುವ ವರ್ತನೆಯನ್ನು ಸಮೂಹಿಕ ವರ್ತನೆ ಎನ್ನಲಾಗುವುದು.

❖ ಸಾಕಷ್ಟು ದೊಡ್ಡ ಸಂಖ್ಯೆಯ ಜನರ ಆಕಸ್ಮಿಕವಾದ ಹಾಗೂ ಸಂರಚನಾರಹಿತವಾದ ರೀತಿಯ ಆಲೋಚನೆ, ಭಾವನೆ ಹಾಗೂ ವರ್ತನೆಗೆ ಸಮೂಹ ವರ್ತನೆ ಎನ್ನಬಹುದು.

❖ ಸಮೂಹ ವರ್ತನೆಯಲ್ಲಿ ಜನಮಂದೆ, ದೊಂಬಿ ಪೊಳ್ಳುಸುದ್ದಿಗಳ ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ ಹಾಗೂ ಸಾಮಾಜಿಕ ಆಂದೋಲನವನ್ನು ಸಮೂಹ ವರ್ತನೆಯ ಮಾದರಿಗಳು ಎನ್ನಬಹುದು.

❖ ಸಮೂಹ ವರ್ತನೆಯ ಇತರ ರೂಪಗಳೆಂದರೆ ಪರಿಸರ ಸಂಬಂಧಿತ ವಿಷಯಗಳು, ಇದರಲ್ಲಿ ಚಿಪ್ಕೋ ಚಳುವಳಿ, ಅಪ್ಪಿಕೋ ಚಳುವಳಿ, ನರ್ಮದಾ ಆಂದೋಲನ, ಮೌನ ಕಣಿವೆ ಆಂದೋಲನ, ಕರ್ನಾಟಕ ಕರಾವಳಿತೀರದ ವಿವಿಧ ಸ್ಥಾವರಗಳ ವಿರೋಧಿ ಚಳುವಳಿ, ಕೈಗಾ ವಿರೋಧಿ ಚಳುವಳಿಗಳನ್ನು ಹೆಸರಿಸಬಹುದು.

❖ ಪುರುಷರಿಗೆ ಸಮಾನವಾದ ನೆಲೆಯಲ್ಲಿ ಪಾತ್ರವಹಿಸಲು ಸಹಾಯಕವಾಗುವಂತೆ ಸ್ತ್ರೀಯರನ್ನು ಸಜ್ಜುಗೊಳಿಸಲು ಅವರಿಗೆ ಸಮಾನ ಹಕ್ಕು, ಅವಕಾಶ, ಹೊಣೆಗಾರಿಕೆ ಹಾಗೂ ಅಧಿಕಾರ ನೀಡುವಂತಹ ಒಂದು ಪ್ರಯತ್ನವಾಗಿ ಮಹಿಳೆಯರ ಸ್ವ–ಸಹಾಯ ಸಮೂಹಗಳು ರೂಪಿತವಾಗಿವೆ.

**I.** **ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಚಿಪ್ಕೋ ಚಳುವಳಿ ನಡೆದ ಜಾಗ **ಉತ್ತರ ಪ್ರದೇಶ**
2. ನರ್ಮದಾ ಆಂದೋಲನದ ನೇತೃತ್ವ ವಹಿಸಿದ್ದವರು **ಮೇಧಾ ಪಾಟ್ಕರ್**
3. ಕೈಗಾ ವಿರೋಧಿ ಚಳುವಳಿಯನ್ನು **ಡಾ. ಶಿವರಾಮ ಕಾರಂತ** ರವರು ನಡೆಸಿದರು.
4. ಜನಮಂದಿ ವರ್ತನೆಯ ಮತ್ತೊಂದು ಮಾದರಿ **ದೊಂಬಿ**
5. ಮಹಿಳೆಯರ ಸ್ವ–ಸಹಾಯ ಸಮೂಹಕ್ಕೆ ಉತ್ತಮ ನಿದರ್ಶನ **ಸ್ತ್ರೀ ಶಕ್ತಿ ಯೋಜನೆ**
6. ಸ್ವ–ಸಹಾಯ ಸಮೂಹಗಳು ಭಾರತದ ಹಣಕಾಸು ಉದ್ಯಮದ **ನವೀನ** ರೂಪವೇ ಆಗಿದೆ
7. ದೊಂಬಿಗಳು **ದೀರ್ಘಕಾಲ** ನಡೆಯಲಾರವು

**II.** **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ**

1. **ಸಮೂಹ ವರ್ತನೆ ಎಂದರೇನು** ?

   ಸಾಕಷ್ಟು ದೊಡ್ಡ ಸಂಖ್ಯೆಯ ಜನರ ಆಕಸ್ಮಿಕವಾದ ಹಾಗೂ ಸಂರಚನಾರಹಿತವಾದ ರೀತಿಯ ಆಲೋಚನೆ, ಭಾವನೆ ಹಾಗೂ ವರ್ತನೆಗೆ ಸಮೂಹ ವರ್ತನೆ ಎನ್ನಬಹುದು.

2. **ಚಿಪ್ಕೊ ಚಳುವಳಿಯ ನೇತಾರ ಯಾರು** ?

   ಚಿಪ್ಕೋ ಚಲುವಳಿಯ ನೇತಾರರು ಶ್ರೀ ಸುಂದರ್ ಲಾಲ್ ಬಹುಗುಣ ಹಾಗೂ ಶ್ರೀ ಚಂಡ ಪ್ರಸಾದ್ ಭಟ್ಟ .

3. **ಪರಿಸರದ ಅರ್ಥ ತಿಳಿಸಿ.**

   ನಮ್ಮ ಸುತ್ತ ಮುತ್ತ ಇರುವ ಭೂಮಿ, ಗಾಳಿ, ನೀರು ಮತ್ತು ಜೀವ ಮಂಡಲವನ್ನೊಳಗೊಂಡಿರುವ ವ್ಯವಸ್ಥೆಯೇ ಪರಿಸರ.



Use e-papers for save trees-InyaTrust.com

**4. ದೊಂಬಿ ಎಂದರೇನು ?**

ತೀರಾ ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ ಎನ್ನುತ್ತಾರೆ.

**5. ದೊಂಬಿಗಳನ್ನು ಹೇಗೆ ನಿಯಂತ್ರಿಸಬಹುದು ?**

ಅಧಿಕಾರಿಗಳ ಸಮಯ ಪ್ರಜ್ಞೆ, ಪೋಲೀಸ್ ರಕ್ಷಣಾ ಪಡೆ ಮತ್ತು ಕಾನೂನು ಮುಂತಾದ ಸಾಧನಗಳ ಮೂಲಕ ದೊಂಬಿಗಳನ್ನು ನಿಯಂತ್ರಿಸಬಹುದು.

**6. ಸಮೂಹ ವರ್ತನೆಯ ಮಾದರಿಗಳಾವುವು ?**

ಜನ ಮುಂದೆ, ದೊಂಬಿ ಪೊಳ್ಳು ಸುದ್ದಿಗಳ ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ ಹಾಗೂ ಸಾಮಾಜಿಕ ಆಂದೋಲನ ಇವು ಸಮೂಹ ವರ್ತನೆಯ ಮಾದರಿಗಳು.

## III. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

**1. ಜನಮಂದೆ ಎಂದರೇನು ? ಉದಾಹರಣೆ ಕೊಡಿ.**

ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.

ಉದಾಹರಣೆ:ಚಲನಚಿತ್ರ ಮಂದಿರದ ಹತ್ತಿರ ಟಕೇಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ. ರಸ್ತೆ ಬದಿಯ ದೊಂಬರಾಟ ವೀಕ್ಷಿಸಲು ಸೇರಿರುವ ಜನ ಸಮೂಹ. ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನ ಸಮೂಹ.

**2. ಜನಮಂದೆಯ ಸ್ವರೂಪವನ್ನು ತಿಳಿಸಿ .**

ಜನಮಂದೆಯು ತಾತ್ಕಾಲಿಕ ಸ್ವರೂಪದ ಸಮೂಹವಾಗಿರುತ್ತದೆ. ಇದರಲ್ಲಿ ಜನರು ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ಭೌತಿಕವಾಗಿ ಇಟ್ಟಾಗಿ ಸೇರಿರುತ್ತಾರೆ. ಜನಮಂದೆಯ ಸದಸ್ಯರು ಪರಸ್ಪರ ಅಭಿಪ್ರಾಯ, ಭಾವನೆಗಳು ಮತ್ತು ಕ್ರಿಯೆಗಳ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ. ಇದರ ಮೂಲಕ ವ್ಯಕ್ತಿಯ ಅಂತರಾಳದಲ್ಲಿ ಹುದುಗಿರುವ ಭಾವನೆಗಳು ಪ್ರಕಟವಾಗುವುದುಂಟು. ಒಮ್ಮೊಮ್ಮೆ ಸ್ಫೋಟಗೊಳ್ಳುವುದುಂಟು.

**3. ಪರಿಸರ ಮಾಲಿನ್ಯದ ಅರ್ಥ ಮತ್ತು ಸ್ವರೂಪವನ್ನು ತಿಳಿಸಿ .**

ಭೂಮಿ, ಗಾಳಿ, ನೀರು ಮತ್ತು ಜೀವಮಂಡಲವನ್ನೊಳಗೊಂಡ ನಮ್ಮ ಸುತ್ತ ಮುತ್ತಲಿನ ಪರಿಸರವು ವಿಷಕಾರಕ ಹಾಗು ರಾಸಾಯನಿಕ ಅಂಶಗಳಿಂದ ಕಲುಷಿತವಾಗುವುದನ್ನು ಪರಿಸರ ಮಾಲಿನ್ಯ ಎನ್ನಬಹುದು. ಇಂದು ಮಾನವ ಜನಸಂಖ್ಯೆ ಹೆಚ್ಚುತ್ತಿದ್ದು, ಜೀವನ ಮಟ್ಟದಲ್ಲಿ ಸುಧಾರಣೆಯಾಗುತ್ತಿದೆ. ಇದರ ಪರಿಣಾಮವಾಗಿ ಮಾನವ ವಾಸಿಸುವ ಪರಿಸರದ ಮೇಲೆ ಒತ್ತಡ ಹಾಗೂ ಆಕ್ರಮಣ ಹೆಚ್ಚುತ್ತಲಿದೆ. ಅಭಿವೃದ್ಧಿ ಹೊಂದಿದ ಹಾಗು ಆಭಿವೃದ್ಧಿ ಪಥದಲ್ಲಿರುವ ದೇಶಗಳಲ್ಲಿ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚು ಬಳಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಸುಖ ಭೋಗದ ಜೀವನಕ್ಕಾಗಿ ಪರಿಸರವನ್ನು ದುರ್ಬಳಕೆ ಮಾಡುತ್ತಿವೆ. ಜಗತ್ತಿನ ಹಲವಾರು ದೇಶಗಳು ಹೆಚ್ಚುತ್ತಿರುವ ಜನಸಖ್ಯೆಯಿಂದ ಉಂಟಾಗಿರುವ ಸಮಸ್ಯೆಗಳನ್ನು ಎದುರಿಸಲು ಪರಿಸರದ ಮೇಲೆ ಒತ್ತಡ ತರುತ್ತಿವೆ. ಅಲ್ಲದೆ ಅನಿಯಂತ್ರಿತವಾಗಿ ಸಾಗುತ್ತಿರುವ ನಗರಗಳ ಬೆಳವಣಿಗೆ, ಕೈಗಾರಿಕ ಅಭಿವೃದ್ಧಿ, ತಾಂತ್ರಿಕ ಪ್ರಗತಿ, ಸಾರಿಗೆ ವ್ಯವಸ್ಥೆಯ ಬೆಳವಣಿಗೆ ಮುಂತಾದವುಗಳಿಂದ ಅರಣ್ಯಗಳ ನಾಶ ಮತ್ತು ಪರಿಸರ ಮಾಲಿನ್ಯವುಂಟಾಗುತ್ತಿದೆ. ಹಾಗಾಗಿ ಇದೊಂದು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ.



Use e-papers for save trees-InyaTrust.com

**4. ಮಹಿಳಾ ಸ್ವ–ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ .**

ಸ್ವ–ಸಹಾಯ ಸಮೂಹಗಳು ಸ್ತ್ರೀಯರಲ್ಲಿ ಶಿಕ್ಷಣ ಜಾಗೃತಿಯೊಂದಿಗೆ ಸ್ವಾವಲಂಬಿ ಜೀವನ ನಡೆಸಲು ಸಹಕಾರಿಯಾಗಿವೆ. ಸ್ತ್ರೀಯರು ತಮ್ಮ ಮೇಲೆ ನಡೆಯುವ ದೌರ್ಜನ್ಯಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಇವು ಸಹಾಯಕ. ಸ್ತ್ರೀಯರು ತಮ್ಮ ಪಾಲಿನ ಮಾನವ ಹಕ್ಕುಗಳನ್ನು ಸ್ವತಂತ್ರವಾಗಿ ಪಡೆಯಲು ಕೂಡ ಇವು ನೆರವಾಗುವುದು.

**5. ದೊಂಬಿಯ ಪರಿಣಾಮಗಳನ್ನು ತಿಳಿಸಿ .**

ದೊಂಬಿಯಲ್ಲಿ ಭಾಗವಹಿಸುವವರು ಎದುರಿಗೆ ಸಿಕ್ಕಿದ್ದೆಲ್ಲವನ್ನು ಹಾಳುಮಾಡುತ್ತಾ ಸಾಗುವರು. ಗೊಂದಲವನ್ನು ಸೃಷ್ಟಿ ಮಾಡುವುದೇ ದೊಂಬಿಯ ಉದ್ದೇಶವಾಗಿರುತ್ತದೆ. ಕೆಲವೊಮ್ಮೆ ಈ ದೊಂಬಿಗಳು ಅಪಾರವಾದ ಹಾನಿಯನ್ನುಂಟು ಮಾಡುತ್ತವೆ. ದೊಂಬಿಗಳಲ್ಲಿ ಭಾಗಿಗಳಾದವರಿಗೆ ತಾವು ಮಾಡಬಹುದಾದ ಆಕ್ರಮಣಕ್ಕೆ ನಿಶ್ಚಿತವಾದ ಗುರಿ ಇರುವುದಿಲ್ಲ. ದೊಂಬಿಗಳು ಕಾನೂನು ಮತ್ತು ಸವ್ಯವಸ್ಥೆಗೆ ಸವಾಲುಗಳಾಗಿವೆ.

**6. ಮೇಧಾ ಪಾಟ್ಕರ್ ನರ್ಮದಾ ಆಂದೋಲನ ನಡೆಸಲು ಕಾರಣವೇನು ?**

ಗುಜರಾತ್ ರಾಜ್ಯದ ಸರ್ದಾರ್ ಸರೋವರ ಯೋಜನೆಯಡಿಯಲ್ಲಿ ನರ್ಮದಾ ನದಿಗೆ ಕಟ್ಟಲಾದ ಅಣೆಕಟ್ಟು ನಿರ್ಮಾಣದಿಂದ ಅರಣ್ಯ ನಾಶ, ಪರಿಸರನಾಶ, ಜೀವ ಸಂಕುಲಗಳಿಗೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಮೇಧಾ ಪಾಟ್ಕರ್ ನರ್ಮದಾ ಆಂದೋಲನ ನಡೆಸಿದರು.

**7. ಕೈಗಾ ವಿರೋಧಿ ಚಳುವಳಿಗೆ ಕಾರಣವೇನು ?**

ಕೈಗಾ ಅಣುಶಕ್ತಿ ವಿದ್ಯುತ್ ಉತ್ಪಾದನಾ ಕೇಂದ್ರದ ಸ್ಥಾಪನೆಯಿಂದ ಅರಣ್ಯ ನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇಧಗಳ ಮೇಲೆ ಹಾನಿಕಾರಕ ಪರಿಣಾಮಗಳು ಉಂಟಾಗುತ್ತವೆ ಎಂಬ ಉದ್ದೇಶದಿಂದ ಕೈಗಾ ವಿರೋಧಿ ಚಳುವಳಿಯನ್ನು ನಡೆಸಲಾಯಿತು.

**8. ಸೂಕ್ಷ್ಮ ಸಮೂಹಗಳ ಪಾತ್ರವನ್ನು ವಿವರಿಸಿ.**

ಸೂಕ್ಷ್ಮ ಸಮೂಹಗಳು ಸ್ತ್ರೀಯರ ಪ್ರಜಾಸತ್ತಾತ್ಮಕ ಹಕ್ಕು, ಅಧಿಕಾರ ಹಾಗೂ ಗೌರವಗಳನ್ನು ಗಮನದಲ್ಲಿರಿಸಿಕೊಂಡು ವ್ಯವಹರಿಸುವುವು. ಇವು ಸಾಮಾಜಿಕ ಜೀವನದ ಎಲ್ಲಾ ಕ್ಷೇತ್ರಗಳ ಅಭಿವೃರ್ಧ್ಯಾತ್ಮಕ ಕಾರ್ಯಕ್ರಮಗಳಲ್ಲಿ ಸ್ತ್ರೀಯರಿಗೆ ಸೂಕ್ತ ಅವಕಾಶ ಒದಗಿಸುವಂತೆ ಮಾಡುವುವು. ಅಲ್ಲದೆ ಅಭಿವೃದ್ಧಿ ಯೋಜನೆಗಳಲ್ಲಿ ಸ್ತ್ರೀಯರಿಗು ಸೂಕ್ತ ಪ್ರಾತಿನಿಧ್ಯ ಲಭಿಸುವಂತೆ ಮಾಡುವುವು. ಸ್ವ–ಸಹಾಯ ಸಮೂಹಗಳು ಧೈರ್ಯ ಮೂಡಿಸುವುದರೊಂದಿಗೆ ಸಾಮೂಹಿಕ ಹೋಣೆಗಾರಿಕೆಯ ಮೂಲಕ ಸಂಘರ್ಷಗಳನ್ನು ನಿವಾರಣೆ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸುವುವು. ಇವುಗಳ ಮೂಲಕ ಸರ್ಕಾರದ ಹಲವಾರು ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾಗುವುದು.

**9. ಸ್ತ್ರೀಶಕ್ತಿ ಯೋಜನೆಯ ಹೆಸರಿನಲ್ಲಿ ಕರ್ನಾಟಕದ ಮಹಿಳಾ ಸ್ವ–ಸಹಾಯ ಸಮೂಹಗಳು ಬಹಳ ಜನಪ್ರಿಯವಾಗುತ್ತಿವೆ ಎಂಬುದನ್ನು ಉದಾಹರಣೆ ಸಹಿತ ತಿಳಿಸಿ.**

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಸೇರಿದ 'ಸಿರಿ' ಎಂಬ ಗ್ರಾಮೋದ್ಯೋಗ ಸಂಸ್ಥೆ ಗ್ರಾಮೀಣ ಮಹಿಳೆಯರಿಗೆ ಮೌಲ್ಯಯುತ ಆರ್ಥಿಕ ವಸ್ತುಗಳನ್ನು ಉತ್ಪಾದಿಸಲು ಅವಕಾಶ ಕಲ್ಪಿಸಿದೆ. ಅಲ್ಲದೇ ಅದು ಉತ್ಪಾದಿಸಿದ ವಸ್ತುಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವಲ್ಲಿ ಮತ್ತು ಮಹಿಳೆಯರಲ್ಲಿ ಹೊಸ ಆರ್ಥಿಕ ಭರವಸೆಗಳನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.



Use e-papers for save trees-InyaTrust.com

# ಅಧ್ಯಾಯ – ೪
# ಸಾಮಾಜಿಕ ಸಮಸ್ಯೆಗಳು

**ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

೧. ಸಂವಿಧಾನದ **೨೪ನೇ** ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ.

೨. 'ಬಾಲ ಕಾರ್ಮಿಕ ನಿಷೇಧ ಕಾಯ್ದೆ' ಜಾರಿಗೆ ಬಂದ ವರ್ಷ **೧೯೮೬**

೩. ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ **೧೯೮೭** ರಲ್ಲಿ 'ರಾಷ್ಟ್ರೀಯ ನೀತಿ' ಜಾರಿಗೊಳಿಸಿತು.

೪. ವರದಕ್ಷಿಣೆ ನಿಷೇಧ ಕಾಯ್ದೆ ಮೊದಲು **೧೯೬೧** ರಲ್ಲಿ ಜಾರಿಗೆ ಬಂದಿತು.

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**೧. ಭಾರತದ ಯಾವುದಾದರೂ ಎರಡು ಸಾಮಾಜಿಕ ಸಮಸ್ಯೆಗಳನ್ನು ಹೆಸರಿಸಿ.**

ಬಾಲಕಾರ್ಮಿಕರ ಸಮಸ್ಯೆ, ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶುಹತ್ಯೆ

**೨. ಬಾಲ ಕಾರ್ಮಿಕರು ಎಂದರೆ ಯಾರು ?**

ಭಾರತದ ಸಂವಿಧಾನದ ಪ್ರಕಾರ ೧೪ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ ಅಂತಹವರನ್ನು ಬಾಲ ಕಾರ್ಮಿಕರು ಎಂದು ಕರೆಯಲಾಗಿದೆ.

**೩. ಹೆಣ್ಣು ಭ್ರೂಣ ಹತ್ಯೆ ಎಂದರೇನು ?**

ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದು, ಅದು ತಂದೆ–ತಾಯಿಯರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದೇ 'ಹೆಣ್ಣು ಭ್ರೂಣಹತ್ಯೆ'.

**೪. ಹೆಣ್ಣು ಶಿಶುಹತ್ಯೆ ಎಂದರೇನು ?**

'ಜನನದ ನಂತರದಲ್ಲಿ ಹೆಣ್ಣು ಮಗುವನ್ನು ಹತ್ಯೆ ಮಾಡುವ ಕ್ರೂರ ಪದ್ಧತಿಯೇ ಹೆಣ್ಣು ಶಿಶು ಹತ್ಯೆ'.

**ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ :**

**೧. ಬಾಲ ಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು ? ತಿಳಿಸಿ.**

ಕಡುಬಡತನ, ಕೌಟುಂಬಿಕ ಕಲಹ, ವಿಚ್ಛೇದನ, ಕೌಟುಂಬಿಕ ಹಿಂಸೆ, ಪೋಷಕರ ಅತಿಯಾದ ನಿಯಂತ್ರಣ, ಉದ್ಯಮಿಗಳ ಲಾಭಕೋರತನ, ಅನಕ್ಷರತೆ, ಮಕ್ಕಳ ಅಪಹರಣ ಹಾಗೂ ಜೀತ, ಮುಂತಾದ ಕಾರಣಗಳಿಂದ ಬಾಲಕಾರ್ಮಿಕರ ಸಮಸ್ಯೆಗೆ ಕಾರಣಗಳು.

**೨. ಬಾಲ ಕಾರ್ಮಿಕ ಸಮಸ್ಯೆಯಿಂದಾಗುವ ಪರಿಣಾಮಗಳೇನು ?**

ಮಕ್ಕಳ ದುಡಿತವೆಂಬುದು ಸಾಮಾಜಿಕ ವ್ಯವಸ್ಥೆಯ ಒಂದು ಗಂಭೀರ ಪಿಡುಗಾಗಿದೆ. ಮಕ್ಕಳನ್ನು ದಿನವಿಡೀ ದುಡಿಸಿಕೊಳ್ಳುವುದೇ ಅಲ್ಲದೆ ಅವರ ಮಾನಸಿಕ, ಭಾವನಾತ್ಮಕ, ಶೈಕ್ಷಣಿಕ, ವೈದ್ಯಕೀಯ ಮತ್ತಿತರ ಅಗತ್ಯತೆಗಳ



Use e-papers for save trees-InyaTrust.com

ಬಗ್ಗೆ ಇವರಿಗೆ ಯಾವುದೇ ಕಾಳಜಿ ಇರುವುದಿಲ್ಲ. ಅದರ ಬದಲು ಅವರನ್ನು ದೈಹಿಕವಾಗಿ ಮಾನಸಿಕವಾಗಿ ಹಿಂಸಿಸುವುದು ಕಂಡುಬಂದಿದೆ.

ಅನಾರೋಗ್ಯ, ಪೌಷ್ಠಿಕ ಆಹಾರದ ಕೊರತೆ, ವೈದ್ಯಕೀಯ ಸೌಲಭ್ಯಗಳ ಕೊರತೆ, ಒತ್ತಾಯದ ದುಡಿತ, ಆರ್ಥಿಕ ಮತ್ತು ಸಾಮಾಜಿಕ ಶೋಷಣೆ ಇವೇ ಮುಂತಾದ ಕಾರಣಗಳಿಂದ ಲಕ್ಷಾಂತರ ಮಂದಿ ಬಾಲಕಾರ್ಮಿಕರು ಇಂದಿಗೂ ಬವಣೆ ಪಡುತ್ತಿದ್ದಾರೆ. ಆಟವಾಡುವ, ಕನಸುಕಾಣುವ ಮತ್ತು ಓದುವ ವಯಸ್ಸಿನಲ್ಲಿ ಅವರನ್ನು ದುಡಿಮೆಗೆ ದೂಡಿ ಅವರ ಬಾಲ್ಯವನ್ನು ಕಸಿದುಕೊಳ್ಳಲಾಗಿದೆ.

೩. **ಬಾಲ ಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳಾವುವು ? ವಿವರಿಸಿ.**

ಬಾಲಕಾರ್ಮಿಕರನ್ನು ದುಡಿಯುವ ಕ್ಷೇತ್ರದಿಂದ ಹೊರ ತಂದು ಶೋಷಣೆಯಿಂದ ಮುಕ್ತಗೊಳಿಸಿದ ಮೇಲೆ ಅವರನ್ನು ಸುಧಾರಿಸಲು ಸರ್ಕಾರವು ಕಾರ್ಯಯೋಜನೆಗಳನ್ನು ಕಾಲದಿಂದ ಕಾಲಕ್ಕೆ ಸಿದ್ದ ಪಡಿಸಿವೆ. ಭಾರತ ಸರ್ಕಾರವು 'ಬಾಲಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿ' ಸ್ಥಾಪನೆಯ ಮೂಲಕ ಬಾಲಕಾರ್ಮಿಕರ ಶೈಕ್ಷಣಿಕ, ವೈದ್ಯಕೀಯ, ಮೂಲಭೂತ ಅಗತ್ಯತೆಗಳನ್ನು ಪೂರೈಸುವ ಹಾಗೂ ಅವರ ಶೋಷಣೆಯನ್ನು ತಡೆಯುವ ಕಾರ್ಯ ಯೋಜನೆಯನ್ನು ಹಮ್ಮಿಕೊಂಡಿದೆ. ಬಾಲಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕೆಂದು 'ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು' (೧೯೮೬) ಜಾರಿಗೊಳಿಸಲಾಗಿದೆ. ಈ ಕಾಯ್ದೆ ಅಥವಾ ಶಾಸನವನ್ನು ಉಲ್ಲಂಘಿಸಿದ ಉದ್ಯೋಗಪತಿಗಳು ಪ್ರತಿಯೊಬ್ಬ ಬಾಲ ಕಾರ್ಮಿಕನ ಪರವಾಗಿ ೨೦,೦೦೦/- ರೂ ಗಳ ದಂಡವನ್ನು ಕಲ್ಯಾಣ ನಿಧಿಗೆ ಕಡ್ಡಾಯವಾಗಿ ಭರಿಸಬೇಕಾಗುತ್ತದೆ.

೪. **ವರದಕ್ಷಿಣೆ ಪಿಡುಗಿನಿಂದಾಗುವ ದುಷ್ಪರಿಣಾಮಗಳಾವುವು ?**

ವರದಕ್ಷಿಣೆ ಸ್ತ್ರೀಯರ ಸ್ವಾಭಿಮಾನ, ಗೌರವ, ಸ್ಥಾನಮಾನವನ್ನು ಕುಗ್ಗಿಸುತ್ತದೆ ಮತ್ತು ಕೌಟುಂಬಿಕ ಕಲಹಗಳನ್ನುಂಟು ಮಾಡುತ್ತದೆ. ಅದು ಸ್ತ್ರೀ ಪುರುಷರ ನಡುವೆ ಒಡಕು ಉಂಟಾಗಲು ಕಾರಣವಾಗಿದೆ. ವರದಕ್ಷಿಣೆ ಪಿಡುಗಿನಿಂದಾಗಿ ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚುವುದು, ಕೌಟುಂಬಿಕ ಸಂಬಂಧಗಳ ಹಾಳಾಗುವುವು. ವರದಕ್ಷಿಣೆ ಹಣದ ದಾಹದಿಂದಾಗಿ ಮೋಸದ ವಿವಾಹಗಳು ಕೂಡಾ ನಡೆಯುತ್ತಿವೆ. ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ವಿವಾಹ ವಿಚ್ಛೇದನ ಪ್ರಕರಣಗಳ ಸಂಖ್ಯೆಗಳು ಹೆಚ್ಚುತ್ತಿವೆ.

೫. **ವರದಕ್ಷಿಣೆ ಸಮಸ್ಯೆಗೆ ಪರಿಹಾರ ಕ್ರಮಗಳಾವುವು ?**

ವರದಕ್ಷಿಣೆ ಪಿಡುಗನ್ನು ಶಾಸನಾತ್ಮಕವಾಗಿ ನಿವಾರಣೆ ಮಾಡಲು ಭಾರತ ಸರ್ಕಾರ ೧೯೬೧ ರಲ್ಲಿ 'ವರದಕ್ಷಿಣೆ ನಿಷೇಧ' ಕಾಯ್ದೆಯನ್ನು ಜಾರಿಗೊಳಿಸಿತು. ವರದಕ್ಷಿಣೆ ಷರತ್ತಿನ ಮೇರೆಗೆ ವಿವಾಹವಾಗುವುದನ್ನು ಈ ಕಾನೂನು ನಿಷೇಧಿಸಿದೆ. ಈ ಕಾಯ್ದೆ ಉಲ್ಲಂಘಿಸಿದವರಿಗೆ ೫೦೦೦ ರೂ.ಗಳ ದಂಡ, ಇಲ್ಲವೇ ೬ ತಿಂಗಳ ಕಾರಾಗೃಹವಾಸ, ಇಲ್ಲವೇ ಎರಡನ್ನೂ ಒಟ್ಟಿಗೆ ವಿಧಿಸಬಹುದಾಗಿದೆ. ಈ ಕಾಯ್ದೆಯನ್ನು ೧೯೮೬ರಲ್ಲಿ ತಿದ್ದುಪಡಿಮಾಡಿ ಅದನ್ನು ಮತ್ತಷ್ಟು ಕಠಿಣಗೊಳಿಸಲಾಯಿತು. ತಿದ್ದುಪಡಿಗೊಂಡಿರುವ ಈ ಕಾಯ್ದೆ ಪ್ರಕಾರ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವ ಹಾಗೂ ಕೊಡುವಂತೆ ಒತ್ತಾಯಿಸುವ ವ್ಯಕ್ತಿಗಳಿಗೆ ೫ ವರ್ಷಗಳಿಗೂ ಕಡಿಮೆಯಿರದ ಕಾರಾಗೃಹ ಶಿಕ್ಷೆ ಮತ್ತು ೧೫,೦೦೦ ರೂಗಳಿಗೆ ಕಡಿಮೆಯಿರದ ಹಣವನ್ನು



Use e-papers for save trees-InyaTrust.com

ದಂಡವಾಗಿ ವಿಧಿಸಬಹುದು. ವರದಕ್ಷಿಣೆ ಸಾವು ಪ್ರಕರಣವನ್ನು 'ಭಾರತ ದಂಡ ಸಂಹಿತೆ' (Indian Penal Code) ಹಾಗೂ 'ಭಾರತ ಅಪರಾಧ ವಿಚಾರಣಾ ಸಂಹಿತೆ'ಗೆ (Criminal Procedure Code.) ಸೇರ್ಪಡೆಗೊಳಿಸಲಾಗಿದೆ. ಈ ವಿಚಾರಣೆಯನ್ನು ಜಾಮೀನು ರಹಿತ ಮತ್ತು ರಾಜಿರಹಿತ ನೆಲೆಯಲ್ಲಿ ನಡೆಸಬಹುದಾಗಿದೆ. ಕಾನೂನಿನ ಮೂಲಕವಲ್ಲದೆ ಜನಜಾಗೃತಿ, ಅಂತರ್ಜಾತಿ ವಿವಾಹ, ಆಧುನಿಕ ಪ್ರಚಾರ ಮಾಧ್ಯಮಗಳು, ಸ್ವಯಂ ಸೇವಾ ಸಂಘಟನೆಗಳು ಮತ್ತು ಮಹಿಳಾ ಸಂಘಟನೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ವರದಕ್ಷಿಣೆ ಪಿಡುಗನ್ನು ತೊಲಗಿಸಬಹುದು.

೬. **ವರದಕ್ಷಿಣೆ ಎಂದರೇನು?**

ವಿವಾಹದ ಉಡುಗೊರೆಯಾಗಿ ವಧುವಿನ ಕುಟುಂಬದವರಿಂದ ನಾನಾರೂಪದಲ್ಲಿ ಅಪೇಕ್ಷಿಸಲಾಗುವ ಸ್ವತ್ತು, ಚಿನ್ನಾಭರಣ, ನಗದು ಅಥವಾ ವಾಹನ ಇತ್ಯಾದಿಗಳು ವರದಕ್ಷಿಣೆಯ ರೂಪಗಳಾಗಿರುತ್ತವೆ. ವರದಕ್ಷಿಣೆಯನ್ನು ಕೊಡುವುದು ಹಾಗೂ ಪಡೆಯುವುದು ಶಿಕ್ಷಾರ್ಹ ಅಪರಾಧ.

೭. **ಹೆಣ್ಣು ಭ್ರೂಣ ಹತ್ಯೆಗೆ ಕಾರಣಗಳೇನು?**

ಬಡತನ, ವರದಕ್ಷಿಣೆಯ ಭೀತಿ, ಅನಕ್ಷರತೆ, ಅಜ್ಞಾನ, ಸ್ತ್ರೀ ವಿರೋಧಿ ನಿಲುವುಗಳು, ಗಂಡುಮಗುವಿನ ಬಯಕೆ ಮುಂತಾದ ಕಾರಣಗಳಿಂದಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ನಡೆಯುತ್ತಿವೆ.



Use e-papers for save trees-InyaTrust.com

# ಭೂಗೋಳಶಾಸ್ತ್ರ



Use e-papers for save trees-InyaTrust.com

# ಅಧ್ಯಾಯ –1

# ಭಾರತ ನಮ್ಮ ಮಾತೃಭೂಮಿ

**ಮುಖ್ಯ ಅಂಶಗಳು**

| | | |
|---|---|---|
| **ದಿಕ್ಕು** | - | ಉತ್ತರ ಗೋಳಾರ್ಧದ ಪೂರ್ವಭಾಗ |
| **ಸ್ಥಾನ** | - | $8^0 4'$ ಉತ್ತರ ಅಕ್ಷಾಂಶದಿಂದ $37^0 6'$ ಉತ್ತರ ಅಕ್ಷಾಂಶ , $68^0.7'$ ಪೂರ್ವ**ರೇಖಾಂಶದಿಂದ** $97^0.25'$ಪೂರ್ವರೇಖಾಂಶ. |
| **ವಿಸ್ತೀರ್ಣ** | - | 32,87,263 ಚ. ಕಿ. ಮೀ. |
| **ಉತ್ತರದಿಂದ ದಕ್ಷಿಣಕ್ಕಿರುವ ದೂರ** | - | 3214 ಕಿ. ಮೀ. |
| **ಪೂರ್ವದಿಂದ ಪಶ್ಚಿಮಕ್ಕಿರುವ ದೂರ** | - | 2933 ಕಿ. ಮೀ. |
| **ಭಾರತದ ಪ್ರಮಾಣ ವೇಳೆ** | - | $82\ 1/2^0$ಪೂರ್ವ ರೇಖಾಂಶ (ಅಲಹಬಾದ್ ಉತ್ತರ ಪ್ರದೇಶ) |
| **ಪ್ರಮುಖ ಅಕ್ಷಾಂಶ** | - | $23 1/2^0$ ಉತ್ತರ ಅಕ್ಷಾಂಶ (ಕರ್ಕಾಟಕ ಸಂಕ್ರಾಂತಿ ವೃತ್ತ) |
| **ಕರ್ಕಾಟಕ ಸಂಕ್ರಾಂತಿ ವೃತ್ತ** | - | ಭಾರತವನ್ನು ಎರಡು ಸಮಭಾಗಗಳನ್ನಾಗಿ ಮಾಡುತ್ತದೆ. |
| **ರಾಜಧಾನಿ** | - | ದೆಹಲಿ |
| **ರಾಜ್ಯಗಳು** | - | 28 |
| **ಕೇಂದ್ರಾಡಳಿತ ಪ್ರದೇಶಗಳು** | - | 06 |
| **ದಕ್ಷಿಣದ ತುತ್ತ ತುದಿ** | - | ಅಂಡಮಾನ್ ದ್ವೀಪದಲ್ಲಿರುವ ಇಂದಿರಾ ಪಾಯಿಂಟ್ |

**I ಸರಿಯಾದ ಉತ್ತರವನ್ನು ಆರಿಸಿ ಬರೆಯಿಸಿ**

**1.** **ಭಾರತ ಒಂದು**

**a) ಪರ್ಯಾಯ ದ್ವೀಪ** b) ದ್ವೀಪ c) ಪ್ರಸ್ಥಭೂಮಿ d)ಮೈದಾನ

**2.** **ಭಾರತ ಏಷಿಯಾ ಖಂಡದ ________ ಭಾಗದಲ್ಲಿದೆ.**

a) ನೈರುತ್ಯ, **b) ಆಗ್ನೇಯ** c) ಈಶಾನ್ಯ d) ವಾಯುವ್ಯ

**3.** **ಭಾರತಕ್ಕೆ 'ಇಂಡಿಯಾ' ಎಂಬ ಹೆಸರು ಬರಲು ಕಾರಣವಾದ ನದಿ**

**a) ಸಿಂಧೂ** b) ಗಂಗಾ c) ಸಟ್ಲೇಜ್ d) ಯಮುನಾ

**4.** **ಪ್ರಪಂಚದ ಒಟ್ಟು ಭೂ ಭಾಗದಲ್ಲಿ _______ ರಷ್ಟನ್ನು ಭಾರತ ಹೊಂದಿದೆ**

**a) 2.4%** b)2.8% c) 2.2% d) 2.6%

**5.** **ಭಾರತದ ರಾಜಧಾನಿ**

a) ಲಕ್ನೋ b) ಬೆಂಗಳೂರು **c) ನವದೆಹಲಿ** d)ಹೈದ್ರಾಬಾದ್



Use e-papers for save trees-InyaTrust.com

**6.** **ಭಾರತೀಯ ಪ್ರಮಾಣಿತ ವೇಳೆ ನಿರ್ಧಾರವಾಗಿರುವುದು.**

a) 231/2$^0$ ಉತ್ತರ ಅಕ್ಷಾಂಶ b) 12$^0$ ದಕ್ಷಿಣ ಅಕ್ಷಾಂಶ

c) 88$^0$ಪೂರ್ವ ರೇಖಾಂಶ **d) 821/2$^0$ ಪೂರ್ವ ರೇಖಾಂಶ**

**7.** **ಭಾರತದ ಪಮಾಣ ವೇಳೆಯನ್ನು ನಿರ್ಧರಿಸುವ 821/2$^0$ ಪೂರ್ವ ರೇಖಾಂಶ _____ಹತ್ತಿರ ಹಾದು ಹೋಗುತ್ತದೆ.**

**a) ಅಲಹಾಬಾದ್** b)ಅಹ್ಮದಬಾದ್ c) ಗೋರಖ್‌ಪುರ d) ಕೋಲ್ಕತ್ತ

**8** **ಪ್ರಪಂಚದ ಒಟ್ಟು ಭೂ ಭಾಗದಲ್ಲಿ ಶೇ. 2.4 ರಷ್ಟನ್ನು ಇಎಬಾರತ ಹೊಂದಿದ್ದು, ವಿಸ್ತೀರ್ಣದಲ್ಲಿ _______ದೊಡ್ಡ ರಾಷ್ಟ್ರವಾಗಿದೆ.**

a) ಎರಡನೇ b)ಐದನೇ **c) ಏಳನೇ** d) ಹತ್ತನೇ

**II** **ಸೂಕ್ತ ಪದಗಳಿಂದ ಬಿಟ್ಟ ಸ್ಥಳಗಳನ್ನು ತುಂಬಿ**

1. ಭಾರತಕ್ಕೆ 'ಇಂಡಿಯ' ಎಂಬ ಹೆಸರು ಬರಲು ಕಾರಣವಾದ ನದಿ **ಸಿಂಧೂ.**
2. ಭಾರತದ ಒಟ್ಟು ವಿಸ್ತೀರ್ಣ **32,87,263 ಚ. ಕಿ. ಮೀ.**
3. ಭಾರತದ ಮಧ್ಯ ಭಾಗದಲ್ಲಿ **231/2$^0$ ಉತ್ತರ ಅಕ್ಷಾಂಶ** ಹಾದುಹೋಗುತ್ತದೆ.
4. ಭಾರತದ ದಕ್ಷಿಣ ದಿಕ್ಕಿಗೆ ಇರುವ ದೇಶ **ಶ್ರೀಲಂಕಾ**
5. ಭಾರತ **6100 ಕಿ. ಮೀ** ಉದ್ದದ ಸಮುದ್ರ ತೀರವನ್ನು ಹೊಂದಿದೆ.
6. ಭಾರತವು **8.4'** ಯಿಂದ **37'6'** ಉತ್ತರ ಅಕ್ಷಾಂಶದವರೆಗೆ ಹಬ್ಬಿದೆ.
7. ಭಾರತವು **68$^0$7'** ಯಿಂದ **97$^0$25'** ಪೂರ್ವ ರೇಖಾಂಶದವರೆಗೆ ಹಬ್ಬಿದೆ.
8. ಭಾರತದ ಪ್ರಮಾಣ ವೇಳೆಯು ಗ್ರೀನ್ ವಿಚ್ ಕಾಲಮಾನಕ್ಕಿಂತ **5 ಗಂಟೆ 30 ನಿಮಿಷ** ಮುಂದೆ ಇರುವುದು.
9. NCT ಎಂದರೆ **ರಾಷ್ಟ್ರೀಯ ರಾಜಧಾನಿ ಪ್ರದೇಶ.**
10. 2011 ರ ಜನಗಣತಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ **121 ಕೋಟಿ**
11. ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ **17.5%** ರಷ್ಟನ್ನು ಭಾರತ ಹೊಂದಿದೆ.
12. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇರುವ ಗಡಿರೇಖೆ **ರಾಡ್‌ಕ್ಲಿಫ್ ರೇಖೆ**
13. ಭಾರತ ಮತ್ತು ಚೀನಾ ದೇಶದ ನಡುವೆ ಇರುವ ಗಡಿರೇಖೆ **ಮ್ಯಾಕ್‌ಮೋಹನ್ ರೇಖೆ**
14. ಭಾರತ ಮತ್ತು ಆಫ್ಘಾನಿಸ್ತಾನಗಳ ನಡುವೆ ಇರುವ ಗಡಿರೇಖೆ **ಡುರ್ಯಾಂಡ್ ರೇಖೆ**
15. ಭಾರತವನ್ನು **29 ರಾಜ್ಯಗಳು** ಹಾಗೂ **6 ಕೇಂದ್ರಾಡಳಿತ** ಪ್ರದೇಶಗಳನ್ನಾಗಿ ವಿಭಾಗಿಸಲಾಗಿದೆ.



Use e-papers for save trees-InyaTrust.com

**III ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ**

| | A | B | |
|---|---|---|---|
| 1. | ಭಾರತದ ವಿಸ್ತೀರಣ | a) 2933 ಕಿ. ಮೀ. | b) 32,87,263 ಚ. ಕಿ. ಮೀ. |
| 2. | ಭಾರತದ ಒಟ್ಟು ಭೂ ಮೇರೆಯ ಉದ್ದ | b) 32,87,263 ಚ. ಕಿ. ಮೀ. | c) 15,200 ಕಿ. ಮೀ. |
| 3. | ಭಾರತದ ಕರಾವಳಿಯ ಉದ್ದ | c) 15,200 ಕಿ. ಮೀ. | e) 6,100 ಕಿ. ಮೀ. |
| 4. | ಪೂರ್ವದಿಂದ ಪಶ್ಚಿಮಕ್ಕಿರುವ ಉದ್ದ | d) 3214 ಕಿ. ಮೀ. | a) 2933 ಕಿ. ಮೀ. |
| 5. | ಉತ್ತರದಿಂದ ದಕ್ಷಿಣಕ್ಕಿರುವ ಉದ್ದ | e) 6,100 ಕಿ. ಮೀ. | d) 3214 ಕಿ. ಮೀ. |

**IV ಗುಂಪಿನಲ್ಲಿ ಚರ್ಚಿಸಿದ ನಂತರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಭಾರತವು ಏಷ್ಯಾಖಂಡದ ಯಾವ ಭಾಗದಲ್ಲಿದೆ?**
ಭಾರತವು ಏಷ್ಯಾಖಂಡದ ಒಂದು ಪರ್ಯಾಯ ದ್ವೀಪವಾಗಿದ್ದು, ಏಷ್ಯಾಖಂಡದ ಆಗ್ನೇಯ ಭಾಗದಲ್ಲಿದೆ.

**2. ಭಾರತವು ಭೂಮಿಯ ಯಾವ ಗೋಳಾರ್ಧದಲ್ಲಿದೆ?**
ಭಾರತವು ಭೂಮಿಯ ಉತ್ತರ ಗೋಳಾರ್ಧದಲ್ಲಿದೆ.

**3. ಭಾರತದ ದಕ್ಷಿಣದ ತುತ್ತ ತುದಿ ಯಾವುದು?**
ಇಂದಿರಾ ಪಾಯಿಂಟ್

**4. ಭಾರತದ ಮುಖ್ಯ ಭಾಗದ ದಕ್ಷಿಣದ ತುದಿ ಯಾವುದು?**
ಕನ್ಯಾಕುಮಾರಿ

**5. ಭಾರತದ ಮಧ್ಯಭಾಗದಲ್ಲಿ ಹಾದು ಹೋಗುವ ಪ್ರಮುಖ ಅಕ್ಷಾಂಶ ಯಾವುದು?**
$231/2^0$ ಉತ್ತರ ಅಕ್ಷಾಂಶ

**6. ಇಂದಿರಾ ಪಾಯಿಂಟ್ ಯಾವ ದ್ವೀಪದಲ್ಲಿದೆ?**
ಭಾರತದ ದಕ್ಷಿಣದ ತುತ್ತ ತುದಿ ಇಂದಿರಾ ಪಾಯಿಂಟ್ ನಿಕೋಬಾರ್ ದ್ವೀಪದಲ್ಲಿದೆ.

**7. ಭಾರತ ಯಾವ ಅಕ್ಷಾಂಶ ಮತ್ತು ರೇಖಾಂಶಗಳ ನಡುವೆ ಹರಡಿದೆ?**
ಭಾರತ (i) $6^0$,4' ಉತ್ತರ ಅಕ್ಷಾಂಶದಿಂದ $37^0$.6' ಉತ್ತರ ಅಕ್ಷಾಂಶದವರೆಗೆ
(ii) $68^0$.7' ಪೂರ್ವ ರೇಖಾಂಶದಿಂದ $97^0$.25' ಪೂರ್ವ ರೇಖಾಂಶದವರೆಗೆ ಹರಡಿದೆ.

**8. ಭಾರತದ ನೆರೆಹೊರೆಯ ರಾಷ್ಟ್ರಗಳಾವುವು?**
ಭಾರತವು 7 ರಾಷ್ಟ್ರಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ.
ವಾಯುವ್ಯ - ಆಫ್ಘಾನಿಸ್ತಾನದ ಮತ್ತು ಪಾಕಿಸ್ತಾನ.
ಉತ್ತರ- ಚೀನಾ, ನೇಪಾಳ ಮತ್ತು ಭೂತಾನ್
ಪೂರ್ವ - ಮ್ಯಾನ್ಮಾರ್ (ಬರ್ಮಾ) ಹಾಗೂ ಬಾಂಗ್ಲಾದೇಶ
ದಕ್ಷಿಣ - ಶ್ರೀಲಂಕಾ
ನೈರುತ್ಯ- ಮಾಲ್ಡೀವ್ಸ್



Use e-papers for save trees-InyaTrust.com

# ಅಧ್ಯಾಯ 2
# ಭಾರತದ ಪ್ರಮುಖ ಲಕ್ಷಣಗಳು

**ಪ್ರಮುಖ ಅಂಶಗಳು**

| | | |
|---|---|---|
| **3 ಸಮಾನಾಂತರ ಶ್ರೇಣಿಗಳು** | – | 1)ಮಹಾ ಹಿಮಾಲಯ 2) ಮಧ್ಯ ಹಿಮಾಲಯ 3) ಸಿವಾಲಿಕ್ ಬೆಟ್ಟಗಳು |
| **ಎತ್ತರದ ಶಿಖರಗಳು** | – | ಮೌಂಟ್ ಎವರೆಸ್ಟ್, ಕೆ –2 ಕಾಂಚನಾ ಗಂಗಾ |
| **ಗಿರಿಧಾಮಗಳು** | – | ರಾಣಿಖೇತ್, ಡಾರ್ಜಿಲಿಂಗ್, ಸಿಮ್ಲಾ |
| **ಕಣಿವೆಗಳು** | – | ಕಾಶ್ಮೀರ ಕಣಿವೆ, ಕಾಂಗ್ರಾ ಕಣಿವೆ, ಕುಲು ಕಣಿವೆ, ಲಾಹುಲ್ ಕಣಿವೆ, |
| **ಕಣಿವೆ ಮಾರ್ಗಗಳು** | – | (i)ಶಿಪ್ಕಿಲಾ(ಟಿಬೆಟ್‌ನ ಗಾರ್ಟೋಕ್‌ಮತ್ತುಹಿಮಾಚಲ ಪ್ರದೇಶದ ಸಿಮ್ಲಾ)<br>(ii)ಜಿಲೆಪ್–ಲಾ(ಟಿಬೆಟ್ಟಿನಲ್ಹಾಸಹಾಗೂಪಶ್ಚಿಮಬಂಗಾಳದಕಾಲಿಂಪಾಂಗ್) |
| **ಮೌಂಟ್ ಎವರೆಸ್ಟ್** | – | 8848ಮೀ. |
| **ಗಾಡ್ವಿನ್ಆಸ್ಟಿನ್ ಅಥವಾ ಮೌಂಟ್** | – | ಕೆ2 8611 ಮೀ. |
| **ಹಿಮಾಲಯ ಪರ್ವತ ಶ್ರೇಣಿ** | – | 25,00 ಕಿ. ಮೀ. (ಪಾಮಿರ್ ಗ್ರಂಥಿಯಿಂದ ನಾಗಾಲ್ಯಾಂಡ್‌ವರೆಗೆ) |
| **ಹಿಮಾಚಲದ ಪರ್ವತ ಶ್ರೇಣಿಗಳು** | – | ಪಿರ್‌ಪಂಜಾಲ್, ದವಲ್‌ಧರ್, ಮಹಾಭಾರತ್, ಮಸ್ಸೂರಿ |
| **ಭಾರತದ ಹೃದಯ ಭಾಗ** | – | ಉತ್ತರ ಭಾರತದ ಮೈದಾನ |
| **ದಕ್ಷಿಣ ಭಾರತದ ಎತ್ತರದ ಶಿಖರ** | – | ಆನೈಮುಡಿ (ಅಣ್ಣಾ ಮಲೈ ಶ್ರೇಣಿ) |
| **ಉಪ್ಪುನೀರಿನ ಸರೋವರಗಳು ಅಥವಾ ಲಗೂನ್‌ಗಳು** | – | ಚಿಲ್ಕ ಸರೋವರ (ಒರಿಸ್ಸಾ) & ಪುಲಿಕಾಟ್ ಸರೋವರ (ತಮಿಳುನಾಡು) |
| **ಪೂರ್ವ ಕರಾವಳಿಯ ಎರಡು ಭಾಗಗಳು** | | (i) ಉತ್ಕಲ ತೀರ & (ii) ಕೋರಮಂಡಲ ತೀರ |
| **ಪಶ್ಚಿಮ ಕರಾವಳಿಯ ಭಾಗಗಳು** | – | ಮಲಬಾರ್‌ತೀರ, ಕರ್ನಾಟಕ (ಕೆನರಾ)ತೀರ, ಕೊಂಕಣ ತೀರ, ಗುಜರಾತ್ ಕರಾವಳಿ, ಕಛ್ ತೀರ ಮತ್ತು ಕಾಠೇವಾಡ ಪರ್ಯಾಯ ದ್ವೀಪ |
| **ದ್ವೀಪಗಳು** | – | (i) ಪಶ್ಚಿಮದ ಅರಬ್ಬಿ ಸಮುದ್ರದಲ್ಲಿ ಲಕ್ಷದ್ವೀಪಗಳು (43 ದ್ವೀಪಗಳು)<br>(ii) ಬಂಗಾಳ ಕೊಲ್ಲಿಯಲ್ಲಿ ಅಂಡಮಾನ್ ನಿಕೋಬಾರ್ ದ್ವೀಪಗಳು (204 ದ್ವೀಪಗಳು) |
| **ಭಾರತದ ಎತ್ತರದ ಶಿಖರ** | – | ಕಾರಾಕೊರಂ ಶ್ರೇಣಿಯಲ್ಲಿರುವ ಮೌಂಟ್ ಕೆ–2(ಮೌಂಟ್ ಗಾಡ್ವಿನ್ ಆಸ್ಟಿನ್) |
| **ದಕ್ಷಿಣದ ತುದಿ** | – | ಅಂಡಮಾನ್ ದ್ವೀಪದಲ್ಲಿರುವ ಇಂದಿರಾಪಾಯಿಂಟ್ |
| **6100ಕಿ.ಮೀ** | – | ಭಾರತದ ಕರಾವಳಿಯ ಉದ್ದ |
| **1500ಕಿ.ಮೀ.** | – | ಪಶ್ಚಿಮ ಕರಾವಳಿಯ ದುದ |
| **247** | – | ಭಾರತದ ಒಟ್ಟು ದ್ವೀಪಗಳು |
| **204** | – | ಬಂಗಾಳ ಕೊಲ್ಲಿಯಲ್ಲಿರುವ ದ್ವೀಪಗಳು |
| **43** | – | ಅರಬ್ಬಿ ಸಮುದ್ರದಲ್ಲಿರುವ ದ್ವೀಪಗಳು. |
| **2665 ಮೀಟರ್** | – | ಆನೈಮುಡಿ ಶಿಖರದ ಎತ್ತರ |
| **8848 ಮೀಟರ್** | – | ಮೌಂಟ್ ಎವರೆಸ್ಟ್‌ನ ಎತ್ತರ |
| **8611ಮೀಟರ್** | – | ಗಾಡ್ವಿನ್ ಆಸ್ಟಿನ್ ಶಿಖರದ ಎತ್ತರ |
| **2500 ಕಿ. ಮೀ.** | – | ಹಿಮಾಲಯ ಪರ್ವತ ಶ್ರೇಣಿಯ ಉದ್ದ. |



Use e-papers for save trees-InyaTrust.com

**I ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

**1. ಭಾರತದ ಅತಿ ಎತ್ತರವಾದ ಶಿಖರ**

a) ಗಾಡ್ವಿನ್ ಆಸ್ಟಿನ್ (ಕೆ-2) **b) ಮೌಂಟ್ ಎವರೆಸ್ಟ್** c) ಗೌರಿಶಂಕರ d) ಚಂದ್ರಗಿರಿ

**2. ಭಾರತದ ಮೇಲ್ಮೈ ಲಕ್ಷಣಗಳನ್ನು ಅತ್ಯಂತ ದೊಡ್ಡದು**

**a) ಪರ್ಯಾಯ ಪ್ರಸ್ಥಭೂಮಿ** b) ಉತ್ತರ ಭಾರತದ ಮೈದಾನಗಳು

c) ಹಿಮಾಲಯ ಪರ್ವತಗಳು d) ದ್ವೀಪಗಳು.

**3. ದಕ್ಷಿಣ ಭಾರತದ ಎತ್ತರವಾದ ಶಿಖರ**

a) ರಾಜಮುಡಿ **b) ಆನೈಮುಡಿ** c) ಮುಳ್ಳಯ್ಯನಗಿರಿ d) ಬ್ರಹ್ಮಗಿರಿ.

**4. ಭಾರತದಲ್ಲಿರುವ ದ್ವೀಪಗಳ ಸಂಖ್ಯೆ**

**a) 247** b) 267 c) 204 d) 268

**5. ಲಕ್ಷದ್ವೀಪಗಳು ಕಂಡು ಬರುವುದು ಇಲ್ಲಿ**

a) ಬಂಗಾಳಕೊಲ್ಲಿ **b) ಅರಬ್ಬಿ ಸಮುದ್ರ** c)ಕೆಂಪು ಸಮುದ್ರ d) ಕ್ಯಾಸ್ಪಿಯನ್ ಸಮುದ್ರ

**6. ಪುಲಿಕಾಟ್ ಸರೋವರ ಇರುವ ರಾಜ್ಯ**

**a) ತಮಿಳುನಾಡು** b) ಪಶ್ಚಿಮ ಬಂಗಾಳ c) ಬಿಹಾರ d) ಒರಿಸ್ಸಾ

**7. ಚಿಲ್ಕ ಸರೋವರ ಇರುವ ರಾಜ್ಯ**

a) ತಮಿಳುನಾಡು b)ಪಶ್ಚಿಮ ಬಂಗಾಳ c) ಬಿಹಾರ **d) ಒರಿಸ್ಸಾ**

**8 ಸಿವಾಲಿಕ್ ಬೆಟ್ಟಗಳ ಶ್ರೇಣಿಯಲ್ಲಿ ಕಂಡು ಬರುವ ಕಿರಿದಾದ ಮೈದಾನಗಳಿಗೆ**

a) ಕಣಿವೆಗಳು b) ಗಿರಿಧಾಮಗಳು **c) ಡೂನ್‌ಗಳು** d) ಜಲಸಂಧಿಗಳು.

**9. ಪ್ರಪಂಚದಲ್ಲೇ ಅತಿ ಎತ್ತರವಾದ ಶಿಖರ_____**

**a) ಮೌಂಟ್ ಎವರೆಸ್ಟ್** b)ನಂಗಾ ಪರ್ವತ c) ನಂದಾದೇವಿ d)ಮೌಂಟ್ ಗಾಡ್ವಿನ್ ಆಸ್ಟಿನ್

**II ಸೂಕ್ತವಾದ ಪದಗಳಿಂದ ಬಿಟ್ಟ ಸ್ಥಳ ತುಂಬಿ**

1. ಭಾರತದ ಮೇಲ್ಮೈ ಲಕ್ಷಣಗಳನ್ನು ಪ್ರಮುಖವಾಗಿ **ನಾಲ್ಕುವಿಭಾಗಗಳಾಗಿ** ಮಾಡಲಾಗಿದೆ.
2. ಮಹಾ ಹಿಮಾಲಯವನ್ನು **ಹಿಮಾದ್ರಿ** ಎಂತಲೂ ಕರೆಯುತ್ತಾರೆ.
3. ಪ್ರಪಂಚದ ಅತಿ ಎತ್ತರವಾದ ಶಿಖರ **ಮೌಂಟ್ ಎವರೆಸ್ಟ್ (8848 ಮೀಟರ್)**
4. ಉತ್ತರ ಭಾರತದ ಮೈದಾನ **ಮೆಕ್ಕಲು ಮಣ್ಣಿನಿಂದ** ಆವೃತವಾಗಿದೆ.
5. ಕರ್ನಾಟಕದಲ್ಲಿ ಪಶ್ಚಿಮಘಟ್ಟಗಳನ್ನು **ಸಹ್ಯಾದ್ರಿ** ಎಂತಲೂ ಕರೆಯುತ್ತಾರೆ.
6. ಪಶ್ಚಿಮ ಘಟ್ಟ ಹಾಗೂ ಪೂರ್ವ ಘಟ್ಟಗಳು **ನೀಲಗಿರಿ** ಬೆಟ್ಟಗಳಲ್ಲಿ ಸಂಧಿಸುತ್ತವೆ.



Use e-papers for save trees-InyaTrust.com

**III ಹೊಂದಿಸಿ ಬರೆಯಿರಿ**

| | A | B | ಉತ್ತರ |
|---|---|---|---|
| 1. | ರಾಣಿಖೇತ್ | a) ಪಾದಬೆಟ್ಟ | b) ಗಿರಿಧಾಮ |
| 2. | ನಂದಾದೇವಿ | b) ಗಿರಿಧಾಮ | c) ಪರ್ವತ |
| 3. | ಪಿರ್‌ಪಂಜಾಲ್ | c) ಪರ್ವತ | d) ಪರ್ವತ ಶ್ರೇಣಿ |
| 4. | ಕುಲು | d) ಪರ್ವತ ಶ್ರೇಣಿ | e) ಕಣಿವೆ |
| | | e) ಕಣಿವೆ | |

**IV ಗುಂಪಿನಲ್ಲಿ ಚರ್ಚಿಸಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

**1. ಹಿಮಾಲಯದ ಪಾದಬೆಟ್ಟಗಳಿಗಿರುವ ಇನ್ನೊಂದು ಹೆಸರೇನು?**

ಸಿವಾಲಿಕ್ ಬೆಟ್ಟಗಳು

**2. ಹಿಮಾಲಯ ಪರ್ವತದಿಂದಾಗುವ ಅನುಕೂಲತೆಗಳೇನು?**

ಹಿಮಾಲಯ ಪರ್ವತ ಶ್ರೇಣಿಯು ಭಾರತದ ಜನ ಜೀವನದ ಮೇಲೆ ಅಪಾರವಾದ ಪ್ರಭಾವವನ್ನು ಬೀರುತ್ತದೆ. ಮಧ್ಯ ಏಷ್ಯಾದಿಂದ ಬೀಸಿ ಬರುವ ಶೀತಮಾರುತಗಳನ್ನು ತಡೆದು, ಭಾರತಕ್ಕೆ ರಕ್ಷಣೆ ಒದಗಿಸುತ್ತವೆ. ಅನೇಕ ನದಿಗಳ ಉಗಮಸ್ಥಾನವಾಗಿದೆ. ಹಿಮಾಲಯದ ತಪ್ಪಲಿನಲ್ಲಿ ಹರಿಯುವ ನದಿಗಳು ಸಾರ್ವಕಾಲಿಕ ನದಿಗಳಾಗಿದ್ದು, ನೀರಾವರಿ ಮತ್ತು ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಸಹಕಾರಿಯಾಗಿವೆ. ಇದು ಅನೇಕ ವಿಧದ ಸಸ್ಯಗಳು ಹಾಗೂ ಪ್ರಾಣಿಗಳ ಆಶಯ ತಾಣವಾಗಿದೆ. ಇದು ಅನೇಕ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿದೆ. ಇಲ್ಲಿ ಪ್ರವಾಸಿಗಳಿಗೆ ಆಕರ್ಷಣೀಯ ಕೇಂದ್ರಗಳಿವೆ.

**3. ಪರ್ಯಾಯ ಪ್ರಸ್ಥಭೂಮಿಯ ವಿಸ್ತಾರವನ್ನು ತಿಳಿಸಿ**

ಇದು ಸಟ್ಲೇಜ್‌ಗಂಗಾ ಮೈದಾನದ ದಕ್ಷಿಣದಲ್ಲಿ ಹಿಂದೂ ಮಹಾ ಸಾಗರದಲ್ಲಿ ಚಾಚಿಕೊಂಡಿದೆ. ಇದರ ಒಟ್ಟು ಕ್ಷೇತ್ರ 16 ಲಕ್ಷ ಚ. ಕಿ. ಮೀ. ಇದು ಉತ್ತರದಲ್ಲಿ ಅರಾವಳಿ ಪರ್ವತದಿಂದ ದಕ್ಷಿಣದ ಕನ್ಯಾಕುಮಾರಿವರೆಗೆ ಹರಡಿದೆ.

**4. ಸಿವಾಲಿಕ್ ಶ್ರೇಣಿಗಳ ಬಗ್ಗೆ ಬರೆಯಿರಿ.**

ಇದು ಹಿಮಾಲಯಗಳಲ್ಲಿ ಇತ್ತೀಚೆಗೆ ನಿರ್ಮಿತವಾದುದು. ಇವು ಕಡಿಮೆ ಎತ್ತರವನ್ನು ಹೊಂದಿದ್ದು, ಇವುಗಳನ್ನು ಹಿಮಾಲಯದ ಪಾದಬೆಟ್ಟಗಳು ಎಂತಲೂ ಕರೆಯುವರು. ಇಲ್ಲಿ ಸಮತಟ್ಟಾದ ಕಿರಿದಾದ ಮೈದಾನಗಳಿವೆ. ಈ ಮೈದಾನಗಳಿಗೆ ಡೂನ್‌ಗಳು ಎನ್ನುವರು. ಉದಾಹರಣೆಗೆ : ಡೆಹರಾಡೂನ್, ಕೋಟಾ, ಪಾಟ್ಲಿ, ಚೌಕಾಂಬಾ, ಉದಾಂಪೂರ ಮತ್ತು ಕೋಟ್ಲಾಗಳು. ಇವು ಸಮುದ್ರ ಮಟ್ಟದಿಂದ 600 -1500 ಮೀಟರ್ ಎತ್ತರವನ್ನು ಹೊಂದಿರುತ್ತವೆ.

**5. ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?**

ಈ ಮೈದಾನಗಳು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿವೆ. ಆದ್ದರಿಂದ ಇವುಗಳನ್ನು ಸಂಚಯನ ಮೈದಾನಗಳೆನ್ನುವರು.



Use e-papers for save trees-InyaTrust.com

**6. ಉತ್ತರದ ಪರ್ವತದ ಮೂರು ಸಮನಾಂತರ ಶ್ರೇಣಿಗಳು ಯಾವುವು?**

(i) ಮಹಾ ಹಿಮಾಲಯ ಅಥವಾ ಹಿಮಾದ್ರಿ ii) ಮಧ್ಯ ಹಿಮಾಮಲಯ ಅಥವಾ ಹಿಮಾಚಲ
iii) ಸಿವಾಲಿಕ್ ಬೆಟ್ಟಗಳು

**7. ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?**

ಪೂರ್ವ ಮತ್ತು ಪಶ್ಚಿಮ ಘಟ್ಟಗಳು ನೀಲಗಿರಿ ಬೆಟ್ಟಗಳಲ್ಲಿಸಂಧಿಸುತ್ತವೆ.

**8. ಡೂನ್‌ಗಳೆಂದರೇನು? ಉದಾಹರಣೆ ಕೊಡಿ.**

ಸಿವಾಲಿಕ್ ಬೆಟ್ಟಗಳ ಶ್ರೇಣಿಯಲ್ಲಿ ಕಂಡುಬರುವ ಕಿರಾದಾದ ಮೈದಾನಗಳಿಗ ಅಥವಾ ಕಣಿವೆಗಳಿಗೆ ಡೂನ್‌ಗಳೆನ್ನುವರು. ಉದಾಹರಣೇ : ಡೆಹರಾಡೂನ್.

**9. ಹಿಮಾಚಲದ ಪರ್ವತ ಶ್ರೇಣಿಗಳನ್ನು ಹೆಸರಿಸಿ.**

ಪಿರ್‌ಪಂಜಾಲ್, ದವಲ್‌ಧರ್, ಮಹಾಭಾರತ್, ಮಸ್ಸೂರಿ

**10. ಹಿಮಾಚಲದಲ್ಲಿರುವ ಗಿರಿಧಾಮಗಳನ್ನು ಹೆಸರಿಸಿ.**

ಸಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇತ್, ಡಾರ್ಜಿಲಿಂಗ್.

**11. ಕಣಿವೆ ಮಾರ್ಗಗಳು ಯಾವುವು?**

ಕಾಶ್ಮೀರದ ಬುರ್ಜಿಲ, ಜೋಜಿತಾ ಹಾಗೂ ಹಿಮಾಚಲ ಪ್ರದೇಶದ ಬಾರಾಲಾಘ್‌ಚಲ

**12. ಪೂರ್ವ ಘಟ್ಟಗಳಲ್ಲಿರುವ ಎತ್ತರದ ಶಿಖರಗಳು ಯಾವುವು?**

ಆರ್ಮಕೊಂಡ ಮತ್ತು ಮಹೇಂದ್ರಗಿರ್

**13. ಪರ್ಯಾಯ ಪ್ರಸ್ಥಭೂಮಿ ಹೆಚ್ಚು ಪಾಮುಖ್ಯತೆಯನ್ನು ಹೊಂದಿದೆ. ಹೇಗೆ?**

ಪರ್ಯಾಯ ಪ್ರಸ್ಥಭೂಮಿ ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ.
ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ.
ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿದೆ.

**14. ಭಾರತದ ದ್ವೀಪ ಸಮೂಹಗಳು ಯಾವುವು?**

(i) ಬಂಗಾಳಕೊಲ್ಲಿಯಲ್ಲಿರುವ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು.
(ii) ಅರಬ್ಬಿ ಸಮುದ್ರದಲ್ಲಿರುವ ಲಕ್ಷ ದ್ವೀಪಗಳು.

**15. ಪಶ್ಚಿಮ ಘಟ್ಟಗಳು ಹಾಗೂ ಪೂರ್ವ ಘಟ್ಟಗಳಿಗಿರುವ ವ್ಯತ್ಯಾಸ.**

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
| --- | --- |
| (i) ಇವು ಹೆಚ್ಚು ಎತ್ತರವಾಗಿದ್ದು ನಿರಂತರವಾಗಿದೆ | (i) ಇವು ಎತ್ತರವೂ ಅಲ್ಲ ನಿರಂತರವೂ ಅಲ್ಲ. |
| (ii) ಇವು ಸಮುದ್ರಕ್ಕೆ ಹತ್ತಿರವಾಗಿವೆ | (ii) ಇವು ಸಮುದಕ್ಕೆ ಹತ್ತಿರವಾಗಿದ್ದು, ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ. |
| (iii) ಆನೈಮುಡಿ ಎತ್ತರ ಶಿಖರ | |



Use e-papers for save trees-InyaTrust.com

## 16. ಪಶ್ಚಿಮ ಕರಾವಳಿ ಹಾಗೂ ಪೂರ್ವ ಕರಾವಳಿಗಳಿಗಿರುವ ವ್ಯತ್ಯಾಸ

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| ೧) ಇದು ಅರಬ್ಬಿ ಸಮುದ್ರ ಮತ್ತು ಪಶ್ಚಿಮ ಮಧ್ಯ ಗುಜರಾತಿನ ಕಛ್‌ನಿಂದ ಕನ್ಯಾಕುಮಾರಿಯವರೆಗೆ ಹರಡಿದೆ. | (i) ಇದು ಪೂರ್ವ ಘಟ್ಟಗಳುಮತ್ತು ಬಂಗಾಳಕೊಲ್ಲಿಗಳನಡುವೆ ಕನ್ಯಾಕುಮಾರಿಯಿಂದ ಗಂಗಾನದಿ ಮುಖಜಭೂಮಿವರೆಗೆ ಹರಡಿದೆ. |
| (ii) ಇದನ್ನು ಮಲಬಾರ ತೀರ, ಕರ್ನಾಟಕ ಕರಾವಳಿ, ಕೊಂಕಣ ತೀರ, ಗುಜರಾತ್ ತೀರ ಕಛ್ ಮತ್ತು ಕಾಠೆವಾಡ ಪರ್ಯಾಯ ದ್ವೀಪಗಳಾಗಿ ವಿಂಗಡಿಸಲಾಗಿದೆ. | (ii) ಇದನ್ನು ದಕ್ಷಿಣದಲ್ಲಿ ಕೋರ ಮಂಡಲ ತೀರ ಎಂದು, ಉತ್ತರದಲ್ಲಿ ಉತ್ಕಲ ತೀರ ಎಂದು ವಿಂಗಡಿಸಲಾಗಿದೆ. ಇದು ಅಗಲ ಮತ್ತು ಸಮತಟ್ಟಾಗಿದೆ. |
| (iii) ಇದು 1500 ಕಿ. ಮೀ. ಉದ್ದ ಇದ್ದು ಮುಂಬಯಿ, ಮಂಗಳೂರು, ಕೊಚ್ಚಿ, ಕಾಂಡ್ಲಾ , ಮುಖಜ ಭೂಮಿಗಳನ್ನು ಒಳಗೊಂಡಿದೆ. | (iii) ಇದು ಮಹಾನದಿ, ಗೋದಾವರಿ, ಕೃಷ್ಣ ಕಾರಾವಾರ ಬಂದರುಗಳಿವೆ. ಮತ್ತು ಕಾವೇರಿ ನದಿಗಳ ಮುಖಜ ಭೂಮಿಗಳನ್ನು ಒಳಗೊಂಡಿದೆ. |



Use e-papers for save trees-InyaTrust.com

# ಅಧ್ಯಾಯ -3

# ಭಾರತದ ಮಾನ್ಸೂನ್ ವಾಯುಗುಣದ ಋತುಮಾನಗಳು ಮತ್ತು ಲಕ್ಷಣಗಳು

**ಪ್ರಮುಖ ಅಂಶಗಳು**

**ಭಾರತದ ನಾಲ್ಕು ಋತುಗಳು**

| | | | |
|---|---|---|---|
| (i) | ಚಳಿಗಾಲ | : | ಡಿಸೆಂಬರ್‌ನಿಂದ ಫೆಬ್ರವರಿವರೆಗೆ |
| (ii) | ಬೇಸಿಗೆ ಕಾಲ | : | ಮಾರ್ಚ್‌ನಿಂದ ಮೇ ವರೆಗೆ |
| (iii) | ಮಳೆಗಾಲ | : | ಜೂನ್‌ನಿಂದ ಸೆಪ್ಟೆಂಬರಂವರೆಗೆ |
| (iv) | ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ | : | ಅಕ್ಟೋಬರ್‌ನಿಂದ ನವೆಂಬರ್‌ವರೆಗೆ |

**ಭಾರತದಲ್ಲಿ ಮಳೆಯ ಪ್ರಮಾಣ**

(i) ಚಳಿಗಾಲ - 2% (ii) ಬೇಸಿಗೆ ಕಾಲ - 10 %

(iii) ಮಳೆಗಾಲ - 75 % (iv) ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ - 13 %

- ❖ ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶವನ್ನು ಹೊಂದಿರುವ ಪ್ರದೇಶ **ರಾಜಸ್ಥಾನದ ಗಂಗಾನಗರ (52⁰ಸೆ)**
- ❖ ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ **ರಾಜಸ್ಥಾನದ ರೊಯ್ಲಿ (8.3 ಸೆ. ಮೀ)**.
- ❖ ಭಾರತದಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶಮೇಘಾಲಯದ **'ಮಾಸಿರಾಮ್' (1141 ಸೆಂ. ಮೀ)**
- ❖ ಮಾನ್‌ಸೂನ್ ಎಂಬ ಪದವು **ಅರಬ್ಬೀ ಭಾಷೆಯ ಮೌಸಿಮ್** ಎಂಬ ಪದದಿಂದ ಬಂದಿದ್ದು, ಇದರ ಅರ್ಥ ಋತು
- ❖ ಪಶ್ಚಿಮ ಘಟ್ಟಗಳ ಪೂರ್ವ ಭಾಗವು ಮಳೆ ನೆರಳಿನ ಪ್ರದೇಶವಾಗಿದೆ.
- ❖ ದೇಶದ ಆರ್ಥಿಕ ಬೆಳವಣಿಗೆಯಲ್ಲಿ **ವಾಯುಗುಣವು** ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ.
- ❖ **ನೈರುತ್ಯ ಮಾನ್‌ಸೂನ್ ಮಾರುತಗಳು** ಭಾರತದ ಹೆಚ್ಚು ಭಾಗಗಳಿಗೆ ಮಳೆಯನ್ನು ತರುತ್ತವೆ.

**1. ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**1. ಭಾರತದಲ್ಲೇ ಅತಿ ಹೆಚ್ಚು ಉಷ್ಣತೆಯನ್ನು ಹೊಂದಿರುವ ಗಂಗಾ ನಗರ __________ರಾಜ್ಯದಲ್ಲಿದೆ.**

a) ದೆಹಲಿ b) ಪಂಜಾಬ್ **c) ರಾಜಸ್ಥಾನ** d) ಹರಿಯಾಣ

**2. ಭಾರತದ ವ್ಯವಸಾಯ ____________________ ಜೊತೆಗಿನ ಜೂಜಾಟವಾಗಿದೆ.**

a) ವಾಯುಗುಣ **b) ಮಾನ್ಸೂನ್** c) ಬೇಸಿಗೆ d)ಮಳೆ

**3. ಭಾರತದ ಕೃಷಿಯನ್ನು ನಿಯಂತ್ರಿಸುತ್ತಿರುವುದು__________________________**

a) ನೈರುತ್ಯ ಮಾನ್‌ಸೂನ್ b) ಆಗ್ನೇಯ ವಾಣಿಜ್ಯ ಮಾರುತ

c) ನಿರ್ಗಮನ ಮನ್ಸೂನ್ ಮಾರುತ d) ಅರಬ್ಬಿ ಸಮುದ್ರ ಶಾಖೆ



Use e-papers for save trees-InyaTrust.com

**4.** **ದೇಶದ ಆರ್ಥಿಕ ಬೆಳವಣಿಗೆಯಲ್ಲಿ ____________ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ.**
a) ಮಳೆ b) ಸ್ಥಾನ c) ಸೈಕ್ಲೋನ್ d) ವಾಯುಗುಣ

**5.** **ಭಾರತದಲ್ಲಿ ಅತಿಹೆಚ್ಚು ಮಳೆಯನ್ನು ಪಡೆಯುವ ಸ್ಥಳ**
a) ಪಶ್ಚಿಮ ಘಟ್ಟದಲ್ಲಿರುವ ಆಗುಂಬೆ b) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು
c) ಶಿಲ್ಲಾಂಗ್ ಪ್ರಸ್ಥಭೂಮಿ d) ಮೇಘಾಲಯ ಪ್ರಸ್ಥಭೂಮಿಯಲ್ಲಿರುವ ಮಾಸಿನ್‌ರಾಮ್

**6.** **ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ (ರಾಜ್ಯ)**
a) ರಾಜಸ್ಥಾನ b) ಹರಿಯಾಣ c) ಅಸ್ಸಾಂ d) ಪಶ್ಚಿಮ ಬಂಗಾಳ.

**7.** **ವಾರ್ಷಿಕ ಸರಾಸರಿ 8.3 ಸೆಂ. ಮೀ. ನಷ್ಟು ಕಡಿಮೆ ಮಳೆ ಬೀಳುವ 'ರೊಯ್ಲಿ' _____ರಾಜ್ಯದಲ್ಲಿದೆ.**
a) ಪಂಜಾಬ್, b) ಹರಿಯಾಣ c) ರಾಜಸ್ಥಾನ d)ಹಿಮಾಚಲ ಪ್ರದೇಶ

**8.** **ಏಪ್ರಿಲ್‌ಮತ್ತು ಮೇ ತಿಂಗಳುಗಳಲ್ಲಿ __________ರಾಜ್ಯದಲ್ಲಿ ಬೀಳುವ ಪೂರ್ವಮಾನ್‌ಸೂನ್ ಗೆ'ಮಾವಿನ ಹೊಯ್ಲು' ಎಂತಲೂ ಕರೆಯುವರು.**
a) ಕೇರಳ b) ಕರ್ನಾಟಕ c) ಮಹಾರಾಷ್ಟ್ರ d)ಗೋವಾ

**II** **ಸೂಕ್ತ ಪದಗಳಿಂದ ಬಿಟ್ಟ ಸ್ಥಳಗಳನ್ನು ತುಂಬಿರಿ.**

1. ದೇಶದಲ್ಲೇ ಅತಿಹೆಚ್ಚು ಉಷ್ಣಾಂಶ ಹೊಂದಿರುವ ಪ್ರದೇಶ ಗಂಗಾನಗರ (52ಸೆಂಮೀ)
2. ಗರಿಷ« ಮಳೆಯನ್ನು ಕೊಡುವ ಋತು **ಮಳೆಗಾಲ**
3. ದೇಶದಲ್ಲೇ ಅತಿ ಕಡಿಮೆ ಮಳೆಯನ್ನು ಪಡೆಯುವ ಪ್ರದೇಶ **ರೊಯ್ಲಿ**
4. ದೇಶದಲ್ಲೇ ಅತಿ ಹೆಚ್ಚು ಮಳೆಯನ್ನು ಪಡೆಯುವ ಪ್ರದೇಶ **ಮಾಸಿನ್‌ರಾಮ್**
5. ಭಾರತದ ಕೃಷಿಯನ್ನು **ಮಾನ್‌ಸೂನ್ ಜೊತೆಗಿನ ಜೂಜಾಟ** ಎನ್ನುತ್ತಾರೆ.
6. ಭಾರತದ ಹೆಚ್ಚು ಭಾಗಲ್ಲಿ **ಉಷ್ಣವಲಯದ ಮಾನ್‌ಸೂನ್**ವಾಯುಗುಣವಿದೆ.
7. ಈಶಾನ್ಯ ಮಾನ್‌ಸೂನ್ ಮಾರುತಗಳು **ಕೋರ ಮಂಡಲ ತೀರಕ್ಕೆ** ಮಳೆಯನ್ನು ತರುತ್ತವೆ.
8. ಭಾರತದಲ್ಲೇ **ಮಾಸಿನ್ ರಾಮ್** ಅತಿ ಹೆಚ್ಚು ಮಳೆಯನ್ನು ಪಡೆಯುವ ಪ್ರದೇಶವಾಗಿದೆ.
9. ಕೇರಳದಲ್ಲಿ ಪೂರ್ವ ಮಾನ್‌ಸೂನ್ ಮಳೆಗೆ **'ಮಾವಿನ ಹೊಯ್ಲು'** ಎಂದು ಕರೆಯುವರು.

**III** **ಹೊಂದಿಸಿ ಬರೆಯಿರಿ**

| | A | B | ಉತ್ತರ |
|---|---|---|---|
| **1.** | **ಅತಿ ಹೆಚ್ಚು ಮಳೆ** | ಗಂಗಾ ನಗರ | **ಮಾಸಿನ್ ರಾಮ್** |
| **2.** | **ಅತಿ ಕಡಿಮೆ ಮಳೆ** | ಕೋರಮಂಡಲ ತೀರ | **ರೊಯ್ಲಿ** |
| **3.** | **ಅತಿ ಹೆಚ್ಚು ಉಷ್ಣತೆ** | ಮಾಸಿನ್ ರಾಮ್ | **ಗಂಗಾನಗರ** |
| **4.** | **ಪೂರ್ವ ಮಾನ್‌ಸೂನ್** | ಮಳೆರೊಯ್ಲಿ | **ಮಾವಿನಹೊಯ್ಲು** |
| **5.** | **ನಿರ್ಗಮನ ಮಾನ್‌ಸೂನ್** | ಮಾವಿನ ಹೊಯ್ಲು | **ಕೋರಮಂಡಲ ತೀರ** |



Use e-papers for save trees-InyaTrust.com

**IV ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಭಾರತ ಹೆಚ್ಚಾಗಿ ಯಾವ ವಿಧದ ವಾಯುಗುಣವನ್ನು ಹೊಂದಿದೆ?**

ಭಾರತ ಹೆಚ್ಚು ಭಾಗದಲ್ಲಿ ಉಷ್ಣವಲಯದ ಮಾನ್‌ಸೂನ್ ವಾಯುಗುಣವನ್ನು ಹೊಂದಿದೆ.

**2. ಮಾನ್ ಸೂನ್ ಮಾರುತಗಳೆಂದರೇನು?**

ಮಾನ್‌ಸೂನ್ ಎಂಬ ಪದವು ಅರಬ್ಬೀ ಭಾಷೆಯ 'ಮೌಸಿಮ್' ಎಂಬ ಪದದಿಂದ ಬಂದಿದೆ. ಮೌಸಿಮ್ ಎಂದರೆ ಋತು ಎಂದರ್ಥ. ಋತುಕಾಲದ ಮಾರುತಗಳನ್ನು ಸಹ ಮಾನ್‌ಸೂನ್ ಮಾರುತಗಳೆನ್ನುವರು.

**3. ಸಾಮಾನ್ಯವಾಗಿ ಯಾವ ಋತುವನ್ನು ಮಳೆಗಾಲ ಎಂದು ಕರೆಯುತ್ತಾರೆ?**

ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ನೈರುತ್ಯ ಮಾನ್‌ಸೂನ್ ಮಾರುತಗಳ ಕಾಲವನ್ನು ಮಳೆಗಾಲ ಎನ್ನುವರು.

**4. ಭಾರತದ ವಾಯುಗುಣವನ್ನು ಪ್ರಭಾವಿಸುವ ಅಂಶಗಳು ಯಾವುವು?**

ಅಕ್ಷಾಂಶ ಸಮುದ್ರಮಟ್ಟದಿಂದ ಎತ್ತರ, ಸಮುದ್ರದಿಂದ ಇರುವ ದೂರ, ಮಾರುತಗಳ ದಿಕ್ಕು, ಪರ್ವತ ಶ್ರೇಣಿಗಳು, ಸಾಗರದ ಪ್ರವಾಹಗಳು ಮುಂತಾದವು ಭಾರತದ ವಾಯುಗುಣವನ್ನು ಪ್ರಭಾವಿಸುತ್ತವೆ.

**5. 'ಭಾರತದ ವ್ಯವಸಾಯವನ್ನು ಮಾನ್‌ಸೂನ್ ಜೊತೆಗಿನ ಜೂಜಾಟ ಎನ್ನುತ್ತಾರೆ' ಚರ್ಚಿಸಿ.**

ದೇಶದ ಆರ್ಥಿಕ ಬೆಳವಣಿಗೆಯ ಮೇಲೆ ವಾಯುಗುಣವು ಹೆಚ್ಚಿನ ಪ್ರಭಾವ ಬೀರುತ್ತದೆ.

ಭಾರತದ ಜನತೆಯ ಪ್ರಧಾನ ಉದ್ಯೋಗವಾದ ವ್ಯವಸಾಯವನ್ನು ನೈರುತ್ಯ ಮಾನ್‌ಸೂನ್‌ಮಾರುತಗಳು ನಿಯಂತ್ರಿಸುತ್ತವೆ.

ಮಳೆ ವಿಫಲವಾದರೆ ಬರಗಾಲ ಉಂಟಾಗುವುದು.

ಮಾನ್‌ಸೂನ್ ಜಾಸ್ತಿಯಾದರೆ ಮಳೆ ಹೆಚ್ಚಾಗಿ ಪ್ರವಾಹ ಉಂಟಾಗುತ್ತದೆ. ಈ ಪ್ರವಾಹ ಪ್ರಾಣಹಾನಿ ಮತ್ತು ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ.

ಆದ್ದರಿಂದ ಭಾರತದ ವ್ಯವಸಾಯವನ್ನು ಮಾನ್‌ಸೂನ್ ಜೊತೆಯಲ್ಲಿ ಆಡುವ ಜೂಜಾಟ ಎಂದು ಕರೆಯುತ್ತಾರೆ.

**6. ಬೇಸಿಗೆಯಲ್ಲಿ ಬರುವ ಬೇರೆ ಬೇರೆ ಹೆಸರಿನ ಮಳೆಗಳನ್ನು ತಿಳಿಸಿ**

| | | |
|---|---|---|
| ಕಾಲ ಬೈಸಾಕಿ | - | ಪಶ್ಚಿಮ ಬಂಗಾಳ |
| ಆಂಡಿಸ್ | - | ಉತ್ತರ ಪ್ರದೇಶ |
| ಕಾಫಿ ತುಂತುರು | - | ಕರ್ನಾಟಕ |
| ಮಾವಿನ ಹೊಯ್ಲು | - | ಕೇರಳ |

**7. ಮಳೆ ಹಂಚಿಕೆಯ ಆಧಾರದ ಮೇಲೆ ಭಾರತದ ಮೂರು ವಿಭಾಗ(ಪ್ರದೇಶ)ಗಳನ್ನು ಹೆಸರಿಸಿ.**

i) ಕಡಿಮೆ ಮಳೆ ಬೀಳುವ ಪ್ರದೇಶ - 50 ಸೆಂ. ಮೀ ಗಿಂತ ಕಡಿಮೆ

(ii) ಸಾಧಾರಣ ಮಳೆ ಪಡೆಯುವ ಪ್ರದೇಶ - 50 ಸೆಂ. ಮೀ. ನಿಂದ 250 ಸೆಂ. ಮೀ.

(iii) ಅಧಿಕ ಮಳೆಯ ಪ್ರದೇಶ - 250 ಸೆಂ. ಮೀ. ಗಿಂತ ಕಡಿಮೆ.



Use e-papers for save trees-InyaTrust.com

**8. ಭಾರತದ ಅಧಿಕ ಮಳೆಯ ಪ್ರದೇಶಗಳಾವುವು?**

250 ಸೆಂ. ಮೀ. ಗಳಿಗಿಂತ ಹೆಚ್ಚು ಮಳೆ ಬೀಳುವ ಭಾಗಗಳನ್ನು ಅಧಿಕ ಮಳೆ ಬೀಳುವ ಪ್ರದೇಶ ಎನ್ನುವರು. ಉದಾಹರಣೆ (i) ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ (ii) ಅಸ್ಸಾಂ ಹಾಗೂ ಇತರ ಪೂರ್ವ ರಾಜ್ಯಗಳು (iii) ಪಶ್ಚಿಮ ಬಂಗಾಳ (iv) ಮೇಘಾಲಯದ ಮಾಸಿನ್ ರಾಮ್ (ಭಾರತದಲ್ಲೇ ಅಧಿಕ ಮಳೆ ಬೀಳುವ ಪ್ರದೇಶ)

**9. ಭಾರತದ ಕಡಿಮೆ ಮಳೆ ಬೀಳುವ ಪ್ರದೇಶಗಳಾವುವು?**

50 ಸೆಂ. ಮೀ. ಗಿಂತ ಕಡಿಮೆ ಮಳೆ ಬೀಳುವ ಪದೇಶಗಳೆಂದರೆ :
ರಾಜಸ್ಥಾನದ ಥಾರ ಮರುಭೂಮಿ ಹಾಗೂ ಅದಕ್ಕೆ ಹೊಂದಿಕೊಂಡಂತಿರುವ ಪಂಜಾಬ್, ಹರಿಯಾಣ, ಗುಜರಾತಿನ ಕಛ್‌ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರದ ಪೂರ್ವ ಭಾಗ, ಕರ್ನಾಟಕದ ಒಳನಾಡು.

ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯ 'ರೂಯ್ಲಿ' ಭಾರತದ ಅತಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. (ವಾರ್ಷಿಕ ಸರಾಸರಿ 8.3 ಸೆಂ. ಮೀ)

**10. ಭಾರತದ ಮಳೆಗಾಲದ ಬಗ್ಗೆ ವಿವರಿಸಿ.**

ಭಾರತದಲ್ಲಿ ನೈರುತ್ಯ ಮಾನ್ಸೂನ್ ಎಂದರೆ ಮಳೆಗಾಲ ಎಂದರ್ಥ. ಇವುಗಳನ್ನು ಮುಂಗಾರು ಮಳೆಗಾಲದ ಮಾರುತಗಳೆಂದು ಕರೆಯುತ್ತಾರೆ. ನೈಋುತ್ಯ ಮಾನ್‌ಸೂನ್ ಮಾರುತಗಳು ಜಲಾಂಶಪೂರಿತವಾಗಿದ್ದು ಭಾರತದ ಹೆಚ್ಚು ಭಾಗದಲ್ಲಿ ಮಳೆ ಸುರಿಸುತ್ತವೆ. ಮಳೆಗಾಲ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಕಂಡು ಬರುವುದು. ಭಾರತದ ಒಟ್ಟು ಮಳೆಯಲ್ಲಿ ಶೇ. 75 ರಷ್ಟು ಈ ಕಾಲದಲ್ಲಿ ಬೀಳುವುದು. ನೈಋುತ್ಯ ಮಾನ್‌ಸೂನ್ ಮಾರುತಗಳು ಬಾರತವನ್ನು ಎರಡು ಕವಲುಗಳಾಗಿ ಪ್ರವೇಶಿಸುತ್ತವೆ. ಅವುಗಳೆಂದರೆ

!) ಅರಬ್ಬಿ ಸಮುದ್ರ ಶಾಖೆ (ii)ಬಂಗಾಳ ಕೊಲ್ಲಿಯ ಶಾಖೆ

ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಈ ಮಾರುತಗಳು ಪೂರ್ವಕ್ಕೆ ಮುಂದುವರೆದಂತೆ ಮಳೆ ಕಡಿಮೆಯಾಗುತ್ತದೆ. ಪಶ್ಚಿಮ ಘಟ್ಟಗಳ ಪೂರ್ವಭಾಗವು ಮಳೆಯ ನೆರಳಿನ ಪದೇಶವೆನಿಸಿದೆ. ಬಂಗಾಳ ಕೊಲ್ಲಿ ಶಾಖೆಯು ಮಯನ್ಮಾರ್, ಬಾಂಗ್ಲಾದೇಶ, ಭಾರತದ ಈಶಾನ್ಯ ಭಾಗ, ಹಿಮಾಲಯದ ತಪ್ಪಲು ಮತ್ತು ಉತ್ತರದ ಮೈದಾನಗಳ ಕಡೆಗೆ ಮಳೆಯನ್ನು ತರುತ್ತದೆ. ಉತ್ತರ ಭಾರತದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆಲ್ಲಾ ಮಳೆ ಕಡಿಮೆಯಾಗುತ್ತದೆ. ತಮಿಳುನಾಡು ಹೊರತುಪಡಿಸಿ ಭಾರತದ ಹೆಚ್ಚು ಭಾಗಕ್ಕೆ ನೈರುತ್ಯ ಮಾನ್ಸೂನ್ ಮಾರುತಗಳು ಮಳೆಯನ್ನು ತರುತ್ತವೆ.

**11. ಭಾರತ ಮಾರ್ಚಿಯಿಂದ ಮೇ ವರೆಗೆ ಬೇಸಿಗೆಯನ್ನು ಹೊಂದಿದೆ ? ಹೇಗೆ? ವಿವರಿಸಿ.**

ಭಾರತದಲ್ಲಿ ಬೇಸಿಗೆ ಕಾಲವು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಮುಂದುವರೆಯುತ್ತದೆ. ಈ ಋತುವಿನಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರಾರ್ಧಗೋಳದ ಮೇಲೆ ಬೀಳುವುದರಿಂದ ಭಾರತದಲ್ಲಿ ಉಷ್ಣಾಂಶ ಅಧಿಕವಾಗಿರುತ್ತದೆ. ದೀರ್ಘ ಹಗಲು ಮತ್ತು ಸಮುದ್ರಕ್ಕೆ ದೂರವಾಗಿರುವ ಉತ್ತರ ಭಾರತವು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ.



Use e-papers for save trees-InyaTrust.com

**12. ಯಾವ ಮಾರುತಗಳಿಂದ ಪಶ್ಚಿಮಘಟ್ಟಗಳು ಮಳೆಯನ್ನು ಪಡೆಯುತ್ತವೆ ? ಹೇಗೆ?**

ನೈರುತ್ಯ ಮಾನ್ಸೂನ್ ಮಾರುತಗಳು ಅರಬ್ಬಿ ಸಮುದ್ರ ಶಾಖೆಯಿಂದ ಪಶ್ಚಿಮ ಘಟ್ಟಗಳು ಮಳೆಯನ್ನು ಪಡೆಯುತ್ತವೆ. ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಈ ಮಾರುತಗಳು ಪೂರ್ವಕ್ಕೆ ಮುಂದುವರೆದಂತೆ ಮಳೆ ಕಡಿಮೆಯಾಗುತ್ತದೆ.

**13. ಬೇಸಿಗೆಯಲ್ಲಿ ಭಾರತದ ಕೆಲವು ಸ್ಥಳಗಳಿಗೆ ಮಳೆಯಾಗುತ್ತದೆ. ಕಾರಣಗಳನ್ನು ಕೊಡಿ.**

ಬೇಸಿಗೆಯಲ್ಲಿ ಉತ್ತರ ಭಾರತದ ಪರ್ವತ ಪ್ರದೇಶ ಮತ್ತು ಪರ್ಯಾಯ ಪ್ರಸ್ಥಭೂಮಿಗಳು ಸಾಕಷ್ಟು ತಂಪಾಗಿರುತ್ತವೆ. ಅಲ್ಲಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಮಳೆ ಉಂಟಾಗುತ್ತದೆ.

* * *



Use e-papers for save trees-InyaTrust.com

# ಅಧ್ಯಾಯ - 4
## ಭಾರತದ ಮಣ್ಣುಗಳು

**I ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**1. ಒಣ ಬೇಸಾಯಕ್ಕೆ ಸೂಕ್ತವಾದ ಮಣ್ಣು**

a)ಕಪುïŒ ಮಣ್ಣು b) ಕೆಂಪು ಮಣ್ಣು c) ಲ್ಯಾಟರೈಟ್ ಮಣ್ಣು d) ಮೆಕ್ಕಲು ಮಣ್ಣು

**2. ಕಪುïŒ ಮಣ್ಣು ___________ ಶಿಲೆಗಳ ಶಿಥಿಲೀಕರಣದಿಂದ ಉಂಟಾಗಿದೆ.**

a) ಅಗ್ನಿ b)

**3. ಕಪುïŒ ಹತ್ತಿ ಬೆಳೆಯುವ ಮಣ್ಣಿಗೆ ಇರುವ ಇನ್ನೊಂದು ಹೆಸರು**

a) ಕೆಂಪು ಮಣ್ಣು b) ಮರುಭೂಮಿ ಮಣ್ಣು c) ಪರ್ವತ ಮಣ್ಣು d) ರೇಗೂರ್ ಮಣ್ಣು.

**4. ಕಪುïŒ ಮಣ್ಣು _________ ಬೆಳೆಗೆ ತುಂಬಾ ಸೂಕ್ತವಾಗಿದೆ.**

a) ಸೆಣಬು b) ಗೋಧಿ c)ಹತ್ತಿ d) ಭತ್ತ

**II ಬಿಟ್ಟ ಸ್ಥಳವನ್ನು ಸೂಕ್ತ ಉತ್ತರಗಳಿಂದ ತುಂಬಿರಿ**

1. ನದಿಗಳು ಸಂಚಯಿಸಿರುವ ಮಣ್ಣು, ಮೆಕ್ಕಲು ಮಣ್ಣು
2. ಕಪುïŒ ಮಣ್ಣು ಇರುವ ಪ್ರದೇಶವನ್ನು ಡೆಕ್ಕನ್ ಟ್ರಾಪ್ ಎನ್ನುವರು.
3. ರಾಜಸ್ಥಾನದಲ್ಲಿ ಹೆಚ್ಚಾಗಿ ಕಂಡು ಬರುವ ಮಣ್ಣು ಮರುಭೂಮಿ ಮಣ್ಣು.
4. ಹತ್ತಿ ಬೆಳೆಯಲು ಕಪುïŒ ಮಣ್ಣು ತುಂಬಾ ಸೂಕ್ತವಾಗಿದೆ.
5. ರಾಗಿ ಮತ್ತು ಎಣ್ಣೆ ಕಾಳುಗಳನ್ನು ಬೆಳೆಯಲು ಕೆಂಪು ಮಣ್ಣು ಸೂಕ್ತವಾಗಿದೆ.

**ಹೊಂದಿಸಿ ಬರೆಯಿರಿ.**

| | A | B | |
|---|---|---|---|
| 1. | ಮೆಕ್ಕಲು ಮಣ್ಣು | a) ರಾಗಿ ಮತ್ತು ಎಣ್ಣೆಕಾಳುಗಳನ್ನು ಬೆಳೆಯಲು | **c) ಗಂಗಾ ನದಿ ಬಯಲು** |
| 2) | ಕಪುïŒ ಮಣ್ಣು | b) ಪಶ್ಚಿಮ ಘಟ್ಟಗಳ ಮಣ್ಣು | **d) ಹತ್ತಿ ಬೆಳೆಯಲು** |
| 3) | ಕೆಂಪು ಮಣ್ಣು | c) ಗಂಗಾ ನದಿ ಬಯಲು | **a) ರಾಗಿ ಮತ್ತು ಎಣ್ಣೆಕಾಳುಗಳನ್ನು ಬೆಳೆಯಲು** |
| 4) | ಜಂಬಟ್ಟಿಗೆ ಮಣ್ಣು | d) ಹತ್ತಿ ಬೆಳೆಯಲು | **b) ಪಶ್ಚಿಮ ಘಟ್ಟಗಳ ಮಣ್ಣು** |
| | | e) ಕಾಫಿ ಮತ್ತು ಟೀ ಬೆಳೆಯಲು | |

**IV ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

**1. ಕಪುïŒ ಮಣ್ಣಿನಲ್ಲಿ ಬೆಳೆಯಬಹುದಾದ ಬೆಳೆಗಳಾವುವು?**

ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹೊಗೆಸೊಪುïŒ, ಎಣ್ಣೆ ಕಾಳು, ನಿಂಬೆ ದ್ರಾಕ್ಷಿ.



Use e-papers for save trees-InyaTrust.com

**2. ಭಾರತದಲ್ಲಿ ಕಂಡುಬರುವ ಮಣ್ಣಿನ ವಿಧಗಳಾವುವು? ಪ್ರಕಾರಗಳಾವುವು?**

(i) ಮೆಕ್ಕಲು ಮಣ್ಣು (ii) ಕಪು¡Œ ಮಣ್ಣು (iii) ಕೆಂಪು ಮಣ್ಣು

(iv) ಜಂಬಿಟ್ಟಿಗೆ ಮಣ್ಣು (vi) ಪರ್ವತ ಮಣ್ಣು

**3. ಉತ್ತರದ ಮೈದಾನಗಳಲ್ಲಿ ಕಂಡು ಬರುವ ಮಣ್ಣು ಯಾವುದು?**

ಮೆಕ್ಕಲು ಮಣ್ಣು.

**4. 'ಮಣ್ಣಿನ ಸಂರಕ್ಷಣೆ' ಎಂದರೇನು? ಮಣ್ಣಿನ ಸಂರಕ್ಷಣೆಯ ವಿಧಾನಗಳನ್ನು ಪಟ್ಟಿ ಮಾಡಿ.**

ಮಣ್ಣಿನ ಸವೆತವನ್ನು ತಡೆಗಟ್ಟುವುದು ಹಾಗೂ ಅದರ ಫಲವತ್ತತೆಯನ್ನು ಕಾಪಾಡುವುದಕ್ಕೆ ಮಣ್ಣಿನ ಸಂರಕ್ಷಣೆ ಎನ್ನುವರು.

ಮಣ್ಣಿನ ಸಂರಕ್ಷಣೆಯ ವಿಧಾನಗಳೆಂದರೆ

(i) ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.

(ii) ಅಡ್ಡಬದುಗಳನ್ನು ನಿರ್ಮಿಸುವುದು.

(iii) ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ

(iv) ಅರಣ್ಯ ನಾಶವನ್ನು ತಡೆಗಟ್ಟುವುದು ಮತ್ತು ಅರಣ್ಯಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.

(v) ಪ್ರಾಣಿಗಳನ್ನು ಮೇಯಿಸುವುದನ್ನು ನಿಯಂತ್ರಿಸುವುದು

(vi) ನೀರಿನ ಯೋಜಿತ ಬಳಕೆ

(vii) ಚೆಕ್ ಡ್ಯಾಮ್‌ಗಳ ನಿರ್ಮಾಣ.

**5. ಮಣ್ಣಿನ ಸವೆತ ಎಂದರೇನು? ಇದರ ಪರಿಣಾಮಗಳನ್ನು ಪಟ್ಟಿ ಮಾಡಿ.**

ಭೂ ಮೇಲ್ಮೈಯಲ್ಲಿ ಕಂಡು ಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯನ್ನೇ ಮಣ್ಣಿನ ಸವೆತ ಅಥವಾ ಭೂ ಸವೆತ ಎನ್ನುವರು. ಹರಿಯುವ ನೀರು, ಗಾಳಿ, ಸಮುದ್ರ ಅಲೆ ಮುಂತಾದವು ಮಣ್ಣಿನ ಸವೆತಕ್ಕೆ ಕಾರಣಾಗಿದೆ.

**ಮಣ್ಣಿನ ಸವೆತಕ್ಕೆ ಕಾರಣಗಳು**

i) ಮಣ್ಣಿನ ಸವೆತದಿಂದ ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.

ii) ನದಿಯ ಪಾತ್ರದಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.

iii) ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ನೀರನ್ನು ಸಂಗ್ರಹಿಸುವ ಅವುಗಳ ಸಾಮರ್ಥ್ಯವು ಕಡಿಮೆಯಾಗುವುದು.

(iv) ಭೂ ಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.

v) ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿರುವುದರಿಂದ ಭೂ ಸವೆತವು ವ್ಯವಸಾಯದ ಉತ್ಪಾದನೆ ಹಾಗೂ ಮಣ್ಣಿನ ಫಲವತ್ತತೆ ಮೇಲೆ ಪರಿಣಾಮ ಬೀರುತ್ತದೆ.



Use e-papers for save trees-InyaTrust.com

**6. ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಕಂಡು ಬರುವ ಮಣ್ಣು ಯಾವುದು?**

ಪರ್ವತ ಮಣ್ಣು

**7. ಮಣ್ಣಿನ ಸವೆತಕ್ಕೆ ಕಾರಣಗಳಾವುವು?**

ಮಣ್ಣಿನ ಸವೆತವು ದೇಶದ ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಅಧಿಕವಾಗಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ

(i) ಅರಣ್ಯಗಳ ನಾಶ

(ii) ಸಾಕು ಪ್ರಾಣಿಗಳನ್ನು ಮೇಯಿಸುವುದು

iii) ಅವೈಜ್ಞಾನಿಕ ಬೇಸಾಯ

(iv) ಅಧಿಕ ನೀರಾವರಿ ಬಳಕೆ

ಇಟ್ಟಿಗೆ, ಹೆಂಚು, ಮಡಿಕೆ ತಯಾರಿಕೆ ಮುಂತಾದವುಗಳಿಂದ ಮೇಲ್ಮಣ್ಣು ನಾಶವಾಗಿ ಅನುಪಯುಕ್ತವಾದ ಮಣ್ಣು ಉಳಿದುಕೊಳ್ಳುವುದು.

**8. ಮೆಕ್ಕಲು ಮಣ್ಣು ಮತ್ತು ಕಪುïŒ ಮಣ್ಣುಗಳಿಗಿರುವ ವ್ಯತ್ಯಾಸಗಳನ್ನು ವಿವರಿಸಿ.**

**ಮೆಕ್ಕಲು ಮಣ್ಣು :** ನದಿಗಳು ಪರ್ವತ ಪದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣಿಗೆ ಮೆಕ್ಕಲು ಮಣ್ಣು ಎನ್ನುವರು. ಭಾರತದಲ್ಲಿ ಮೆಕ್ಕಲು ಮಣ್ಣು ಇತರ ಎಲ್ಲಾ ಬಗೆಯ ಮಣ್ಣುಗಳಿಗಿಂತ ಹೆಚ್ಚು ವಿಸ್ತಾರವಾದ ಪದೇಶಗಳಲ್ಲಿ ಹರಡಿರುವುದು. ಈ ಮಣ್ಣು ಸುಮಾರು 7.7 ದಶಲಕ್ಷ ಚ. ಕಿ. ಮೀ. ಪದೇಶದಲ್ಲಿ ಕಂಡುಬರುವುದು. ಇದು ಉತ್ತರ ಪದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಸಾ, ಪಂಜಾಬ್ ಹರಿಯಾಣ, ಅಸ್ಸಾಂ ರಾಜ್ಯದ ಬ್ರಹ್ಮಪುತ್ರ ಕಣಿವೆಯ ಭಾಗವನ್ನು ಆವರಿಸಿದೆ. ಅಲ್ಲದೆ ನರ್ಮದಾ ತಪತಿ ನದಿಗಳ ಕಣಿವೆಗಳ ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ. ಈ ಮಣ್ಣಿನಲ್ಲಿ ಮುಖ್ಯವಾಗಿ ಬೆಳೆಯಬಹುದಾದ ಬೆಳೆಗಳೆಂದರೆ ಗೋಧಿ, ಭತ್ತ, ಕಬ್ಬು, ಹತ್ತಿ, ಸೆಣಬು.

**ಕಪುïŒ ಮಣ್ಣು :** ಕಪುïŒ ಮಣ್ಣನ್ನು 'ರೇಗೂರ್ ಮಣ್ಣು' ಎಂತಲೂ ಕರೆಯುತ್ತಾರೆ. ಈ ಮಣ್ಣು ಹತ್ತಿ ಬೆಳೆಗೆ ಬಹು ಸೂಕ್ತವಾಗಿರುವುದರಿಂದ ಇದನ್ನು ಕಪುïŒ ಹತ್ತಿ ಬೆಳೆಯುವ ಮಣ್ಣು ಎಂತಲೂ ಕರೆಯುವರು. ಇದು ಸುಮಾರು 5.46 ಲಕ್ಷ ಚ. ಕಿ. ಮೀ. ಪದೇಶದಲ್ಲಿ ಕಂಡು ಬರುತ್ತದೆ. ಕಪುïŒ ಮಣ್ಣಿನ ಪ್ರದೇಶವನ್ನ ಡೆಕ್ಕನ್ ಟ್ರಾಪ್ ಎಂದು ಸಹ ಕರೆಯುತ್ತಾರೆ. ಈ ಮಣ್ಣು ಅಗ್ನಿ ಶಿಲೆಗಳ ಶಿಥಿಲಕರಣದಿಂದ ಉತ್ಪತ್ತಿಯಾಗಿದೆ. ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುತ್ತವೆ. ಈ ಮಣ್ಣು ಫಲವತ್ತಾಗಿದ್ದು, ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ. ಈ ವಿಧದ ಮಣ್ಣು ಮಹಾರಾಷ್ಟ್ರ, ಗುಜರಾತ್, ಮಧ್ಯಪದೇಶ, ಆಂಧ್ರಪ್ರದೇಶದ ಪಶ್ಚಿಮಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಮಣ್ಣು, ಕಬ್ಬಿಣ ಸುಣ್ಣಹಾಗೂ ಮೆಗ್ನೀಶಿಯಂ ಕಾರ್ಬೊನೇಟ್‌ಗಳನ್ನು ಅಧಿಕ ಪ್ರಮಾಣದಲ್ಲಿ ಒಳಗೊಂಡಿದೆ. ಈ ಮಣ್ಣು ಒಣಬೇಸಾಯಕ್ಕೆ ಸೂಕ್ತವಾಗಿದ್ದು, ಹತ್ತಿ ಜೋಳ, ಗೋಧಿ, ಈರುಳ್ಳಿ ಮೆಣಸಿನ ಕಾಯಿ, ಹೊಗೆಸೊಪುïŒ , ಎಣ್ಣೆಕಾಳು, ನಿಂಬೆ, ದ್ರಾಕ್ಷಿ ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳಾಗಿವೆ.



Use e-papers for save trees-InyaTrust.com

**9. ಕೆಂಪು ಮಣ್ಣು ಮತ್ತು ಲ್ಯಾಟರೈಟ್ ಮಣ್ಣುಗಳಿಗಿರುವ ವ್ಯತ್ಯಾಸವನ್ನು ವಿವರಿಸಿ.**

**ಕೆಂಪು ಮಣ್ಣು:** ಇದು ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ.

ಇದು ಸುಮಾರು 5.18 ಲಕ್ಷ ಚ. ಕಿ. ಮೀ. ಭೂ ಪ್ರದೇಶದಲ್ಲಿ ಕಂಡು ಬರುವುದು. ಇದು ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದಲ್ಲಿ ಮಧ್ಯಪ್ರದೇಶದ ಝಾನ್ಸಿಯವರೆಗೆ ಹರಡಿದೆ. ಪಶ್ಚಿಮದಲ್ಲಿ ಗುಜರಾತ್‌ನ ಕಛ್ ಪ್ರದೇಶದ ಪೂರ್ವದಲ್ಲಿ ಜಾರ್ಖಂಡ್‌ನ ರಾಜಮಹಲ್ ಬೆಟ್ಟಗಳವರೆಗೂ ವ್ಯಾಪಿಸಿದೆ. ಈ ಮಣ್ಣಿನಲ್ಲಿ ಬೆಳೆಯಲಾಗುವ ಪ್ರಮುಖ ಬೆಳೆಗಳೆಂದರೆ ರಾಗಿ, ಹೊಗೆಸೊಪ್ಪು, ಮತ್ತು ಎಣ್ಣೆ ಕಾಳುಗಳು ಹಾಗೂ ನೀರಾವರಿಯ ಸೌಲಭ್ಯವಿರುವ ಪ್ರದೇಶಗಳಲ್ಲಿ ಭತ್ತ, ಕಬ್ಬು, ಹತ್ತಿ ಮುಂತಾದವುಗಳನ್ನು ಬೆಳೆಯಬಹುದು.

**ಲ್ಯಾಟ್‌ರೈಟ್ ಮಣ್ಣು :** ಜಂಬಿಟ್ಟಿಗೆ ಮಣ್ಣು ಸಾಮಾನ್ಯವಾಗಿ 200 ಸೆಂ. ಮೀ. ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಕಂಡು ಬರುತ್ತದೆ ಅಧಿಕ ಮಳೆಯಿಂದ ಮಣ್ಣಿನಲ್ಲಿರುವ ಲವಣಾಂಶಗಳು ತೊಳೆಸಲ್ಪಟ್ಟು ಕೇವಲ ಕಬ್ಬಿಣದ ಆಕ್ಸೈಡ್ ಮತ್ತು ಅಲ್ಯುಮಿನಿಯಂ ಗಳು ಮಾತ್ರ ಮೇಲ್ಪದರದಲ್ಲಿ ಉಳಿದಿರುವುದು. ಇದರಿಂದಾಗಿ ಈ ಮಣ್ಣು ಕೆಂಪು ಬಣ್ಣವನ್ನು ಹೊಂದಿರುವುದು. ಮಳೆಯ ನೀರು ಲವಣಗಳನ್ನು ಕರಗಿಸಿ ದ್ರಾವಣದ ರೂಪದಲ್ಲಿ ಭೂಮಿಯ ಹೆಚ್ಚು ಆಳದವರೆಗೆ ಸಾಗಿಸಿರುವುದು ಆದ್ದರಿಂದ ಮೇಲ್ಪದರದ ಮಣ್ಣಿನಲ್ಲಿ ನೀರಿನಲ್ಲಿ ಕರಗದ ಕಬ್ಬಿಣ ಆಕ್ಸೈಡ್ ಮತ್ತು ಅಲ್ಯೂಮಿನಿಯಂಗಳು ಮಾತ್ರ ಕಂಡು ಬರುತ್ತವೆ. ಈ ಮಣ್ಣು ಕಡಿಮೆ ಫಲವತ್ತತೆ ಹೊಂದಿದ್ದು ಸಾರಜನಕ ಮತ್ತು ಲವಣಗಳ ಕೊರತೆಯನ್ನು ಹೊಂದಿರುತ್ತದೆ. ಈ ಮಣ್ಣು ಭಾರತದಲ್ಲಿ ಸುಮಾರು 2.48 ಲಕ್ಷ ಚ. ಕಿ. ಮೀ. ಪ್ರದೇಶದಲ್ಲಿ ಕಂಡು ಬರುವುದು. ಪಶ್ಚಿಮ ಘಟ್ಟಗಳು, ವಿಂಧ್ಯ, ಸಾತ್ಪುರ ಮತ್ತು ರಾಜಮಹಲ್ ಬೆಟ್ಟಗಳು ಹಾಗೂ ಪೂರ್ವಾಚಲ ಪದೇಶಗಳಲ್ಲಿ ಈ ಮಣ್ಣು ವ್ಯಾಪಕವಾಗಿ ಹರಡಿದೆ. ಇದು ಕಾಫಿ, ಟೀ ಮುಂತಾದ ತೋಟಗಾರಿಕೆ ಬೆಳೆಗಳಿಗೆ ಬಹಳ ಉಪಯುಕ್ತವಾಗಿದೆ.

**10. ಮರುಭೂಮಿ ಮಣ್ಣು ಹಾಗೂ ಪರ್ವತ ಮಣ್ಣುಗಳಿಗಿರುವ ವ್ಯತ್ಯಾಸ ವಿವರಿಸಿ.**

**ಮರುಭೂಮಿ ಮಣ್ಣು :** ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪದೇಶದಲ್ಲಿ ಮರಭೂಮಿ ಮಣ್ಣು ಕಂಡು ಬರುತ್ತದೆ. ಇದು ಕೆಂಪು ಮತ್ತು ಕಂದು ಬಣ್ಣವನ್ನು ಹೊಂದಿದೆ. ಕಣಗಳ ನಡುವೆ ಅಧಿಕ ರಂಧ್ರತೆ ಇರುವುದರಿಂದ ನೀರು ನಿಲ್ಲದ ತೀವ್ರವಾಗಿ ಬಸಿದು ಹೋಗುತ್ತದೆ ಮತ್ತು ಬೇಗ ಆರ್ದ್ರತೆ ಕಡಿಮೆ ಆಗುತ್ತದೆ. ಭಾರತದಲ್ಲಿ ಈ ಮಣ್ಣು ಸುಮಾರು 1.4 ಲಕ್ಷ ಚ. ಕಿ. ಮೀ. ಪ್ರದೇಶದಲ್ಲಿ ಹರಡಲ್ಪಟ್ಟಿದೆ. ಭಾರತದ ವಾಯುವ್ಯ ಭಾಗದ ರಾಜಸ್ಥಾನ, ಪಂಜಾಬ್, ಹರಿಯಾಣಗಳಲ್ಲಿ ಹಾಗೂ ಪಶ್ಚಿಮ ಗುಜರಾತಿನ ಕಛ್ ಪ್ರದೇಶ ಹಾಗೂ ಅರಾವಳಿ ಶ್ರೇಣಿಯ ಪಶ್ಚಿಮ ಭಾಗದಲ್ಲಿ ಹಂಚಿಕೆಯಾಗಿದೆ. ಈ ಮಣ್ಣಿನಲ್ಲಿ ಸಜ್ಜೆ, ಖರ್ಜೂರ ಇತ್ಯಾದಿಗಳನ್ನು ಬೆಳೆಯಬಹುದು.

**ಪರ್ವತ ಮಣ್ಣು :** ಕೊಳೆತ ಜೈವಿಕಾಂಶಗಳನ್ನು ಈ ಮಣ್ಣು ಅಧಿಕ ಪ್ರಮಾಣದಲ್ಲಿ ಹೊಂದಿದೆ. ಪರ್ವತಗಳಲ್ಲಿ ನಿರ್ಮಾಣಗೊಂಡ ಈ ಮಣ್ಣು ಇಳಿಜಾರಿನ ಮೈದಾನಕ್ಕೆ ಇಳಿದು ಬರುತ್ತದೆ. ಇದು ಸಾರಜನಕ ಮತ್ತು ಸಾವಯವ ಅವಶೇಷಗಳನ್ನು ಹೆಚ್ಚಾಗಿ ಒಳಗೊಂಡಿರುತ್ತದೆ. ಹಿಮಾಲಯದ ಪಾದ ಬೆಟ್ಟಗಳು, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪದೇಶ, ಉತ್ತರಾಖಂಡ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಪರ್ವತ ಪ್ರದೇಶಗಳಲ್ಲಿ ಈ ಮಣ್ಣು ಹಂಚಲ್ಪಟ್ಟಿದೆ. ಈ ಮಣ್ಣು ಕಾಫಿ, ಚಹಾ, ಸಾಂಬಾರ ಪದಾರ್ಥ ಮತ್ತು ಹಣ್ಣುಗಳನ್ನು ಬೆಳೆಯಲು ಸೂಕ್ತವಾಗಿದೆ.



Use e-papers for save trees-InyaTrust.com

# ಅಧ್ಯಾಯ -5
# ಭಾರತದ ಅರಣ್ಯಗಳು

**I ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**1. ಬಂಡೀಪುರ, ನಾಗರಹೊಳೆ ಮತ್ತು ಬನ್ನೇರು ಘಟ್ಟ ರಾಷ್ಟ್ರೀಯ ಉದ್ಯಾನಗಳು ಇರುವ ರಾಜ್ಯ**

a) ತಮಿಳುನಾಡು b) ಕರ್ನಾಟಕ c) ಕೇರಳ d) ಆಂಧ್ರಪ್ರದೇಶ

**2. ಗಂಗಾನದಿಯ ಮುಖಜ ಭೂಮಿಯಲ್ಲಿ ಸುಂದರಿ ಮರಗಳು ಹೇರಳವಾಗಿರುವುದರಿಂದ ಈ ಪ್ರದೇಶವನ್ನು ________ ಎನ್ನುವರು.**

a) ನಿತ್ಯ ಹರಿದ್ವರ್ಣ ಕಾಡುಗಳು b) ಮಾನ್ಸೂನ್ ಕಾಡುಗಳು

c) ಸುಂದರಬನ್ಸ್ ಕಾಡುಗಳು d) ಮರುಭೂಮಿ ಕಾಡುಗಳು

**3. ಕಾಡುಗಳು ವರ್ಷ ಪೂರ್ತಿ ನಮ್ಮ ಹಸಿರನ್ನು ಕಾಪಾಡಿಕೊಳ್ಳುತ್ತವೆ.**

a)ಮಾನ್ಸೂನ್ ಕಾಡುಗಳು b)ನಿತ್ಯ ಹರಿದ್ವರ್ಣ ಕಾಡುಗಳು

c) ಮರುಭೂಮಿ ಅರಣ್ಯಗಳು d)ಅಲ್ಪೈನ್ ಅರಣ್ಯಗಳು

**II ಸೂಕ್ತ ಪದಗಳಿಂದ ಬಿಟ್ಟ ಸ್ಥಳವನ್ನು ತುಂಬಿರಿ**

1. ಅಸ್ಸಾಂ ಮತ್ತು ಮೇಘಾಲಯಗಳಲ್ಲಿ ನಿತ್ಯ ಹರಿದ್ವರ್ಣ ಕಾಡುಗಳು ಕಂಡು ಬರುತ್ತವೆ.
2. ಹಿಮಾಲಯದಲ್ಲಿ ಅಲ್ಪೈನ್ ಕಾಡುಗಳು ಕಂಡು ಬರುತ್ತವೆ.
3. ಗಂಗಾನದಿ ಮುಖಜ ಭೂಮಿಯ ಪ್ರದೇಶವನ್ನು ಸುಂದರಬನ್ಸ್ ಎಂತಲೂ ಕರೆಯುವರು.
4. ಬನ್ನೇರು ಘಟ್ಟ ರಾಷ್ಟ್ರೀಯ ಉದ್ಯಾನವನ ಕರ್ನಾಟಕ ರಾಜ್ಯದಲ್ಲಿದೆ.
5. ಸುಂದರ್‌ಬನ್ಸ್ ಕಾಡಿನಲ್ಲಿ ಸುಂದರಿ ಎಂಬ ಮರಗಳು ಬೆಳೆಯುತ್ತವೆ.
6. ಭಾರತದ ಮೊದಲ ಜೈವಿಕ ಸಂರಕ್ಷಣಾವಲಯ ಶೇಷಾಚಲಂ ನೀಲಗಿರಿ
7. ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಉತ್ತರಾಂಚಲದ ಜಿಮ್ ಕಾರ್ಬೆಟ್
8. ಭಾರತದಲ್ಲಿ 18 ಜೈವಿಕ ಸಂರಕ್ಷಣಾ ವಲಯಗಳಿವೆ.
9. ಭಾರತದಲ್ಲಿ 523 ವನ್ಯಜೀವಿ ಧಾಮಗಳಿವೆ.
10. ಹಿಮಾಲಯದ ಪರ್ವತಗಳಲ್ಲಿ ವಿವಿಧ ಬಗೆಯ ಅರಣ್ಯಗಳು ಕಂಡು ಬರುತ್ತವೆ.
11. ಅತಿಹೆಚ್ಚು ಅರಣ್ಯ ಪ್ರದೇಶವನ್ನುಹೊಂದಿರುವ ರಾಜ್ಯ ಮಧ್ಯಪ್ರದೇಶ.
12. ಅತಿ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿರುವ ರಾಜ್ಯ ಹರಿಯಾಣ.
13. ಅರಣ್ಯ ಪ್ರದೇಶದ ವಿಸ್ತೀರ್ಣತೆಯಲ್ಲಿ ಭಾರತ 13ನೇ ಸ್ಥಾನದಲ್ಲಿದೆ.
14. ಮ್ಯಾಂಗ್ರೋವ್ ಕಾಡುಗಳು ಸಮುದ್ರದಉಬ್ಬರಗಳಿಂದ ಉಂಟಾಗಿವೆ.



Use e-papers for save trees-InyaTrust.com

**III ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಭಾರತವು ಹೊಂದಿರುವ ಅರಣ್ಯ ಪ್ರದೇಶಗಳೆಷ್ಟು?**

ಭಾರತ ಸುಮಾರು 6.9 ಲಕ್ಷ ಚ. ಕಿ. ಮೀ. ನಷ್ಟು ಅರಣ್ಯವನ್ನು ಹೊಂದಿದೆ. ಅಂದರೆ ಭೌಗೋಳಿಕ ಕ್ಷೇತ್ರದ ಶೆ.21.02 ರಷ್ಟು ಭೂ ಭಾಗವು ಅರಣ್ಯಗಳಿಂದ ಕೂಡಿದೆ.

**2. ಕರ್ನಾಟಕದ ಎರಡು ರಾಷ್ಟ್ರೀಯ ಉದ್ಯಾನವನಗಳನ್ನು ಹೆಸರಿಸಿ.**

ನಾಗರಹೊಳೆ ಮತ್ತು ಬನ್ನೇರು ಘಟ್ಟ.

**3. ಸ್ವಾಭಾವಿಕ ಸಸ್ಯವರ್ಗ ಎಂದರೇನು?**

ಒಂದು ಪ್ರದೇಶದಲ್ಲಿ ಪ್ರಕೃತಿದತ್ತವಾಗಿ ಬೆಳೆದಿರುವ ಎಲ್ಲಾ ಬಗೆಯ ಸಸ್ಯ ಸಮೂಹವನ್ನು ಅರಣ್ಯಗಳು ಅಥವಾ ಸ್ವಾಭಾವಿಕ ಸಸ್ಯ ವರ್ಗ ಎನ್ನುವರು.

**4. ದೇಶದಲ್ಲಿನ ಅರಣ್ಯ ಸಂರಕ್ಷಣೆಗೆ ನಿಮ್ಮ ಸಲಹೆಗಳು ಯಾವುವು?**

- ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
- ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
- ಸಸಿಗಳನ್ನು ನೆಡುವುದು, ಬೀಜಗಳನ್ನು ಹರಡುವುದು.
- ಕಾನೂನು ಬಾಹಿರವಾಗಿ ಮರ ಕಡಿಯುವುದನ್ನು ನಿಯಂತ್ರಿಸುವುದು.
- ಅರಣ್ಯಗಳಲ್ಲಿ ಸಾಕುಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು
- ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೇರೇಪಿಸುವುದು.
- ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು.

**5. ಭಾರತದಲ್ಲಿ ಎಲೆ ಉದುರುವ ಅರಣ್ಯ ಲಕ್ಷಣ ಮತ್ತು ಹಂಚಿಕೆಯನ್ನು ವಿವರಿಸಿ.**

ಈ ರೀತಿಯ ಕಾಡುಗಳು ಭಾರತದಲ್ಲಿ ಅತಿ ಹೆಚ್ಚು ವಿಸ್ತಾರವಾಗಿ ಹರಡಿವೆ. ಇವುಗಳು 75 ರಿಂದ 250 ಸೆಂ. ಮೀ. ಮಳೆ ಬೀಳುವ ಪದೇಶಗಳ್ಲಿ ಕಂಡುಬರುತ್ತವೆ. ಇದು ಭಾರತದ ಶೇ. 65.5 ರಷ್ಟು ಒಟ್ಟು ಅರಣ್ಯದಲ್ಲಿ ಹರಡಿದೆ. ಭಾರತವು ಮಾನ್ಸೂನ್ ವಾಯುಗುಣವನ್ನು ಹೊಂದಿರುವುದರಿಂದ ಈ ಬಗೆಯ ಅರಣ್ಯಗಳು ವ್ಯಾಪಕವಾಗಿ ಹಂಚಿಕೆಯಾಗಿವೆ. ಇವುಗಳು ವರ್ಷದ ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ ಎಲೆಯುದುರಿಸುವುದನ್ನು ರೂಢಿಸಿಕೊಂಡಿರುವುದರಿಂದ ಇವುಗಳನ್ನು ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳೆಂದು ಕರೆಯುವರು.

**7. ಅರಣ್ಯ ಸಂರಕ್ಷಣೆ ಎಂದರೇನು? ಅದರ ಪ್ರಾಮುಖ್ಯತೆ ಮತ್ತು ವಿಧಾನಗಳನ್ನು ತಿಳಿಸಿ.**

ಅರಣ್ಯಗಳನ್ನು ಮಾನವನಿಂದ, ಪ್ರಾಣಿಗಳಿಂದ ಹಾಗೂ ನೈಸರ್ಗಿಕ ವಿಪತ್ತುಗಳಿಂದ ಕಾಪಾಡುವುದನ್ನೇ ಅರಣ್ಯ ಸಂರಕ್ಷಣೆ ಎನ್ನುವುದು. ಭಾರತದಲ್ಲಿ ವ್ಯವಸಾಯದ ವಿಸ್ತರಣೆ, ಹೈನುಗಾರಿಕೆ, ರಸ್ತೆಗಳು, ರೈಲುಮಾರ್ಗಗಳು, ನೀರಾವರಿ ಯೋಜನೆಗಳ ನಿರ್ಮಾಣ, ಕಾಡ್ಗಿಚ್ಚು, ಗಣಿಗಾರಿಕೆ ಮುಂತಾದವುಗಳಿಂದ ಅರಣ್ಯಗಳ ಕ್ಷೇತ್ರವು ಇಳಿಮುಖವಾಗುತ್ತಿದೆ.ಆದ್ದರಿಂದ ಅರಣ್ಯ ಸಂರಕ್ಷಣೆ ತುಂಬಾ ಪ್ರಮುಖವಾಗಿದೆ.



Use e-papers for save trees-InyaTrust.com

**ಸಂರಕ್ಷಣಾ ವಿಧಾನಗಳು**

- ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
- ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
- ಸಸಿಗಳನ್ನು ನೆಡುವುದು, ಬೀಜಗಳನ್ನು ಹರಡುವುದೂ, ಕಾನೂನು ಬಾಹಿರವಾಗಿ ಮರ ಕಡಿಯುವುದನ್ನು ನಿಯಂತ್ರಿಸುವುದು.
- ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು.
- ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೋತ್ಸಾಹಿಸುವುದು.
- ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು.

**8. ಭಾರತದ ಮುಖ್ಯವಾದ ವನ್ಯಜೀವಿ ಧಾಮಗಳನ್ನು ಹೆಸರಿಸಿ.**

**ಉತ್ತರ :** ತಮಿಳುನಾಡು - ಅಣ್ಣಾಮಲೈ ವನ್ಯ ಜೀವಿ ಧಾಮ, ಕೊಯಮತ್ತೂರು, ನೀಲಗಿರಿ

**ಪಶ್ಚಿಮ ಬಂಗಾಳ** - ಮದಾರಿ ಹಾತ್, ಜಾಲ್ದಾಪಾರ

**ರಾಜಸ್ಥಾನ** - ಭರತಪುರ, ಕಿವೋಲ ಡಿವೋ ಪಕ್ಷಿಧಾಮ

**ಹರಿಯಾಣ** - ಸುಲ್ತಾನ ಪೂರ, ಗುರೆಗಾಂವ

**ಪಂಜಾಬ್** - ಬೀರ್‌ಮೊತಿ ಬಾಗ್, ಪಟಿಯಾಲ

**ಆಂಧ್ರಪ್ರದೇಶ** - ಗುಂಟೂರು, ನಾಗರ್ಜುನ ಸಾಗರ

**9. ಭಾರತದಲ್ಲಿರುವ ಮುಖ್ಯವಾದ ರಾಷ್ಟ್ರೀಯ ಉದ್ಯಾನವನಗಳನ್ನು ಹೆಸರಿಸಿ.**

ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀ ಉದ್ಯಾನವನವೆಂದರೆ ಉತ್ತರಾಂಚಲದ ಜಿಮ್ ಕಾರ್ಬೆಟ್ ದೇಶದ ಪ್ರಮುಖ ರಾಷ್ಟ್ರೀಯ ಉದ್ಯಾನವನಗಳೆಂದರೆ.

i) ಕಾಜಿರಂಗ ನ್ಯಾಷನಲ್ ಪಾರ್ಕ್, ಸಿಬ್ ಸಾಗರ, ಅಸ್ಸಾಂ

ii) ಸುಂದರಬನಂ 24 ಪರಗಣ ಜಿಲ್ಲೆ, ಪಶ್ಚಿಮ ಬಂಗಾಳ

iii) ಹಜಾರಿ ಭಾಗ ನ್ಯಾಷನಲ್ ಪಾರ್ಕ್, ಬಿಹಾರ

iv) ಗಿರ್ ನ್ಯಾಷನಲ್ ಪಾರ್ಕ್ ಜಗನ್ನಾಥ, ಗುಜರಾತ್

v) ಕನ್ಹಾ ರಾಷ್ಟ್ರೀಯ ಉದ್ಯಾನವನ, ಮಾಂಡ್ಯ ಮತ್ತು ಬಾಲಘಾಟ್ ಮಧ್ಯಪ್ರದೇಶ.

vi) ತಾಂಡೋವಾ ರಾಷ್ಟ್ರೀಯ ಉದ್ಯಾನವನ, ಚಂದ್ರಾಪೂರ, ಮಹಾರಾಷ್ಟ್ರ.

**10. ಭಾರತದಲ್ಲಿರುವ ಜೈವಿಕ ಸಂರಕ್ಷಣಾ ವಲಯಗಳನ್ನು ಹೆಸರಿಸಿ.**

ಭಾರತವು ಸಸ್ಯ ಮತ್ತು ಪ್ರಾಣಿ ಸಂಪತ್ತಿನ ವೈವಿಧ್ಯತೆಯನ್ನು ಒಳಗೊಂಡಿದೆ. ಈ ಜೀವ ವೈವಿಧ್ಯತೆಯನ್ನು ಕಾಪಾಡಲು ದೇಶದಲ್ಲಿ 18 ಜೈವಿಕ ವಲಯಗಳನ್ನು ಸಂರಕ್ಷಿಸಲಾಗಿದೆ. ಅವುಗಳೆಂದರೆ ನೀಲಗಿರಿ, ನಂದಾದೇವಿ, ನೋಕ್ರೆಕ್, ಗ್ರೇಟ್ ನಿಕೋಬಾರ್, ಮನ್ನಾರ್, ಅಖಾತ, ಮನಾಸ್, ಸುಂದರ ಬನ, ಸಿಮಿಲಿಪಾಲ್, ಕಾಂಚನಗಂಗಾ, ಅಮರಕಂಟಕ, ಶೀತ ಮರುಭೂಮಿ (ಹಿಮಾಚಲ ಪ್ರದೇಶ)ಪನ್ನಾ ಮತ್ತು ಶೇಷಾಚಲಂ ನೀಲಗಿರಿ ಸಂರಕ್ಷಣಾ ವಲಯವು ದೇಶದಲ್ಲಿ ಪ್ರಥಮವಾಗಿದೆ.



Use e-papers for save trees-InyaTrust.com

**11. ಭಾರತದ ಪ್ರಾಕೃತಿಕ ಸಸ್ಯ ವರ್ಗಗಳನ್ನು ಹೆಸರಿಸಿ.**

i) ನಿತ್ಯ ಹರಿದ್ವರ್ಣದ ಕಾಡುಗಳು
ii) ಎಲೆಯುದುರಿಸುವ ಮಾನ್ಸೂನ್ ಕಾಡುಗಳು
iii) ಉಷ್ಣವಲಯದ ಹುಲ್ಲುಗಾವಲು ಅರಣ್ಯ
iv) ಮ್ಯಾಂಗ್ರೋವ್ ಅರಣ್ಯಗಳು
v) ಮರುಭೂಮಿ ಅರಣ್ಯಗಳು
vi) ಹಿಮಾಲಯದ ಅಲ್ಫೈನ್ ಅರಣ್ಯಗಳು.

* * *



Use e-papers for save trees-InyaTrust.com

# ಅಧ್ಯಾಯ –6
# ಜಲ ಸಂಪನ್ಮೂಲಗಳು

**ಮುಖ್ಯಾಂಶಗಳು**

- ದಾಮೋದರ ನದಿಯನ್ನು ಬಂಗಾಳದ ಕಣ್ಣೀರಿನ ನದಿ ಎನ್ನುವರು.
- ಭಾರತದ ಅತ್ಯಂತ ಎತ್ತರವಾದ ವಿವಿಧೋದ್ದೇಸ ನದಿ ಕಣಿವೆ ಯೋಜನೆ ಭಾಕ್ರಾನಂಗಲ್ ಯೋಜನೆ.
- ಭಾಕ್ರಾನಂಗಲ್ ಯೋಜನೆಯನ್ನು ಹಿಮಾಚಲ ಪ್ರದೇಶದಲ್ಲಿ ಸಟ್ಲೆಜ್ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ.
- ಭಾಕ್ರಾ ಅಣೆಕಟ್ಟು ಏಷ್ಯಾದಲ್ಲಿಯೇ ಅತ್ಯಂತ ಎತ್ತರವಾದ ಅಣೆಕಟ್ಟಾಗಿದೆ(226 ಕಿ. ಮೀ)
- ಭಾಕ್ರಾ ನಂಗಲ್ ಅಣೆಕಟ್ಟಿನ ಜಲಾಶಯವನ್ನು ಗೋವಿಂದ ಸಾಗರ ಎನ್ನುವರು.
- ಕೋಸಿ ನದಿಯನ್ನು ಬಿಹಾರದ 'ಕಣ್ಣೀರಿನ ನದಿ' ಎಂದು ಕರೆಯುವರು.
- ಕೋಸಿ ಯೋಜನೆಯು ಭಾರತ ಮತ್ತು ನೇಪಾಳ ರಾಷ್ಟ್ರಗಳ ಜಂಟಿ ಯೋಜನೆಯಾಗಿದೆ.
- ಭಾರತ ಮತ್ತು ನೇಪಾಳ ಗಡಿಯಲ್ಲಿ ಬರುವ ಹನುಮಾನ ನಗರ ಎಂಬಲ್ಲಿ ಕೋಸಿ ನದಿಗೆ ಅಣೆಕಟ್ಟು ನಿರ್ಮಿಸಲಾಗಿದೆ.
- ಮಹಾನದಿಯನ್ನು 'ಒರಿಸ್ಸಾದ ಕಣ್ಣೀರಿನದಿ' ಎನ್ನುವರು.
- ಹಿರಾಕುಡ್ ಯೋಜನೆಯು ಭಾರತದಲ್ಲಿಯೇ ಅತ್ಯಂತ ಉದ್ದವಾದ ಅಣೆಕಟ್ಟನ್ನು ಹೊಂದಿದೆ. (4801 ಮೀ)
- ಹಿರಾಕುಡ್ ಯೋಜನೆಯನ್ನು ಒರಿಸ್ಸಾದಸಾಂಬಾಲಪುರದ ಹತ್ತಿರ ನಿರ್ಮಿಸಲಾಗಿದೆ.
- ತುಂಗಭದ್ರಾ ಯೋಜನೆಯ ಜಲಾಶಯವನ್ನು ಪಂಪಸಾಗರ ಎನ್ನುವರು.
- ಕೃಷ್ಣ ಮೇಲ್ದಂಡೆ ಯೋಜನೆಯನ್ನು ಬಿಜಾಪುರ ಜಿಲ್ಲೆಯ ಆಲಮಟ್ಟಿ ಬಳಿ ಕೃಷ್ಣಾನದಿಗೆ ಅಡ್ಡಲಾಗಿ ಕಟ್ಟಲಾಗಿದೆ.
- ನಾಗಾರ್ಜುನ ಸಾಗರ ಯೋಜನೆಯನ್ನು ಆಂಧ್ರಪ್ರದೇಶದ ನಂದಿಕೊಂಡ ಗ್ರಾಮದ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ.

**ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು**

| | |
|---|---|
| **ಹಿರಾಕುಡ್ ಯೋಜನೆ :** | ಮಹಾನದಿ – ಒರಿಸ್ಸಾದ ಸಾಂಬಾಲಪುರ – ಒರಿಸ್ಸಾದ ಕಣ್ಣೀರಿನ ನದಿ ಭಾರತದಲ್ಲೇ ಅತ್ಯಂತ ಉದ್ದವಾದ ಅಣೆಕಟ್ಟು. |
| **ಕೋಸಿ ಯೋಜನೆ :** | **ಕೋಸಿ ನದಿ** – ಭಾರತ ಮತ್ತು ನೇಪಾಳದ ಗಡಿಯಲ್ಲಿ ಬರುವ ಹನುಮಾನ ನಗರ ಬಿಹಾರದ ಕಣ್ಣೀರಿನ ನದಿ. |
| **ನಾಗಾರ್ಜುನ ಸಾಗರಯೋಜನೆ :** | ಕೃಷ್ಣ ನದಿ – ನಂದಿಕೊಂಡ ಗ್ರಾಮ (ಆಂಧ್ರಪ್ರದೇಶ) ಭಾರತದಲ್ಲೇ ಅತಿ ದೊಡ್ಡ ಯೋಜನೆ |
| **ಭಾಕ್ರಾನಂಗಲ್ ಯೋಜನೆ :** | ಸಟ್ಲೇಜ್ ನದಿ – ಹಿಮಾಚಲ ಪದೇಶ – ಏಷ್ಯಾದಲ್ಲಿಯೇ (ಭಾರತದಲ್ಲಿಯೇ) ಅತ್ಯಂತ ಎತ್ತರವಾದ ಯೋಜನೆ (226 ಮೀ) |
| **ಕೃಷ್ಣಾ ಮೇಲ್ದಂಡೆ ಯೋಜನೆ :** | ಕೃಷ್ಣಾ ನದಿ – ಬಿಜಾಪುರದ ಹತ್ತಿರ ಆಲಮಣ್ಣಿ – ಲಾಲ್‌ಬಹದ್ದೂರ್ ಶಾಸ್ತ್ರೀ ಜಲಾಶಯ |



Use e-papers for save trees-InyaTrust.com

**ದಾಮೋದರ ನದಿ ಕಣಿವೆ ಯೋಜನೆ :** ದಾಮೋದರ ನದಿ – ಸ್ವತಂತ್ರ ಭಾರತದ ಮೊದಲನೆಯ ವಿವಿಧೋದ್ದೇಶ ಯೋಜನೆ–ಬಂಗಾಳದ ಕಣ್ಣೀರಿನ ನದಿ ಬಿಹಾರ ಮತ್ತು ಪಶ್ಚಿಮ ಬಂಗಾಳಗಳ ಜಂಟಿ ಯೋಜನೆ

**ತುಂಗಾಭದ್ರ ಯೋಜನೆ :** ತುಂಗಾಭದ್ರಾ ನದಿ –ಬಳ್ಳಾರಿಯ ಹೊಸಪೇಟೆ ಬಳಿ ಮಲ್ಲಾಪುರ – ಪಂಪ ಸಾಗರ ಯೋಜನೆ – ಕರ್ನಾಟಕ ಮತ್ತು ಆಂಧ್ರಪ್ರದೇಶ.

**ನರ್ಮದಾ ಕಣಿವೆ ಯೋಜನೆ** ನರ್ಮದಾ ನದಿ

**I ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿಸಿ**

1. **ಒರಿಸ್ಸಾದ ಕಣ್ಣೀರಿನ ನದಿ**
   **a) ಮಹಾನದಿ** b) ಕೋಸಿ ನದಿ c) ದಾಮೋದರ ನದಿ d) ಸಟ್ಲೇಜ್ ನದಿ

2. **ಬಿಹಾರದ ಕಣ್ಣೀರಿನ ನದಿ**
   a) ಸಟ್ಲೇಜ್ ನದಿ b) ಮಹಾನದಿ c) ದಾಮೋದರ ನದಿ **d) ಕೋಸಿ ನದಿ**

3. **ಭಾರತದ ಅತ್ಯಂತ ಎತ್ತರವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ**
   a) ಕೋಸಿ ಯೋಜನೆ b) ಹಿರಾಕುಡ್ ಯೋಜನೆ
   c) ಭಾಕ್ರಾನಂಗಲ್ ಯೋಜನೆ d) ದಾಮೋದರ ನದಿ ಕಣಿವೆ ಯೋಜನೆ

4. **ದಾಮೋದರ ನದಿ ಕಣಿವೆ ಯೋಜನೆಯು ಬಿಹಾರ ಮತ್ತು ____ ರಾಜ್ಯಗಳ ಜಂಟಿ ಯೋಜನೆಯಾಗಿದೆ.**
   a) ಪಶ್ಚಿಮ ಬಂಗಾಳ b) ಜಾರ್ಖಂಡ್ c) ಛತ್ತೀಸ್‌ಗಡ d) ಮಧ್ಯಪ್ರದೇಶ

5. **ಬಂಗಾಳದ ಕಣ್ಣೀರಿನ ನದಿ**
   a) ಗಂಗಾನದಿ b) ಬ್ರಹ್ಮಪುತ್ರ ನದಿ c) ಯಮುನಾ d) ದಾಮೋದರ

**II ಸರಿಯಾದ ಪದಗಳಿಂದ ಬಿಟ್ಟ ಸ್ಥಳ ತುಂಬಿರಿ**

1) ದಾಮೋದರ ನದಿಯನ್ನು **ಬಂಗಾಳದ ಕಣ್ಣೀರಿನ ನದಿ** ಎನ್ನುವರು.
2) ಕೋಸಿ ನದಿಯನ್ನು **ಬಿಹಾರದ ಕಣ್ಣೀರಿನ ನದಿ** ಎನ್ನುವರು.
3) ಕರ್ನಾಟಕದ ಅತಿ ದೊಡ್ಡ ನದಿ ಕಣಿವೆ ಯೋಜನೆ **ಕೃಷ್ಣಾ ಮೇಲ್ದಂಡೆ ಯೋಜನೆ**
4) ಕಾವೇರಿ ನದಿಗೆ **ಶಿವನಸಮುದ್ರ** ಎಂಬಲ್ಲಿ ವಿದ್ಯುಚ್ಛಕ್ತಿ ಯೋಜನೆಯನ್ನು ನಿರ್ಮಿಸಲಾಗಿದೆ.
5) ಹಿರಾಕುಡ್ ಯೋಜನೆಯನ್ನು **ಮಹಾನದಿಗೆ** ನಿರ್ಮಿಸಲಾಗಿದೆ.
6) ಮಳೆ ನೀರಿನ ಸಂಗಹಣೆಯನ್ನು **ಮಳೆ ಕೊಯ್ಲು** ಎನ್ನುವರು.
7) ನಾಗಾರ್ಜುನ ಸಾಗರ ಯೋಜನೆಯನ್ನು **ಕೃಷ್ಣಾನದಿಗೆ** ಕಟ್ಟಲಾಗಿದೆ.
8) ತುಂಗಾಭದ್ರಾ ಯೋಜನೆಯು **ಆಂಧ್ರಪ್ರದೇಶ ಮತ್ತು ಕರ್ನಾಟಕ** ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ.



Use e-papers for save trees-InyaTrust.com

**III ಹೊಂದಿಸಿ ಬರೆಯಿರಿ**

| | A | B | ಉತ್ತರಗಳು |
|---|---|---|---|
| 1. | **ಭಾಕ್ರಾನಂಗಲ್ ಯೋಜನೆ** | a) ಬಿಹಾರ | **b) ಹಿಮಾಚಲ ಪ್ರದೇಶ** |
| 2. | **ತುಂಗಭದ್ರಾ ಯೋಜನೆ** | b) ಹಿಮಾಚಲ ಪ್ರದೇಶ | **c) ಕರ್ನಾಟಕ** |
| 3. | **ಹಿರಾಕುಡ್ ಯೋಜನೆ** | c) ಕರ್ನಾಟಕ | **d) ಒರಿಸ್ಸಾ.** |
| 4. | **ಕೋಸಿ ಯೋಜನೆ** | d) ಒರಿಸ್ಸಾ | **a) ಬಿಹಾರ** |

| | | | |
|---|---|---|---|
| 1. | **ಭಾಕ್ರಾನಂಗಲ್ ಯೋಜನೆ** | a) ಕರ್ನಾಟಕ ಮತ್ತು ಆಂಧ್ರಪ್ರದೇಶ | b) |
| 2. | **ತುಂಗಭದ್ರಾ** | b) ಪಂಜಾಬ, ಹರಿಯಾಣ, ರಾಜಸ್ಥಾನ | a) |
| 3. | **ದಾಮೋದರ ನದಿ ಕಣಿವೆ ಯೋಜನೆ** | c) ಭಾರತ ಮತ್ತು ನೇಪಾಳ | d) |
| 4. | **ಕೋಸಿ ಯೋಜನೆ** | d) ಬಿಹಾರ ಮತ್ತು ಪಶ್ಚಿಮ ಬಂಗಾಳ | c) |

**IV ಗುಂಪಿನಲ್ಲಿ ಚರ್ಚಿಸಿದ ನಂತರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ನೀರಾವರಿ ಎಂದರೇನು?**

ವ್ಯವಸಾಯದ ಭೂಮಿಗೆ ಕೃತಕವಾಗಿ ಕಾಲುವೆ, ಬಾವಿ ಮತ್ತು ಕೆರೆಗಳಿಂದ ನೀರು ಸರಬರಾಜು ಮಾಡುವುದಕ್ಕೆ ನೀರಾವರಿ ಎನ್ನುವರು.

**2. ನೀರಾವರಿಯ ವಿಧಗಳಾವುವು?**

ಬಾರಿ ನೀರಾವರಿ, ಕಾಲುವೆ ನೀರಾವರಿ, ಕೆರೆ ನೀರಾವರಿ

**3. ವಿವಿಧೋದ್ದೇಶ ನದಿ ಕಣಿವೆ ಯೋಜನೆ ಎಂದರೇನು? ಈ ಯೋಜನೆಗಳ ಮುಖ್ಯ ಉದ್ದೇಶಗಳೇನು?**

ನದಿ ಕಣಿವೆಯಲ್ಲಿನ ಜಲಸಂಪತ್ತಿನ ಗರಿಷ್ಠ ಪ್ರಮಾಣದ ಬಳಕೆಗೆ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಈ ಯೋಜನೆಗಳು ವ್ಯವಸಾಯದ ಜೊತೆಗೆ ಹಲವಾರು ಉದ್ದೇಶಗಳಿಗೆ ನೀರನ್ನು ಒದಗಿಸುವುದರಿಂದ ಇವುಗಳನ್ನು ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಎನ್ನುವರು.

**ಉದ್ದೇಶಗಳು.**

- ನೀರಾವರಿ ಸೌಲಭ್ಯವನ್ನು ಒದಗಿಸುವುದು.
- ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು.
- ನದಿಗಳು ಪ್ರವಾಹವನ್ನು ನಿಯಂತ್ರಿಸುವುದು.
- ನೌಕಾಯಾನದ ಸೌಲಭ್ಯವನ್ನು ಒದಗಿಸುವುದು.
- ಗೃಹ ಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು.
- ಮಣ್ಣಿನಸವಕಳಿಯನ್ನು ನಿಯಂತ್ರಿಸುವುದು.
- ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು.
- ಅರಣ್ಯ ಸಂಪತ್ತನ್ನು ವೃದ್ಧಿಸುವುದು.



Use e-papers for save trees-InyaTrust.com

**4. ಭಾಕ್ರಾ ನಂಗಲ್ ಯೋಜನೆಯನ್ನು ಕುರಿತು ಬರೆಯಿರಿ.**

- ಇದು ಭಾರತದ ಅತ್ಯಂತ ಎತ್ತರವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆಯಾಗಿದೆ.
- ಇದು ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನ ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ.
- ಹಿಮಾಚಲ ಪ್ರದೇಶದ ಭಾಕ್ರಾ ಮತ್ತು ನಂಗಲ್ ಎಂಬಲ್ಲಿ ಸಟ್ಲೇಜ್ ನದಿಗೆ ಅಣೆಕಟ್ಟುಗಳನ್ನು ಕಟ್ಟಲಾಗಿದೆ.
- ಭಾಕ್ರಾ ಅಣೆಕಟ್ಟು ಏಷ್ಯಾದಲ್ಲಿಯೇ ಅತ್ಯಂತ ಎತ್ತರವಾದ (226 ಮೀ) ಅಣೆಕಟ್ಟೆಯಾಗಿದ್ದು, 3402 ಕಿ. ಮೀ. ಉದ್ದವಾದ ಕಾಲುವೆಗಳ ಜಾಲವನ್ನು ಹೊಂದಿದ್ದು, 14.6 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನುಒದಗಿಸುತ್ತದೆ.
- ಈ ಯೋಜನೆಯಿಂದ ದೆಹಲಿ, ಹಿಮಾಚಲ ಪದೇಶಗಳು ಸಹ ನೀರಾವರಿ ಮತ್ತು ಜಲವಿದ್ಯುಚ್ಛಕ್ತಿ ಸೌಲಭ್ಯವನ್ನು ಹೊಂದಿವೆ. ಇದರ ಜಲಾಶಯವನ್ನು ಗೋವಿಂದ ಸಾಗರ ಎನ್ನುವರು.

**5. ಕರ್ನಾಟಕ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಹೆಸರಿಸಿ.**

ಶಿವನ ಸಮುದ್ರ, ತುಂಗಭದ್ರಾ, ಜೋಗ, ಭದ್ರಾ, ಕೃಷ್ಣ ಮೇಲ್ದಂಡೆ, ಕಾಳಿ (ಸೂಪಾ)

**6. ಮಳೆಕೊಯ್ಲು ಅಥವಾ ಮಳೆ ನೀರಿನ ಸಂಗ್ರಹಣೆ ಇಂದು ಕಡ್ಡಾಯವಾಗಿದೆ. ಏಕೆ?**

ನೀರು ಅತಿ ಅಮೂಲ್ಯವಾದುದು. ಭಾರತವು ಜಲಸಂಪತ್ತನ್ನು ಅಪಾರ ಪ್ರಮಾಣದಲ್ಲಿ ಹೊಂದಿದ್ದರೂ ಅದರ ಹಂಚಿಕೆಯು ಹೆಚ್ಚು ತಾರತಮ್ಯಗಳಿಂದ ಕೂಡಿದೆ. ಅಲ್ಲದೆ ಮಳೆಗಾಲದ ಅವಧಿ ಕಡಿಮೆಯಾಗಿದ್ದು, ಹೆಚ್ಚು ಮಳೆ ಬೀಳುವ ಪ್ರದೇಶಗಳೂ ದೀರ್ಘವಾದ ಮಳೆರಹಿತ ಪ್ರದೇಶಗಳಾಗುತ್ತಿದ್ದು ಬೇಸಿಗೆಯಲ್ಲಿ ನೀರಿನ ಕೊರತೆ ಕಂಡುಬರುತ್ತದೆ. ದೇಶದಲ್ಲಿ ಕಂಡು ಬರುತ್ತಿರುವ ಜಲಕ್ಷಾಮದ ಪರಿಹಾರಕ್ಕೆ ಇರುವ ಸರಳ ಮಾರ್ಗವೆಂದರೆ 'ಮಳೆ ಕೊಯ್ಲು' ಅಥವಾ ಮಳೆ ನೀರಿನ ಸಂಗ್ರಹಣೆ, ಮಳೆ ನೀರನ್ನು ಸಂಗ್ರಹಿಸಿ ಬಳಕೆ ಮಾಡುವುದನ್ನೇ ಮಳೆಕೊಯ್ಲು ಎಂದು ಕರೆಯುವರು.

**7. ರಾಷ್ಟ್ರೀಯ ವಿದ್ಯುತ್ ಜಾಲ ಎಂದರೇನು?**

ಭಾರತ ವಿವಿಧ ಸಂಪನ್ಮೂಲಗಳಿಂದ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತಿದೆ. ಹೀಗಿದ್ದರೂ ಸಹ ಎಲ್ಲಾ ರಾಜ್ಯಗಳು ಎಲ್ಲಾ ಅವಧಿಯಲ್ಲಿಯೂ ಸಾಕಷ್ಟು ವಿದ್ಯುತ್ತಿನ ಪೂರೈಕೆಗಳನ್ನು ಹೊಂದಿರುವುದಿಲ್ಲ.
ಒಂದು ಪ್ರದೇಶದಲ್ಲಿ ಉತ್ಪತ್ತಿ ಮಾಡಲಾದ ವಿದ್ಯುತ್ತನ್ನು ದೇಶದಯಾವುದೇ ಕೊರತೆಯಿರುವ ಪ್ರದೇಶಕ್ಕೆ ಸಾಗಿಸಲು ಹಾಗೂ ವಿದ್ಯುತ್ತನ್ನು ಸಮರ್ಪಕವಾಗಿ ಪ್ರಸರಣ ಮಾಡಲು ನಿರ್ಮಿಸಿರುವ ವಿದ್ಯುತ್ ಜಾಲಕ್ಕೆ ರಾಷ್ಟ್ರೀಯ ವಿದ್ಯುತ್ ಜಾಲ ಎನ್ನುವರು.

**8. ಭಾರತದಲ್ಲಿರುವ ಪ್ರಮುಖವಾದ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಪಟ್ಟಿ ಮಾಡಿ.**

| | | |
|---|---|---|
| 1)ಕರ್ನಾಟಕ | : | ಶಿವನ ಸಮುದ್ರ, ತುಂಗಭದ್ರಾ, ಭದ್ರಾ, ಜೋಗ, ಕೃಷ್ಣಾ ಮೇಲ್ದಂಡೆ, ಕಾಳಿ (ಸೂಪಾ) |
| 2)ಆಂಧ್ರಪ್ರದೇಶ | : | ನಾಗಾರ್ಜುನ ಸಾಗರ,ಶ್ರೀ ಶೈಲಂ ಯೋಜನೆ, ರಾಮಪಾದ ಸಾಗರ ಯೋಜನೆ, ಸೀಲೇರು ಯೋಜನೆ, |
| 3)ತಮಿಳುನಾಡು | : | ಮೆಟ್ಟೂರು ಯೋಜನೆ, ಪೈಕಾರ ವಿದ್ಯುತ್ ಯೋಜನೆ, ಪೆರಿಯೂರ ಯೋಜನೆ, ಕೋಡಯಾರ ಯೋಜನೆ ಇತ್ಯಾದಿ |
| 4)ಮಧ್ಯಪ್ರದೇಶ | : | ಬನ್‌ಸಾಗರ, ಗಾಂಧಿ ನಗರ, ಪಂಚಯೋಜನೆ |



Use e-papers for save trees-InyaTrust.com

5)ಮಹಾರಾಷ್ಟ್ರ : ಟಾಟಾ ಜಲ ವಿದ್ಯುತ್ ಯೋಜನೆ, ಬೀರಾ ಯೋಜನೆ, ವೈತರಣಾ ಯೋಜನೆ, ಕೊಯ್ನಾ ಯೋಜನೆ.
6)ಒರಿಸ್ಸಾ : ಹಿರಾಕುಡ್ ಯೋಜನೆ, ಕೋಲಾಜ ಯೋಜನೆ, ರಂಗಾಲಿ ಯೋಜನೆ, ನಾರಾಜ ಯೋಜನೆ.
7)ಬಿಹಾರ : ಕೋಸಿಯೋಜನೆ, ಸುವರ್ಣ ರೇಖಾ ಯೋಜನೆ, ತಾವಾ ಯೋಜನೆ.
8)ಗುಜರಾತ್ : ಕಕ್ರಪಾರ ಯೋಜನೆ, ಕಾಡನ ಯೋಜನೆ ಉಕೈಯೋಜನೆ

**9. ಪ್ರವಾಹ ಕಾಲುವೆಗಳೆಂದರೇನು?**
ಯಾವುದೇ ರೀತಿಯ ಅಣೆಕಟ್ಟೆಗಳನ್ನು ಕಟ್ಟದೆ ನದಿಗಳಿಂದ ನೇರವಾಗಿ ಕಾಲುವೆಗಳನ್ನು ತೋಡಲಾಗುವುದು. ನದಿಗಳು ತುಂಬಿ ಹರಿಯುವಾಗ ಈ ಕಾಲುವೆಗಳ ಮೂಲಕ ನೀರು ಹರಿಯುವುದು. ಇಂತಹ ಕಾಲುವೆಗಳಿಗೆ ಪ್ರವಾಹ ಕಾಲುವೆಗಳು ಎನ್ನುವರು.

**10. ಎರಡು ರೀತಿಯ ಮಳೆ ಕೊಯ್ಲು ವಿಧಾನಗಳನ್ನು ಹೆಸರಿಸಿ. ಮಳೆ ನೀರಿನ ಸಂಗ್ರಹಣೆ ಮಾಡುವ ವಿಧಾನಗಳನ್ನು ತಿಳಿಸಿ.**
ಮಳೆಕೊಯ್ಲುವಿನ ಎರಡು ವಿಧಗಳೆಂದರೆ
- ಮಳೆಬಿದ್ದ ಸ್ಥಳದಲ್ಲಿಯೇ ನೀರನ್ನು ಸಂಗ್ರಹಿಸುವುದು. ಉದಾ : ಮನೆಯ ಮೇಲ್ಛಾವಣಿಯಿಂದ
- ಮಳೆ ಬಿದ್ದ ನಂತರ ಹರಿಯುವ ನೀರನ್ನು ಸಂಗ್ರಹಿಸುವುದು. ಉದಾ : ಒಡ್ಡು ಕಟ್ಟಿ ನೀರನ್ನು ಸಂಗ್ರಹಿಸುವುದು.

**ಮಳೆ ನೀರಿನ ಸಂಗ್ರಹಣೆ ವಿಧಾನಗಳು**
ಮನೆಯ ಮೇಲ್ಛಾವಣಿಯ ಮೇಲೆ ಬಿದ್ದು ಹರಿಯುವ ನೀರನ್ನು ಸಂಗ್ರಹಿಸಿ ದಿನನಿತ್ಯದ ಬಳಕೆಗೆ ಬಳಸುವುದು. ಇದರಿಂದ ಸಾರ್ವಜನಿಕ ನೀರು ಪೂರೈಕೆಯ ಮೇಲಿನ ಅವಲಂಬನೆ ಕಡಿಮೆ ಮಾಡುವುದು. ವ್ಯವಸಾಯ ಕ್ಷೇತ್ರಗಳಲ್ಲಿ ಹೊಂಡಗಳನ್ನು ತೋಡಿ ನೀರನ್ನು ಸಂಗ್ರಹಿಸುವುದು. ಮಳೆ ನೀರು ಹರಿದು ಹೋಗದಂತೆ ತಡೆಯೊಡ್ಡಿ ಭೂಮಿಯಲ್ಲಿ ಇಂಗುವಂತೆ ಮಾಡುವುದು. ಇದರಿಂದ ಅಂತರ್ಜಲ ಮಟ್ಟವು ಮರುಪೂರಣಗೊಳ್ಳುವುದು. ವೈಯಕ್ತಿಕ ಮಟ್ಟದಲ್ಲಿ ಮಾತ್ರವಲ್ಲದೆ ಸಮುದಾಯಗಳು ಸಹ ಹರಿಯುವ ನೀರಿಗೆ ಅಡ್ಡಗಟ್ಟಗಳನ್ನು ನಿರ್ಮಿಸಿ ಸಣ್ಣಹೊಂಡ, ಕೆರೆಗಳ ರೂಪದಲ್ಲಿ ನೀರನ್ನು ಸಂಗ್ರಹಿಸಬಹುದು.

**11. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಗುರಿಗಳೇನು?**
ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಗುರಿಗಳೆಂದರೆ
1) ನೀರಾವರಿ ಸೌಲಭ್ಯವನ್ನು ಒದಗಿಸುವುದು.
2) ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು.
3) ನದಿಗಳ ಪ್ರವಾಹವನ್ನು ನಿಯಂತ್ರಿಸುವುದು.
4) ಮಣ್ಣಿನ ಸವಕಳಿಯನ್ನು ನಿಯಂತ್ರಿಸುವುದು.
5) ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡುವುದು.
6) ಗೃಹ ಬಳಕೆ ಹಾಗೂ ಕೈಗಾರಿಕೆಗಳಿಗೆ ನೀರಿನ್ನು ಒದಗಿಸುವುದು.
7) ನೌಕಾಯಾನದ ಸೌಲಭ್ಯವನ್ನು ಒದಗಿಸುವುದು.
8) ಅರಣ್ಯ ಸಂಪತ್ತನ್ನು ವೃದ್ಧಿಸುವುದು.
9) ಮನರಂಜನಾತ್ಮಕ ಚಟುವಟಿಕೆಗಳಿಗೆ



Use e-papers for save trees-InyaTrust.com

**12. ಭಾರತದ ಪ್ರಮುಖ ನೀರಾವರಿ ಪ್ರಕಾರಗಳಲ್ಲಿ ಬಾವಿ ನೀರಾವರಿಯು ಅತಿ ಮುಖ್ಯವಾದುದು ಹೇಗೆ?**

ಬಾವಿ ನೀರಾವರಿಯು ಅತಿ ಮುಖ್ಯವಾದನೀರಾವರಿ ವಿಧಾನವಾಗಿದೆ. ಇದು ದೇಶದಲ್ಲಿ ಅತಿ ಹೆಚ್ಚು ಕೃಷಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ವಿಧಾನವಾಗಿದೆ. ಬಾವಿಗಳನ್ನು ತೋಡಿ ತನ್ಮೂಲಕ ಭೂ ಅಂತರ್ಜಲವನ್ನು ಹೊರತೆಗೆದು ಕೃಷಿಗೆ ಬಳಸುವುದೇ ಬಾವಿ ನೀರಾವರಿ. ಬಾವಿ ನೀರಾವರಿಯು ಕಡಿಮೆ ಮಳೆ ಬೀಳುವ ಭಾಗಗಳಲ್ಲಿ ಹೆಚ್ಚುವ ಉಪಯುಕ್ತವಾಗಿದೆ. ಬಾವಿಯ ನಿರ್ಮಾಣ ಮತ್ತು ನಿರ್ವಹಣೆಯು ಸುಲಭ. ಕೆರೆ ಮತ್ತು ಕಾಲುವೆ ನೀರಾವರಿ ಸೌಲಭ್ಯವಿಲ್ಲದ ಭಾಗಗಳಲ್ಲಿ ಬಾವಿ ನೀರಾವರಿ ಅವಶ್ಯಕವಾಗಿದೆ.

**13. ದಾಮೋದರ ನದಿಯನ್ನು ಬಂಗಾಳದ ಕಣ್ಣೀರಿನ ನದಿ ಎನ್ನುತ್ತಾರೆ ಏಕೆ?**

ದಾಮೋದರ ನದಿಯ ಪ್ರವಾಹವು ಪಶ್ಚಿಮ ಬಂಗಾಳದಲ್ಲಿ ಅಪಾರವಾದ ಜೀವಹಾನಿ ಹಾಗೂ ಆಸ್ತಿ ನಷ್ಟವನ್ನುಂಟುಮಾಡುತ್ತದೆ. ಆದ್ದರಿಂದ ಇದನ್ನು ಬಂಗಾಳದ ಕಣ್ಣೀರಿನ ನದಿ ಎಂದು ಕರೆಯುತ್ತಾರೆ.

**14. ಪ್ರವಾಹ ಕಾಲುವೆ ಹಾಗೂ ಸಾರ್ವಕಾಲಿಕ ಕಾಲುವೆಗಳಿಗಿರುವ ವ್ಯತ್ಯಾಸವೇನು?**

**ಪ್ರವಾಹಕಾಲುವೆಗಳು :** ಯಾವುದೇ ರೀತಿಯ ಅಣೆಕಟ್ಟುಗಳನ್ನು ಕಟ್ಟದೆ ನದಿಗಳಿಂದ ನೇರವಾಗಿ ಕಾಲುವೆಗಳನ್ನು ತೋಡಲಾಗುವುದು. ನದಿಗಳು ತುಂಬಿ ಹರಿಯುವಾಗ ಈ ಕಾಲುವೆಗಳ ಮೂಲಕ ನೀರು ಹರಿಯುವುದು. ಇವುಗಳಿಗೆ ಪ್ರವಾಹ ಕಾಲುವೆ ಎನ್ನುವರು.

**ಸಾರ್ವಕಾಲಿಕ ಕಾಲುವೆಗಳು :** ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಜಲಾಶಯಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿ, ಕೃಷಿ ಭೂಮಿಗೆ ನೀರನ್ನೊದಗಿಸಲು ತೋಡುವ ಕಾಲುವೆಗಳಿಗೆ ಸಾರ್ವಕಾಲಿಕ ಕಾಲುವೆಗಳೆನ್ನುವರು.

* * *



Use e-papers for save trees-InyaTrust.com

## ಅಧ್ಯಾಯ –7
## ಭಾರತದ ಭೂ ಬಳಕೆ ಹಾಗೂ ವ್ಯವಸಾಯ

**ಮುಖ್ಯಾಂಶಗಳು**

**i) ಭತ್ತ** : ಭಾರತದ ಎರಡನೇ ದೊಡ್ಡ ರಾಷ್ಟ್ರ – ಖಾರೀಫ್ ಭೆಳೆ – $25^0$C ಉಷ್ಣಾಂಶ 100–200 ಸೆಂ.ಮೀ.ಮಳೆ – ಫಲವತ್ತಾದ ಮೆಕ್ಕಲು ಮಣ್ಣು. ಜೇಡಿ ಮಣ್ಣು – ಸಮತಟ್ಟಾದ ಭೂಮಿ.

**(ii) ಗೋಧಿ** : ಹೆಚ್ಚು ಉತ್ಪಾದಕರು – ಉತ್ತರ ಪ್ರದೇಶ (ಮೊದಲ ಸ್ಥಾನ)– ರಬಿ ಬೆಳೆ – $10^0$C ನಿಂದ $15^0$C ಉಷ್ಣಾಂಶ – 50 ರಿಂದ 70 ಸೆಂ. ಮೀ. ಮಳೆ – ಕಪ್ಪು್. ಮಣ್ಣು ಮತ್ತು ಮರಳು ಮಿಶ್ರತ ಜೇಡಿಮಣ್ಣು.

**iii) ಕಬ್ಬು** : $21^0$C ನಿಂದ $26^0$C ಉಷ್ಣಾಂಶ – 100 ರಿಂದ 150 ಸೆಂ. ಮೀ. ಮಳೆ – ಮೆಕ್ಕಲು ಮತ್ತು ಕಪ್ಪುಮಣ್ಣು.

**iv) ಟೀ** : $21^0$C ಉಷ್ಣಾಂಶ – 100 ರಿಂದ 200 ಸೆಂ. ಮೀ. ಮಳೆ – ಕೊಳೆತ ಜೈವಿಕಾಂಶವುಳ್ಳ ಹಾಗೂ ನೀರು ಸುಲಭವಾಗಿ ಬಸಿದು ಹೋಗುವಂತಹ ಮರಳು ಮಿಶ್ರಿತ ಜೇಡಿ ಮಣ್ಣು – 1200 ರಿಂದ 2400 ಮೀ. ಎತ್ತರ ವುಳ್ಳ ಇಳಿಜಾರು.

**v) ಹತ್ತಿ** : ಹೆಚ್ಚು ಉತ್ಪಾದನೆ – ಮಹಾರಾಷ್ಟ್ರ – ಖಾರೀಫ್ ಬೆಳೆ – ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳ – $20^0$C ನಿಂದ $25^0$C ಉಷ್ಣಾಂಶ 75 ರಿಂದ 100 ಸೆಂ. ಮೀ. ಮಳೆ – ಕಪ್ಪು್. ಮಣ್ಣು ಮತ್ತು ಮೆಕ್ಕಲು ಮಣಅಣು.

**vi) ಹೊಗೆಸೊಪ್ಪು : $21^0$C ನಿಂದ $27^0$C ಉಷ್ಣಾಂಶ – 50 ಸೆಂ. ಮೀ. ಮಳೆ – ಮರಳು ಮಿಶ್ರಿತ ಮಣ್ಣು** ಉಷ್ಣವಲಯದ ಬೆಶೆ.

I ಕೊಟ್ಟಿರುವ ಆಯ್ಕೆಯಗಳ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.

1.

2.

3.

**4. ಭಾರತದಲ್ಲಿ ಗೋಧಿ ಉತ್ಪಾದನೆಯಲ್ಲಿ ಮೊದಲ ಸ್ಥಾನ ಹೊಂದಿರುವ ರಾಜ್ಯ**

a) ಮಧ್ಯ ಪ್ರದೇಶ b) ಮಹಾರಾಷ್ಟ್ರ c) ಉತ್ತರ ಪ್ರದೇಶ d) ಜಾರ್ಖಂಡ್

**5. ಭಾರತದ ಗೋಧಿಯ ಕಣಜ**

a) ಆಂಧ್ರಪ್ರದೇಶ b) ಪಂಜಾಬ್ c) ಹರಿಯಾಣ d) ಕರ್ನಾಟಕ

**6. ಭತ್ತ ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಎರಡನೆಯ ದೊಡ್ಡ ರಾಷ್ಟ್ರ**

a) ಚೀನಾ b) ಜಪಾನ್ c) ಭಾರತ d) ಪಾಕಿಸ್ತಾನ



Use e-papers for save trees-InyaTrust.com

**7. ಸ್ಥಿರ ಬೇಸಾಯ ಎಂದರೆ**

a) ಋತುಕಾಲದ ಬೇಸಾಯ b) ಸ್ಥಳಾಂತರ ಬೇಸಾಯ

c) ಜೀವನಾಧಾರ ಬೇಸಾಯ d) ಶಾಶ್ವತವಾಗಿ ನೆಲೆಸಿ ಮಾಡುವ ಬೇಸಾಯ.

**I ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿ**

1. ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವುದನ್ನು ಭೂ ಬಳಕೆ ಎನ್ನುವರು.
2. ಒಂದು ವರ್ಷದಲ್ಲಿ ಒಂದೇ ವ್ಯವಸಾಯ ಕ್ಷೇತ್ರದಿಂದ 2–3 ಬೆಳೆಗಳನ್ನು ಬೆಳೆಯುವುದಕ್ಕೆ ಸಾಂದ್ರ ಬೇಸಾಯ ಎನ್ನುವರು.
3. ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಹುಟ್ಟುವಳಿಗಳನ್ನು ಬೆಳೆಯುವುದಕ್ಕೆ ಜೀವನಾಧಾರದ ಬೇಸಾಯ ಎನ್ನುವರು.
4. ಕಬ್ಬು ಒಂದು ವಾಣಿಜ್ಯ ಬೆಳೆ
5. ಭಾರತದಲ್ಲಿ ಅತಿ ಹೆಚ್ಚು ಭತ್ತವನ್ನು ಉತ್ಪಾದಿಸುವ ರಾಜ್ಯ ಪಶ್ಚಿಮ ಬಂಗಾಳ
6. ಭಾರತ ಭತ್ತದ ಉತ್ಪಾದನೆಯಲ್ಲಿ ಎರಡನೇ ದೊಡ್ಡ ರಾಷ್ಟ್ರ
7. ಭಾರತ ಕಬ್ಬಿನ ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಎರಡನೇ ದೊಡ್ಡ ರಾಷ್ಟ್ರ.
8. ಭಾರತ ಹೊಗೆಸೊಪ್ಪು ಉತ್ಪಾದನೆಯಲ್ಲಿ ಪಪಂಚದಲ್ಲೇ ಮೂರನೆಯ ಸ್ಥಾನವನ್ನು ಪಡೆದಿದೆ.
9. ಹತ್ತಿ ಒಂದು ಮುಂಗಾರು (ಖಾರೀಫ್) ಬೆಳೆಯಾಗಿದೆ.
10. ಟೀ ಒಂದು ಪಾನೀಯ ಬೆಳೆಯಾಗಿದೆ.
11. ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಕರ್ನಾಟಕದ ಹೊಗೆಸೊಪ್ಪ್ ಮಾರುಕಟ್ಟೆ ಕೇಂದವಾಗಿದೆ.
12. ಭಾರತದ ಚಹದ (ಟೀ) ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಮೊದಲ ಸ್ಥಾನವನ್ನು ಹೊಂದಿದ್ದು ಚಹದ ರಫ್ತಿಗೆ ಹೆಸರಾಗಿದೆ.

**II ಕೆಳಗಿನ ಪಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

**1. ಭೂಬಳಕೆ ಎಂದರೇನು?**

ಭೂಮಿ ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಅತಿ ಮುಖ್ಯವಾದುದು. ಭೂಮಿಯನ್ನು ಸಾಗುವಳಿ ಅರಣ್ಯ, ಹುಲ್ಲುಗಾವಲು, ಬೀಳು ಭೂಮಿ, ವ್ಯವಸಾಯೇತರ ಬಳಕೆ, ಹೀಗೆ ವಿವಿಧ ಉದ್ದೇಶಗಳಿಗೆ ಬಳಸುವುದನ್ನೇ 'ಭೂ ಬಳಕೆ' ಎನ್ನುವರು.

**2. ಭೂ ಬಳಕೆಯ ಮೇಲೆ ಪಭಾವ ಬೀರುವ ಅಂಶಗಳು ಯಾವುವು?**

ಭೂ ಬಳಕೆಯ ಮೇಲೆ ಹಲವಾರು ಪ್ರಾಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ಅಂಶಗಳು ಪ್ರಭಾವ ಬೀರುತ್ತವೆ. ಅವುಗಳಲ್ಲಿ ಭೂ ಸ್ವರೂಪಗಳು, ವಾಯುಗುಣ ಮಣ್ಣಿನ ಲಕ್ಷಣಗಳು ಪ್ರಾಕೃತಿಕವಾಗಿ ಪ್ರಭಾವ ಬೀರುತ್ತವೆ. ಭೂ ಹಿಡುವಳಿ, ಜನಸಂಖ್ಯೆ, ವ್ಯವಸಾಯೋತ್ಪನ್ನಗಳ ಬೇಡಿಕೆ, ಉದ್ಯೋಗ ಜನರ ಮನೋಭಾವ, ಸಾಮಾಜಿಕ ಪರಿಸ್ಥಿತಿ ಮಾರುಕಟ್ಟೆ ಮೊದಲಾದ ಅಂಶಗಳು ಪಭಾವ ಬೀರುತ್ತವೆ. ತಾಂತ್ರಿಕತೆ, ನೀರಾವರಿ ಸೌಲಭ್ಯ, ಮಾನವನ ಸಾಮರ್ಥ್ಯ, ಭೂ ಒಡೆತನ ಮೊದಲಾದವು ಭೂ ಬಳಕೆಯ ಮೇಲೆ ಪಭಾವವನ್ನು ಬೀರುತ್ತವೆ.

**3. ವ್ಯವಸಾಯ ಎಂದರೇನು?**

ಭೂ ವಲಯವನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಅದರಿಂದ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗವನ್ನು ಪಡೆಯುವುದನ್ನೇ ವ್ಯವಸಾಯ ಅಥವಾ ಕೃಷಿ ಎಂದು ಕರೆಯುವರು. ವ್ಯಾಪಕ ಅರ್ಥದಲ್ಲಿ ಇದು ಮೀನುಗಾರಿಕೆ, ಪಶುಪಾಲನೆ ಮತ್ತು ಅರಣ್ಯಗಾರಿಕೆಯನ್ನೂ ಸಹ ಒಳಗೊಂಡಿದೆ.



Use e-papers for save trees-InyaTrust.com

**4. ವ್ಯವಸಾಯದ ವಿಧಗಳು ಯಾವುವು?**

(i) ಸಾಂದ್ರ ಬೇಸಾಯ

(ii) ಜೀವನಾಧಾರ ಬೇಸಾ

(iii) ವಾಣಿಜ್ಯ ಬೇಸಾಯ

iv) ಮಿಶ್ರ ಬೇಸಾಯ

v) ತೋಟಗಾರಿಕಾ ಬೇಸಾಯ

**5. ಖರೀಫ್ ಬೇಸಾಯ ಎಂದರೇನು?**

ನೈರುತ್ಯ ಮಾನ್ಸೂನ್ ಮಾರುತಗಳ ಅವಧಿಯ ಬೇಸಾಯವನ್ನೇ 'ಮುಂಗಾರು ಬೇಸಾಯ' ಅಥವಾ 'ಖರೀಫ್ ಬೇಸಾಯ'ವೆಂದು ಕರೆಯುವರು. ಇಲ್ಲಿ ಜೂನ್ ಅಥವಾ ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಕಟಾವು ಮಾಡುವರು.

**6. ರಬಿ ಎಂದರೇನು?**

ಅಕ್ಟೋಬರ್ ನವೆಂಬರ್‌ನಲ್ಲಿ ಬಿತ್ತನೆ ಮಾಡಿ ಫೆಬ್ರವರಿ– ಮಾರ್ಚ್ ಅವಧಿಯಲ್ಲಿ ಕಟಾವು ಮಾಡುವುದಕ್ಕೆ ರಬಿ ಬೇಸಾಯ ಅಥವಾ ಹಿಂಗಾರು ಬೇಸಾಯ ಎನ್ನುವರು.

**7. ಹತ್ತಿ ಬೆಳೆ ಬೆಳೆಯಲು ಅವಶ್ಯಕವಿರುವ ಪೂರಕಾಂಶಗಳಾವುವು?**

ಹತ್ತಿಯು ಉಷ್ಣವಲಯ ಹಾಗೂ ಉಪ ಉಷ್ಣ ವಲಯದ ಬೆಳೆಯಾಗಿದೆ. ಹತ್ತಿ ಬೆಳೆಗೆ $20^0$ ಯಿಂದ $25^0$ ಸೆಲ್ಸಿಯಸ್‌ವರೆಗೆ ಉಷ್ಣಾಂಶದ ಅವಶ್ಯಕತೆ ಇದೆ. ಸುಮಾರು 75 ರಿಂದ 150 ಸೆಂ. ಮೀ. ಗಿಂತ ಹೆಚ್ಚು ಮಳೆ ಪಡೆಯುವ ಪ್ರದೇಶಗಳಲ್ಲಿ ಬೆಳೆಯಬಹುದು. ಕಪ್ಪು ಮಣ್ಣು ಮತ್ತು ಮೆಕ್ಕಲು ಮಣ್ಣು ಇದಕ್ಕೆ ಸೂಕ್ತ. ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಮಣ್ಣು ಇದಕ್ಕೆ ಹೆಚ್ಚು ಸೂಕ್ತ.

**8. ಪುಷ್ಪ ಬೇಸಾಯದಲ್ಲಿ ನಿಮ್ಮ ಸುತ್ತಮುತ್ತ ಬೆಳೆಯುತ್ತಿರುವ ಪುಷ್ಪಗಳ ಪಟ್ಟಿ ತಯಾರಿಸಿ**

ವಾಣಿಜ್ಯ ಮಾದರಿಯ ಪುಷ್ಪ ಕೃಷಿ ಅಥವಾ ಬೇಸಾಯವನ್ನು 'ಫ್ಲೋರಿಕಲ್ಚರ್' ಎನ್ನುವರು. ನಾವು ಬೆಳೆಯುವ ಹೂವುಗಳಲ್ಲಿ ಮಲ್ಲಿಗೆ, ದುಂಡುಮಲ್ಲಿಗೆ, ಸಂಪಿಗೆ, ಚಟೆಂಡು ಹೂವು, ಸೇವಂತಿಗೆ, ಕನಕಾಂಬರ, ಗುಲಾಬಿ, ಲಿಲ್ಲಿ, ಮುಂತಾದವು ಪ್ರಮುಖವಾಗಿವೆ. ಸಾಂಪ್ರದಾಯಿಕ ಹೂವುಗಳಿಗಿಂತ ಉದ್ದವಾಗಿ ಕತ್ತರಿಸಿದ ಗುಲಾಬಿ, ಆರ್ಕಿಡ್, ಲಿಲ್ಲಿ, ಗ್ಲಾಡಿಯೋಲಸ್, ಕಾರನೇಷನ್ ಆಂಥೋರಿಯಂ ಮೊದಲಾದ ಹೂವುಗಳಿಗೆ ಅಪಾರ ಬೇಡಿಕೆ ಇದ್ದು ಇವುಗಳ ಉತ್ಪಾದನೆ ಹೆಚ್ಚು ಪ್ರಾಮುಖ್ಯತೆ ಗಳಿಸಿದೆ.

**9. ಟರ್ಮಿನಲ್ ಮಾರ್ಕೆಟ್ ಎಂದರೇನು?**

ತೋಟಗಾರಿಕಾ ಬೆಳೆಗಳ ಉತ್ಪಾದನೆಯ ಪ್ರದೇಶಗಳನ್ನು ಮಾರುಕಟ್ಟೆಗಳೊಡನೆ ಸಂಪರ್ಕಿಸುವ ಮಹತ್ತರ ಯೋಜನೆಯನ್ನು ಕೈಗೊಳ್ಳಲಾಗಿದೆ. ಈ ಮಾರುಕಟ್ಟೆಗಳು ಸುತ್ತಲಿನ ಉತ್ಪಾದನಾ ಪ್ರದೇಶಗಳೊಡನೆ ನೇರ ಸಂಪರ್ಕವನ್ನು ಹೊಂದಿರುತ್ತವೆ. ಇದನ್ನು ಟರ್ಮಿನಲ್ ಮಾರ್ಕೆಟ್ ಎನ್ನುವರು.

**10. ಬೀಳುಭೂಮಿ ಎಂದರೇನು?**

ವ್ಯವಸಾಯಕ್ಕೆ ಒಳಪಡದ ಭೂಮಿಯೇ ಬೀಳುಭೂಮಿ. ಜನಸಂಖ್ಯೆ ಅಧಿಕಗೊಂಡಂತೆ ವ್ಯವಸಾಯೋತ್ಪನ್ನಗಳ ಮೇಲೆ ಹೆಚ್ಚು ಒತ್ತಡವಾಗಿದ್ದು, ಅದಕ್ಕೆ ಅನುಗುಣವಾಗಿ ಹೆಚ್ಚು ಕ್ಷೇತ್ರವನ್ನು ಸಾಗುವಳಿಗೆ ಬಳಸಲಾಗಿದೆ. ಅಲ್ಲದೆ ಬೀಳು ಬಿದ್ದಿದ್ದ ಹಾಗೂ ವ್ಯವಸಾಯ ಯೋಗ್ಯವಲ್ಲದ ಭೂ ಪ್ರದೇಶಗಳನ್ನು ಸಹ ತಾಂತ್ರಿಕತೆಯ ಅಳವಡಿಕೆಯೊಂದಿಗೆ ಇಂದು ವ್ಯವಸಾಯಕ್ಕೆ ಬಳಸಲಾಗಿದೆ.



Use e-papers for save trees-InyaTrust.com

**11. ಭೂ ಬಳಕೆಯ ಪ್ರಕಾರಗಳು ಯಾವುವು?**

(i) ನಿವ್ವಳ ಸಾಗುವಳಿ ಕ್ಷೇತ್ರ

(ii) ಅರಣ್ಯ ಭೂಮಿ

(iii) ವ್ಯವಸಾಯೇತರ ಭೂ ಬಳಕೆ

(iv) ಬೀಳು ಭೂಮಿ

(v) ಹುಲ್ಲುಗಾವಲು

(vi) ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ.

**12. ವ್ಯವಸಾಯದ ಪ್ರಾಮುಖ್ಯತೆಯನ್ನು ವಿವರಿಸಿ.**

- ವ್ಯವಸಾಯವು ಭಾರತೀಯರ ಮುಖ್ಯ ಉದ್ಯೋಗವಾಗಿದೆ. ದೇಶದ ಎಲ್ಲ ಭಾಗಗಳಲ್ಲಿಯೂ ವಿವಿಧರೂಪ ಹಾಗೂ ವಿವಿಧ ಉತ್ಪಾದನೆಗಲಲ್ಲಿ ತೊಡಗಿರುವುದನ್ನು ಕಾಣಬಹುದು.
- ದೇಶದ ಅಗಾಧ ಜನಸಂಖ್ಯೆಗೆ ವ್ಯವಸಾಯವು ಆಹಾರ ಧಾನ್ಯಗಳನ್ನು ಪೂರೈಸುತ್ತದೆ.
- ವ್ಯವಸಾಯವು ಜೀವನಾಧಾರ ಉದ್ಯೋಗವಾಗಿದ್ದು, ಉಳಿದ ಎಲ್ಲ ಕ್ಷೇತ್ರಗಳಿಗಿಂತಲೂ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿದೆ.
- ಭಾರತವು ಅಸಂಖ್ಯಾತ ಕೈಗಾರಿಕೆಗಳನ್ನು ಹೊಂದಿದ್ದು, ಈ ಕೈಗಾರಿಕೆಗಳು ತಮ್ಮ ಕಚ್ಚಾ ವಸ್ತುಗಳಿಗಾಗಿ ವ್ಯವಸಾಯವನ್ನೇ ಅವಲಂಬಿಸಿವೆ.
- ವ್ಯವಸಾಯವು ಪರೋಕ್ಷವಾಗಿಯೂ ಹಲವಾರು ಕೈಗಾರಿಕೆಗಳನ್ನು ಪೋಷಿಸುತ್ತದೆ. ಉದಾ : ರಾಸಾಯನಿಕ ಗೊಬ್ಬರ, ಕ್ರಿಮಿ ಕೀಟನಾಶಕಗಳು, ಯಂತ್ರೋಪಕರಣಗಳ ಕೈಗಾರಿಕೆಗಳು.
- ವ್ಯವಸಾಯವು ಸಂಚಾರ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್ ಮೊದಲಾದ ಹಲವಾರು ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ.

**13) ಸ್ಥಿರ ಬೇಸಾಯ ಹಾಗೂ ಸ್ಥಳಾಂತರ ಬೇಸಾಯಗಳಿಗಿರುವ ವ್ಯತ್ಯಾಸವೇನು?**

**a)ಸ್ಥಿರ ಬೇಸಾಯ :** ಯಾವುದೇ ಒಂದು ಪ್ರದೇಶದಲ್ಲಿ ಜನರು ಶಾಶ್ವತವಾಗಿ ನೆಲೆಸಿ ಬೇಸಾಯವನ್ನು ಮಾಡುವುದಕ್ಕೆ ಸ್ಥಿರಬೇಸಾಯ ಎನ್ನುವರು. ಈ ಬೇಸಾಯವು ಸಾಂಪ್ರದಾಯಿಕವಾಗಿದ್ದು, ಚಿಕ್ಕ ಹಿಡುವಳಿಯ್ನು ಹೊಂದಿರುತ್ತದೆ.

**b)ಸ್ಥಳಾಂತರ ಬೇಸಾಯ :** ಯಾವುದೇ ಒಂದು ಪ್ರದೇಶ ದಲ್ಲಿ ಜನರು ಸ್ಥಿರವಾಗಿ ನೆಲೆಸದೆ ಅಲ್ಲಿರುವ ಅರಣ್ಯಗಳನ್ನು ಕಡಿದು ಬೇಸಾಯ ಮಾಡುವರು. ಒಂದೆರಡು ವರ್ಷ ಬೇಸಾಯ ಮಾಡಿ ಅಲ್ಲಿನ ಮಣ್ಣಿನ ಫಲವತ್ತತೆ ಕಡಿಮೆಯಾದ ನಂತರ ಬೇರೆ ಪ್ರದೇಶಗಳಿಗೆ ಹೋಗಿ ಬೇಸಾಯ ಮಾಡುವರು. ಇಂತಹ ಬೇಸಾಯವನ್ನು ಸ್ಥಳಾಂತರ ಬೇಸಾಯ ಎನ್ನುವರು. ಇಂದು ಇದನ್ನು ನಿಷೇಧಿಸಲಾಗಿದೆ.

**14) ಮಿಶ್ರ ಬೇಸಾಯ ಎಂದರೇನು?**

ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕಷ್ಟೇ ಅಲ್ಲದೇ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಿದರೆ ಅದನ್ನು ಮಿಶ್ರ ಬೇಸಾಯ ಎನ್ನುವರು.



Use e-papers for save trees-InyaTrust.com

**15) ಬೆಳೆಗಳ ಮಾದರಿ ಎಂದರೇನು?**

ಯಾವುದೇ ಒಂದು ಪ್ರದೇಶವು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಹಲವಾರು ಬೆಳೆಗಳಿಂದ ಆವರಿಸಿದ್ದು, ಇವುಗಳ ಅನುಪಾತವನ್ನು ಬೆಳೆ ಮಾದರಿ ಎನ್ನುವರು.

**16. ಬೆಳೆಗಳ ಮಾದರಿಯನ್ನು ನಿರ್ಧರಿಸುವ ಅಂಶಗಳು ಯಾವುವು?**

**ನೈಸರ್ಗಿಕ ಅಂಶಗಳು :** ನೈಸರ್ಗಿಕ ಅಂಶಗಳಲ್ಲಿ ಭೂ ಸ್ವರೂಪ, ವಾಯುಗುಣ ಮತ್ತು ಮಳೆ. ಪ್ರಮರಲುಖವಾಗಿದ್ದು ಬೆಳೆಯ ಮಾದರಿಯನ್ನು ನಿರ್ಧರಿಸವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

**ಆರ್ಥಿಕ ಅಂಶಗಳು :** ಭಾರತದ ಕೆಲವು ವಿಶಾಲ ಹಿಡುವಳಿ ಹೊಂದಿರುವ ಪ್ರದೇಶಗಳಲ್ಲಿ ಮುಖ್ಯವಾಗಿ ಹೆಚ್ಚು ಬೆಲೆ ಕೊಡುವ ವಾಣಿಜ್ಯ ಉತ್ಪನ್ನಗಳನ್ನು ಬೆಳೆಯಲಾಗುತ್ತದೆ. ಇದರ ಮುಖ್ಯ ಉದ್ದೇಶ ಹೆಚ್ಚು ಆರ್ಥಿಕ ಲಾಭ ಪಡೆಯುವುದಾಗಿದೆ.

**ಸಾಮಾಜಿಕ ಅಂಶಗಳು :** ಪ್ರಮುಖವಾಗಿ ಸಾಮಾಜಿಕ ಅಂಶಗಳಾದ ಸಂಪ್ರದಾಯ, ಮೂಢನಂಬಿಕೆ, ಅನಕ್ಷರತೆ ಮುಂತಾದ ಅಂಶಗಳು ಸಹ ಬೆಳೆ ಯ ಮಾದರಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**ರೈತರ ಮನೋಭಾಗ :** ಯಾವುದೇ ಒಂದು ಪ್ರದೇಶದ ಬೆಳೆ ಮಾದರಿಯಲ್ಲಿ ರೈತರ ಧೋರಣೆಯು ಪ್ರಮುಖ ಪ್ರಭಾವ ಬೀರುತ್ತದೆ. ಉದಾಹರಣೆ : ಉತ್ತರ ಕರ್ನಾಟಕದಲ್ಲಿ ರೈತರು ಮೊದಲು ಜೋಳ, ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತಲಿದ್ದರು. ಆದರೆ ಇತ್ತೀಚೆಗೆ ಆರ್ಥಿಕ ಲಾಭ ಕೊಡುವ ಸೂರ್ಯಕಾಂತಿ, ಮತ್ತು ಶೇಂಗಾ, ತೊಗರಿ, ಈರುಳ್ಳಿ ಬೆಳೆಯನ್ನು ಬೆಳೆಯುತ್ತಿದ್ದಾರೆ.

**17. ಭಾರತದ ಮೂರು ಬೆಳೆ ಋತುಗಳು ಅಥವಾ ವ್ಯವಸಾಯದ ಅವಧಿಗಳು ಯಾವುವು?**

ಭಾರತದಲ್ಲಿ ಮೂರು ವ್ಯವಸಾಯದ ಅವಧಿಗಳು ಕಂಡು ಬರುತ್ತವೆ. ಅವುಗಳೆಂದರೆ

(i) ಮುಂಗಾರು ಅಥವಾ ಖರೀಫ್ ಬೇಸಾಯ

(ii) ಹಿಂಗಾರು ಅಥವಾ ಚಳಿಗಾಲದ ಅಥವಾ ರಬಿ ಬೇಸಾಯ

(iii) ಬೇಸಿಗೆಯ ಅಥವಾ ಜೇಡ್ ಬೇಸಾಯ

**18. ಜೇಡ್ ಬೇಸಾಯ ಎಂದರೇನು?ಈ ಬೇಸಾಯದ ಬೆಳೆಗಳನ್ನು ಹೆಸರಿಸಿ.**

ರಬಿ ಹಾಗೂ ಖರೀಫ್ ಬೇಸಾಯದ ನಡುವಿನ ಅವಧಿಯಲ್ಲಿಯೂ ಭಾರತದ ಹಲವು ಕಡೆಗಳಲ್ಲಿ ಬೇಸಾಯ ಕಂಡುಬರುವುದು. ಬೇಸಿಗೆಯ ಈ ಬೇಸಾಯವನ್ನೇ 'ಜೇಡ್ ಬೇಸಾಯ ಕಂಡು ಬರುವುದು. ಬೇಸಿಗೆಯ ಈ ಬೇಸಾಯವನ್ನೇ 'ಜೇಡ್ ಬೇಸಾಯ'ವೆಂದು ಕರೆಯುವರು. ದ್ವಿದಳ ಧಾನ್ಯಗಳಾದ ಉದ್ದು, ಹೆಸರು, ಎಣ್ಣೆಕಾಳುಗಳು ಮತ್ತು ತರಕಾರಿಗಳನ್ನು ಈ ಅವಧಿಯಲ್ಲಿ ಬೆಳೆಯುವರು.

**19. ಸುವರ್ಣ ಕಾಂತಿ ಎಂದರೇನು?**

ಭಾರತ ಮಾವು ಬಾಳೆ, ಸಪೋಟ ಹಾಗೂ ನಿಂಬೆ ಜಾತಿಯ ಹಣ್ಣುಗಳ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊದಲನೆಯ ಸ್ಥಾನದಲ್ಲಿದೆ. ಇದರಿಂದ ಸರಕಾರವು ತೋಟಗಾರಿಕೆ ಬೇಸಾಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದು, ಈ ಕ್ಷೇತ್ರವು ಅಪಾರ ಪ್ರಗತಿಯನ್ನು ಸಾಧಿಸಿದೆ. ತೋಟಗಾರಿಕೆ ಬೇಸಾಯದ ಈ ಪ್ರಗತಿಯನ್ನು 'ಸುವರ್ಣ ಕ್ರಾಂತಿ'ಎನ್ನುವರು.



Use e-papers for save trees-InyaTrust.com

**20. ಬೆಳೆಗಳು ಹಾಗೂ ಅತಿ ಹೆಚ್ಚು ಉತ್ಪಾದನೆ ಮಾಡುವ ರಾಜ್ಯಗಳಲ್ಲಿ ಹೆಸರಿಸಿ.**

| ಬೆಳೆ | ಹೆಚ್ಚು ಉತ್ಪಾದಕರು |
|---|---|
| 1) ಭತ್ತ | 1) ಪಶ್ಚಿಮ ಬಂಗಾಳ |
| 2) ಗೋಧಿ | 2) ಗೋಧಿ ಪ್ರದೇಶ |
| 3) ಕಬ್ಬು | 3) ಉತ್ತರ ಪ್ರದೇಶ |
| 4) ಹೊಗೆಸೊಪ್ಪು. | 4) ಉತ್ತರ ಪ್ರದೇಶ |
| 5) ಹತ್ತಿ | 5) ಮಹಾರಾಷ್ಟ್ರ |
| 6) ಟೀ | 6) ಅಸ್ಸಾಂ |

* * *



Use e-papers for save trees-InyaTrust.com

# ಅಧ್ಯಾಯ – 8
# ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**I ಸೂಕ್ತ ಪದಗಳಿಂದ ಬಿಟ್ಟ ಸ್ಥಳ ತುಂಬಿರಿ**

1. ಭಾರತದಲ್ಲಿ ಜಾರ್ಖಂಡ್ ಮತ್ತು ಒರಿಸ್ಸಾ ರಾಜ್ಯಗಳು ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿವೆ.
2. ಅಲ್ಯೂಮಿನಿಯಂ ಲೋಹವನ್ನು ಬಾಕ್ಸೈಟ್‌ನಿಂದ ಪಡೆಯಲಾಗುತ್ತದೆ.
3. ಅಭ್ರಕ (Mica) ವನ್ನು ಕಾಗೆ ಬಂಗಾರ ಎಂದೂ ಕರೆಯುತ್ತಾರೆ.
4. ಭಾರತದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುವ ಹಗಣಿ ಹಟ್ಟಿ
5. ಭಾರತ ಉತ್ಪಾದಿಸುತ್ತಿರುವ ಕಬ್ಬಿಣ ಮಿಶ್ರ ಲೋಹಗಳಲ್ಲಿ ಮ್ಯಾಂಗನೀಸ್ ಅತಿ ಮುಖ್ಯವಾದುದು.
6. ಮ್ಯಾಂಗನೀಸನ್ನು ಉಕ್ಕಿನ ಉತ್ಪಾದನೆಯಲ್ಲಿ ಬಳಸುವರು.
7. ಕಬ್ಬಿಣದ ಅದಿರಿನ ನಿಕ್ಷೇಪದಲ್ಲಿ ಭಾರತ ಪ್ರಪಂಚದಲ್ಲಿ ಆರನೆಯ ಸ್ಥಾನವನ್ನು ಹೊಂದಿದೆ.
8. ಬಾಕ್ಸೈಟ್ ಅದಿರಿನ ನಿಕ್ಷೇಪದಲ್ಲಿ ಭಾರತ ಪಪಂಚದಲ್ಲಿ 5ನೇ ಸ್ಥಾನವನ್ನು ಹೊಂದಿದೆ.
9. ಪೆಟ್ರೋಲಿಯಂ :ದ್ರವರೂಪದ ಚಿನ್ನ :: ಕಲ್ಲಿದ್ದಲು : ಕಪ್ಪು ಬಂಗಾರ.
10. ಮೊದಲನೇ ತೈಲ ಬಾವಿಯನ್ನು ಅಂಕಲೇಶ್ವರದಲ್ಲಿ ಕೊರೆಯಲಾಯಿತು.
11. ಭಾರತದಲ್ಲಿ ಅಸ್ಸಾಂನ 'ದಿಗ್ಬಾಯ್'ಎಂಬಲ್ಲಿ ಪೆಟ್ರೋಲಿಯಂನ್ನು ಮೊದಲು ಪತ್ತೆ ಮಾಡಲಾಯಿತು.

**II ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

**1. ಭಾರತದಲ್ಲಿ ದೊರಕುವ ಖನಿಜ ಸಂಪನ್ಮೂಲಗಳಾವುವು?**

ಕಬ್ಬಿಣದ ಅದಿರುವ, ಮ್ಯಾಂಗನೀಸ್ ಅದಿರು, ಬಾಕ್ಸೈಟ್ ಅದಿರು, ಅಭ್ರಕ, ಚಿನ್ನದ ಅದಿರು ಮುಂತಾದವು.

**2. ಭಾರತದಲ್ಲಿ ಮ್ಯಾಂಗನೀಸ್ ಉತ್ಪಾದಿಸುವ ಪ್ರಮುಖ ರಾಜ್ಯಗಳು ಯಾವುವು?**

ಭಾರತದಲ್ಲಿ ದೊರಕುವ ಮ್ಯಾಂಗನೀಸ್ ಅದಿರು ಅತ್ಯುತ್ತಮವಾಗಿದೆ. ಪೈರೋಲೋಸೈಟ್ ಮತ್ತು ಸೈಲೋಮೆಲೇನ ಮ್ಯಾಂಗನೀಸ್‌ನ ಮುಖ್ಯ ಅದಿರುಗಳಾಗಿವೆ. ಮ್ಯಾಂಗನೀಸ್ ಉತ್ಪಾದಿಸುವ ರಾಜ್ಯಗಳೆಂದರೆ ಒಡಿಶಾ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಬಿಹಾರ, ಛತ್ತೀಸ್‌ಗಢ್, ರಾಜಸ್ತಾನ, ಪಂಜಾಬ್, ಮತ್ತು ಗೋವಾ

**3. ಭಾರತದಲ್ಲಿ ಉತ್ಪಾದಿಸುವ ಕಬ್ಬಿಣದ ಅದಿರಿನ ವಿಧಗಳನ್ನು ಹೆಸರಿಸಿ.**

ಕಬ್ಬಿಣದ ಅದಿರನ್ನು ಅದು ಒಳಗೊಂಡಿರುವ ಖನಿಜಾಂಶದ ಪಮಾಣ ಮತ್ತು ಕಶ್ಮಲಗಳ ಪ್ರಮಾಣವನ್ನು ಆಧರಿಸಿ ನಾಲ್ಕು ಮುಖ್ಯ ವಿಧಗಳಾಗಿ ವಿಂಗಡಿಸಲಾಗಿದೆ. ಇವುಗಳೆಂದರೆ

(i) ಮ್ಯಾಗ್ನಟೈಟ್ (ii) ಹೆಮಟೈಟ್ (iii) ಲಿಮೋನೈಟ್ (iv) ಸಿಡರೈಟ್

**4. ಭಾರತದ ಪಮುಖ ಶಕ್ತಿ ಸಂಪನ್ಮೂಲಗಳಾವುವು? ವಿವರಿಸಿ.**

ಕಲ್ಲಿದ್ದಲು ಮತ್ತು ಪೆಟ್ರೋಲಿಯಂ

**ಕಲ್ಲಿದ್ದಲು** : ಕಲ್ಲಿದ್ದಲು ಭಾರತದ ಪಮುಖ ಶಕ್ತಿ ಸಂಪನ್ಮೂಲವಾಗಿದೆ. ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಭಾರತ ಪ್ರಪಂಚದಲ್ಲೇ ಮೂರನೇ ಸ್ಥಾನದಲ್ಲಿದೆ. ಕೋಟ್ಯಾಂತರ ವರ್ಷಗಳ ಹಿಂದೆ ಭೂಮಿಯಲ್ಲಿ ದಟ್ಟವಾದ



Use e-papers for save trees-InyaTrust.com

ಅರಣ್ಯಗಳಿಂದ ಕೂಡಿದ್ದವೆಂದೂ, ಕ್ರಮೇಣ ಇವುಗಳು ಭೂಮಿಯ ಪದರುಗಳಲ್ಲಿ ಹುದುಗಿ ಹೋಗಿ ಶಾಖ ಮತ್ತು ಒತ್ತಡದಿಂದ ಕಲ್ಲಿದ್ದಲಾಗಿ ಮಾರ್ಪಾಡು ಹೊಂದಿದವೆಂದು ನಂಬಲಾಗಿದೆ. ಕಲ್ಲಿದ್ದಲು ಕೇವಲ ಶಕ್ತಿಯ ಖನಿಜವಾಗಿರದೇ ಕೀಟ ನಿರೋಧಕ ಗಳು, ಸ್ಫೋಟಕ ವಸ್ತುಗಳು, ಕೃತಕ ನಾಮ, ಕೃತಕ ರಬ್ಬರ್, ಪ್ಲಾಸ್ಟಿಕ್, ರಾಸಾಯನಿಕ ಗೊಬ್ಬರ ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಕಲ್ಲಿದ್ದಲು ಬಹು ಉಪಯೋಗಿ ಶಕ್ತಿಸಂಪನ್ಮೂಲವಾಗಿರುವುದರಿಂದ ಇದನ್ನು **'ಕಪ್ಪು ಬಂಗಾರ'** ಎನ್ನುವರು.

**ಪೆಟ್ರೋಲಿಯಂ :** ಪೆಟ್ರೋಲಿಯಂ ಪುರಾತನ ಕಾಲದಲ್ಲಿ ಜೀವಿಗಳ ಅವಶೇಷಗಳಿಂದ ಉತ್ಪತ್ತಿ ಹೊಂದಿರುವುದೆಂದು ವಿಜ್ಞಾನಿಗಳು ಅಭಿಪ್ರಾಯಟ್ಟಿರುವರು. ಭೂಮಿಯಿಂದ ಹೊರತೆಗೆಯುವ ಪೆಟ್ರೋಲಿಯಂ ಹಲವಾರು ಬಗೆಯ ಮಿಶ್ರಣಗಲಿಂದ ಕೂಡಿದ್ದು, ಇದನ್ನು ಕಚ್ಚಾ ತೈಲ ಎನ್ನುವರು. ಇದನ್ನು ಶುದ್ಧೀಕರಣ ಕೇಂದ್ರಗಳಲ್ಲಿ ಶುದ್ಧೀಕರಿಸಿ ಗ್ಯಾಸೋಲಿನ್, ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಮುಂತಾದವುಗಳನ್ನು ಪಡೆಯಲಾಗುವುದು. ಪೆಟ್ರೋಲಿಯಂ ಪ್ರಮುಖವಾದ ಶಕ್ತಿ ಸಂಪನ್ಮೂಲವಾಗಿರದೇ, ಒಂದು ಮುಖ್ಯ ಕಚ್ಚಾ ವಸ್ತುವೂ ಸಹಆಗಿದೆ. ಇದನ್ನು ಕಚ್ಚಾ ವಸ್ತುವನ್ನಾಗಿ ಅವಲಂಬಿಸಿದ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. ಆದ್ದರಿಂದಲೇ ಇದನ್ನು 'ದ್ರವರೂಪದ ಚಿನ್ನ' ಎನ್ನುವರು.

5. **ಅಸಂಪ್ರದಾಯಕ ಶಕ್ತಿ ಮೂಲಗಳೆಂದರೇನು? ಅವುಗಳ ಪ್ರಾಮುಖ್ಯತೆಯನ್ನು ವಿವರಿಸಿ.**

ಪುನರ್ ಬಳಕೆ ಮಾಡಬಹುದಾದ ಶಕ್ತಿ ಮೂಲಗಳಾದ ಸೌರಶಕ್ತಿ, ಪವನ ಶಕ್ತಿ, ಸಾಗರ ನೀರಿನ ಉಬ್ಬರ ಇಳಿತ ಶಕ್ತಿ, ಭೂ ಅಂತರಾಳದ ಶಕ್ತಿ, ಜೈವಿಕ ಅನಿಲಶಕ್ತಿ ಮೊದಲಾದವುಗಳನ್ನು ಅಸಂಪ್ರದಾಯಕ ಶಕ್ತಿ ಮೂಲಗಳೆಂದು ಕರೆಯುವರು.

1) **ಸೌರಶಕ್ತಿ** : ಸೂರ್ಯನ ಕಿರಣಗಳಿಂದ ಹೊರ ಸೂಸಲ್ಪಡುವ ಶಾಖದ ಬಳಕೆಯನ್ನೇ ಸೌರಶಕ್ತಿ ಎಂದು ಕರೆಯುವರು. ಇದು ಮುಗಿಯದ ಸಂಪನ್ಮೂಲವಾಗಿದ್ದು ಸೌರಶಕ್ತಿಯನ್ನು ನೇರವಾಗಿ ಶಾಖ ಶಕ್ತಿಯನ್ನಾಗಿ ಪರಿವರ್ತಿಸಬಹುದು. ಸೌರಶಕ್ತಿಯನ್ನು ಈಗಾಗಲೇ ವಿವಿಧ ವಿಧಾನಗಳಲ್ಲಿ ಬಳಸಲಾಗುತ್ತಿದ್ದು, ಇವುಗಳಲ್ಲಿ ಸೋಲಾರ್ ವಾಟರ್ ಹೀಟರ್, ಕುಕ್ಕರ್, ಸೋಲಾರ್, ಥರ್ಮಲ್, ವಿದ್ಯುತ್ ದೀಪ, ರೈಲ್ವೆ ಸಿಗ್ನಲ್, ನೀರೆತ್ತಲು ಹಾಗೂ ಸಂಪರ್ಕ ಮಾಧ್ಯಮಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಾಜಸ್ತಾನದ 'ಬಾರ್ಮರ್'ನಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ. ಇತ್ತೀಚೆಗೆ ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿಯೂ ಸೌರ ವಿದ್ಯುತ್ ಸ್ಥಾವರನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

**(ii) ಪವನಶಕ್ತಿ :** ಭಾರತದಲ್ಲಿ ಪವನ ಶಕ್ತಿಯು ವಾಣಿಜ್ಯ ಪ್ರಮಾಣದಲ್ಲಿ ಉತ್ಪಾದಿಸಲ್ಪಡುತ್ತಿದ್ದು, ಮುಂದಿನ ದಶಕಗಳಲ್ಲಿ ದೇಶದ ಹಲವಾರು ಭಾಗಗಳುಪವನಶಕ್ತಿಯನ್ನು ಪ್ರಧಾನವಾಗಿ ಬಳಸಬಹುದಾದ ಸಾಧ್ಯತೆಗಳು ಕಂಡು ಬರುತ್ತಿವೆ. ಭಾರತವು ಪ್ರಪಂಚದಲ್ಲಿ ಗಾಳಿಯಿಂದ ವಿದ್ಯುತನ್ನು ಉತ್ಪಾದಿಸುವ, ಐದನೆಯ ದೊಡ್ಡ ದೇಶವಾಗಿದೆ. ತಮಿಳುನಾಡು, ಮಹಾರಾಷ್ಟ್ರ ಕರ್ನಾಟಕ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಪುನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗುತ್ತಿದೆ.

6. **ಶಕ್ತಿ ಸಂಪನ್ಮೂಲಗಳ ಕರೊತೆಯನ್ನು ನಿವಾರಿಸಲು ನಿಮ್ಮದೇ ಆದ ಸಲಹೆಗಳನ್ನು ನೀಡಿ.**

ಕೆಳಗಿನ ಅಂಶಗಳನ್ನು ಪಾಲಿಸಿದರೆ ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಬಹುದು.

(i) ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸಬಹುದು.



Use e-papers for save trees-InyaTrust.com

(ii) ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು.

(iii) ಬದಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು.

(iv) ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹ ನೀಡುವುದು.

(v) ಶಕ್ತಿ ಸಂಪನ್ಮೂಲಗಳನ್ನು ಮಿತವಾಗಿ ಬಳಸಲು ತಿಳುವಳಿಕೆ ನೀಡುವುದು.

(vi) ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು.

7. **ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ ತುಂಬಾ ಇದೆ. ಏಕೆ?**

ಭಾರತದಲ್ಲಿ ಬಳಸುವ ಶಕ್ತಿ ಸಂಪನ್ಮೂಲಗಳಲ್ಲಿ ಮುಗಿದು ಹೋಗುವ (ಸಂಪ್ರದಾಯಿಕ) ಸಂಪನ್ಮೂಲಗಳೇ ಪ್ರಧಾನವಾಗಿವೆ.ಇವುಗಳ ಉತ್ಪಾದನೆಯು ಕಡಿಮೆ ಇದ್ದು, ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ. ಇದರಿಂದ ರಾಷ್ಟ್ರೀಯ ಆದಾಯದ ಮೇಲೆ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಉಪಯೋಗ ಅನಿವಾರ್ಯವಾಗಿದೆ. ಮುಗಿಯದೇ ಇರುವ ಸಂಪನ್ಮೂಲಗಳ ಶೋಧನೆ ಮತ್ತು ಬಳಕೆಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಪ್ರಾಮುಖ್ಯತೆ ನೀಡಲಾಗುತ್ತಿದೆ.

8. **ಅಣುಶಕ್ತಿ ಎಂದರೇನು? ಅಣುಖನಿಜಗಳಿಗೆ ಉದಾಹರಣೆ ಕೊಟ್ಟು ವಿವರಿಸಿ.**

ಅಣು ಖನಿಜಗಳಿಂದ ಪಡೆಯುವ ಶಕ್ತಿಯನ್ನು ಅಣುಶಕ್ತಿಯನ್ನು ಕೇವಲ ದೇಶದ ರಕ್ಷಣಾ ವ್ಯವಸ್ಥೆಗೆ ಮಾತ್ರ ಬಳಸಲಾಗುತ್ತಿತ್ತು. ಈಗ ವಿದ್ಯುತ್ ಉತ್ಪಾದನೆಗೂ ಬಳಸಲಾಗುತ್ತಿದೆ. ಭಾರತದಲ್ಲಿ ದೊರೆಯುವ ಅಣುಖನಿಜಗಳೆಂದರೆ (i) ಯುರೇನಿಯಂ (ii) ಥೋರಿಯಂ (iii) ಬೆರಿಲಿಯಂ (iv) ಲಿಥಿಯಂ,

(i) ಯುರೇನಿಯಂ: ಜಾರ್ಖಂಡ್‌ನ ಸಿಂಗಭೂಮ್, ಗಯಾ ಮತ್ತು ಹಜಾರಿ ಬಾಗ್ ಜಿಲ್ಲೆಗಳು, ಉತ್ತರ ಪ್ರದೇಶದ ಶಹರಣ್ ಪುರದ ಮೆಕ್ಕಲು ಮಣ್ಣು, ಕೇರಳದ ತೀರದಲ್ಲಿ ಹಂಚಿಕೆಯಾಗಿದೆ.

(ii) ಥೋರಿಯಂ : ಇದು ಕೇರಳ, ಬಿಹಾರ, ತಮಿಳುನಾಡು, ಮತ್ತು ರಾಜಸ್ಥಾನಗಳಲ್ಲಿ ಹಂಚಿಕೆಯಾಗಿದೆ.

(iii) ಬೆರಿಲಿಯಂ : ಬೆರಿಲಿಯಂ ಆಕ್ಸೈಡ್‌ನ್ನು ಅಣು ವಿದ್ಯುತ್ ಉತ್ಪಾದನೆಯ ರಿಯಾಕ್ಟರುಗಳಲ್ಲಿ 'ಮಾಡೇಟರ್' ಕಾರ್ಯಕ್ಕಾಗಿ ಬಳಸಲಾಗುವುದು. ಭಾರತವು ಅಗತ್ಯವಾದಷ್ಟು ಬೆರಿಲಿಯಂ ನಿಕ್ಷೇಪವನ್ನು ಹೊಂದಿದೆ.

(iv) ಲಿಥಿಯಂ : ಇದು ಹಗುರವಾದ ಲೋಹವಾಗಿದ್ದು, ಲೆಫಿಡೋಲೆಟ್ ಹಾಗೂ ಪ್ಯೂಡೋಮಿನ್ ಅದಿರುಗಳಿಂದ ಪಡೆಯಲಾಗುವುದು. ಭಾರತದಲ್ಲಿ ಜಾರ್ಖಂಡ್ ಹಾಗೂ ಮಧ್ಯಪ್ರದೇಶಗಳಲ್ಲಿ ಇದು ವ್ಯಾಪಕವಾಗಿ ಹಂಚಿಕೆಯಾಗಿದೆ.

9. **ಭಾರತದಲ್ಲಿ ಕಲ್ಲಿದ್ದಲಿನ ನಿಕ್ಷೇಪದ ಬಗ್ಗೆ ವಿವರಿಸಿ.**

ಭಾರತದಲ್ಲಿ ಕಲ್ಲಿದ್ದಲಿನ ನಿಕ್ಷೇಪಗಳು ದಾಮೋದರ ನದಿ ಕಣಿವೆಯಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿವೆ. ಜಾರ್ಖಂಡ್, ಛತ್ತೀಸ್‌ಘಡ್ ರಾಜ್ಯಗಳು ಅತಿ ಹೆಚ್ಚು ಕಲ್ಲಿದ್ದಲನ್ನು ಉತ್ಪಾದಿಸುವ ರಾಜ್ಯಗಳಾಗಿವೆ. ಝರಿಯಾ, ಬೊಕಾರೊ, ಗಿರಿಧಿ, ಕರಣಪುರ ಮುಖ್ಯ ಪದೇಶಗಳಾಗಿವೆ. ಇವಲ್ಲದೇ ಗೋದಾವರಿ, ಮಹಾನದಿ ಮತ್ತು ವಾರ್ಧಾ ನದಿಗಳ ಕಣಿವೆಯಲ್ಲಿ ನಿಕ್ಷೇಪಗಳಿವೆ. ಕಲ್ಲಿದ್ದಲನ್ನುಉತ್ಪಾದಿಸುವ ಮುಖ್ಯ ರಾಜ್ಯಗಳೆಂದರೆ ಜಾರ್ಖಂಡ್, ಛತ್ತೀಸ್‌ಘಡ, ಒರಿಸ್ಸಾ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಮತ್ತು ಅಧಿಕವಾಗಿದ್ದು, ಇದರಿಂದ ಉತ್ತಮ ದರ್ಜೆಯ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗುತ್ತದೆ.



Use e-papers for save trees-InyaTrust.com

**10. ಭಾರತದಲ್ಲಿರುವ ಪೆಟ್ರೋಲಿಯಂ ನಿಕ್ಷೇಪಗಳಾವುವು?**

ಭಾರತದಲ್ಲಿ ಅಸ್ಸಾಂನ 'ದಿಗ್ಬಾಯ್' ಎಂಬಲ್ಲಿ ಪೆಟ್ರೋಲಿಯಂನ್ನು ಮೊದಲು ಪತ್ತೆ ಮಾಡಲಾಯಿತು. ಸ್ವಾತಂತ್ರ್ಯ ಬರುವವರೆಗೆ ಅದೊಂದೇ ತೈಲ ಉತ್ಪಾದನಾ ಪ್ರದೇಶವಾಗಿತ್ತು. ಇಂದು ಲಕಿಮ್‌ಪುರ, ಹುಗ್ರಿಜನ್, ಮೊರಾನ್, ನಹರ್‌ಕಟಿಯಾ ಹಾಗೂ ಇತರ ಬಾವಿಗಳಿಂದ ಎಣ್ಣೆಯನ್ನು ಉತ್ಪಾದಿಸಲಾಗುತ್ತದೆ. ಗುಜರಾತಂ ರಾಜ್ಯವು ಕಚ್ಚಾ ತೈಲವನ್ನು ಉತ್ಪಾದಿಸುವ ಮತ್ತೊಂದು ಪ್ರದೇಶವಾಗಿದೆ. ಅಂಕಲೇಶ್ವರದಲ್ಲಿ ಮೊದಲನೇ ತೈಲ ಬಾವಿಯನ್ನು ಕೊರೆಯಲಾಯಿತು. 1974 ರಲ್ಲಿ ಅರಬ್ಬೀ ಸಮುದ್ರದಲ್ಲಿ ಮುಂಬೈಯಿಂದ 110 ಕಿ. ಮೀ. ದೂರದ 'ಬಾಂಬೆ ಹೈ'ನಲ್ಲಿ ತೈಲವನ್ನು ಪತ್ತೆ ಮಾಡಿ 1976 ರಲ್ಲಿತೈಲೋತ್ಪಾದನೆಯನ್ನು ಪ್ರಾರಂಭಿಸಲಾಯಿತು. ಇದು ಭಾರತದ ಅತಿ ದೊಡ್ಡ ತೈಲ ನಿಕ್ಷೇಪವಾಗಿದೆ. ಇತ್ತೀಚೆಗೆ ಕಾವೇರಿ, ಕೃಷ್ಣಾ, ಗೋದಾವರಿ, ಮತ್ತು ಮಹಾನದಿಗಳ ಮುಖಜ ಭೂಮಿಯಲ್ಲಿ ತೈಲ ನಿಕ್ಷೇಪವನ್ನು ಪತ್ತೆ ಮಾಡಲಾಗಿದೆ. ಈಗ ಒಟ್ಟು 19 ತೈಲ ಶುದ್ಧೀಕರಣ ಘಟಕಗಳಿದ್ದು ಇವುಗಳ ಮುಖಾಂತರ ಕಚ್ಚಾ ತೈಲವನ್ನು ಪಡೆಯಲಾಗುತ್ತದೆ. ಭಾರತದಲ್ಲಿ ಉತ್ಪಾದನೆ ಕಡಿಮೆ ಇದ್ದು ಇರಾನ್ , ಇರಾಕ್, ಸೌದಿ ಅರೇಬಿಯಾ ಮತ್ತು ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

**11. ಅಭ್ರಕದ ಗುಣಲಕ್ಷಣ ಹಾಗೂ ಉಪಯೋಗಗಳ ಬಗ್ಗೆ ಬರೆಯಿರಿ.**

**ಗುಣಲಕ್ಷಣಗಳು :** ಪಾರದರ್ಶಕತೆ, ಸ್ಥಿತಿ ಸ್ಥಾಪಕತ್ವ, ಶಾಖ ನಿರೋಧಕ, ವಿದ್ಯುತ್ತಿನ ಮಂದವಾಹಕ, ಹಾಗೂ ಹೊಳಪುಳ್ಳ ಸಿಲಿಕೇಟ ಖನಿಜವಾಗಿದೆ.

**ಉಪಯೋಗಗಳು :** ಅಭ್ರಕ ಶಾಖ ಹಾಗೂ ವಿದ್ಯುತ್ತಿನ ಮಂದವಾಹವಕಾಗಿರುವುದರಿಂದ ಇದನ್ನು ಶಾಖ ನಿರೋಧಕ ಮತ್ತು ವಿದ್ಯುತ್ ನಿರೋಧಕ ವಸ್ತುವಾಗಿ ಟೆಲಿಫೋನ್, ಟೆಲಿಗ್ರಾಫ್, ನಿಸ್ತಂತು ಸೇವೆ, ಗಾಜು ತಯಾರಿಕೆ, ಬಣ್ಣ, ವಾರ್ನಿಷ್, ಕೃತಕ ರಬ್ಬರ್, ಡೈನಮೋಟ್, ರಾಸಾಯನಿಕ ಕೈಗಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ.

**12. ಭಾರತದಲ್ಲಿರುವ ಕಬ್ಬಿಣದ ಅದಿರಿನ ನಿಕ್ಷೇಪಗಳಾವುವು?**

ಭಾರತದಲ್ಲಿ ಜಾರ್ಖಂಡ್, ಒಡಿಶಾ ಮತ್ತು ಕರ್ನಾಟಕ ರಾಜ್ಯಗಳು ಅತಿ ಹೆಚ್ಚು. ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿರುವ ರಾಜ್ಯಗಳಾಗಿವೆ. ಜಾಖಂಡನ ಸಿಂಗಭೂಮ್, ಒರಿಸ್ಸಾದ ಕೆಯೊಂಜ್ಞಾರ್, ಮಯೂರ್ ಬಂಜ್ ಮತ್ತು ಸುಂದರ್‌ಘರ್ ಜಿಲ್ಲೆಗಳಲ್ಲಿ ಅಪಾರ ಪ್ರಮಾಣದ ಕಬ್ಬಿಣದ ಅದಿರಿನ ನಿಕ್ಷೇಪವಿದೆ. ಇದಲ್ಲದೆ ಛತ್ತೀಸಘಡದ ಬಸ್ತಾರ್, ದುರ್ಗ ಮತ್ತು ರಾಯಪುರಗಳು ಹೆಸರಾಗಿವೆ. ಗೋವಾ, ಆಂಧ್ರಪ್ರದೇಶ ಮತ್ತು ತಮಿಳುನಾಡು ಕಬ್ಬಿಣದ ನಿಕ್ಷೇಪನ್ನು ಒಳಗೊಂಡಿವೆ. ಕರ್ನಾಟಕದ ಕೆಮ್ಮಣ್ಣು ಗುಂಡಿ, ಹೊಸಪೇಟೆ, ಸಂಡೂರು, ಕುದುರೆ ಮುಖಗಳಲ್ಲಿ ಕಬ್ಬಿಣ ಅದಿರಿನ ನಿಕ್ಷೇಪಗಳಿವೆ.

**13. ಮ್ಯಾಂಗನೀಸ್ ಅದಿರಿನ ವಿಧಗಳಾವುವು?**

ಮ್ಯಾಂಗನೀಸ್ ಅದಿರಿನ ವಿಧಗಳು : ಪೈರೋಲೋ ಸೈಟ್, ಸೈಲೊಮೆಲೆನ್, ಮ್ಯಾಗ್ನಟೈಟ್, ಟ್ರಾನೈಟ್, ಮತ್ತು ಹೋಲ್ಯಾಂ ಡೈಟ್

**14. ಖನಿಜ ಎಂದರೇನು?**

ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ದೊರೆಯುವ ನಿರ್ದಿಷ್ಟ ರಾಸಾಯನಿಕ ಸಂಯೋಜನೆಯನ್ನು ಒಳಗೊಂಡಿರುವ ಮಿಶ್ರಣವನ್ನು ಖನಿಜ ಎನ್ನುವರು.



Use e-papers for save trees-InyaTrust.com

# ಅಧ್ಯಾಯ – 9
# ಭಾರತದ ಭೂ ಸಾರಿಗೆ

**I ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ**

1. ಬೆಂಗಳೂರಿನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು ಕೆಂಪೇಗೌಡ
2. ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ ರಸ್ತೆಗಳು ಅವಶ್ಯಕವಾಗಿದೆ.
3. ಭಾರತದ ಹೆಬ್ಬಾಗಿಲು ಎಂದು ಮುಂಬೈ ಬಂದರನ್ನು ಕರೆಯುತ್ತಾರೆ.
4. ಬೆಂಗಳೂರು, ಮುಂಬೈ ನಡುವೆ ಇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ.

**II ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

**1. ಸಾರಿಗೆಯಿಂದಾಗುವ ಪ್ರಯೋಜನಗಳಾವುವು?**

ಸಾರಿಗೆಯು ಆರ್ಥಿಕ ಅಭಿವೃದ್ಧಿಯಲ್ಲಿ ನಿರ್ವಹಿಸುವ ಪಾತ್ರ ಮಹತ್ತರವಾದುದು. ಆರ್ಥಿಕತೆಯ ಮುಖ್ಯ ಕ್ಷೇತ್ರಗಳಾದ ವ್ಯವಸಾಯ, ಕೈಗಾರಿಕೆ, ಗಣಿಗಾರಿಕೆ, ಅರಣ್ಯಗಾರಿಕೆ, ಮೀನುಗಾರಿಕೆ, ಹೈನುಗಾರಿಕೆ ಮೊದಲಾದವುಗಳನ್ನು ಸಾರಿಗೆಯು ಮಾರುಕಟ್ಟೆಗಳೊಡನೆ ಸಂಪರ್ಕಿಸುವುದು. ಇದರಿಂದ ತ್ವರಿತಗತಿಯ ಆರ್ಥಿಕ ಬೆಳವಣಿಗೆಗೆ ಸಾರಿಗೆಯ ಅಭಿವೃದ್ಧಿಯು ಅಗತ್ಯವಾಗಿದೆ.

**2. ಭಾರತದಲ್ಲಿರುವ ನಾಲ್ಕು ಪ್ರಕಾರದ ಮುಖ್ಯ ರಸ್ತೆಗಳಾವುವು?**

(i) ರಾಷ್ಟ್ರೀಯ ಹೆದ್ದಾರಿಗಳು (ii) ರಾಜ್ಯ ಹೆದ್ದಾರಿಗಳು (iii) ಜಿಲ್ಲೆ ರಸ್ತೆಗಳು (iv) ಗ್ರಾಮೀಣ ರಸ್ತೆಗಳು.

**3. ಸಾರಿಗೆ ಎಂದರೇನು?**

ವಸ್ತುಗಳು, ಸೇವೆಗಳು, ಮಾಹಿತಿ ಮತ್ತು ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದನ್ನೇ ಸಾರಿಗೆ ಎನ್ನುವರು.

**4. ಅತ್ಯಂತ ಉದ್ದವಾದ ರಾಷ್ಟ್ರೀಯ ಹೆದ್ದಾರಿ ಯಾವುದು?**

ವಾರಣಾಸಿ ಮತ್ತು ಕನ್ಯಾಕುಮಾರಿಗಳನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಅತ್ಯಂತ ಉದ್ದವಾದ ರಾಷ್ಟ್ರೀಯ ಹೆದ್ದಾರಿಯಾಗಿದೆ. (NH-7)

**5. ಭಾರತದಲ್ಲಿರುವ ಪ್ರಮುಖ ಬಂದರುಗಳನ್ನು ಪಟ್ಟಿ ಮಾಡಿ.**

**ಕಾಂಡ್ಲಾ** : ಇದು ಕಚ್‌ಖಾರಿಯ ಶಿರೋಭಾಗದಲ್ಲಿದೆ.

**ಮುಂಬಯಿ** : ಇದು ಮಹಾರಾಷ್ಟ್ರ ರಾಜ್ಯದಲ್ಲಿದೆ. ಈ ಬಂದರು ಹೆಚ್ಚಿನ ಒತ್ತಡವನ್ನು ಹೊಂದಿದ್ದರಿಂದ ಈ ಬಂದರಿನ ಆಚೆಗೆ ನವಾಶೇವಾ ಎಂಬ ಬಂದರವನ್ನು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ನಿರ್ಮಿಸಲಾಗಿದೆ. ಮುಂಬಯಿ ಬಂದರನ್ನು 'ಬಾರತದ ಹೆಬ್ಬಾಗಿಲು' ಎಂದು ಕರೆಯುತ್ತಾರೆ.

**ಮರ್ಮಗೋವಾ :** ಈ ಬಂದರು ಗೋವಾ ರಾಜ್ಯದ ಝುವಾರಿ ಕೊಲ್ಲಿಯ ಪ್ರದೇಶದಲ್ಲಿದೆ.

**ನವ ಮಂಗಳೂರು :** ಕರ್ನಾಟಕದ ಪ್ರಮುಖ ಬಂದರು.

**ಕೊಚ್ಚಿ** : ಇದು ಕೇರಳ ರಾಜ್ಯದಲ್ಲಿದೆ.

**ತುತುಕುಡಿ** : ಇದು ತಮಿಳುನಾಡು ರಾಜ್ಯದಲ್ಲಿದೆ.



Use e-papers for save trees-InyaTrust.com

**ಚೆನ್ನೈ** : ಈ ಬಂದರು ಕೃತಕ ಬಂದರಾಗಿದ್ದು, ಹಳೆಯದಾಗಿದೆ. ಇದು ಕೂಡಾ ತಮಿಳುನಾಡಿನಲ್ಲಿದೆ.
**ವಿಶಾಖ ಪಟ್ಟಣ** : ಇದು ನೈಸರ್ಗಿಕ ಬಂದರಾಗಿದ್ದು, ಆಂಧ್ರಪ್ರದೇಶ ರಾಜ್ಯದಲ್ಲಿದೆ.
**ಪಾರಾದೀಪ** : ಒಡಿಸ್ಸಾ ರಾಜ್ಯದಲ್ಲಿದ್ದು, ಇತ್ತೀಚೆಗೆ ಅಭಿವೃದ್ಧಿ ಪಡಿಸಿದ ಬಂದರಾಗಿದೆ.
**ಕೊಲ್ಕತ್ತಾ** : ಇದು ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ. ಇದು ನೈಸರ್ಗಿಕ ರೇವು ಪಟ್ಟಣವಾಗಿರುತ್ತದೆ. ಈ ಬಂದರನ್ನು 'ಭಾರತದ ಚಹದ ಬಂದರು' ಎನ್ನಲಾಗುತ್ತಿದೆ.
**ಹಾಲ್ಡಿಯಾ** : ಕೊಲ್ಕತ್ತಾ ಬಂದರಿನ ಒತ್ತಡ ಕಡಿಮೆ ಮಾಡಲು ನಿರ್ಮಿಸಿರುವ ಕೃತಕ ಬಂದರಾಗಿರುತ್ತದೆ. ಇದೂ ಕೂಡ ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ.

6. **ರಾಷ್ಟ್ರೀಯ ಹೆದ್ದಾರಿಗಳೊಂದಿಗೆ ಸಂಪರ್ಕ ಹೊಂದಿರುವ ಬಂದರುಗಳು ಯಾವುವು?**
ಮುಂಬಯಿ, ಚೆನ್ನೈ, ಕೊಲ್ಕತ್ತಾ, ವಿಶಾಖ ಪಟ್ಟಣ ಬಂದರುಗಳು ರಾಷ್ಟ್ರೀಯ ಹೆದ್ದಾರಿಗಳೊಂದಿಗೆ ಸಂಪರ್ಕವನ್ನು ಹೊಂದಿವೆ.

7. **ರಸ್ತೆಗಳ ಪ್ರಾಮುಖ್ಯತೆಯನ್ನು ವಿವರಿಸಿ.**
ಭಾರತ ಹಳ್ಳಿಗಳ ದೇಶ ಹಾಗೂ ಕೃಷಿ ಪ್ರಧಾನವಾದ ದೇಶ, ಹಳ್ಳಿಯ ಮತ್ತು ಕೃಷಿಯ ಅಭಿವೃದ್ಧಿಗೆ ರಸ್ತೆಗಳ ಅವಸ್ಯಕತೆ ಮುಖ್ಯವಾಗಿದೆ.
ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ಒಯ್ಯಲು ರಸ್ತೆಗಳ ಸಹಾಯದಿಂದ ಮಾತ್ರ ಸಾಧ್ಯ. ಹಳ್ಳಿಗಳಿಗೆ ಬೇಕಾದ ಅವಶ್ಯಕ ವಸ್ತುಗಳನ್ನು ಪೂರೈಸಿಕೊಳ್ಳಲು ರಸ್ತೆಗಳು ಸಹಾಯ ಮಾಡುತ್ತವೆ.
ರಸ್ತೆ ಸಾರಿಗೆಗಳು ರೈಲು ಸಾರಿಗೆಗೆ ಪೂರಕವಾಗಿವೆ. ಸರಕು ಸಾಗಾಣಿಕೆ ರಸ್ತೆ ಮಾರ್ಗಗಳಿಂದ ಸಾಧ್ಯವಾಗಿದೆ. ರಸ್ತೆ ಸಾರಿಗೆಯನ್ನು ರಾಷ್ಟ್ರೀಯ ಹೆದ್ದಾರಿಗಳು, ಜಿಲ್ಲಾ ರಸ್ತೆಗಳು ರಾಜ್ಯ ಹೆದ್ದಾರಿಗಳು ಮತ್ತು ಗ್ರಾಮೀಣ ರಸ್ತೆಗಳು ಎಂದು ವರ್ಗೀಕರಿಸಲಾಗಿದೆ.

8. **ರಸ್ತೆ ಸಾರಿಗೆಯ ಸಮಸ್ಯೆಗಳನ್ನು ವಿವರಿಸಿ.**
(i) ಅನೇಕ ಗ್ರಾಮೀಣ ಮತ್ತು ಜಿಲ್ಲಾ ರಸ್ತೆಗಳು ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಕೆಲವು ಟೇಳೆ ಅನುಪಯುಕ್ತವಾಗಿರುತ್ತವೆ.
(ii) ರಸ್ತೆ ಸಾರಿಗೆಯು ಪರಿಸರ ಮಾಲಿನ್ಯ, ವಾಹನ ದಟ್ಟಣೆ ಹಾಗೂ ಅಪಘಾತಗಳಿಗೂ ಕಾರಣಗಳಾಗಿವೆ.
(iii) ರಸ್ತೆಗಳು ಮಳೆ, ಪ್ರವಾಹ ಮತ್ತು ಚಂಡಮಾರುತಗಳಿಂದ ಪ್ರತಿ ವರ್ಷವೂ ಹಾಳಾಗುತ್ತಿವೆ.
(iv) ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯೂ ಅಸಮರ್ಪಕ (ತ)ರಸ್ತೆಗಳ ಬದಿಯಲ್ಲಿ ಬೇಕಾದ ಅಗತ್ಯಗಳ ಕೊರತೆಯನ್ನು ದೇಶದಾದ್ಯಂತ ಕಾಣಬಹುದು.

9. **ಸುವರ್ಣ ಚತುಷ್ಕೋನ ಯೋಜನೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.**
ಕಾರಿಡಾರ್ ರಸ್ತೆಗಳು ಆರ್ಥಿಕವಾಗಿ ಮಾತ್ರವಲ್ಲದೆ ರಾಜಕೀಯವಾಗಿಯೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿವೆ.
ದೇಶವನ್ನು ಉತ್ತರ ಹಾಗೂ ದಕ್ಷಿಣ ಮತ್ತು ಪೂರ್ವ ಹಾಗೂ ಪಶ್ಚಿಮವಾಗಿ ಸಂಪರ್ಕಿಸುವ ಹೆದ್ದಾರಿಗಳೇ ಕಾರಿಡಾರ್ ರಸ್ತೆಗಳು.
ಸರಕು ಸಾಮಾಗಿಗಳನ್ನು ಅತ್ಯಲ್ಪ ಅವಧಿಯಲ್ಲಿ ದೇಶದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅತಿ ಕಡಿಮೆ ವೆಚ್ಚದಲ್ಲಿ ಸಾಗಿಸಲು ಉಪಯುಕ್ತವಾಗಿವೆ ಈ ಯೋಜನೆಯು ಕೈಗಾರಿಕೆಗಳಿಗೆ ವರದಾನವಾಗಿದೆ.



Use e-papers for save trees-InyaTrust.com

ಸುವರ್ಣ ಚತುಷ್ಕೋನ ಹೆದ್ದಾರಿಯು ದೇಶದ ಮಹಾನಗರಗಳಾದ ದೆಹಲಿ, ಮುಂಬಯಿ, ಬೆಂಗಳೂರು, ಚೆನ್ನೈ, ಕೋಲ್ಕತ್ತಾ ನಗರಗಳನ್ನು ಸಂಪರ್ಕಿಸುತ್ತವೆ. ಈ ಹೆದ್ದಾರಿ ಮೂಲಕ ಸಂಪರ್ಕ ಪಡೆಯುವ ಇತರೆ ನಗರಗಳೆಂದರೆ ಪುಣೆ, ಸತಾರ, ಬೆಳಗಾವಿ, ಕಾಂಚೀಪುರಂ, ಆಗ್ರಾ,ಕಾನ್ಪುರ, ಅಲಹಾಬಾದ್, ವಾರಣಾಸಿ, ವಿಶಾಖ ಪಟ್ಟಣ, ಖರಗಪುರ, ವಿಜಯವಾಡ.

**10.** **ಭಾರತದ ನಕ್ಷೆಯನ್ನು ಬರೆದು ಪ್ರಮುಖವಾದ ರಾಷ್ಟ್ರೀಯ ಹೆದ್ದಾರಿಗಳನ್ನು ಗುರುತಿಸಿ.**



**Use e-papers for save trees-InyaTrust.com**

## ಅಧ್ಯಾಯ –10

## ಭಾರತದ ಪ್ರಮುಖ ಕೈಗಾರಿಕೋದ್ದಿಮೆಗಳು

**I ಬಿಟ್ಟ ಸ್ಥಳವನ್ನು ಸೂಕ್ತ ಉತ್ತರಗಳಿಂದ ತುಂಬಿ**

1) ಬೆಂಗಾಲ್ ಐರನ್ ಕಂಪನಿಯು ಪಶ್ಚಿಮ ಬಂಗಾಳದ ಕುಲ್ಟಿ ಎಂಬಲ್ಲಿ ಸ್ಥಾಪಿತಗೊಂಡಿತು.
2) ವಿವಿಧಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವುದನ್ನೇ ಜವಳಿ ಕೈಗಾರಿಕೆ ಎನ್ನುವರು.
3) ಸಕ್ಕರೆ ಕಾರ್ಖಾನೆಯ ಮುಖ್ಯ ಕಚ್ಚಾ ವಸ್ತು ಕಬ್ಬು.
4) ಭಾರತದ ಮೊದಲ ಕಾಗದದ ಕೈಗಾರಿಕೆಯು ಹೂಗ್ಲಿ ನದಿಯ ದಡದಲ್ಲಿ ಸ್ಥಾಪನೆಗೊಂಡಿತು.

**II ಹೊಂದಿಸಿ ಬರೆಯಿರಿ.**

| | A | B | ಉತ್ತರ |
|---|---|---|---|
| 1. | ಮುಂಬಯಿ | a ಸಿಲಿಕಾನ್ ಸಿಟಿ | c |
| 2. | ಬೆಂಗಳೂರು | b. ಸಕ್ಕರೆ ಕೈಗಾರಿಕೆ | a |
| 3. | ಭದ್ರಾವತಿ | c. ಭಾರತದ ಮ್ಯಾಂಚೆಸ್ಟರ್ | d |
| 4. | ಬೆಳಗಾಂ ಜಿಲ್ಲೆ | d. ವಿಶ್ವೇಶ್ವರಯ್ಯ ಐರನ್‌ಮತ್ತು ಸ್ಟೀಲ್ ಕಂಪನಿ | b. |
| | | e. ಜೈವಿಕ ತಂತ್ರಜ್ಞಾನ | |

**III ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

**1) ಕೈಗಾರಿಕಾ ವಲಯಗಳ ಪಟ್ಟಿ ತಯಾರಿಸಿ**

ಭಾರತದಲ್ಲಿ 8 ಪ್ರಧಾನ ಕೈಗಾರಿಕಾ ವಲಯಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ

1) ಹೂಗ್ಲಿ ಪ್ರದೇಶ
2) ಮುಂಬೈ – ಪೂನಾ ಪ್ರದೇಶ
3) ಅಹಮದಾ ಬಾದ್ – ವಡೋದರ ಪ್ರದೇಶ
4) ದಾಮೋದರ ಕಣಿವೆ ಪ್ರದೇಶ
5) ದಕ್ಷಿಣದ ಕೈಗಾರಿಕಾ ಪ್ರದೇಶ
6) ನ್ಯಾಷನಲ್ ಕ್ಯಾಪಿಟಲ್ ಪ್ರದೇಶ
7) ವಿಶಾಖ ಪಟ್ಟಣ– ಗುಂಟೂರು ಪ್ರದೇಶ
8) ಕೊಲ್ಲಂ – ತಿರುವನಂತಪುರ ಪ್ರದೇಶ

**2) ಕಬ್ಬಿಣ ಮತ್ತು ಉಕ್ಕಿಣಕೈಗಾರಿಕೆಗಳು ಇರುವ ಸ್ಥಳಗಳಾವುವು?**

ಪ್ರಸ್ತುತ ಭಾರತದಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಮುಖ್ಯ ಕೈಗಾರಿಕೆಗಳೆಂದರೆ

1)ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ (TISCO)ಜೆಮ್‌ಶೆಡ್‌ಪುರ (ಜಾರ್ಖಂಡ್)

2) ಇಂಡಿಯನ್ ಐರನ್ ಮತ್ತು ಸ್ಟೀಲ್ ಕಂಪ¤ (IISCO) ಬರ್ನಪುರ – ಪಶ್ಚಿಮ ಬಂಗಾಳ

3) ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಕಂಪನಿ (VISCO) ಭದ್ರಾವತಿ ಕರ್ನಾಟಕ



Use e-papers for save trees-InyaTrust.com

4) ಬಿಲಾಯಿ ಐರನ್ ಮತ್ತು ಸ್ಟೀಲ್‌ಕಂಪನಿ, ಬಿಲಾಯಿ, ಛತ್ತೀಸ್‌ಗಢ್
5) ಐರನ್ ಮತ್ತು ಸ್ಟೀಲ್ ಕಂಪನಿ, ರೂರ್ಕೆಲಾ ಒರಿಸ್ಸಾ.
6) ಐರನ್ ಮತ್ತು ಸ್ಟೀಲ್ ಕಂಪನಿ, ದುರ್ಗಾಪುರ –ಪಶ್ಚಿಮ ಬಂಗಾಳ
7) ಐರನ್ ಅಂಡ್ ಸ್ಟೀಲ್ ಕಂಪನಿ, ಬೋಕಾರೋ ಜಾರ್ಖಂಡ್
8) ಐರನ್ ಮತ್ತು ಸ್ಟೀಲ್ ಕಂಪನಿ ಸೇಲಂ – ತಮಿಳುನಾಡು
9) ಐರನ್ ಮತ್ತು ಸ್ಟೀಲ್ ಕಂಪನಿ,ವಿಶಾಖಪಟ್ಟಣ– ಆಂಧ್ರಪ್ರದೇಶ

**3) ಗಂಗಾನದಿ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯು ಹೆಚ್ಚು ಕೇಂದ್ರೀಕೃತವಾಗಿದೆ.ಏಕೆ?**

ಗಂಗಾನದಿಯ ಬಯಲು ಪ್ರದೇಶದಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ. ಕಬ್ಬು ಸಕ್ಕರೆ ಕೈಗಾರಿಕೆಗೆ ಕಚ್ಚಾ ವಸ್ತುವಾಗಿದೆ. ಆದ್ದರಿಂದ ಗಂಗಾನದಿ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯು ಹೆಚ್ಚು ಕೇಂದ್ರೀಕೃತವಾಗಿವೆ.

**4) ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು**

ಕೈಗಾರಿಕೆಗಳು ಅತ್ಯಂತ ಅನುಕೂಲಕರವಾದ ಸ್ಥಾನಗಳಲ್ಲಿ ಮಾತ್ರ ಸ್ಥಾಪನೆಗೊಂಡಿರುತ್ತವೆ. ಇವುಗಳ ಸ್ಥಾನದ ಮೇಲೆ ಕಚ್ಚಾ ವಸ್ತುಗಳು, ಶಕ್ತಿ ಸಂಪನ್ಮೂಲಗಳು, ಮಾರುಕಟ್ಟೆ, ಸಂಚಾರ ಸೌಲಭ್ಯ, ಕಾರ್ಮಿಕರ ಪೂರೈಕೆ, ಬಂದರುಗಳ ಸೌಲಭ್ಯ ಮೊದಲಾದ ಹಲವಾರು ಅಂಶಗಳು ಪ್ರಭಾವ ಬೀರುತ್ತವೆ. ಕೈಗಾರಿಕೆಗಳ ಸ್ಥಾನವು ಕಡಿಮೆ ದರದ ಭೂಮಿ ದೊರೆಯುವಿಕೆ, ತಾಂತ್ರಿಕತೆ, ಸರ್ಕಾರದ ನೀತಿ ನಿಯಮಗಳಿಂದಲೂ ಪ್ರಭಾವಿತವಾಗಿರುವುದು. ಕೈಗಾರಿಕೆಗಳ ಸ್ಥಾನೀಕರಣದ ಅಂಶಗಳು ಒಂದು ಬಗೆಯ ಕೈಗಾರಿಕೆಯಿಂದ ಮತ್ತೊಂದು ಬಗೆಯ ಕೈಗಾರಿಕೆಗಳಿಗೆ ವ್ಯತ್ಯಾಸ ಹೊಂದುತ್ತವೆ.

**5) ಕಾಗದ ತಯಾರಿಕೆಯಲ್ಲಿ ಬಳಸುವ ಕಚ್ಚಾ ವಸ್ತುಗಳು ಯಾವುವು?**

ಬಿದಿರು ಮರದ ತಿರುಳು, ಹುಲ್ಲು ಕಾಗದ ತಯಾರಿಕೆಯಲ್ಲಿ ಬಳಸುವ ಪ್ರಮುಖ ಕಚ್ಚಾ ವಸ್ತುಗಳಾಗಿವೆ.

**6) ಹತ್ತಿಬಟ್ಟೆ ಕೈಗಾರಿಕೆಯ ಹಂಚಿಕೆಯನ್ನು ವಿವರಿಸಿ.**

ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕರ್ನಾಟಕ, ಉತ್ತರ ಪ್ರದೇಶ, ಮಧ್ಯಪ್ರದೇಶ ರಾಜ್ಯಗಳು ಬಹುಪಾಲು ಹತ್ತಿಬಟ್ಟೆ ಕೈಗಾರಿಕೆಗಳನ್ನು ಹೊಂದಿವೆ. ಮಹಾರಾಷ್ಟ್ರದ ಮುಂಬಯಿಯಲ್ಲಿ ಅತಿ ಹೆಚ್ಚು ಗಿರಣಿಗಳಿದ್ದು ಇದನ್ನು ಭಾರತದ ಮ್ಯಾಂಚೆಸ್ಟರ್ (ಇಂಗ್ಲೆಂಡಿನ ಅತಿ ಪ್ರಮುಖ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರ) ಅಥವಾ ಭಾರತದ ಕಾಟನ್‌ಪೋಲಿಸ್ ಎಂದು ಕರೆಯುತ್ತಾರೆ. ಇದಲ್ಲದೇ ನಾಗಪುರ, ಸೊಲ್ಲಾಪುರ, ಪಶ್ಚಿಮ ಬಂಗಾಳ, ಕೊಲ್ಕತ್ತಾ, ಉತ್ತರ ಪ್ರದೇಶದ ಕಾನ್ಪುರ, ಮಧ್ಯಪ್ರದೇಶದ ಇಂಡೋರ್, ಗುಜರಾತಿನ ಸೂರತ್, ತಮಿಳುನಾಡಿನ ಕೊಯಿಮತ್ತೂರು, ಸೇಲಂ, ಚೆನ್ನೈ, ಕರ್ನಾಟಕದ ಬೆಂಗಳೂರು, ದಾವಣಗೆರೆ ಪ್ರಮುಖ ಹತ್ತಿ ಬಟ್ಟೆ ಕೈಗಾರಿಕಾ ಕೇಂದ್ರಗಳಾಗಿವೆ.

**7) ಜೈವಿಕ ತಂತ್ರಜ್ಞಾನದಿಂದ ಕೃಷಿ ಕ್ಷೇತ್ರದ ಮೇಲಿನ ಪರಿಣಾಮಗಳೇನು?**

ಸಸ್ಯ, ಪ್ರಾಣಿ ಮೊದಲಾದವುಗಳಿಗೆ ಕಸಿ ಮಾಡುವಿಕೆಯಿಂದ ಹೊಸ ಹೊಸ ಬೀಜ, ಔಷಧ, ರಸಗೊಬ್ಬರ, ಜೈವಿಕ ಗೊಬ್ಬರ ಬಳಕೆಯಿಂದ ಸೋಯಾ, ಅವರೆ, ಮೆಕ್ಕೆಜೋಳ, ಹತ್ತಿ ಮೊದಲಾದ ಸಮ್ಮಿಶ್ರ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇತ್ತೀಚೆಗೆ ಸಸ್ಯ ಜೈವಿಕ ತಂತ್ರಜ್ಞಾನ ಪರಿಸರ, ಜೈವಿಕ ವೈವಿಧ್ಯತೆ, ವೈದ್ಯಕೀಯ ಜೈವಿಕ ತಂತ್ರಜ್ಞಾನವನ್ನು ಸಹ ಬಳಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಸಾಕಷ್ಟು ರಾಜ್ಯಗಳು ಜೈವಿಕ



Use e-papers for save trees-InyaTrust.com

ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿವೆ. ಇವುಗಳಲ್ಲಿ ಉತ್ತರ ಪ್ರದೇಶ, ಅರುಣಾಚಲ ಪ್ರದೇಶ, ಮಧ್ಯಪ್ರದೇಶ, ಕೇರಳ, ಪಶ್ಚಿಮ ಬಂಗಾಳ, ಜಮ್ಮು ಕಾಶ್ಮೀರ , ಹರಿಯಾಣ, ಪಂಜಾಬ್, ಗುಜರಾತ್ ಮತ್ತು ಕರ್ನಾಟಕ ಮುಂತಾದವು.

**8. ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳೇನು?**

ಕಾನೂನಾತ್ಮಕವಾಗಿ ಕೇಂದ್ರ ಸರ್ಕಾರವು ನವೆಂಬರ್ 1990 ರಲ್ಲಿ 'ಉನ್ನತ ತಂತ್ರಜ್ಞಾನ' ಬಳಕೆಯನ್ನು ಅಧಿಕೃತವಾಗಿ ಜಾರಿಗೆ ತಂದಿತು. ಇದರಿಂದಾಗಿ ಟೆಲಿಫೋನ್, ಅಂತರ್‌ಜಾಲ ಸಂಪರ್ಕ ರಕ್ಷಣಾ ಇಲಾಖೆಗೆ ಸಂಬಂಧಿಸಿದಂತೆ ಫೋನ್, ಯುದ್ಧ ಸಾಮಗಿಗಳ ತಯಾರಿಕೆ, ಅಣುಬಾಂಬ್ ತಯಾರಿಕೆ, ಉಪಗ್ರಹ ಉಡಾವಣೆ, ಚಂದ್ರನ ಮೇಲೆ ಪಾದರ್ಪಣೆ, ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕ ಇ – ಆಡಳಿತ, (ಉದಾ: ನೆಮ್ಮದಿ, ಆಧಾರ, ಸಕಾಲ ಇತ್ಯಾದಿ) ಜಾಗತಿಕ ಆರ್ಥಿಕ ವ್ಯವಸ್ಥೆ ಸುಧಾರಣೆ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಚುನಾವಣೆಗಳಿಗೆ ಸಂಬಂಧಿಸಿದಂತೆ ಉನ್ನತ ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ.

**9. ಕಚ್ಚಾವಸ್ತು ಆಧಾರಿತ ವಿವಿಧ ರೀತಿಯ ಕೈಗಾರಿಕೆಗಳನ್ನು ಹೆಸರಿಸಿ.**

1) ವ್ಯವಸಾಯ ಆಧಾರಿತ ಕೈಗಾರಿಕೆಗಳು
2) ಖನಿಜ ಆಧಾರಿತ ಕೈಗಾರಿಕೆಗಳು
(3) ಅರಣ್ಯ ಆಧಾರಿತ ಕೈಗಾರಿಕೆಗಳು
4) ರಾಸಾಯನಿಕ ಕೈಗಾರಿಕೆಗಳು



Use e-papers for save trees-InyaTrust.com

# ಅಧ್ಯಾಯ –11

# ಸಂಪರ್ಕ

**I. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ?**

**1. ಸಂಪರ್ಕ ಮಾಧ್ಯಮ ಎಂದರೇನು?**

ಇಂದು ಹಲವಾರು ಸಂಪರ್ಕ ಮಾಧ್ಯಮಗಳು ರೂಢಿಯಲ್ಲಿದ್ದು, ವಿವಿಧ ಪ್ರದೇಶಗಳ ಜನರೊಡನೆ ಸುಲಭವಾಗಿ ಸಂಪರ್ಕಿಸಬಹುದು. ಹೀಗೆ ಎಲ್ಲಾ ಜನರಿಗೂ ಸುದ್ದಿ ಅಥವಾ ವಿಷಯವನ್ನು ರವಾನಿಸುವ ಮಾಧ್ಯಮವೇ 'ಸಂಪರ್ಕ ಮಾಧ್ಯಮ'ಅಥವಾ 'ಸಮೂಹ ಮಾಧ್ಯಮ'. ಸಾಂಪ್ರದಾಯಕಿ ವೃತ್ತ ಪತ್ರಿಕೆ, ರೇಡಿಯೋಗಳಲ್ಲದೇ, ವಿದ್ಯುನ್ಮಾನ ತಾಂತ್ರಿಕ ಸಂಶೋಧನೆಗಳ ಸಂಪರ್ಕದ ಜಾಲವು ಭಾರತದಲ್ಲಿ ವಿಸ್ತೃತವಾಗಿ ಹಂಚಿಕೆಯಾಗಿದ್ದು, ಇಂದು ಮಹತ್ತರವಾದ ಕಾರ್ಯವನ್ನು ನಿರ್ವಹಿಸುತ್ತಿವೆ.

**2. ಸಂಪರ್ಕದ ವಿಧಗಳಾವುವು?**

ವಿದ್ಯುನ್ಮಾನ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಇಂದು ಹಲವಾರು ಸಂಪರ್ಕ ಮಾಧ್ಯಮಗಳು ರೂಢಿಗೆ ಬಂದಿವೆ. ಸಾಂಪ್ರದಾಯಿಕ ವಿಧಾನಗಳಾದ ಅಂಚೆ ಮತ್ತು ವೃತ್ತಿ ಪತ್ರಿಕೆಗಳ ಜೊತೆಗೆ ರೇಡಿಯೋ, ದೂರದರ್ಶನ, ಕೃತಕ ಉಪಗ್ರಹಗಳು, ಕಂಪ್ಯೂಟರ್ ಜಾಲ, ಅಂತರ್ಜಾಲ, ಇ–ಮೇಲ್ ಸಂಚಾರಿ ದೂರವಾಣಿಗಳು ಮುಂತಾದವು ಇಂದು ಸಂಪರ್ಕದ ಪ್ರಧಾನ ವಿಧಗಳಾಗಿವೆ.

**3. ಸಂಪರ್ಕದ ಪ್ರಾಮುಖ್ಯತೆಯನ್ನು ತಿಳಿಸಿರಿ.**

ಸಂಪರ್ಕ ಮಾಧ್ಯಮಗಳು ದೇಶದ ಜನರಿಗೆ ವಿವಿಧ ಪ್ರದೇಶದ ಆಗು ಹೋಗುಗಳನ್ನು ತಿಳಿಯಲು ಅಗತ್ಯವಾಗಿವೆ.

ಸರ್ಕಾರದ ನೀತಿ ನಿಯಮಗಳನ್ನು ತಿಳಿಯಪಡಿಸಿ ಅದರ ಬಗ್ಗೆ ತಿಳುವಳಿಕೆಯನ್ನು ಮೂಡಿಸಬಹುದು.

ಜನರಿಗೆ ಬೇಕಾದ ವ್ಯವಸಾಯ, ಕೈಗಾರಿಕೆ ಮುಂತಾದವುಗಳ ಜ್ಞಾನವನ್ನು ನೀಡುವುದರಿಂದ ಅಭಿವೃದ್ಧಿಯ ಪ್ರಕ್ರಿಯೆಯು ಶೀಘ್ರವಾಗಿ ಮುಂದುವರಿಯುವುದು.

ವಾಣಿಜ್ಯ ವ್ಯಾಪಾರದ ಅಭಿವೃದ್ಧಿಗೆ ಸಂಪರ್ಕ ಮಾಧ್ಯಮಗಳು ಮೂಲ ಅಗತ್ಯವಾಗಿವೆ.

ದೇಶದ ಏಕತೆ, ಒಗ್ಗಟ್ಟು ಹಾಗೂ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಅನುಕೂಲವಾಗುವುದು.

**4. GPS ಎಂದರೇನು? (ಗ್ಲೋಬಲ್ ಪೊಜಿಶನಿಂಗ್ ಸಸ್ಯ)**

GPS ಎಂದರೆ ಭೂ ಮೇಲ್ಮೈಯಲ್ಲಿನ ಯಾವುದೇ ಒಂದು ಸ್ಥಿರವಾಗಿರುವ ಅಥವಾ ಚಲಿಸುತ್ತಿರುವ ವಸ್ತು ಅಥವಾ ವ್ಯಕ್ತಿಯ ಸ್ಥಾನವನ್ನು ಅಕ್ಷಾಂಶ ಮತ್ತು ರೇಖಾಂಶಗಳ ಮೂಲಕ ನಿಖರವಾಗಿ ಸೂಚಿಸುವುದು ಹಾಗೂ ಆ ವಸ್ತುವಿನ ಸ್ಥಾನದ ಎತ್ತರವನ್ನು ಸಹ ಸೂಚಿಸುವುದು. ಈ ವ್ಯವಸ್ಥೆಯು ಇಂದು ಅತಿ ಹೆಚ್ಚು ಉಪಯುಕ್ತತೆಯನ್ನು ಹೊಂದಿದ್ದು, ಹಲವಾರು ಕ್ಷೇತ್ರಗಳಲ್ಲಿ ಲಾಭದಾಯಕವಾಗಿ ಈ ತಂತ್ರಜ್ಞಾನವನ್ನು ಬಳಕೆ ಮಾಡಲಾಗುತ್ತಿದೆ. ಜಿ.ಪಿ.ಎಸ್. ತಂತ್ರಜ್ಞಾನವು ಕೃತಕ ಉಪಗ್ರಹಗಳು ಕಳುಹಿಸುವ ಮಾಹಿತಿ ಹಾಗೂ ಭೂ ಮೇಲ್ಮೈಯಲ್ಲಿ ಯಾವುದೇ ವ್ಯಕ್ತಿಯಬಳಿಯಿರುವ ರಿಸೀವರ್‌ಗಳಿಂದ ಕಾರ್ಯ ನಿರ್ವಹಿಸಲ್ಪಡುವುದು.

ಉಪಯೋಗಗಳು :

i) ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕೈಗೊಳ್ಳಲು ಇವುಗಳು ಉಪಯುಕ್ತ.



Use e-papers for save trees-InyaTrust.com

ii) ಅರಣ್ಯ ಹಾಗೂ ಪರ್ವತ ಚಾರಣ ಮಾಡುವವರಿಗೆ ಮಾರ್ಗ ತಿಳಿಯಲು ಉಪಯುಕ್ತವಾಗಿವೆ.

iii) ಸೈನಿಕರು, ವೈಮಾನಿಕರು, ಮೀನುಗಾರರು ಹಾಗೂ ನಾವಿಕರು ಸರಿಯಾದ ಮಾರ್ಗಗವನ್ನು ಅನುಸರಿಸಲು ಜಿ.ಪಿ.ಎಸ್. ವ್ಯವಸ್ಥೆ ಅಗತ್ಯ ಮಾಹಿತಿಯನ್ನು ನೀಡುವುದು. ಇಂದು ಸಾರಿಗೆ ಸಿಬ್ಬಂದಿ ನಿರ್ವಹಣೆಯಲ್ಲಿಯೂ ಇದರ ಬಳಕೆ ಹೆಚ್ಚಾಗಿವೆ.

5. **ದೂರ ಸಂವೇದಿ ತಂತ್ರಜ್ಞಾನವನ್ನು ಕುರಿತು ಬರೆಯಿರಿ.**

ವಸ್ತುಗಳನ್ನು ಭೌತಿಕವಾಗಿ ಸ್ಪರ್ಶಿಸದೆ ದೂರದಿಂದಲೇ ಅವುಗಳಿಗೆ ಸಂಬಂಧಿಸಿದ ಮಾಹಿತಿ ಸಂಗಹಿಸುವುದಕ್ಕೆ ದೂರ ಸಂವೇದಿ ಎನ್ನುವರು. ಭೂ ಮೇಲ್ಮೈಗೆ ಸಂಬಂಧಿಸಿದ ಅಂಕಿ ಅಂಶಗಳ ಸಂಗ್ರಹಣೆಯಲ್ಲಿ ಇಂದು ಬಳಕೆಯಲ್ಲಿರುವ ಆಧುನಿಕ ತಂತ್ರಜ್ಞಾನಗಳಲ್ಲಿ ದೂರಸಂವೇದಿ ಅತಿ ಮುಖ್ಯವಾದುದು. ವೈಮಾನಿಕ ಚಿತ್ರಗಳು ಹಾಗೂ ಉಪಗ್ರಹಗಳಿಂದ ಪಡೆದ ಚಿತ್ರಗಳು ದೂರ ಸಂವೇದಿ ಚಿತ್ರಗಳಾಗಿವೆ.

**ಉಪಯೋಗಗಳು**

i) ಈ ಚಿತ್ರಗಳಿಂದ ಆ ಕಾಲದ ಅವಧಿಯಲ್ಲಿನ ನೈಜ ಹಾಗೂ ನಂಬಲಾರ್ಹವಾದ ಸ್ಪಷ್ಟ ಮಾಹಿತಿ ದೊರೆಯುವುದು.

ii)ಇದು ಭೂಮೇಲ್ಮೈನ ಸರ್ವೇಕ್ಷಣೆಗಿಂತ ಅತಿ ಶೀಘ್ರ ಅಲ್ಪಾವಧಿ ಹಾಗೂ ಕಡಿಮೆವೆಚ್ಚದ ಮಾಹಿತಿ ಸಂಗ್ರಹಣೆಯ ವಿಧಾನವಾಗಿದೆ.

iii) ಇದರಿಂದ ಪಡೆಯುವ ಮಾಹಿತಿಯನ್ನು ಸುಲಭವಾಗಿ ಕಂಪ್ಯೂಟರ್‌ಗಳಿಂದ ವಿಶ್ಲೇಷಿಸಬಹುದು.

iv) ಹವಾಮಾನದ ವೈಪರೀತ್ಯ ಹಾಗೂ ಭೂ ಮೇಲ್ಮೈ ಅಡಚಣೆಗಳಿದ್ದರೂ ದೂರ ಸಂವೇದಿ ಚಿತ್ರಗಳನ್ನು ಉಪಗ್ರಹಗಳಿಂದ ಪಡೆಯಬಹುದು.

v) ಚಂಡಮಾರುತ, ಬಿರುಗಾಳಿ, ಪ್ರವಾಹ, ಬರಗಾಲ ಮೊದಲಾದ ನೈಸರ್ಗಿಕ ಪ್ರಕೋಪಗಳ ಪ್ರಭಾವದ ಪ್ರದೇಶ ಹಾಗೂ ಅವುಗಳ ಅನಾಹುತಗಳ ತೀವ್ರತೆಯ ಅಧ್ಯಯನಗಳಿಗೆ ದೂರ ಸಂವೇದಿ ಚಿತ್ರಗಳು ಅತ್ಯಂತ ಉಪಯುಕ್ತವಾಗಿವೆ.

vi)ಉಪಗ್ರಹ ಚಿತ್ರಗಳು ಭೂ ಬಳಕೆ, ಅರಣ್ಯ ಪ್ರದೇಶ, ಜಲರಾಶಿಗಳು, ವಸತಿ ಪ್ರದೇಶಗಳು, ಬೆಳೆಗಳ ಹಂಚಿಕೆ, ಭೂ ಸವೆತ, ಕರಾವಳಿ, ಹೀಗೆ ವಿವಿಧ ಬಗೆಯ ಪ್ರಾಕೃತಿಕ ಸಂಪನ್ಮೂಲಗಳ ವಿಶ್ಲೇಷಣೆ ಅತ್ಯಂತ ಮಹತ್ತರವಾದವು.

6. **ಜಿ. ಐ. ಎಸ್. ಎಂದರೇನು? ಹಾಗೂ ಅದರ ಉಪಯೋಗಗಳನ್ನು ತಿಳಿಸಿರಿ.**

ಪೃಥ್ವಿಯ ಮೇಲ್ಮೈನ ಅಂಕಿ ಅಂಶ ಅಥವಾ ಮಾಹಿತಿಯನ್ನು ಕಲೆಹಾಕುವ, ಸಂಗ್ರಹಿಸುವ, ಅಗತ್ಯವಿದ್ದಾಗ ಬಳಕೆ ಮಾಡುವ, ಮಾರ್ಪಡಿಸುವ ಹಾಗೂ ತೋರಿಸುವ ಪ್ರಬಲ ಸಲಕರಣೆಯ ಸಮೂಹವನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆ (GIS)ಎನ್ನುವರು. 1960 ರಲ್ಲಿ ಕೆನಡಾದಲ್ಲಿ ಆರಂಭಗೊಂಡು ಇಂದು ಇದರ ಬಳಕೆ ವಿಶ್ವವ್ಯಾಪಿಯಾಗಿದೆ.



Use e-papers for save trees-InyaTrust.com

**ಉಪಯೋಗಗಳು :**

i) ಜಿ.ಐ.ಎಸ್. ತಂತ್ರಜ್ಞಾನ ಆಧಾರಿತನಕ್ಷೆಗಳು ಹೆಚ್ಚು ಆಕರ್ಷಕ ಹಾಗೂ ಮಾಹಿತಿಯನ್ನು ಸ್ಪಷ್ಟವಾಗಿ ನೀಡುತ್ತವೆ.

ii) ವಿವಿಧ ಬಗೆಯ ಭೌಗೋಳಿಕ, ಸಾಮಾಜಿಕ , ಆರ್ಥಿಕ ಭೂ ಮೇಲ್ಮೈ ಮಾಹಿತಿಯನ್ನು ಸುಲಭವಾಗಿ ವಿಶ್ಲೇಷಿಸಬಹುದು ಹಾಗೂ ಅವುಗಳ ಮಾದರಿಯನ್ನು ರಚಿಸಬಹುದು.

iii) ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜಿ. ಐ. ಎಸ್. ತಂತ್ರಜ್ಞಾನದ ಪ್ರಾಮುಖ್ಯತೆ ಹೆಚ್ಚು ಕಂಡು ಬರುತ್ತದೆ.

iv) ಇದು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದ್ದು, ನಕ್ಷೆಗಳನ್ನು ಅತಿ ಶೀಘ್ರವಾಗಿ ಅಗತ್ಯಕ್ಕೆ ತಕ್ಕಂತೆ ನಕ್ಷಾ ಶಾಸ್ತ್ರಜ್ಞರ ನೆರವಿಲ್ಲದೆ ಅತಿ ಕಡಿಮೆ ಅವಧಿಯಲ್ಲಿ ಪಡೆಯಬಹುದು ಹಾಗೂ ನಕ್ಷೆಗಳನ್ನು ಮಾರ್ಪಡಿಸಬಹುದು.

* * *



Use e-papers for save trees-InyaTrust.com

## ಅಧ್ಯಾಯ 12

# ನೈಸರ್ಗಿಕ ವಿನಾಶಕಾರಿಗಳು

**I ಈ ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

**1) ಪ್ರಾಕೃತಿಕ ವಿನಾಶಕಗಳು ಎಂದರೇನು?**

ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ, ಆಸ್ತಿ, ಪಾಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ವಿನಾಶಕಾರಿ ಘಟನೆಗಳನ್ನು ಪ್ರಾಕೃತಿಕ ವಿನಾಶಕಗಳು ಎಂದು ಕರೆಯುವರು.

**2. ಚಂಡಮಾರುತಗಳಪರಿಣಾಮಗಳಾವುವು?**

(i) ಕೆಲವು ವೇಲೆ ಚಂಡಮಾರುತ ಅಪ್ಪಳಿಸುವ ಪ್ರದೇಶದ ಜನ ಜೀವನವೇ ಸಂಪೂರ್ಣ ಮಾರ್ಪಡು ಹೊಂದುವುದು.

ii) ಇವುಗಳಿಂದ ಅಪಾರ ಸಾವು ನೋವು ಉಂಟಾಗುತ್ತದೆ.

iii) ಸಾಗರದ ಅಲೆಗಳು ಒಳನಾಡಿಗೆ ಚಾಚಿ ಜಲರಾಶಿಗಳು ಲವಣಯುಕ್ತವಾಗುತ್ತವೆ.

iv) ಬೆಳೆಗಳು ಸಂಪೂರ್ಣ ನಾಶವಾಗುತ್ತವೆ.

v) ಸಾರಿಗೆ ಸಂಪರ್ಕ, ವಿದ್ಯುತ್ ಸೌಕರ್ಯ, ಜನಜೀವನ ಅಸ್ತವ್ಯಸ್ತವಾಗುವುದು.

vi) ಚಂಡಮಾರುತಗಳು ನಿಂತ ನಂತರ ಸಾಂಕ್ರಾಮಿಕ ರೋಗಗಳು ಅಪಾರ ಹಾನಿಯನ್ನುಂಟು ಮಾಡುತ್ತವೆ.

**3. ಪ್ರವಾಹಗಳೆಂದರೇನು?**

ಅತ್ಯಧಿಕ ಮಳೆ ಸುರಿದಾಗ ಮತ್ತು ಅತ್ಯಧಿಕ ಪ್ರಮಾಣದಲ್ಲಿ ಹಿಮ ಕರಗಿದಾಗ ನದಿಗಳ ನೀರಿನ ಪ್ರಮಾಣವು ಅವುಗಳ ಪಾತ್ರದ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ನದಿ ದಂಡಗಳ ಇಕ್ಕೆಲಗಳಲ್ಲಿ ಉಕ್ಕಿ ಹರಿಯುವುದು ಇದನ್ನು ನದಿ ಪ್ರವಾಹಗಳೆಂದು ಕರೆಯುವರು

**4. ಭೂ ಕುಸಿತ ಎಂದರೇನು?**

ಪರ್ವತಗಳ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಕಡಿದಾದ ಇಳಿಜಾರಿನಗುಂಟ ಕೆಳಕ್ಕೆ ಜಾರುವ ಭೂ ರಾಶಿಗೆ ಭೂ ಕುಸಿತಗಳೆನ್ನುವರು.

**5. ಭೂಕಂಪ ಎಂದರೇನು?**

ಭೂಮಿಯ ಒಳಗಿನ ಆಂತರಿಕ ಶಕ್ತಿಯಿಂದ ಅನಿರೀಕ್ಷಿತವಾಗಿ ಭೂಮಿಯ ಮೇಲ್ಮೈ ಕಂಪಿಸುವುದು ನಡುಗುವುದು ಅಥವಾ ಅಲುಗಾಡುವುದನ್ನು 'ಭೂಕಂಪ' ಎಂದು ಕರೆಯುವರು.

**6. ಪ್ರವಾಹಗಳು ಉಂಟಾಗಲು ಕಾರಣಗಳು ಮತ್ತು ಒಳಪಡುವ ಪ್ರದೇಶಗಳನ್ನು ವಿವರಿಸಿ.**

ಕಾರಣಗಳು

1) ಮಾನ್‌ಸೂನ್ ಮಳೆ ಅನಿಶ್ಚಿತ ಕೆಲವು ವೇಳೆ ಅತ್ಯಧಿಕ ಮಳೆ ಬೀಳುವುದರಿಂದ ಪ್ರವಾಹಗಳುಂಟಾಗುತ್ತವೆ.

2) ನದಿಯ ಪಾತ್ರಗಳಲ್ಲಿ ಹೂಳು ತುಂಬಿ ನೀರು ಇಕ್ಕೆಲಗಳಲ್ಲಿಯೂ ಹರಿದು ಪ್ರವಾಹಗಳು ಉಂಟಾಗುತ್ತವೆ.

3) ಅಣೆಕಟ್ಟು ಹಾಗೂ ಇತರೆ ಅಡ್ಡಗಟ್ಟೆಗಳು ಒಡೆದು ಒಮ್ಮೆಗೇ ಬಿಡುಗಡೆಯಾಗುವ ನೀರಿನಿಂದ ಪ್ರವಾಹಗಳು ಉಂಟಾಗುತ್ತವೆ.

4) ನದಿಗಳ ಪಾತ್ರವನ್ನು ಬದಲಾಯಿಸುವುದರಿಂದಲೂ ಪ್ರವಾಹಗಳು ಉಂಟಾಗುತ್ತವೆ.

5) ಚಂಡಮಾರುತಗಳಿಂದ ಅಪಾರ ಮಳೆ ಬೀಳುವುದೂ ಸಹ ಪ್ರವಾಹಗಳಿಗೆ ಕಾರಣವಾಗುವುದು.

6) ಸಮುದ್ರಗಳ ಮಧ್ಯದಲ್ಲಿ ಭೂಕಂಪನಗಳು ಸಂಭವಿಸುವುದರಿಂದಲೂ ಪ್ರವಾಹಗಳುಂಟಾಗುತ್ತವೆ.



Use e-papers for save trees-InyaTrust.com

**ಪ್ರವಾಹಕ್ಕೆ ಒಳಪಡುವ ಪ್ರದೇಶಗಳು :** ದೇಶದಾದ್ಯಂತ ಪ್ರವಾಹಕ್ಕೆ ಒಳಪಡುವ ಪ್ರದೇಶಗಳು ಕಂಡುಬರುತ್ತವೆ. ಅವುಗಳೆಂದರೆ

i) ಗಂಗಾನದಿಯ ಉಪನದಿಗಳಾದ ಯಮುನಾ, ಗಂಡಕ್, ಕೋಸಿ, ಘಾಘ್ರ ನದಿಗಳು, ಉತ್ತರ ಪ್ರದೇಶ ವಿಹಾರಗಳಲ್ಲಿ ಪ್ರವಾಹವನ್ನುಂಟು ಮಾಡುತ್ತವೆ.

ii) ದಾಮೋದರ ಮತ್ತು ಸುವರ್ಣ ರೇಖಾ ನದಿಗಳು ಛತ್ತೀಸಗಡ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಪ್ರವಾಹವನ್ನುಂಟು ಮಾಡುತ್ತವೆ.

iii) ಬಹ್ಮ ಪುತ್ರ ಮತ್ತು ಇದರ ಉಪನದಿಗಳಾದ ದಿಹಾಂಗ ದಿಬಾಂಗ, ಸುಬನ್‌ಸಿರಿ ಮತ್ತು ಲೂಹಿತ್ ಅಸ್ಸಾಂ ಕಣಿವೆ ನದಿಗಳಿಂದ ಅಸ್ಸಾಂನಲ್ಲಿ ಪ್ರವಾಹ ಉಂಟಾಗುತ್ತವೆ.

iv) ಹಿಮಾಲಯ ಪರ್ವತಗಳಲ್ಲಿ ಮೇಘಸ್ಪೋಟದಿಂದ ಆಗಿಂದಾಗ್ಗೆ ಕ್ಷಿಪ್ರ ಪ್ರವಾಹಗಳುಂಟಾಗುತ್ತವೆ.

v) ನರ್ಮದಾ, ತಪತಿ, ಸಬರಮತಿ ಮತ್ತು ಮಹಿ ನದಿಗಳು ವರ್ಷದ ಕೆಲವು ದಿನಗಳಲ್ಲಿ ಗುಜರಾತ್ ರಾಜ್ಯದಲ್ಲಿ ಪ್ರವಾಹ ಉಂಟು ಮಾಡುತ್ತವೆ.

vi) ಕರ್ನಾಟಕದಲ್ಲಿ ಕೃಷ್ಣಾ, ತುಂಗಭದ್ರಾ, ಘಟಪ್ರಭಾ ಮಲಪ್ರಭಾ, ದೋಣಿನದಿ, ಬೆಣ್ಣೆ ಹಳ್ಳ, ಮುಂತಾದವುಗಳು ಮಳೆಗಾಲದಲ್ಲಿ ರಭಸವಾಗಿ ಹರಿದು ಪ್ರವಾಹವನ್ನುಂಟು ಮಾಡುತ್ತವೆ.

7. **ಕಡಲ ಕೊರೆತ ಎಂದರೇನು? ಅದರ ನಿರ್ವಹಣೆಯನ್ನು ತಿಳಿಸಿ.**

ಉತ್ತರ ಸಮುದ್ರದ ಅಲೆಗಳು ನಿರಂತರವಾಗಿ ತೀರ ಪ್ರದೇಶಗಳಿಗೆ ಅಪ್ಪಳಿಸುತ್ತವೆ. ಇವುಗಳಿಂದ ತೀರ ಪ್ರದೇಶವು ಸವೆತಕ್ಕೀಡಾಗುವುದು. ಹೀಗೆ ಸಮುದ್ರದ ಅಲೆಗಳಿಂದ ತೀರ ವಲಯವು ಸವೆಸಲ್ಪಡುವುದನ್ನು ತೀರ ಪ್ರದೇಶದ ಕೊರತೆ ಅಥವಾ ಸಾಮಾನ್ಯವಾಗಿ ಕಡಲ ಕೊರೆತ ಎನ್ನುವರು.

**ನಿರ್ವಹಣೆ :**

i) ತೀರ ಪ್ರದೇಶದಲ್ಲಿ ಮರಳು ತೆಗೆಯುವುದನ್ನು ನಿಯಂತ್ರಿಸುವುದು.

ii) ತೀರ ಪ್ರದೇಶದುದ್ದಕ್ಕೂ ಅಲೆಗಳು ಪ್ರಬಲವಾಗಿರುವ ಕಡೆ ತಡೆಗೋಡೆಯನ್ನು ನಿರ್ಮಿಸುವುದ.ು

iii) ತೀರದುದ್ದಕ್ಕೂ ದಪ್ಪ ಬಂಡೆಗಳ ರಾಶಿ ಹಾಕಿ ಅಲೆಗಳ ಪ್ರಭಾವವನ್ನು ನಿಯಂತರಿಸುವುದು.

iv) ಇವೆಲ್ಲವುಗಳಿಗಿಂತಲೂ ತೀರದುದ್ದಕ್ಕೂ (ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸಲು ಕಾರ್ಯಕ್ರಮ ರೂಪಿಸುವುದು ಅತ್ಯಂತ ಪರಿಣಾಮಕಾರಿ.

8. **ಭೂಕಂಪದ ಪರಿಣಾಮಗಳನ್ನು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.**

**ಪರಿಣಾಮಗಳು:** ಭೂಕಂಪನಗಳು ಸಾಮಾನ್ಯವಾಗಿ ಜನರ ಸಾವು ನೋವು ಮತ್ತು ಆಸ್ತಿ – ಪಾಸ್ತಿಗಳ ಹಾನಿಯ ಪ್ರಮಾಣದ ಮೇಲೆ ನಿರ್ಧರಿಸಲ್ಪಡುವುದು. ಹಾಗೂ ಸಾರಿಗೆ ಸಂಪರ್ಕ ಕಡಿತ, ರೋಗಗಳ ಹರಡುವಿಕೆ, ಸಾಗರದ ಅಲೆಗಳು ದಡಗಳಿಗೆ ಅಪ್ಪಳಿಸುವಿಕೆ ನದಿಯ ದಿಕ್ಕು ಬದಲಾಗುವಿಕೆ ಇತ್ಯಾದಿಗಳು ಸಂಭವಿಸುತ್ತವೆ.

**ಮುನ್ನೆಚ್ಚರಿಕೆ ಕ್ರಮಗಳು**

i) ಭೂಕಂಪನ ಹೆಚ್ಚು ಸಂಭವನೀಯ ವಲಯಗಳಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ನಿಷೇಧಿಸುವುದು.

ii) ಈ ವಲಯಗಳಲ್ಲಿ ಕಟ್ಟಡಗಳನ್ನು ಹಗುರವಾದ ವಸ್ತುಗಳಿಂದ ನಿರ್ಮಿಸುವುದು.



Use e-papers for save trees-InyaTrust.com

iii) ಸಂತ್ರಸ್ತರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವುದು.

iv) ಭೂಕಂಪನ ಉಂಟಾದಾಗ ಶೀಘ್ರವೇ ವಿದ್ಯುತ್ ಸಂಪರ್ಕವನ್ನು ಕತ್ತರಿಸುವುದು.

**9. ಭೂಕುಸಿತಕ್ಕೆ ಆರಣ ಮತ್ತು ಅದರ ಪರಿಣಾಮಗಳನ್ನು ವಿವರಿಸಿ.**

**ಕಾರಣಗಳು**

i) ಪರ್ವತ ಮತ್ತು ಸಮುದ್ರ ತೀರಗಳಲ್ಲಿ ಕ್ರಮವಾಗಿ ಹರಿಯುವ ನೀರು ಹಾಗೂ ಅಲೆಗಳು ಭೂಮಿಯನ್ನು ಕೊರೆದು ಇಳಿಜಾರನ್ನು ನಿರ್ಮಿಸಿ ಭೂ ಕುಸಿತವುಂಟಾಗಲು ಕಾರಣವಾಗುತ್ತವೆ.

ii) ಕಡಿದಾದ ಪರ್ವತ ವಲಯಗಳಲ್ಲಿ ರಸ್ತೆ, ರೈಲು ಮೈರ್ಗ, ಕಾಲುವೆ ಮೊದಲಾದವುಗಳನ್ನು ನಿರ್ಮಿಸಿದಾಗ ಇಳಿಜಾರು ಮತ್ತಷ್ಟು ಕಡಿದಾಗಿ ಭೂ ಕುಸಿತಗಳುಂಟಾಗುತ್ತವೆ.

iii) ಜೇಡಿಮಣ್ಣಿನ ಪದರದ ಮೇಲೆ ಸಡಿಲವಾದ ಮಣ್ಣಿನ ಪದರವಿದ್ದಲ್ಲಿ ಇಳಿಜಾರು ಕಡಿದಾಗಿದ್ದು ಭೂ ಕುಸಿವುಂಟಾಗುವುದು.

iv) ಗಣಿಗಾರಿಕೆಯ ಪ್ರದೇಶದಲ್ಲಿ ಭೂ ಕುಸಿತಗಳು ಸಾಮಾನ್ಯ ಆಳದಲ್ಲಿರುವ ಅದಿರಿನ ನಿಕ್ಷೇಪದವರೆಗೆ ಗಣಿಗಳನ್ನು ತೆಗೆದಿದ್ದು ಇದರಿಂದ ಭೂ ಕುಸಿತಗಳುಂಟಾಗುತ್ತವೆ.

v) ಅರಣ್ಯಗಳನ್ನು ಕಡಿಯುವುದರಿಂದ ಹಾಗೂ ಕಡಿದಾದ ಇಳಿಜಾರನ್ನು ಆಳವಾಗಿ ಉಳುಮೆ ಮಾಡುವುದರಿಂದ ಭೂ ಕುಸಿತಗಳುಂಟಾಗುತ್ತವೆ.

**ಪರಿಣಾಮಗಳು**

i) ಭೂ ಕುಸಿತದಿಂದಾಗಿ ಅನೇಕ ಚಿಕ್ಕ ನದಿಗಳು ಹರಿಯುವುದಕ್ಕೆ ಅಡ್ಡಿ ಉಂಟಾಗುತ್ತದೆ.

ii) ಸಾರಿಗೆ ಸಂಚಾರಕ್ಕೆ ಅಡ್ಡಿ ಉಂಟಾಗುತ್ತದೆ.

iii) ಹಳ್ಳಿಗಳು ಮತ್ತು ಅನೇಕ ಸಸ್ಯವರ್ಗಗಳು ಭೂಗತವಾಗುತ್ತವೆ.

iv) ಭೂ ಕುಸಿತಗಳು ಅನೇಕ ಜೀವಹಾನಿ ಮತ್ತು ಆಸ್ತಿ ಹಾನಿಯನ್ನುಂಟು ಮಾಡುತ್ತವೆ.

**10. ಪ್ರವಾಹ ನಿಯಂತ್ರಣ ಕ್ರಮಗಳನ್ನು ವಿವರಿಸಿ.**

i) ಪ್ರವಾಹ ನಿಯಂತ್ರಣಕ್ಕೆ ನದಿಯ ಇಕ್ಕೆಲಗಳಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸುವುದು.

ii) ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ಜಲಾಶಯಗಳಲ್ಲಿ ನೀರನ್ನು ಸಂಗ್ರಹಿಸಿ ಇತರ ಕಡೆಗಳಿಗೆ ನೀರನ್ನು ಹರಿಸುವುದು.

iii) ಪ್ರವಾಹಗಳ ಮುನ್ಸೂಚನೆಯನ್ನು ನೀಡಲು ಕೇಂದ್ರಗಳನ್ನು ಸ್ಥಾಪಿಸುವುದು.

iv) ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸುವುದು. ಇದರಿಂದ ಮಣ್ಣಿನ ಸವೆತವನ್ನು ನಿಯಂತ್ರಿಸಿ, ನದಿ ಹಾಗೂ ಜಲಾಶಯಗಳಲ್ಲಿ ಹೂಳು ತುಂಬುವುದನ್ನು ತಪ್ಪಿಸಿ ಪ್ರವಾಹಗಳನ್ನು ತಡೆಗಟ್ಟಬಹುದು.

**11. ಭೂಕಂಪಕ್ಕೆ ಕಾರಣಗಳೇನು?**

i) ನಗರೀಕರಣದಿಂದ ಭೂಮಿಯ ಒಡಲಲ್ಲಿ ಒತ್ತಡ ಹೆಚ್ಚಾಗಿ ಭೂಕಂಪನ ಸಂಭವಿಸುತ್ತದೆ.

ii) ಅರಣ್ಯನಾಶ, ಅಣೆಕಟ್ಟುಗಳ ನಿರ್ಮಾಣ, ಗಣಿಗಾರಿಕೆಗಳಿಂದಾಗಿ ಭೂಕಂಪನ ಸಂಭವಿಸುತ್ತವೆ.



Use e-papers for save trees-InyaTrust.com

## ಅಧ್ಯಾಯ – 13

# ಭಾರತದ ಜನಸಂಖ್ಯೆ

**I ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ತುಂಬಿ**

1. ಜನಸಂಖ್ಯೆ ಹಂಚಿಕೆಯನ್ನು ವಿವರಿಸಲು **ಜನಸಾಂದ್ರತೆ** ಎಂಬ ಪದವನ್ನು ಬಳಸಲಾಗುವುದು.
2. 2011 ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖಯೆ **121 ಕೋಟಿ.**
3. ಭಾರತದ ಸರಾಸರಿ ಜನಸಾಂದ್ರತೆಯ ಪ್ರಮಾಣ ಪ್ರ. ಚ. ಕಿ. ಮೀ. ಗೆ **382** ರಷ್ಟಿದೆ.
4. ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಜ್ಯ **ಉತ್ತರ ಪ್ರದೇಶ**
5. ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ರಾಜ್ಯ **ಸಿಕ್ಕಿಂ**
6. ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆ ಇರುವ ರಾಜ್ಯ **ಬಿಹಾರ.**

**II ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಗಳನ್ನು ಬರೆಯಿರಿ.**

**1. ಜನಸಂಖ್ಯೆ ಎಂದರೇನು?**

ಒಂದು ಪ್ರದೇಶದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ವಾಸಿಸುತ್ತಿರುವ ಜನರ ಪ್ರಮಾಣವೇ ಅಲ್ಲಿನ ಜನಸಂಖ್ಯೆಯಾಗಿದೆ.

**2. ಜನಸಾಂದತೆ ಎಂದರೇನು?**

ಒಂದು ಭೂ ಪ್ರದೇಶದಲ್ಲಿರುವ ಒಟ್ಟು ಜನರ ಸಂಖ್ಯೆಯನ್ನು ಆ ಭೂ ಪ್ರದೇಶದ ಕ್ಷೇತ್ರದಿಂದ ಭಾಗಿಸಿದಾಗ ಬರುವ ಭಾಗಲಬ್ಧವೇ ಜನಸಾಂದ್ರತೆ.

**3. ವಲಸೆ ಎಂದರೇನು?**

ಮಾನವನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಾಸಸ್ಥಳವನ್ನು ಬದಲಾಯಿಸುವುದುಕ್ಕೆ ವಲಸೆ ಎನ್ನುವರು.

**4. ವಲಸೆಯ ವಿಧಗಳಾವುವು?**

ವಲಸೆಯಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ ಅವುಗಳೆಂದರೆ

i) ಅಂತರರಾಷ್ಟ್ರೀಯ ವಲಸೆ   ii) ಆಂತರಿಕ ವಲಸೆ

**5. ಜನಸಂಖ್ಯಾ ಹಂಚಿಕೆಯ ಮೇಲೆ ಪಭಾವ ಬೀರುವ ಅಂಶಗಳಾವುವು?**

ಬಾರತದ ಜನಸಂಖ್ಯಾ ಹಂಚಿಕೆಯ ಮೇಲೆ ಅನೇಕ ಭೌಗೋಳಿಕ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಂಶಗಳು ಪ್ರಭಾವ ಬೀರುದ್ದು, ಅದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವನ್ನುಹೊಂದಲು ಕಾರಣವಾಗಿದೆ. ಇವುಗಳಲ್ಲದೆ ಮಳೆಯ ಹಂಚಿಕೆ, ಉಷ್ಣಾಂಶ, ಮಣ್ಣು, ನೀರಾವರಿ, ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು, ಕೈಗಾರಿಕಾಭಿವೃದ್ಧಿ, ಸಂಚಾರ ಸೌಲಭ್ಯಗಳು, ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು, ಸುರಕ್ಷತೆ ಹೀಗೆ ವಿವಿಧ ಅಂಶಗಳ ಪ್ರಭಾವದಿಂದಾಗಿ ಭಾರತದಲ್ಲಿ ಜನಸಂಖ್ಯೆಯು ಅಸಮಾನ ಹಂಚಿಕೆಯಿಂದ ಕೂಡಿರುವುದು. ಜನ ವಸತಿ ಸೌಲಭ್ಯಗಳನ್ನು ಹೊಂದಿರುವ ಪ್ರದೇಶಗಳು ಅತ್ಯಧಿಕ ಜನಸಾಂದ್ರತೆಯಿಂದ ಕೂಡಿವೆ. ಇದಕ್ಕೆ ವಿರುದ್ಧವಾಗಿ ಜನವಸತಿ ಯೋಗ್ಯವಲ್ಲದ ಪರಿಸರವನ್ನು ಹೊಂದಿದ ವಿಸ್ತಾರವಾದ ಭೂ ಭಾಗಗಳು ವಿರಳ ಜನಸಾಂದ್ರತೆಯನ್ನು ಹೊಂದಿವೆ.



Use e-papers for save trees-InyaTrust.com

**6. ವಲಸೆಯಿಂದ ಉಂಟಾಗುವ ಸಮಸ್ಯೆಗಳೇನು? ವಲಸೆಯನ್ನು ನಿಯಂತ್ರಿಸುವ ಕ್ರಮಗಳಾವುವು?**

ವಲಸೆಯಿಂದ ಹಲವಾರು ಸಮಸ್ಯೆಗಳು ಉಂಟಾಗುತ್ತವೆ.

i) ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಹೆಚ್ಚು ವಲಸೆ ಹೋಗುವ ಕಾರ್ಮಿಕರು ನೆಲೆಸಲು ಸ್ಥಳವಿಲ್ಲದೆ ವಸತಿ ಸಮಸ್ಯೆಯಿಂದ ಕೊಳಗೇರಿಗಳು ನಿರ್ಮಾಣಗೊಳ್ಳುತ್ತವೆ.

ii) ವ್ಯಭಿಚಾರ ಹಾಗೂ ಇತರೆ ಅನೈತಿಕ ಚಟುವಟಿಕೆಗಳಿಗೆ ಬಹುತೇಕ ವಲಸಗೆಳು ಕಾರಣವಾಗುತ್ತವೆ.

iii) ನೀರು ವಿದ್ಯುತ್, ರಸ್ತೆ, ವಿದ್ಯಾಭ್ಯಾಸ, ಮೊದಲಾದ ಮೂಲ ಸೌಕರ್ಯಗಳ ಮೇಲೆ ಒತ್ತಡ ಉಂಟಾಗಿ ದೊರೆಯದಂತಹ ಪರಿಸ್ಥಿತಿಗಳುಂಟಾಗುತ್ತವೆ.

iv) ವಲಸೆ ಇರುವ ಪ್ರದೇಶಗಳಲ್ಲಿ ಜನಸಾಂದ್ರತೆ ಹಾಗೂ ಬೆಳವಣಿಗೆ ಹೆಚ್ಚಾಗುವುದು.

v) ಉದ್ಯೋಗಾವಕಾಶಗಳ ಮೇಲೆ ಪರಿಣಾಮ ಉಂಟಾಗುತ್ತದೆ. ಇದು ಕೊಲೆ, ಸುಲಿಗೆ, ದರೋಡೆ, ಘರ್ಷಣೆ ಮೊದಲಾದವುಗಳಿಗೆ ಕಾರಣವಾಗುತ್ತದೆ.

**ವಲಸೆಯ ನಿಯಂತ್ರಣ ಕ್ರಮಗಳು**

i) ಕೈಗಾರಿಕಾ ವಲಯಗಳನ್ನು ನಗರಗಳ ಹೊರಗೆ ನಿರ್ಮಿಸುವುದು, ಇದರಿಂದ ಕಾರ್ಮಿಕರು ಉಪನಗರಗಳಲ್ಲಿ ನೆಲೆಸುವಂತೆ ಪ್ರೇರೇಪಿಸುವುದು.

ii) ಗ್ರಾಮೀಣ ಕಸುಬು ಉಪಕಸುಬುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದು.

iii) ನಗರಗಳಲ್ಲಿ ಕಂಡು ಬರುವ ಮೂಲ ಸೌಕರ್ಯಗಳನ್ನು ಅಂದರೆ ರಸ್ತೆ ಕುಡಿಯುವ ನೀರು, ಚರಂಡಿ ವ್ಯವಸ್ಥೆ,ಗ್ರಂಥಾಲಯ ಶೈಕ್ಷಣಿಕ ಸೌಲಭ್ಯಗಳನ್ನು ಹಳ್ಳಿಗಳು ಮತ್ತು ಪಟ್ಟಣಗಳಿಗೆ ವಿಸ್ತರಿಸುವುದು. ಇದನ್ನು ಪುರ ಯೋಜನೆ ಎಂದು ಕರೆಯುವರು.

iv) ನಗರ ಹಾಗೂ ಸುತ್ತಲಿನ ಗ್ರಾಮೀಣ ವಸತಿಗಳ ನಡುವೆ ಸಾರಿಗೆ ಸೌಲಭ್ಯಗಳನ್ನು ವಿಸ್ತರಿಸುವುದು ನಗರಗಳಿಗೆ ಸಮೀಪದಲ್ಲಿಯೇ ಹೊರ ವಲಯದ ಅಂಚುಗಳಲ್ಲಿ ಉಪನಗರಗಳನ್ನು ನಿರ್ಮಿಸುವುದು.

**7. ಜನಸಂಖ್ಯಾ ಬೆಳವಣಿಗೆಯಿಂದ ಉಂಟಾಗುವ ಪರಿಣಾಮಗಳಾವುವು?**

ಮಾನವ ಸಂಪನ್ಮೂಲವು ಆರ್ಥಿಕ ಅಭಿವೃದ್ಧಿಗೆ ಅತ್ಯಾವಶ್ಯಕ. ಆದರೆ ಅದರ ಪ್ರಮಾಣವು ದೇಶದಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳಿಗೆ ಅನುಗುಣವಾಗಿ ಆದರ್ಶ ಪ್ರಮಾಣದಲ್ಲಿರಬೇಕು. ಆದರೆ ಭಾರತವು ಈಗಾಗಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದನ್ನು ಕಾಣಬಹುದು. ಇದರಿಂದ ಜನಸಂಖ್ಯೆಯು ಸಂಪನ್ಮೂಲವಾಗಿರುವುದರ ಬದಲು ಹೊರೆಯಾಗಿ ಪರಿಣಮಿಸಿದೆ. ಜನಸಂಖ್ಯಾ ಸ್ಫೋಟವು ಆರ್ಥಿಕ ಪ್ರಗತಿಯ ಮೇಲೆ ದುಷ್ಪರಿಣಾಮವನ್ನುಂಟುಮಾಡಿದೆ. ಆದರೆ ತೀವ್ರ ಗತಿಯ ಬೆಳವಣಿಗೆಯು ಹಲವು ಸಮಸ್ಯೆಗಳನ್ನು ಸೃಷ್ಟಿಸಿದೆ. ಅವುಗಳಲ್ಲಿ ನಿರುದ್ಯೋಗ ಸಮಸ್ಯೆ, ಆಹಾರ ಮತ್ತು ಪೌಷ್ಠಿಕಾಂಶದ ಕೊರತೆ ಸಾಮಾಜಿಕ ಮತ್ತು ನಾಗರೀಕ ಸೌಲಭ್ಯಗಳ ಮೇಲೆ ಅಧಿಕ ಒತ್ತಡ ಕಡಿಮೆ ತಲಾವಾರು ಆದಾಯ, ನಿಧಾನಗತಿಯ ಆರ್ಥಿಕಾಭಿವೃದ್ಧಿ ರಾಜಕೀಯ ಕ್ಷೋಭೆ ಮುಂತಾದ ಪರಿಣಾಮಗಳು ಉಂಟಾಗುತ್ತವೆ.



Use e-papers for save trees-InyaTrust.com

# ಅರ್ಥಶಾಸ್ತ್ರ



Use e-papers for save trees-InyaTrust.com

# ಅಧ್ಯಾಯ – 1
# ಅಭಿವೃದ್ಧಿ

## I ನೆನಪಿನಲ್ಲಿಡಬೇಕಾದ ಅಂಶಗಳು:

- ಒಂದು ದೇಶದ ಆರ್ಥಿಕ ಪ್ರಗತಿಯನ್ನು ನಾವು ಆರ್ಥಿಕ ಅಭಿವೃದ್ಧಿ ಎಂದು ಗುರುತಿಸುತ್ತೇವೆ.
- ಅರ್ಥವ್ಯವಸ್ಥೆಯಲ್ಲಿ ಕೃಷಿವಲಯದಿಂದ ಕೃಷಿಯೇತರ ವಲಯಗಳಲ್ಲಿ ಹೆಚ್ಚಿನ ಜನರು ಕೆಲಸ ಮಾಡಿ, ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆ ನೀಡುವುದನ್ನು 'ರಚನಾತ್ಮಕ ಬದಲಾವಣೆ' ಎನ್ನುವರು.
- 'ಅನಾಭಿವೃದ್ಧಿ' ಎಂಬ ಶಬ್ಧವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ.
- ಆರ್ಥಿಕ ಅಭಿವೃದ್ಧಿಯ ಮುಖ್ಯ ಗುರಿ ಮಾನವ ಅಭಿವೃದ್ಧಿ.
- HDI ಎಂದರೆ ಮಾನವ ಅಭಿವೃದ್ಧಿ ಸೂಚಿ.
- GEI ಎಂದರೆ ಲಿಂಗ ಸಮಾನತೆ ಸೂಚಿ.

## II ಬಹು ಆಯ್ಕೆ ಪ್ರಶ್ನೆಗಳು:

**1. ಭಾರತ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತಂದಿರುವುದು ಕೆಳಗಿನ ಯಾವುದನ್ನು ಹೆಚ್ಚಿಸಲು**

**a) ಆರ್ಥಿಕ ಅಭಿವೃದ್ಧಿ ಚಟುವಟಿಕೆ** b) ರಾಜಕೀಯ ಅಭಿವೃದ್ಧಿ ಚಟುವಟಿಕೆ

c) ಸಾಮಾಜಿಕ ಅಭಿವೃದ್ಧಿ ಚಟುವಟಿಕೆ d) ಮೇಲಿನ ಎಲ್ಲವೂ

**2. ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ಭಾರತ ಕೆಳಗಿನ ಯಾವ ಗುಂಪಿಗೆ ಸೇರಿದೆ.**

a) ಹೆಚ್ಚು ಆದಾಯದ ದೇಶಗಳು **b) ಮಧ್ಯಮ ಆದಾಯದ ದೇಶಗಳು**

c) ಕಡಿಮೆ ಆದಾಯದ ದೇಶಗಳು d) ಮೇಲಿನ ಯಾವುದೂ ಅಲ್ಲ

**3. ಮಾನವ ಅಭಿವೃದ್ಧಿ ಸೂಚಿಯನ್ನು ________ ರಲ್ಲಿ ರೂಪಿಸಲಾಯಿತು.**

a) 1987 **b) 1990** c) 2000 d) 2012

**4. ಮಾನವ ಅಭಿವೃದ್ಧಿ ಸೂಚಿಯ ರೂಪಿಸಿದ ಕೀರ್ತಿ ____________ ಅವರಿಗೆ ಸಲ್ಲುತ್ತದೆ.**

a) ಭಾರತದ ಅರ್ಥಶಾಸ್ತ್ರಜ್ಞ ಡಾ॥ ಅಮರ್ತ್ಯಸೇನ್ b) ಬ್ರಿಟಿಷ್ ಅರ್ಥಶಾಸ್ತ್ರಜ್ಞ ಡಾ॥ ವಿನಸ್ಟನ್

c) ಅಮೆರಿಕಾದ ಅರ್ಥಶಾಸ್ತ್ರಜ್ಞ ಹೆನ್ರಿ ಹರ್ಬರ್ಟ್ d)ಪಾಕಿಸ್ತಾನದ ಅರ್ಥಶಾಸ್ತ್ರಜ್ಞ ಮೆಹಬೂಬ್ ಉಲ್‌ಹಕ್



Use e-papers for save trees-InyaTrust.com

**5.** **2011 ರ ಜನಗಣತಿ ಪ್ರಕಾರ ಭಾರತದಲ್ಲೇ ಸಾಕ್ಷರತೆ ಪ್ರಮಾಣದಲ್ಲಿ ಮೊದಲ ಸ್ಥಾನದಲ್ಲಿರುವ ರಾಜ್ಯ**

a) ಕರ್ನಾಟಕ b) ರಾಜಸ್ಥಾನ **c) ಕೇರಳ** d) ಬಿಹಾರ

**III ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

**1.** ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲ ಸರಕು ಸೇವೆಗಳ ಒಟ್ಟು ಮೌಲ್ಯವನ್ನು **ರಾಷ್ಟ್ರೀಯ ಆದಾಯ** ಎನ್ನುವರು.

**2.** ದೇಶದ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯವೇ **ತಲಾದಾಯ** (ತಲಾವರಮಾನ)

**3.** ಜೀವನ ಗುಣಮಟ್ಟವನ್ನು **ಮಾನವ ಅಭಿವೃದ್ಧಿ ಸೂಚಿ** ಮೂಲಕ ಅಳೆಯಲಾಗುತ್ತದೆ.

**4.** ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಸಾಧನೆ ಮತ್ತು ಜೀವನಮಟ್ಟ ಈ ಮೂರು ಸಾಮರ್ಥ್ಯಗಳ ಸರಾಸರಿಯನ್ನು **ಮಾನವ ಅಭಿವೃದ್ಧಿ ಸೂಚಿ** ಎನ್ನುವರು.

**5.** ದೇಶದಲ್ಲಿರುವ ಒಟ್ಟು ಮಹಿಳೆಯರಲ್ಲಿ ವಿವಿಧ ಉದ್ಯೋಗಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಶೇಕಡಾವಾರು ಪ್ರಮಾಣಕ್ಕೆ **'ಮಹಿಳೆಯರ ಕೆಲಸದ ಭಾಗವಹಿಸುವಿಕೆ ದರ'** ಎನ್ನುತ್ತಾರೆ.

**6.** ದೇಶದ ಆರ್ಥಿಕ ಪ್ರಗತಿಯನ್ನು **ಆರ್ಥಿಕ ಅಭಿವೃದ್ಧಿ** ಎನ್ನುವರು.

**7.** ಆರ್ಥಿಕ ಪ್ರಗತಿಯ ಮುಖ್ಯ ಉದ್ದೇಶ **ಮಾನವ ಅಭಿವೃದ್ಧಿ.**

**8.** 'ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ ರೂಪಿಸಿದ ಮಾನದಂಡವೇ **ಮಾನವ ಅಭಿವೃದ್ಧಿ ಸೂಚಿ.**

**9.** **ಪ್ರತಿ ಸಾವಿರ ಪುರುಷರಿಗೆ** ಇರುವ ಸ್ತ್ರೀಯರ ಸರಾಸರಿ ಸಂಖ್ಯೆಯೇ ಲಿಂಗಾನುಪಾತ.

**IV ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1.** **ಆರ್ಥಿಕ ಅಭಿವೃದ್ಧಿ ಎಂದರೇನು?**

ಒಂದು ದೇಶದ ಆರ್ಥಿಕ ಪ್ರಗತಿಯನ್ನು ಆರ್ಥಿಕ ಅಭಿವೃದ್ಧಿ ಎನ್ನುವರು.

**2.** **ಆದಾಯ ಅಭಿವೃದ್ಧಿ ಸೂಚಕಗಳನ್ನು ಹೆಸರಿಸಿ.**

(೧) ರಾಷ್ಟ್ರೀಯ ಆದಾಯ ಹಾಗೂ (೨) ತಲಾದಾಯ ಇವು ಆದಾಯ ಅಭಿವೃದ್ಧಿಯ ಸೂಚಕಗಳಾಗಿವೆ.

**3.** **HDI ಅನ್ನು ವಿಸ್ತರಿಸಿ.**

HDI - Human Development Index (ಮಾನವ ಅಭಿವೃದ್ಧಿ ಸೂಚಿ)



Use e-papers for save trees-InyaTrust.com

**4. ತಲಾದಾಯವನ್ನು ಕಂಡುಹಿಡಿಯುವುದು ಹೇಗೆ?**

ದೇಶದ ರಾಷ್ಟ್ರೀಯ ಆದಾಯವನ್ನು ಅಲ್ಲಿನ ಒಟ್ಟು ಜನಸಂಖ್ಯೆಯಿಂದ ಭಾಗಿಸುವ ಮೂಲಕ ತಲಾದಾಯವನ್ನು ಕಂಡುಹಿಡಿಯಲಾಗುತ್ತದೆ. ಇದು ದೇಶದ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯವಾಗಿದೆ.

**5. ಮಹಿಳಾ ಸಬಲೀಕರಣ ಎಂದರೇನು?**

ಪುರುಷರಷ್ಟೇ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

**V ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ಜನರು ಗುಣಮಟ್ಟದ ಜೀವನ ನಡೆಸಲು ಯಾವ ಯಾವ ಸೌಲಭ್ಯಗಳು ದೊರೆಯಬೇಕಾಗಿದೆ?**

ಜನರು ಗುಣಮಟ್ಟದ ಜೀವನ ನಡೆಸಲು ಕೆಳಕಂಡ ಸೌಲಭ್ಯಗಳು ಬೇಕಾಗುತ್ತವೆ. ಅವುಗಳೆಂದರೆ, ಪೌಷ್ಟಿಕ ಆಹಾರ, ಸಾಕಷ್ಟು ಬಟ್ಟೆ, ವಸತಿ, ಗುಣಾತ್ಮಕ ಶಿಕ್ಷಣ, ಆರೋಗ್ಯದ ಸುರಕ್ಷತೆ, ಶುದ್ಧವಾದ ಕುಡಿಯುವ ನೀರು, ಶುದ್ಧವಾದ ಗಾಳಿ, ಗುಣಮಟ್ಟದ ಶೌಚಾಲಯ ವ್ಯವಸ್ಥೆ, ಉತ್ತಮ ಪರಿಸರ, ನಿಷ್ಪಕ್ಷಪಾತ ನ್ಯಾಯಿಕ ವ್ಯವಸ್ಥೆ ಮುಂತಾದವು.

**2. ಅನಭಿವೃದ್ಧಿ ದೇಶಗಳ ಲಕ್ಷಣಗಳಾವುವು?**

(i) ಅನಭಿವೃದ್ಧಿ ದೇಶದಲ್ಲಿ ಒಟ್ಟಾರೆ ಉತ್ಪಾದನೆ ಕಡಿಮೆಯಿದ್ದು, ಜನರ ಆದಾಯವು ಅತ್ಯಂತ ಕಡಿಮೆ ಇರುತ್ತದೆ.

(ii) ಬಹುತೇಕ ಜನರಿಗೆ ಕನಿಷ್ಠ ಮೂಲಭೂತ ಅವಶ್ಯಕತೆಗಳಾದ ಊಟ, ಬಟ್ಟೆ, ವಸತಿಯನ್ನು ಪಡೆಯುವುದೂ ಕಷ್ಟವಾಗಿರುತ್ತದೆ.

(iii) ಬಹುಸಂಖ್ಯಾತ ಜನರು ಅನಕ್ಷರಸ್ಥರಾಗಿದ್ದು, ಮೂಢ ನಂಬಿಕೆಗಳಲ್ಲಿ ಮುಳುವಾಗಿರುತ್ತಾರೆ.

(iv) ಆರೋಗ್ಯ ಮತ್ತು ನೈರ್ಮಲ್ಯದ ಸೌಲಭ್ಯಗಳಿಲ್ಲದೆ ಅನಾರೋಗ್ಯದಿಂದ ಬಳಲುತ್ತಿರುತ್ತಾರೆ.

(v) ಯಾವುದೇ ನಾಗರಿಕ ಸೌಲಭ್ಯಗಳಿರುವುದಿಲ್ಲ. ಸ್ವಚ್ಛಂದವಾಗಿ ಬದುಕುವ ಸ್ವಾತಂತ್ರ್ಯವೂ ಇಲ್ಲಿರುವುದಿಲ್ಲ.

**3. ರಾಷ್ಟ್ರೀಯ ಆದಾಯದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ. ಹೇಗೆ?**

ಒಂದು ದೇಶದಲ್ಲಿ ರಾಷ್ಟ್ರೀಯ ಆದಾಯ ಹೆಚ್ಚಾದಂತೆ ಜನಸಂಖ್ಯೆಯಲ್ಲಿ ಹೆಚ್ಚಳವಾದರೆ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಬೇರೆ ಬೇರೆ ಪ್ರಮಾಣದ ಜನಸಂಖ್ಯೆ ಹೊಂದಿರುವ ದೇಶಗಳ ಅಭಿವೃದ್ಧಿಯನ್ನು ರಾಷ್ಟ್ರೀಯ ಆದಾಯದಿಂದ ಅಳೆಯುವುದು ಸಮಂಜಸವೆನಿಸುವುದಿಲ್ಲ. ಈ ಕಾರಣದಿಂದ ರಾಷ್ಟ್ರೀಯ ಆದಾಯಕ್ಕೆ ಬದಲಾಗಿ ತಲಾದಾಯವನ್ನು ಅಭಿವೃದ್ದಿಯ ಸೂಚಕವಾಗಿ ಬಳಕೆಗೆ ತರಲಾಯಿತು. ಆದ್ದರಿಂದ ರಾಷ್ಟ್ರೀಯ ಆದಾಯದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ.



**Use e-papers for save trees-InyaTrust.com**

**4. ಮಾನವ ಅಭಿವೃದ್ದಿಯ ಸೂಚಕಗಳಾವುವು?**

ಮಾನವ ಅಭಿವೃದ್ದಿ ಸೂಚಿಯಲ್ಲಿ ಆರೋಗ್ಯ ಜ್ಞಾನ ಹಾಗೂ ಜೀವನಮಟ್ಟವನ್ನು ಅಳೆಯಲು ಮೂರು ಸೂಚಿಗಳನ್ನು ರೂಪಿಸಲಾಗಿದೆ. ಅವುಗಳೆಂದರೆ (1) ನಿರೀಕ್ಷಿತ ಜೀವಿತಾವಧಿ, (2) ಶೈಕ್ಷಣಿಕ ಸಾಧನೆ, (3) ತಲಾದಾಯ.

**5. ತಲಾದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು, ಏಕೆ?**

ತಲಾದಾಯವು ಆದಾಯ ಜನರ ನಡುವೆ ಹೇಗೆ ಹಂಚಿಕೆಯಾಗಿದೆ ಎಂಬುದನ್ನು ತಿಳಿಸುವುದಿಲ್ಲ. ಆದಾಯ ಎಲ್ಲಾ ಜನರಲ್ಲಿ ಸಮಾನವಾಗಿ ಹಂಚಿಕೆಯಾಗದೇ, ಕೇವಲ ತಲಾದಾಯ ಹೆಚ್ಚಳವಾದ ಮಾತ್ರಕ್ಕೆ ಅಲ್ಲಿನ ಜನರ ಜೀವನಮಟ್ಟ ಸುಧಾರಿಸಲಾರದು. ತಲಾದಾಯವು ಶಿಕ್ಷಣ, ಆರೋಗ್ಯ ಮುಂತಾದ ಸಾಮಾಜಿಕ ಅಂಶಗಳನ್ನು ಪರಿಗಣನೆ ಮಾಡುವುದಿಲ್ಲ. ಆದ್ದರಿಂದ ತಲಾದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು.

**6. ಮನುಷ್ಯನ ಆಯಸ್ಸನ್ನು ಹೆಚ್ಚಿಸಲು ಸಹಾಯಕವಾಗುವ ಅಂಶಗಳಾವುವು?**

ಪೌಷ್ಟಿಕ ಆಹಾರದ ಲಭ್ಯತೆ, ಉತ್ತಮ ಆರೋಗ್ಯ ಮತ್ತು ನೈರ್ಮಲ್ಯದ ಸೌಲಭ್ಯಗಳು ಶುದ್ಧವಾದ ಪರಿಸರ ಮುಂತಾದವು ಮನುಷ್ಯನ ಆಯಸ್ಸನ್ನು ಹೆಚ್ಚಿಸಲು ಸಹಾಯಕವಾಗುವ ಅಂಶಗಳಾಗಿವೆ.

## VI ಹೆಚ್ಚುವರಿ ಪ್ರಶ್ನೆಗಳು

**1.** ರಾಷ್ಟ್ರೀಯ ಆದಾಯ ಎಂದರೇನು?

ಸಾಮಾನ್ಯವಾಗಿ ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲ ಸರಕು ಸೇವೆಗಳ ಒಟ್ಟು ಮಾರು ಕಟ್ಟೆ ಮೌಲ್ಯವನ್ನು ರಾಷ್ಟ್ರೀಯ ಆದಾಯ ಎನ್ನುತ್ತೇವೆ.

**2. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಎಂದರೇನು?**

ಮಾಧ್ಯಮ ವರಮಾನವ ಹಾಗೂ ಕಡಿಮೆ ವರ ಮಾನವ ದೇಶಗಳನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳು ಎನ್ನುವರು.

**3. ತಲಾದಾಯ ಎಂದರೇನು?**

ದೇಶದ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯವನ್ನು ತಲಾದಾಯ ಅಥವಾ ತಲಾ ವರಮಾನ ಎನ್ನುವರು.

**4. ನಿರೀಕ್ಷಿತ ಜೀವಿತಾವಧಿ ಎಂದರೇನು?**

ದೇಶದ ಜನರು ಬದುಕುಳಿಯಬಹುದಾದ ಸರಾಸರಿ ವಯಸ್ಸನ್ನು ನಿರೀಕ್ಷಿತ ಜೀವಿತಾವದಿ ಎನ್ನುವರು.

**5. ಲಿಂಗಾನುಪಾತ ಎಂದರೇನು?**

ಪ್ರತಿ ಸಾವಿರ ಪುರುಷರಿಗೆ ಇರುವ ಸ್ತ್ರೀಯರ ಸರಾಸರಿ ಸಂಖ್ಯೆಯೇ ಲಿಂಗಾನುಪಾತ.



Use e-papers for save trees-InyaTrust.com

**6. ಲಿಂಗ ತಾರತಮ್ಯವನ್ನು ಹೋಗಲಾಡಿಸಲು ತೆಗೆದುಕೊಂಡಿರುವ ಕ್ರಮಗಳೇನು?**

ಸ್ವತಂತ್ರ ಭಾರತದಲ್ಲಿ ನಮ್ಮ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೇ ಸಮಾನ ಸ್ವಾತಂತ್ರ್ಯ, ಸಮಾನತೆ ಮತ್ತು ಅವಕಾಶಗಳನ್ನು ನೀಡಿದೆ. ಹಾಗಾಗಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರು ಭಾಗಿದಾರರಾಗಿದ್ದಾರೆ. ಇದಲ್ಲದೇ ಸರ್ಕಾರ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಹಾಗೂ ಗರ್ಭಿಣಿ ಮತ್ತು ಬಾಣಂತಿ ತಾಯಂದಿರ ಸುರಕ್ಷತೆಗೆ ಹೆಚ್ಚಿನ ಗಮನ ನೀಡಲಾಗಿದೆ.

**7. ಒಂದು ದೇಶವು ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಅವಶ್ಯಕವಾಗಿರುವ, ಜಾಗತಿಕವಾಗಿ ಗುರುತಿಸಲಾಗಿರುವ ಎರಡು ಪ್ರಧಾನ ಅಂಶಗಳಾವುವು?**

(1) ಲಿಂಗ ಸಮಾನತೆ ಹಾಗೂ (2) ಮಹಿಳಾ ಸಬಲೀಕರಣ.

**8. ಲಿಂಗ ಸಮಾನತೆ ಸೂಚಿ (GEI) ಯನ್ನು ಏಕೆ ರೂಪಿಸಲಾಗಿದೆ?**

ಆರ್ಥಿಕ ಅಭಿವೃದ್ಧಿಯಲ್ಲಿ ಲಿಂಗ ಸಮಾನತೆಯನ್ನು ಗುರುತಿಸುವುದಕ್ಕಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಲಿಂಗ ಸಮಾನತೆ ಸೂಚಿಯನ್ನು ರೂಪಿಸಲಾಗಿದೆ.

* * *



Use e-papers for save trees-InyaTrust.com

## ಅಧ್ಯಾಯ – 2

# ಅರ್ಥ ವ್ಯವಸ್ಥೆ ಮತ್ತು ಸರ್ಕಾರ

## I ಮುಖ್ಯಾಂಶಗಳು:

* 1929 ರಲ್ಲಿ ಸೋವಿಯತ್ ರಷ್ಯಾ ಮೊಟ್ಟ ಮೊದಲ ಆರ್ಥಿಕ ಯೋಜನೆಯನ್ನು ಜಾರಿಗೊಳಿಸಿತು.
* ಭಾರತದಲ್ಲಿ ಮೊಟ್ಟ ಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿದವರು ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರು.
* ಸರ್ ಎಂ. ವಿಶ್ವೇಶ್ವರಯ್ಯನವರನ್ನು "ಭಾರತದ ಆರ್ಥಿಕ ಯೋಜನೆಯ ಪಿತಾಮಹ" ಎನ್ನುವರು.
* ಭಾರತ ತನ್ನ ಮೊಟ್ಟ ಮೊದಲ ಪಂಚವಾರ್ಷಿಕ ಯೋಜನೆಯನ್ನು ಏಪ್ರಿಲ್ 1, 1951 ರಲ್ಲಿ ಜಾರಿಗೆ ತಂದಿತು.
* ಈಗಾಗಲೇ" ಪಂಚವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ
* ಭಾರತದ ಅರ್ಥವ್ಯವಸ್ಥೆಯಲ್ಲಿ ಬಡತನ ಒಂದು ಪ್ರಮುಖ ಸಮಸ್ಯೆಯಾಗಿದೆ.
* ಸದ್ಯದಲ್ಲಿ ರಾಷ್ಟ್ರೀಯ ಆದಾಯಕ್ಕೆ ಸೇವಾ ವಲಯದಿಂದ ಅತಿ ಹೆಚ್ಚು ಆದಾಯ ಬರುತ್ತಿದೆ.
* ಪಂಚವಾರ್ಷಿಕ ಯೋಜನೆಗಳ ಅತಿದೊಡ್ಡ ಸಾಧನೆ ಎಂದರೆ "ಹಸಿರು ಕ್ರಾಂತಿ".
* ಕ್ರಾಂತಿ ಎಂದರ "ಶೀಘ್ರ ಬದಲಾವಣೆ ಅಥವಾ ಪ್ರಗತಿ" ಎಂದರ್ಥ.

## II ಇಸ್ವಿಗಳು ಹಾಗೂ ಪ್ರಾಮುಖ್ಯತೆ:

1. 1929 – ಸೋವಿಯತ್ ರಷ್ಯಾ ಮೊದಲ ಆರ್ಥಿಕ ಯೋಜನೆ ಜಾರಿ ಮಾಡಿದ್ದು.
2. 1934 – ವಿಶ್ವೇಶ್ವರಯ್ಯನವರ "ಭಾರತಕ್ಕೆ ಯೋಜಿತ ವ್ಯವಸ್ಥೆ" ಪುಸ್ತಕ ಪ್ರಕಟಣೆ.
3. 1950 – ಭಾರತ ಸರ್ಕಾರದಿಂದ "ರಾಷ್ಟ್ರೀಯ ಯೋಜನಾ ಆಯೋಗ"ದ ರಚನೆ.
4. 1952 – "ರಾಷ್ಟ್ರೀಯ ಅಭಿವೃದ್ಧಿ ಮಂಡಳಿ"ಯ ಸ್ಥಾಪನೆ.
5. 1960 – "ಡಾ.ನಾರ್ಮನ್ ಬೋರ್ಲಾಗ್" ಎಂಬ ಜರ್ಮನ್ ಕೃಷಿ ವಿಜ್ಞಾನಿ ಹಲವಾರು ಪ್ರಯೋಗಗಳನ್ನು ನಡೆಸಿದ.

## III ಕೆಳಗಿನ ಸಂಕ್ಷಿಪ್ತಾಕ್ಷರಗಳನ್ನು ಗುರುತಿಸಿ.

1. N.P.C. = ರಾಷ್ಟ್ರೀಯ ಯೋಜನಾ ಆಯೋಗ
2. N.D.C. = ರಾಷ್ಟ್ರೀಯ ಅಭಿವೃದ್ಧಿ ಮಂಡಳಿ
3. H.Y.V.S. = ಹೆಚ್ಚು ಇಳುವರಿ ಬೀಜಗಳು
4. M.N.C.S. = ಬಹುರಾಷ್ಟ್ರೀಯ ಕಂಪನಿಗಳು
5. F.D.I. = ವಿದೇಶೀ ನೇರ ಹೂಡಿಕೆ



Use e-papers for save trees-InyaTrust.com

**IV ಹೊಂದಿಸಿ ಬರೆಯಿರಿ.**

| A | | B | ಉತ್ತರ |
|---|---|---|---|
| 1. ಹಸಿರು ಕ್ರಾಂತಿ | – | a) ಮೊಟ್ಟೆಗಳ ಉತ್ಪಾದನೆ | e) ಆಹಾರ ಧಾನ್ಯಗಳ ಉತ್ಪಾದನೆ |
| 2. ನೀಲಿ ಕ್ರಾಂತಿ | – | b) ಹಾಲು ಉತ್ಪಾದನೆ | d) ಮೀನುಗಳ ಉತ್ಪಾದನೆ |
| 3. ಹಳದಿ ಕ್ರಾಂತಿ | – | c) ಎಣ್ಣೆ ಬೀಜಗಳ ಉತ್ಪಾದನೆ | c) ಎಣ್ಣೆ ಬೀಜಗಳ ಉತ್ಪಾದನೆ |
| 4. ಬಿಳಿ ಕ್ರಾಂತಿ | – | d) ಮೀನುಗಳ ಉತ್ಪಾದನೆ | b) ಹಾಲು ಉತ್ಪಾದನೆ |
| 5. ಬೆಳ್ಳಿ ಕ್ರಾಂತಿ | – | e) ಆಹಾರ ಧಾನ್ಯಗಳ ಉತ್ಪಾದನೆ | a) ಮೊಟ್ಟೆಗಳ ಉತ್ಪಾದನೆ |

**V ಬಹು ಆಯ್ಕೆ ಪ್ರಶ್ನೆಗಳು**

**1. ಯೋಜನಾ ಆಯೋಗದ ಅಧ್ಯಕ್ಷರು**

**a) ಪ್ರಧಾನ ಮಂತ್ರಿ** b) ರಾಷ್ಟ್ರಪತಿ c) ಮುಖ್ಯ ನ್ಯಾಯಾಧೀಶರು d) ಹಣಕಾಸು ಮಂತ್ರಿಗಳು

**2. 'ರಾಷ್ಟ್ರೀಯ ಅಭಿವೃದ್ಧಿ ಮಂಡಳಿ'ಯ ಸದಸ್ಯರು**

a) ಎಲ್ಲಾ ರಾಜ್ಯಗಳ ರಾಜ್ಯಪಾಲರು. b) ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು

c) ವಿಧಾನಸಭಾ ಸದಸ್ಯರು d) ರಾಷ್ಟ್ರಪತಿ ಹಾಗೂ ಪ್ರಧಾನ ಮಂತ್ರಿ

**3. ಭಾರತದ ಮೊದಲ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದದ್ದು**

a) ಏಪ್ರಿಲ್ 1, 1951 b) ಏಪ್ರಿಲ್ 10, 1956 c) ಮೇ 3, 1960 d) ಜೂನ್ 2, 1966

**4. ಹಸಿರು ಕ್ರಾಂತಿಯ ಪಿತಾಮಹ**

a) ನೆಹರು b) ಡಾ॥ ಅಮರ್ತ್ಯಸೇನ್ c) ಡಾ॥ ಎಂ.ಎಸ್.ಸ್ವಾಮಿನಾಥನ್ d)ವರ್ಗೀಸ್ ಕಲರಿಯನ್

**5. ಬಂಗಾರ ಕ್ರಾಂತಿ ಎಂದರೆ**

a) ಎಣ್ಣೆ ಬೀಜಗಳ ಉತ್ಪಾದನೆ b) ಹಾಲಿನ ಉತ್ಪಾದನೆ

c) ಮಾಂಸದ ಉತ್ಪಾದನೆ d) ಹಣ್ಣು / ಹೂಗಳ ಉತ್ಪಾದನೆ

**VI ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿ:**

1. 20ನೇ ಶತಮಾನದಲ್ಲಿ ಸರ್ಕಾರಗಳು ಆರ್ಥಿಕಾಭಿವೃದ್ಧಿಯ ತಂತ್ರವಾಗಿ **ಆರ್ಥಿಕ ಯೋಜನೆಯನ್ನು** ಜಾರಿಗೆ ತಂದವು.
2. ಭಾರತದಲ್ಲಿ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವ ಸಂಸ್ಥೆ **ರಾಷ್ಟ್ರೀಯ ಯೋಜನಾ ಆಯೋಗ**
3. 11ನೇ ಪಂಚವಾರ್ಷಿಕ ಯೋಜನೆಯಲ್ಲಿ **'ಎಲ್ಲರನ್ನು ಒಳಗೊಂಡ ಬೆಳವಣಿಗೆಗೆ'** ಪ್ರಾಮುಖ್ಯತೆ ನೀಡಲಾಯಿತು.
4. ಹಸಿರು ಕ್ರಾಂತಿಯ ಪಿತಾಮಹ **ಡಾ॥ ಎಂ.ಎಸ್. ಸ್ವಾಮಿನಾಥನ್**



Use e-papers for save trees-InyaTrust.com

5. ಪರಿಸರ ಸ್ನೇಹಿ ಹಾಗೂ ಸುಸ್ಥಿರ ಕೃಷಿಗಾಗಿ ಸರ್ಕಾರವು ರೈತರಿಗೆ **ಸಾವಯವ ಕೃಷಿ** ವಿಧಾನವನ್ನು ಬಳಸುವಂತೆ ಪ್ರೋತ್ಸಾಹಿಸುತ್ತಿದೆ.
6. ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳ ಉತ್ಪಾದನೆಯಲ್ಲಿ ಆದಂತಹ ಅಗಾಧ ಹೆಚ್ಚಳವನ್ನು **ಕಾಮನಬಿಲ್ಲು ಕ್ರಾಂತಿ** ಎಂದು ಕರೆಯಲಾಗುತ್ತದೆ.
7. ಮಾಂಸದ ಉತ್ಪಾದನೆಗೆ **ಕೆಂಪು ಕ್ರಾಂತಿ** ಎನ್ನುವರು.
8. ಸಾವಯವ ಕೃಷಿ, ಜೈವಿಕ ಗೊಬ್ಬರ ಮುಂತಾದ ಪರಿಸರ ಸ್ನೇಹಿ ತಂತ್ರಗಳನ್ನು ಬಳಸುವ ಮೂಲಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನಕ್ಕೆ **'ಎರಡನೇ ಹಸಿರು ಕ್ರಾಂತಿ ಅಥವಾ 'ಸದಾ ಹಸಿರು ಕ್ರಾಂತಿ'** ಎನ್ನಲಾಗುತ್ತದೆ.
9. ಸದ್ಯದಲ್ಲಿ ರಾಷ್ಟ್ರೀಯ ಆದಾಯಕ್ಕೆ **ಸೇವಾವಲಯದಿಂದ** ಅತಿ ಹೆಚ್ಚು ಆದಾಯ ಬರುತ್ತದೆ.

## VII ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

**1. 'ಆರ್ಥಿಕ ಯೋಜನೆ'ಯ ಅರ್ಥವನ್ನು ವಿವರಿಸಿ.**

ಸರ್ಕಾರವು ಕೆಲವು ನಿರ್ದಿಷ್ಟ ಧ್ಯೇಯೋದ್ದೇಶಗಳೊಂದಿಗೆ, ದೇಶದಲ್ಲಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ಜನರ ಸುಖವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲು, ಪ್ರಜ್ಞಾಪೂರ್ವಕವಾಗಿ ಮತ್ತು **ವಿವೇಯುತವಾಗಿ** ಜಾರಿಗೊಳಿಸುವ ಪ್ರಕ್ರಿಯೆಯನ್ನು ಆರ್ಥಿಕ ಯೋಜನೆ ಎನ್ನುವರು. ಆರ್ಥಿಕ ಯೋಜನೆಯು ದೇಶದ ಸಮಗ್ರ ಅಭಿವೃದ್ಧಿಯ ಒಂದು ತಂತ್ರವಾಗಿ ಬಳಕೆಯಾಗುತ್ತಿದೆ.

**2. ಭಾರತದ 'ಆರ್ಥಿಕ ಯೋಜನೆಯ ಪಿತಾಮಹ' ಯಾರು?**

ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ

**3. ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವ ಸಂಸ್ಥೆ ಯಾವುದು?**

'ರಾಷ್ಟ್ರೀಯ ಅಭಿವೃದ್ಧಿ ಮಂಡಳಿ' ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವ ಸಂಸ್ಥೆಯಾಗಿದೆ.

**4. ಹಸಿರು ಕ್ರಾಂತಿ ಎಂದರೇನು?**

1967–70 ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು 'ಹಸಿರು ಕ್ರಾಂತಿ' ಎನ್ನುವರು.

**5. ಸುಗ್ಗಿ ನಂತರದ ತಂತ್ರಜ್ಞಾನ ಎಂದರೇನು?**

ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಬಳಕೆಗೆ ತರಲಾದ ಸುಧಾರಿತ ತಂತ್ರಜ್ಞಾನವನ್ನು 'ಸುಗ್ಗಿ ನಂತರದ ತಂತ್ರಜ್ಞಾನ' ಎನ್ನುವರು.

**6. ಜಾಗತೀಕರಣ ಎಂದರೇನು?**

ಭಾರತದ ಅರ್ಥವ್ಯವಸ್ಥೆಯನ್ನು ವಿಶ್ವದ ಅರ್ಥವ್ಯವಸ್ಥೆಯೊಂದಿಗೆ ಒಗ್ಗೂಡಿಸುವ ಪ್ರಕ್ರಿಯೆಯನ್ನು ಜಾಗತೀಕರಣ ಎನ್ನುತ್ತೇವೆ. ಅಂದರೆ ಆಮದು ಮತ್ತು ರಫ್ತು ವ್ಯಾಪಾರದಲ್ಲಿ ಜಾರಿಯಲ್ಲಿದ್ದ ಸರ್ಕಾರದ



Use e-papers for save trees-InyaTrust.com

ನಿಯಂತ್ರಣ ಮತ್ತು ನಿರ್ಬಂಧಗಳನ್ನು ತೆಗೆದುಹಾಕಿ, ರಾಷ್ಟ್ರಗಳ ನಡುವೆ ಪರಸ್ಪರ ಸರಕು ಸೇವೆಗಳು, ಬಂಡವಾಳ ಮತ್ತು ತಂತ್ರಜ್ಞಾನದ ಚಲನವಲನಕ್ಕೆ ಮುಕ್ತ ಅವಕಾಶ ಮಾಡಿಕೊಡುವುದು ಎಂದರ್ಥ.

**VIII ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

**1. ಕಲ್ಯಾಣ ರಾಜ್ಯಗಳಲ್ಲಿ ಸರ್ಕಾರಗಳ ಕಾರ್ಯಕ್ಷೇತ್ರ ಹೇಗೆ ವಿಸ್ತರಣೆಗೊಂಡಿದೆ?**

20ನೆಯ ಶತಮಾನದಲ್ಲಿ ಕಲ್ಯಾಣ ರಾಜ್ಯಗಳ ಉದಯದೊಂದಿಗೆ ಸರ್ಕಾರಗಳ ಕಾರ್ಯಕ್ಷೇತ್ರ ವಿಸ್ತರಣೆಯಾಯಿತು. ಸರ್ಕಾರಗಳು ಎಲ್ಲ ಪ್ರಜೆಗಳಿಗೆ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ ಸಂಪರ್ಕ ಮುಂತಾ ಹಲವು ಸೌಕರ್ಯಗಳನ್ನು ಒದಗಿಸಿಕೊಡಲು ಮುಂದಾದವು. ಹಾಗಾಗಿ ಸರ್ಕಾರವು ಜನರ ಆರ್ಥಿಕ ಚಟುವಟಿಕೆಗಳಲ್ಲಿ ಮಧ್ಯ ಪ್ರವೇಶಿಸಲು ಮುಂದಾಯಿತು. ಆರ್ಥಿಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸರ್ಕಾರದ ಪಾತ್ರ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಿತು.

**2. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ಬರೆಯಿರಿ.**

(1) ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.
(2) ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
(3) ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
(4) ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.
(5) ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು, ಮುಂತಾದವು.

**3. ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ಪಟ್ಟಿ ಮಾಡಿರಿ.**

❖ ವರ್ಷಗಳು ಕಳೆದಂತೆ ರಾಷ್ಟ್ರೀಯ ಆದಾಯದ ಬೆಳವಣಿಗೆಯ ವೇಗ ಕ್ರಮೇಣ ಹೆಚ್ಚಿದೆ.
❖ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲಾಗಿದೆ.
❖ ಕೈಗಾರಿಕೆ ಹಾಗೂ ಸೇವಾವಲಯಗಳ ವಿಸ್ತರಣೆಯಿಂದ ಉದ್ಯೋಗಾವಕಾಶಗಳು ಹೆಚ್ಚಿವೆ.
❖ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಕಂಡು ಬಂದಿದೆ.
❖ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿದೆ.
❖ ಜನರ ನಿರೀಕ್ಷಿತ ಜೀವಿತಾವಧಿ ಹಾಗೂ ಸಾಕ್ಷರತಾ ಪ್ರಮಾಣ ಹೆಚ್ಚುತ್ತಿದೆ.
❖ ಶಿಶು ಮರಣ ಮತ್ತು ತಾಯಂದಿರ ಮರಣ ದರಗಳು ಕಡಿಮೆಯಾಗುತ್ತಿವೆ.
❖ ಜನನಮತ್ತು ಮರಣದರಗಳೆರಡೂ ಕಡಿಮೆಯಾಗುತ್ತಿದ್ದು, ಜನಸಂಖ್ಯಾ ಬೆಳವಣಿಗೆ ದರ ಇಳಿಕೆಯಾಗುತ್ತಿದೆ.



Use e-papers for save trees-InyaTrust.com

**4. ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳಾವುವು?**

- ❖ ಹಸಿರು ಕ್ರಾಂತಿಯು 'ಹೆಚ್ಚು ಇಳುವರಿ ಬೀಜ'ಗಳ ಬಳಕೆಯ ಪರಿಣಾಮವಾಗಿದೆ.
- ❖ 1960 ರ ಪ್ರಾರಂಭದಲ್ಲಿ ಡಾ॥ ನಾರ್ಮನ್ ಬೋರ್ಲಾಗ್ ಎಂಬ ಜರ್ಮನ್ ಕೃಷಿ ವಿಜ್ಞಾನಿ ಮೆಕ್ಸಿಕೋ ದೇಶದಲ್ಲಿ ನಡೆಸಿದ ಪ್ರಯೋಗದ ಫಲವಾಗಿ ಗೋಧಿಯಲ್ಲಿ ಹೆಚ್ಚು ಇಳುವರಿ ಬೀಜಗಳ ಸಂಶೋಧನೆಯಾಯಿತು.
- ❖ ಈ ಬೀಜಗಳನ್ನು ಬಳಕೆಗೆ ತಂದ ಮೆಕ್ಸಿಕೋ ಮತ್ತು ತೈವಾನ್ ದೇಶಗಳು ಗೋಧಿಯ ಉತ್ಪಾದನೆಯಲ್ಲಿ ಅತಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದವು.

**5. ಸರ್ಕಾರವು ಉದಾರೀಕರಣದ ಪ್ರಕ್ರಿಯೆಯ ಅಡಿಯಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ?**

ಸರ್ಕಾರವು ಜನರ ಆರ್ಥಿಕ ಚಟುವಟಿಕೆಗಳ ಮೇಲಿನ ತನ್ನ ಎಲ್ಲ ಅನಗತ್ಯ ನಿಯಂತ್ರಣ ಮತ್ತು ನಿರ್ಬಂಧಗಳನ್ನು ಸಡಿಲಗೊಳಿಸಿ ಮುಕ್ತ ಅರ್ಥವ್ಯವಸ್ಥೆಗೆ ಅವಕಾಶ ಮಾಡಿಕೊಡಲು ಮುಂದಾಗಿದೆ. ಈ ಪ್ರಕ್ರಿಯೆಯನ್ನು ಉದಾರೀಕರಣ ಎನ್ನುತ್ತೇವೆ.

- ❖ ಜನರ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡುವುದನ್ನು ಕಡಿಮೆಗೊಳಿಸಿದೆ.
- ❖ ಸರಕು ಸೇವೆಗಳ ಉತ್ಪಾದನೆಯಲ್ಲಿ ಸ್ಪರ್ಧೆಗೆ ಅವಕಾಶ ಮಾಡಿಕೊಡಲಾಗಿದೆ. ಇದರಿಂದ ಸಂಪನ್ಮೂಲಗಳ ಸಮರ್ಪಕ ಬಳಕೆಯಾಗುತ್ತದೆ.
- ❖ ಸರಕು–ಸೇವೆಗಳ ಮಾರಾಟದಲ್ಲಿ ಸ್ಪರ್ಧೆಗೆ ಅವಕಾಶ ಮಾಡಿಕೊಡಲಾಗಿದೆ. ಇದರಿಂದ ಸರಕು–ಸೇವೆಗಳ ಬೆಲೆಗಳು ಕಡಿಮೆಯಾಗಿ, ಅವು ಎಲ್ಲ ಜನರಲ್ಲಿ ಆದಷ್ಟೂ ಸಮಾನವಾಗಿ ಹಂಚಿಕೆಯಾಗಲು ಸಾಧ್ಯವಾಗುತ್ತದೆ.

**6. 'ಕಲ್ಯಾಣ ರಾಜ್ಯ' ಎಂದರೇನು?**

ಯಾವ ರಾಜ್ಯ ತನ್ನ ನೀತಿ ಹಾಗೂ ಕಾರ್ಯಕ್ರಮಗಳ ಮೂಲಕ ಜನರಿಗೆ ಸಾಮಾಜಿಕ ಹಾಗೂ ಆರ್ಥಿಕ ಸೇವೆಯನ್ನು ಒದಗಿಸುತ್ತದೆಯೂ ಅದೇ 'ಕಲ್ಯಾಣ ರಾಜ್ಯ'.

**7. ಯೋಜನಾ ಆಯೋಗದ ಅಧ್ಯಕ್ಷರು ಯಾರಾಗಿರುತ್ತಾರೆ?**

ಭಾರತದ ಪ್ರಧಾನ ಮಂತ್ರಿಗಳು ಯೋಜನಾ ಆಯೋಗದ ಅಧ್ಯಕ್ಷರಾಗಿರುತ್ತಾರೆ.

**8. ಯಾವ ಮಾದರಿಯನ್ನು ಆಧರಿಸಿ ನಮ್ಮ ಪಂಚವಾರ್ಷಿಕ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ?**

ಸೋವಿಯತ್ ರಷ್ಯಾ ಮಾದರಿಯನ್ನು ಆಧರಿಸಿ ನಮ್ಮ ಪಂಚವಾರ್ಷಿಕ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ.

**9. "ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ" ಎಂಬ ಪುಸ್ತಕದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಏನನ್ನು ಒತ್ತಿ ಹೇಳಿದ್ದಾರೆ?**

ಸರ್ ಎಂ. ವಿಶ್ವೇಶ್ವರಯ್ಯನರವರು "ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ" ಎಂಬ ಪುಸ್ತಕದಲ್ಲಿ ಭಾರತದ ಆರ್ಥಿಕ ಅಭಿವೃದ್ಧಿಗೆ ಯೋಜನೆಯ ಅಗತ್ಯವನ್ನು ಒತ್ತಿ ಹೇಳಿದ್ದಾರೆ.



**Use e-papers for save trees-InyaTrust.com**

**10.** **ಆರ್ಥಿಕ ಯೋಜನೆಗಳನ್ನು ಭಾರತದಲ್ಲಿ ಪಂಚವಾರ್ಷಿಕ ಯೋಜನೆ ಎಂದು ಏಕೆ ಕರೆಯುವರು?**
ಭಾರತದಲ್ಲಿ ಆರ್ಥಿಕ ಯೋಜನೆಗಳ ಅವಧಿ 5 ವರ್ಷಗಳಾಗಿರುವುದರಿಂದ ಇವುಗಳನ್ನು ಪಂಚವಾರ್ಷಿಕ ಯೋಜನೆಗಳೆನ್ನುವರು.

**11.** **ಸುಗ್ಗಿ ಪೂರ್ವ ತಂತ್ರಜ್ಞಾನ ಎಂದರೇನು?**
ಕೃಷಿ ಉತ್ಪಾದನೆಯಲ್ಲಿ ಬಳಸಲಾಗುವ ಸುಧಾರಿತ ತಂತ್ರಜ್ಞಾನವನ್ನು ಸುಗ್ಗಿ ಪೂರ್ವ ತಂತ್ರಜ್ಞಾನ ಎನ್ನುವರು.

* * *



Use e-papers for save trees-InyaTrust.com

## ಅಧ್ಯಾಯ – 3

## ಗ್ರಾಮೀಣಾಭಿವೃದ್ಧಿ

### I ಮುಖ್ಯಾಂಶಗಳು:

- ಭಾರತ ಹಳ್ಳಿಗಳ ದೇಶ
- ಮಹಾತ್ಮ ಗಾಂಧೀಜಿಯವರ ಪ್ರಕಾರ "ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ".
- ವಿಕೇಂದ್ರೀಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿ ಪಡಿಸಬಹುದು. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.
- ವಿಕೇಂದ್ರೀಕರಣದ ಜಾರಿಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ–

  (i) ಗ್ರಾಮ ಪಂಚಾಯ್ತಿ (ii) ತಾಲ್ಲೂಕು ಪಂಚಾಯ್ತಿ ಹಾಗೂ (iii) ಜಿಲ್ಲಾ ಪಂಚಾಯ್ತಿ

### II ಬಹು ಆಯ್ಕೆ ಪ್ರಶ್ನೆಗಳು

**1. ಭಾರತ ________ ಗಳ ದೇಶ**

a) ನಗರ  b) ಪಟ್ಟಣ  **c) <u>ಹಳ್ಳಿ</u>**  d) ಎಲ್ಲವೂ

**2. "ಗ್ರಾಮೀಣ ಪ್ರದೇಶಗಳಿಗೆ ನಗರದ ಸೌಲಭ್ಯಗಳನ್ನು ಒದಗಿಸುವುದು" ಎಂಬ ಅತ್ಯುತ್ತಮ ಮಾದರಿಯನ್ನು ರೂಪಿಸಿದವರು**

a) ಡಾ॥ ಮನಮೋಹನ ಸಿಂಗ್  b) ಪ್ರಣಬ್ ಮುಖರ್ಜಿ

c) ಪಿ.ಚಿದಂಬರಂ  **d) <u>ಡಾ॥ A.P.J. ಅಬ್ದುಲ್ ಕಲಾಂ</u>**

**3. "ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ" ಎಂದು ಹೇಳಿದವರು**

a) ನೆಲ್ಸನ್ ಮಂಡೇಲಾ  **<u>b) ಮಹಾತ್ಮ ಗಾಂಧೀಜಿ</u>**

c) ಡಾ॥ A.P.J. ಅಬ್ದುಲ್ ಕಲಾಂ  d) ಮಾವೋತ್ಸೆ ತುಂಗ್

**4. ಭಾರತದಲ್ಲಿರುವ ಪಂಚಾಯತ್ ರಾಜ್ಯ ವ್ಯವಸ್ಥೆಯು ______ ಹಂತಗಳನ್ನು ಹೊಂದಿದೆ.**

a) ಒಂದು  b) ಎರಡು  **<u>c) ಮೂರು</u>**  d) ನಾಲ್ಕು



Use e-papers for save trees-InyaTrust.com

## III ವಿಸ್ತರಿಸಿ:

| | | | |
|---|---|---|---|
| 1. | PURA | : | ಗ್ರಾಮೀಣ ಪ್ರದೇಶಗಳಿಗೆ ನಗರದ ಸೌಲಭ್ಯಗಳನ್ನು ಒದಗಿಸುವುದು |
| 2. | MGNREGP | : | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ |
| 3. | SRSEP | : | ಸ್ವರ್ಣಜಯಂತಿ ಗ್ರಾಮ ಸ್ವ–ಉದ್ಯೋಗ ಯೋಜನೆ (SGSY) |
| 4. | IAY | : | ಇಂದಿರಾ ಆವಾಸ್ ಯೋಜನಾ |
| 5. | AVHP | : | ಅಂಬೇಡ್ಕರ್ – ವಾಲ್ಮೀಕಿ ವಸತಿ ಯೋಜನೆ |
| 6. | AY | : | ಆಶ್ರಯ ಯೋಜನಾ |
| 7. | SGY | : | ಸುವರ್ಣ ಗ್ರಾಮೋದಯ ಯೋಜನೆ |

## IV ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿ.

1. "ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ" ಎಂದು ಹೇಳಿದವರು **ಮಹಾತ್ಮ ಗಾಂಧಿ**
2. ಸಂವಿಧಾನದ 73ನೆಯ ತಿದ್ದುಪಡಿಯ ಪ್ರಕಾರ ಭಾರತದಲ್ಲಿ **ಮೂರು** ಹಂತದ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ.
3. ಪಂಚಾಯತ್ ಸಂಸ್ಥೆಗಳು **ಪ್ರಜಾಪ್ರಭುತ್ವದ** ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.
4. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು **ಮಹಿಳಾ ಸ್ವ ಸಹಾಯ ಸಂಘ**ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.
5. ಪಂಚಾಯತ್ ರಾಜ್ ಸಂಸ್ಥೆಗಳನ್ನು **ಗ್ರಾಮೀಣ ಸ್ಥಳೀಯ ಸರ್ಕಾರಗಳು** ಎಂದೂ ಕರೆಯುವರು.
6. 2011 ರ ಜನಗಣತಿಯ ಪ್ರಕಾರ **ಶೇ.68.84** ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ.
7. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ **ಗ್ರಾಮೀಣಾಭಿವೃದ್ಧಿಯು** ಹೆಚ್ಚಿನ ಮಹತ್ವ ಪಡೆದಿದೆ.

## V ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

**1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.**

ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿಯ ಜೊತೆಗೆ ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ ಸಂಪರ್ಕ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಮೂಲ ಸೌಲಭ್ಯಗಳ ಅಭಿವೃದ್ಧಿ, ಉದ್ಯೋಗ ನಿರ್ಮಾಣ, ಸಾಮಾಜಿಕ ಕಲ್ಯಾಣ ಮುಂತಾದ ಹಲವಾರು ಚಟುವಟಿಕೆಗಳನ್ನು ಒಳಗೊಂಡಿರುವ ವಿಸ್ತೃತ ಅಭಿವೃದ್ಧಿ ಕಾರ್ಯಕ್ರಮವೇ ಗ್ರಾಮೀಣಾಭಿವೃದ್ಧಿ.

**2. ಅಧಿಕಾರ ವಿಕೇಂದ್ರೀಕರಣ ಎಂದರೇನು?**

ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರೀಕರಣ ಎನ್ನುವರು.



Use e-papers for save trees-InyaTrust.com

**3. ಪಂಚಾಯತ್ ರಾಜ್ ವ್ಯವಸ್ಥೆಯ ಮೂರು ಹಂತಗಳನ್ನು ಹೆಸರಿಸಿ.**

ಗ್ರಾಮ ಪಂಚಾಯ್ತಿಗಳು, ತಾಲ್ಲೂಕು ಪಂಚಾಯ್ತಿಗಳು ಹಾಗೂ ಜಿಲ್ಲಾ ಪಂಚಾಯ್ತಿಗಳು.

**4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.**

(i) ಇಂದಿರಾ ಆವಾಸ್ ಯೋಜನೆ

(ii) ಅಂಬೇಡ್ಕರ್ – ವಾಲ್ಮೀಕಿ ವಸತಿ ಯೋಜನೆ

(iii) ಆಶ್ರಯ ಯೋಜನೆ

**5. ಮಹಿಳೆಯರ ಯಾವ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ**

ಮಹಿಳೆಯರು ಮನೆಯಲ್ಲಿ ಮಾಡುವ ಕೂಲಿ ರಹಿತ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ.

**VI ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

**1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?**

ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ. ಇವರಲ್ಲಿ ಮೂರನೇ ಒಂದು ಭಾಗದ ಜನರು ಕಡು ಬಡತನದಲ್ಲಿ ಬದುಕುತ್ತಿದ್ದಾರೆ. ಆಧುನಿಕತೆಯ ಹೊಡೆತಕ್ಕೆ ಸಿಲುಕಿ ಗ್ರಾಮೀಣ ಗುಡಿಕೈಗಾರಿಕೆಗಳು ನಶಿಸಿಹೋಗಿವೆ. ಸುಮಾರು ಶೇ.60 ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದರೂ, ರಾಷ್ಟ್ರೀಯ ಆದಾಯಕ್ಕೆ ಈ ವಲಯದ ಕೊಡುಗೆ ಅತ್ಯಂತ ಕಡಿಮೆಯಿದ್ದು, ಅದು ನಿರಂತರವಾಗಿ ಕಡಿಮೆಯಾಗುತ್ತಿದೆ.

**2. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.**

ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಗ್ರಾಮೀಣಾಭಿವೃದ್ಧಿಯು ಹೆಚ್ಚಿನ ಮಹತ್ವ ಪಡೆದಿದೆ. ಗ್ರಾಮೀಣ ಪ್ರದೇಶದಲ್ಲಿ ಅತಿ ಹೆಚ್ಚಿನ ಜನರು ವಾಸಿಸುತ್ತಿದ್ದು, ಅವರು ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ, ಮೂಲ ಸೌಕರ್ಯಗಳ ಕೊರತೆ ಮುಂತಾದ ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಗ್ರಾಮೀಣ ಭಾರತವನ್ನು ಸಮೃದ್ಧ ಹಾಗೂ ಶ್ರೀಮಂತಗೊಳಿಸಬೇಕಾದ ಅವಶ್ಯಕತೆ ಇದೆ.

**3. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣ ಹಿನ್ನೆಲೆಯಲ್ಲಿ ತಿಳಿಸಿ.**

ವಿಕೇಂದ್ರೀಕರಣದ ಮೂಲಕ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು. ಇದನ್ನೆಲ್ಲ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು. ವಿಕೇಂದ್ರೀಕರಣವು ಎಲ್ಲ ರೀತಿಯ ಶೋಷಣೆಗಳನ್ನು ತಡೆಯುತ್ತದೆ. ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ ಹಾಗೂ ಸಹಾನುಭೂತಿ ಮತ್ತು ಸಹಕಾರದಿಂದ ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.



Use e-papers for save trees-InyaTrust.com

**4. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ಬರೆಯಿರಿ.**

ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು. ಇವು ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳು, ಮಾರುಕಟ್ಟೆ ಮುಂತಾದ ಸಮುದಾಯಕ್ಕೆ ಉಪಯೋಗವಾಗುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವಿದೆ. ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮುಂತಾದವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ. ಕೆರೆ ಕಟ್ಟೆಗಳ ನಿರ್ಮಾಣ, ಅವುಗಳ ಹೂಳು ತೆಗೆಯುವುದು, ಕಿರು ನೀರಾವರಿ ಯೋಜನೆಗಳ ನಿರ್ವಹಣೆ ಮುಂತಾದ ಕಾರ್ಯಗಳ ಮೂಲಕ ಕೃಷಿ ನೀರಾವರಿಯನ್ನು ವಿಸ್ತರಿಸಬಹುದಾಗಿದೆ. ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು. ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಬಹುದು. ಪಂಚಾಯ್ತಿಗಳ ಮೂಲಕ ಇವುಗಳ ಅಭಿವೃದ್ಧಿಗಾಗಿ ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು. ಉದ್ಯೋಗ ನಿರ್ಮಾಣ ಹಾಗೂ ಬಡತನ ನಿರ್ಮೂಲನ ಯೋಜನೆಗಳನ್ನು ಪಂಚಾಯತ್ ಸಂಸ್ಥೆಗಳ ಮೂಲಕ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ. ಗ್ರಾಮಗಳಲ್ಲಿನ ಪಡಿತರ ವ್ಯವಸ್ಥೆಯನ್ನು ಬಲಪಡಿಸಿ, ಅರ್ಹ ಬಡಜನರಿಗೆ ಅಗತ್ಯ ಆಹಾರ ಧಾನ್ಯಗಳು ಸಮರ್ಪಕವಾಗಿ ದೊರೆಯುವಂತೆ ಮಾಡಬಹುದು. ಗ್ರಾಮಗಳಲ್ಲಿನ ವಯೋವೃದ್ಧರು, ಅಂಗವಿಕಲರು, ವಿಧವೆಯರು, ಮಾನಸಿಕ ಅಸ್ವಸ್ಥರು ಮುಂತಾದವರನ್ನು ಗುರುತಿಸಿ, ಅವರಿಗೆ ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ದೊರಕಿಸಿಕೊಡುವ ಮೂಲಕ ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸಬಹುದಾಗಿದೆ. ಮಹಿಳಾ ಸ್ವ ಸಹಾಯ ಸಂಘಗಳನ್ನು ಸಂಘಟಿಸಿ, ಉತ್ಪಾದಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬಹುದು.

**5. "ಗ್ರಾಮ ಸ್ವರಾಜ್ಯ" ಎಂದರೇನು?**

ಅಧಿಕಾರ ವಿಕೇಂದ್ರೀಕರಣದಿಂದ ಸ್ವಾವಲಂಬಿ ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು, ಇದನ್ನೇ ಗ್ರಾಮ ಸ್ವರಾಜ್ಯ ಎನ್ನುವರು.



Use e-papers for save trees-InyaTrust.com

# ಅಧ್ಯಾಯ–4
# ಸಾರ್ವಜನಿಕ ಹಣಕಾಸು ಮತ್ತು ಆಯ್ಯ–ವ್ಯಯ

**I ನೆನಪಿನಲ್ಲಿಡಬೇಕಾದ ಅಂಶಗಳು:**

- ಆದಾಯಕ್ಕಿಂತ ವೆಚ್ಚ ಅಧಿಕವಾದಾಗ ಸಾಲ ಮಾಡಬೇಕಾಗುತ್ತದೆ.
- ವೈಯಕ್ತಿಕ ಹಣಕಾಸು ವ್ಯಕ್ತಿಯ ಅಥವಾ ಕುಟುಂಬದ ಆದಾಯ ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿಕೊಡುತ್ತದೆ.
- ಸರ್ಕಾರದಿಂದ ನಿರ್ವಹಿಸಲ್ಪಡುವ ಹಣಕಾಸನ್ನು ಸಾರ್ವಜನಿಕ ಹಣಕಾಸು ಎನ್ನುವರು.
- ಭಾರತದಲ್ಲಿ ಹಣಕಾಸು ವರ್ಷವು ಆ ವರ್ಷದ ಏಪ್ರಿಲ್ 1ರಂದು ಪ್ರಾರಂಭವಾಗಿ ಅದರ ಮುಂದಿನ ವರ್ಷದ ಮಾರ್ಚ್ 31 ರಂದು ಮುಕ್ತಾಯ
- ಭಾರತದಲ್ಲಿ ಕೇಂದ್ರ ಸರ್ಕಾರದ ಆಯವ್ಯಯವನ್ನು ಕೇಂದ್ರ ಹಣಕಾಸು ಸಚಿವರು ತಯಾರಿಸುತ್ತಾರೆ
- ಸಾಮಾನ್ಯವಾಗಿ ಹಣಕಾಸು ಸಚಿವರು ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳಅಧಿವೇಶನದಲ್ಲಿ ಲೋಕಸಭೆಯಲ್ಲಿ ಕೇಂದ್ರ ಆಯ–ವ್ಯಯವನ್ನು ಮಂಡಿಸುತ್ತಾರೆ.
- ಸರ್ಕಾರದ ಆದಾಯ ಮತ್ತು ವೆಚ್ಚವು ಸಮನಾಗಿದ್ದರೆ, ಅದನ್ನು ಸಮತೋಲನ ಆಯ–ವ್ಯಯ ಎನ್ನುವರು.
- ಸರ್ಕಾರವು ತನ್ನ ವೆಚ್ಚಗಳನ್ನು ಭರಿಸಲು ವಿವಿಧ ಮೂಲಗಳಿಂದ ಹಣವನ್ನು ಸಂಗ್ರಹಿಸುತ್ತದೆ.ಇದನ್ನು ಸಾರ್ವಜನಿಕ ಆದಾಯ ಎನ್ನುತ್ತಾರೆ.
- ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೇಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು ಕಂದಾಯ ಆದಾಯ ಎನ್ನುವರು.
- ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯವಂತಿಕೆಯನ್ನು ತೆರಿಗೆ ಎನ್ನುತ್ತೇವೆ.

**II ಬಹು ಆಯ್ಕೆ ಪ್ರಶ್ನೆಗಳು:**

**1. ಭಾರತದಲ್ಲಿ ಹಣಕಾಸು ವರ್ಷ ಯಾವಾಗ ಪ್ರಾರಂಭವಾಗುತ್ತದೆ.**

a) ಏಪ್ರಿಲ್–1 ರಿಂದ b) ಮಾರ್ಚ್–31 ರಿಂದ c) ಜೂನ್–1 ರಿಂದ d) ಜನವರಿ–1 ರಿಂದ

**2. ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದು ________ ಆಯವ್ಯಯ.**

a) ಸಮತೋಲನ b) ಉಳಿತಾಯ **c) ಕೊರತೆಯ** d) ಮೇಲಿನ ಎಲ್ಲವೂ



Use e-papers for save trees-InyaTrust.com

3. **ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಲೋಕಸಭೆಯಲ್ಲಿ ಕೇಂದ್ರ ಆಯ-ವ್ಯಯ ಮಂಡಿಸುವವರು**

   **a) ಹಣಕಾಸು ಮಂತ್ರಿ** b) ರಾಷ್ಟ್ರಪತಿ c) ಪ್ರಧಾನ ಮಂತ್ರಿ d) ಮುಖ್ಯಮಂತ್ರಿ

4. **ಸರ್ಕಾರವು ಜನಯ ಯೋಗಕ್ಷೇಮದ ದೃಷ್ಟಿಯಿಂದ ವಿವಿಧ ಚಟುವಟಿಕೆಗಳಿಗೆ ಮಾಡುವ ವೆಚ್ಚ**

   a) ಆಯವ್ಯಯ b) ಆದಾಯ c) ಕಂದಾಯ ವೆಚ್ಚ **d) ಸಾರ್ವಜನಿಕ ವೆಚ್ಚ**

5. **ಕೇಂದ್ರ ಸರ್ಕಾರವು ತನ್ನ ಕಂದಾಯ ಆದಾಯದಿಂದ ಮಾಡುವ ವೆಚ್ಚವನ್ನು _____ ಎನ್ನುವರು.**

   **a) ಕಂದಾಯವೆಚ್ಚ** b) ಸಾರ್ವಜನಿಕ ವೆಚ್ಚ c) ಬಂಡವಾಳ ವೆಚ್ಚ d) ಯೋಜನಾ ವೆಚ್ಚ

6. **ಶಾಶ್ವತ ಅಭಿವೃದ್ಧಿಯ ದೃಷ್ಟಿಯಿಂದ ಕೃಷಿ, ಕೈಗಾರಿಕೆ, ಸಾರಿಗೆ, ನೀರಾವರಿ ಯೋಜನೆ ಮುಂತಾದವುಗಳ ಮೇಲೆ ಮಾಡಲಾಗುವ ವೆಚ್ಚವನ್ನು __________ ಎನ್ನುವರು.**

   a) ಯೋಜನೇತರ ವೆಚ್ಚ **b) ಯೋಜನಾ ಬಂಡವಾಳ ವೆಚ್ಚ**

   c) ಬಂಡವಾಳ ಆದಾಯ d)ಬಂಡವಾಳ ವೆಚ್ಚ

7. **ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯ**

   a) ತೆರಿಗೆ b) ಸಾರ್ವಜನಿಕ ಆದಾಯ c) ನೇರ ತೆರಿಗೆ **d) ಕಂದಾಯ ಆದಾಯ**

8. **ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಕೆಯನ್ನು _ಎನ್ನುತ್ತೇವೆ.**

   a) ನೇರ ತೆರಿಗೆ **b) ತೆರಿಗೆ** c) ಪರೋಕ್ಷ ತೆರಿಗೆ d) ಮೇಲಿನ ಎಲ್ಲವೂ

9. **ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ದರೆ, ಅದು**

   a) ಬಂಡವಾಳ ಆದಾಯ b) ಯೋಜನಾ ವೆಚ್ಚ c) ಪರೋಕ್ಷ ತೆರಿಗೆ **d) ಪ್ರತ್ಯಕ್ಷ ತೆರಿಗೆ**

10. **ಸರ್ಕಾರವು ವಿಧಿಸುವ ತೆರಿಗೆಯ ಹೊರೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಾದರೆ, ಅದು**

    a) ಪರೋಕ್ಷ ತೆರಿಗೆ b) ತೆರಿಗೆ c) ಕಂದಾಯ ಆದಾಯ **d) ಪರೋಕ್ಷ ತೆರಿಗೆ**

**III ಸೂಕ್ತ ಉತ್ತರದೊಂದಿಗೆ ಬಿಟ್ಟ ಸ್ಥಳ ತುಂಬಿರಿ.**

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು **ಕೋಶೀಯ ನೀತಿಯ** ಮೂಲಕ ನಿರ್ವಹಿಸುತ್ತದೆ.
2. ಆಯ-ವ್ಯಯದಲ್ಲಿ ಸರ್ಕಾರದ ಆದಾಯವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು **ಉಳಿತಾಯ ಆಯವ್ಯಯ** ಎನ್ನುತ್ತಾರೆ.
3. ಲೋಕಸಭೆಯಲ್ಲಿ ಕೇಂದ್ರ ಸರ್ಕಾರದ ಆಯ-ವ್ಯಯವನ್ನು ಮಂಡಿಸುವವರು **ಹಣಕಾಸು ಮಂತ್ರಿ**



Use e-papers for save trees-InyaTrust.com

4. ಸರ್ಕಾರವು ಆಂತರಿಕ ಹಾಗೂ ವಿದೇಶಿ ಮೂಲಗಳಿಂದ ಸಾಲ ಎತ್ತುವ ಮೂಲಕ ಸಂಗ್ರಹಿಸುವ ಆದಾಯವೇ **ಬಂಡವಾಳ ಆದಾಯ**.
5. ಸರ್ಕಾರದಿಂದ ನಿರ್ವಹಿಸಲ್ಪಡುವುದೇ **ಸಾರ್ವಜನಿಕ ಹಣಕಾಸು.**
6. ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು **ಆಯ–ವ್ಯಯ ಪತ್ರ** ಅಥವಾ ಮುಂಗಡ ಪತ್ರ ಎನ್ನುವರು.
7. ಸರ್ಕಾರದ ಆದಾಯ ಮತ್ತು ವೆಚ್ಚ ಸಮನಾಗಿದ್ದರೆ, ಅದನ್ನು **ಸಮತೋಲನ ಆಯವ್ಯಯ** ಎನ್ನುವರು.
8. ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಕೆಯನ್ನು **ತೆರಿಗೆ** ಎನ್ನುತ್ತೇವೆ.
9. ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ದರೆ, ಅದನ್ನು **ಪ್ರತ್ಯಕ್ಷ ತೆರಿಗೆ** ಎನ್ನುವರು.
10. ಸರ್ಕಾರವು ವಿಧಿಸುವ ತೆರಿಗೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಾದರೆ, ಅದನ್ನು **ಪರೋಕ್ಷ ತೆರಿಗೆ** ಎನ್ನುವರು.

**IV ಹೊಂದಿಸಿ ಬರೆಯಿರಿ.**

| | A | B | ಉತ್ತರ |
|---|---|---|---|
| 1. | ಪ್ರತ್ಯಕ್ಷ ತೆರಿಗೆ | a) ಹಣಕಾಸು ವೆಚ್ಚ | c) ಆದಾಯ ತೆರಿಗೆ |
| 2. | ಪರೋಕ್ಷ ತೆರಿಗೆ | b) ಯೋಜನೇತರ ವೆಚ್ಚ | d) ಕೇಂದ್ರ ಅಬಕಾರಿ ತೆರಿಗೆ |
| 3. | ಆಂತರಿಕ ಸಾಲ | c) ಆದಾಯ ತೆರಿಗೆ | e) ಬಂಡವಾಳ ಆದಾಯ |
| 4. | ಬಡ್ಡಿ ಪಾವತಿ | d) ಕೇಂದ್ರ ಅಬಕಾರಿ ತೆರಿಗೆ | b) ಯೋಜನೇತರ ವೆಚ್ಚ |
| | | e) ಬಂಡವಾಳ ಆದಾಯ | |

**V ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.**

ಸರ್ಕಾರವು ತನ್ನದೇ ಆದ ಹಣಕಾಸು ನಿರ್ವಹಣೆಯನ್ನು ಹೊಂದಿರುತ್ತದೆ. ಇದಕ್ಕೆ ಸಾರ್ವಜನಿಕ ಹಣಕಾಸು ಎನ್ನುವರು.

**2. ಆಯವ್ಯಯ ಎಂದರೇನು?**

ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು ಆಯ–ವ್ಯಯ ಪತ್ರ ಅಥವಾ ಮುಂಗಡ ಪತ್ರ ಎನ್ನುವರು.

**3. ಕೊರತೆಯ ಆಯ–ವ್ಯಯದ ಅರ್ಥ ಬರೆಯಿರಿ.**

ಆಯವ್ಯಯ ಪತ್ರದಲ್ಲಿ ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆಯ ಆಯವ್ಯಯ ಎನ್ನುವರು.



Use e-papers for save trees-InyaTrust.com

**4. ಪ್ರತ್ಯಕ್ಷ ತೆರಿಗೆ ಎಂದರೇನು?**

ಸರ್ಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ದರೆ ಅಂತಹ ತೆರಿಗೆಯನ್ನು ಪ್ರತ್ಯಕ್ಷ ತೆರಿಗೆ ಎನ್ನುವರು.

**5. ವಿತ್ತೀಯ ಕೊರತೆಯನ್ನು ಸೂತ್ರ ರೂಪದಲ್ಲಿ ಬರೆಯಿರಿ.**

ವಿತ್ತೀಯ ಕೊರತೆ = (ಕಂದಾಯ ಆದಾಯ + ಸಾಲೇತರ ಬಂಡವಾಳ ಆದಾಯ) – ಒಟ್ಟು ವೆಚ್ಚ

**III ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

**1. ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸು ನಡುವಿನ ಭಿನ್ನತೆಗಳನ್ನು ಗುರುತಿಸಿ.**

| **ವೈಯಕ್ತಿಕ ಹಣಕಾಸು** | **ಸಾರ್ವಜನಿಕ ಹಣಕಾಸು** |
|---|---|
| (i) ವೈಯಕ್ತಿಕ ಅಥವಾ ಖಾಸಗೀ ಹಣಕಾಸು ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ–ವೆಚ್ಚಗಳಿಗೆ ಸಂಬಂಧಿಸಿದೆ. | (i) ಸಾರ್ವಜನಿಕ ಹಣಕಾಸು ಸರ್ಕಾರದ ಆದಾಯ ವೆಚ್ಚಗಳಿಗೆ ಸಂಬಂಧಿಸಿದೆ. |
| (ii) ಇಲ್ಲಿ ಜನರು ತಮ್ಮ ಆದಾಯವನ್ನು ಮೊದಲು ಅಂದಾಜು ಮಾಡಿ, ನಂತರ ಅದಕ್ಕೆ ಅನುಗುಣವಾಗಿ ವೆಚ್ಚ ಮಾಡುತ್ತಾರೆ. | (ii) ಇಲ್ಲಿ ಸರ್ಕಾರವು ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಅದಕ್ಕೆ ತಕ್ಕಂತೆಆದಾಯವನ್ನು ಹೊಂದಿಸುತ್ತದೆ. |
| (iii) ವೈಯಕ್ತಿಕ ಹಣಕಾಸಿನ ವ್ಯವಹಾರಗಳನ್ನು ಆದಷ್ಟೂ ಗೌಪ್ಯವಾಗಿಡಲಾಗುತ್ತದೆ. | (iii) ಸಾರ್ವಜನಿಕ ಹಣಕಾಸನ್ನು ಶಾಸನ ಸಭೆಗಳಲ್ಲಿ ಚರ್ಚಿಸಲಾಗುತ್ತದೆ. ಅಲ್ಲದೆ ಮಾಧ್ಯಮಗಳಲ್ಲಿಎಲ್ಲರಿಗೂತಿಳಿಯುವಂತೆ ಪ್ರಚಾರ ಮಾಡಲಾಗುತ್ತದೆ |

**2. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.**

ಸರ್ಕಾರದ ಆದಾಯ, ಸರ್ಕಾರದ ವೆಚ್ಚ ಹಾಗೂ ಸರ್ಕಾರದ ಸಾಲ ಇವುಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದೇ ಸಾರ್ವಜನಿಕ ಹಣಕಾಸು. ಸಾರ್ವಜನಿಕ ಹಣಕಾಸು ಸರ್ಕಾರದ ಆದಾಯ, ವೆಚ್ಚ ಮತ್ತು ಸಾಲ ನಿರ್ವಹಣೆಯ ಸಮಗ್ರ ಚಿತ್ರಣವನ್ನು ನೀಡುತ್ತದೆ. ಸರ್ಕಾರವು ವಿತ್ತೀಯ ನೀತಿಯ ಮೂಲಕ ಸಾರ್ವಜನಿಕ ಹಣಕಾಸನ್ನು ನಿರ್ವಹಿಸುತ್ತದೆ.

ಭಾರತದಂತಹ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಹಾಗೂ ಆರ್ಥಿಕ ಏರಿಳಿತಗಳನ್ನು, ಬೆಲೆಗಳ ಏರಿಳಿತಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಹಾಗೂ ನಿಯಂತ್ರಣ ಮಾಡಿ, ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಸಾರ್ವಜನಿಕ ಹಣಕಾಸು ನೀತಿಯನ್ನು ಅಸ್ತ್ರವನ್ನಾಗಿ ಬಳಸಲಾಗುತ್ತಿದೆ.



Use e-papers for save trees-InyaTrust.com

**3. ಕೇಂದ್ರ ಸರ್ಕಾರದ ಯೋಜನಾ ವೆಚ್ಚಗಳನ್ನು ಪಟ್ಟಿಮಾಡಿರಿ.**

ಕೇಂದ್ರ ಯೋಜನಾ ವೆಚ್ಚದ ಅಡಿಯಲ್ಲಿ ಕೇಂದ್ರ ಸರ್ಕಾರವು ಮೂರು ರೀತಿಯ ಸೇವೆಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ಹಣವನ್ನು ವೆಚ್ಚ ಮಾಡುತ್ತದೆ. ಅವುಗಳೆಂದರೆ,

**(i) ಆರ್ಥಿಕ ಸೇವೆಗಳು :** ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ, ಸಾರಿಗೆ ಸಂಪರ್ಕ, ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ ಇತ್ಯಾದಿ.

**(ii) ಸಾಮಾಜಿಕ ಸೇವೆಗಳು :** ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು ಪೂರೈಕೆ, ಗೃಹ ನಿರ್ಮಾಣ, ಸಾಮಾಜಿಕ ಕಲ್ಯಾಣ ಇತ್ಯಾದಿ.

**(iii) ಸಾಮಾನ್ಯ ಸೇವೆಗಳು :** ದೇಶದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಮಾಡುವ ವೆಚ್ಚಗಳು.

**4. ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.**

ಕೇಂದ್ರ ಸರ್ಕಾರ ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ಆದಾಯಗಳೆಂದರೆ,

(i) ಭಾರತೀಯ ರಿಸರ್ವ್ ಬ್ಯಾಂಕ್ ಗಳಿಸುವ ನಿವ್ವಳ ಲಾಭ.

(ii) ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ.

(iii) ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ.

(iv) ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ.

(v) ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ.

(vi) ವಿವಿಧ ರೀತಿಯ ಶುಲ್ಕಗಳು, ದಂಡಗಳು ಇತ್ಯಾದಿ.

**5. ಕೊರತೆಯ ಹಣಕಾಸು ಎಂದರೇನು? ಅದರ ನಾಲ್ಕು ವಿಧಗಳನ್ನು ಹೆಸರಿಸಿ.**

ಸರ್ಕಾರವು ತನ್ನ ಆದಾಯಕ್ಕಿಂತಲೂ ವೆಚ್ಚವನ್ನು ಹೆಚ್ಚು ಮಾಡುವುದನ್ನು ಕೊರತೆಯ ಹಣಕಾಸು ಎನ್ನುವರು. ಕೊರತೆಯ ಹಣಕಾಸಿನ ನಾಲ್ಕು ವಿಧಗಳೆಂದರೆ,

(i) ವಿತ್ತೀಯ ಕೊರತೆ (ii) ಆಯವ್ಯಯ ಕೊರತೆ

(iii) ಕಂದಾಯ ಕೊರತೆ (iv) ಪ್ರಾಥಮಿಕ ಕೊರತೆ

## VII ಹೆಚ್ಚುವರಿ ಪ್ರಶ್ನೆಗಳು

**1. ಭಾರತದಲ್ಲಿ ಕೇಂದ್ರ ಆಯ–ವ್ಯಯವನ್ನು ಹೇಗೆ ಮಂಡಿಸಲಾಗುತ್ತದೆ?**

ಭಾರತದಲ್ಲಿ ಕೇಂದ್ರ ಸರ್ಕಾರದ ಆಯ–ವ್ಯಯವನ್ನು ಕೇಂದ್ರ ಹಣಕಾಸು ಸಚಿವರು ಹಣಕಾಸು ಇಲಾಖೆಯ ಸಹಕಾರದೊಂದಿಗೆ ತಯಾರಿಸುತ್ತಾರೆ. ಸಾಮಾನ್ಯವಾಗಿ ಹಣಕಾಸು ಸಚಿವರು ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಕೇಂದ್ರ ಆಯ–ವ್ಯಯವನ್ನು ಮಂಡಿಸುತ್ತಾರೆ. ಲೋಕಸಭೆ ಮತ್ತು ರಾಜ್ಯಸಭೆಗಳೆರಡರಲ್ಲೂ ಆಯ–ವ್ಯಯ ಪತ್ರದ ಮೇಲೆ ಸುದೀರ್ಘ ಚರ್ಚೆ ನಡೆದು, ಮಾರ್ಚ್ 31 ರ ಒಳಗಾಗಿ ಎರಡೂ ಸದನಗಳ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ.



Use e-papers for save trees-InyaTrust.com

**2. ಕಂದಾಯ ವೆಚ್ಚ ಎಂದರೇನು?**

ಕೇಂದ್ರ ಸರ್ಕಾರವು ತನ್ನ ಕಂದಾಯ ಆದಾಯದಿಂದ ಮಾಡುವ ವೆಚ್ಚವನ್ನು ಕಂದಾಯ ವೆಚ್ಚ ಎನ್ನುವರು.

**3. ಯೋಜನೇತರ ವೆಚ್ಚ ಎಂದರೇನು?**

ಅಭಿವೃದ್ಧಿ ಕಾರ್ಯಗಳನ್ನು ಹೊರತುಪಡಿಸಿ, ಆಡಳಿತ ನಿರ್ವಹಣೆ, ರಾಷ್ಟ್ರರಕ್ಷಣೆ, ಬಡ್ಡಿ ಪಾವತಿ ಮುಂತಾದ ಬಾಬ್ತುಗಳಿಗೆ ಮಾಡಲಾಗುವ ವೆಚ್ಚವನ್ನು ಯೋಜನೇತರ ವೆಚ್ಚ ಎನ್ನುವರು.

**4. ಸಾರ್ವಜನಿಕ ಆದಾಯ ಎಂದರೇನು?**

ಸರ್ಕಾರವು ತನ್ನ ವೆಚ್ಚಗಳನ್ನು ಭರಿಸಲು ವಿವಿಧ ಮೂಲಗಳಿಂದ ಸಂಗ್ರಹಿಸುವ ಹಣವನ್ನು ಸಾರ್ವಜನಿಕ ವೆಚ್ಚ ಎನ್ನುವರು.

**5. ತೆರಿಗೆಯೇತರ ಆದಾಯ ಎಂದರೇನು?**

ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರೆ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು ತೆರಿಗೆಯೇತರ ಆದಾಯ ಎನ್ನುವರು.

* * *



Use e-papers for save trees-InyaTrust.com

# ವ್ಯವಹಾರ ಅಧ್ಯಯನ



Use e-papers for save trees-InyaTrust.com

# ಅಧ್ಯಾಯ – 1
# ಬ್ಯಾಂಕು ವ್ಯವಹಾರಗಳು

## I ಮುಖ್ಯಾಂಶಗಳು:

- ❖ ಬ್ಯಾಂಕ್ ಎಂಬ ಪದವು ಇಟಾಲಿಯನ್‌ನ "ಬ್ಯಾಂಕೋ" ಅಥವಾ ಫ್ರೆಂಚಿನ "ಬ್ಯಾಂಕ್" ಎಂಬ
- ❖ ಶಬ್ದಗಳಿಂದ ಬಂದಿದೆ. ಇವುಗಳ ಅರ್ಥ 'ಬೆಂಚು' ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್ ಆಗಿದೆ.
- ❖ ಬ್ಯಾಂಕ್ ಎನ್ನುವ ಪದ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದೆ.
- ❖ ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದ್ದು, ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ.
- ❖ ಬ್ಯಾಂಕಿನಲ್ಲಿಯ ಸೇವೆಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ.
- ❖ ಭಾರತೀಯ ರಿಜರ್ವ್ ಬ್ಯಾಂಕನ್ನು ಕೇಂದ್ರ ಬ್ಯಾಂಕು ಎಂತಲೂ ಕರೆಯುವರು. ಹಾಗೆಯೇ ಬ್ಯಾಂಕುಗಳ ಬ್ಯಾಂಕು ಅಥವಾ ಬ್ಯಾಂಕುಗಳ ತಾಯಿ ಎಂದೂ ಕರೆಯಬಹುದು.
- ❖ ಭಾರತದಲ್ಲಿ ಬ್ಯಾಂಕುಗಳ ಎಲ್ಲ ಚಟುವಟಿಕೆಗಳು ರಿಜರ್ವ್ ಬ್ಯಾಂಕಿನ ಹತೋಟಿಯಲ್ಲಿರುತ್ತದೆ.

## II ಕೆಳಗಿನ ಸಂಕ್ಷಿಪ್ತಾಕ್ಷರಗಳನ್ನು ವಿಸ್ತರಿಸಿ

1. R.B.I : ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ
2. I.D.B : ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್
3. L.D.B : ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್
4. I.P.D : ಇಂಡಿಯನ್ ಪೋಸ್ಟಲ್ ಡಿಪಾರ್ಟ್‌ಮೆಂಟ್
5. A.T.M : ಆಟೋಮ್ಯಾಟಿಕ್ ಟೆಲ್ಲರ್ ಮೆಷಿನ್

## III ಬಹು ಆಯ್ಕೆ ಪ್ರಶ್ನೆಗಳು:

1. ಬ್ಯಾಂಕ್ ಎಂಬ ಪದವು ಇಟಾಲಿಯನ್‌ನ ____________ ಎಂಬ ಶಬ್ದದಿಂದ ಬಂದಿದೆ.

   a) ಬೆಂಚ್ b) ಬೈಂಕ್ **c) ಬ್ಯಾಂಕೋ** d) ಬೈಕ್

2. **ಬ್ಯಾಂಕುಗಳು ______________ ಸಂಸ್ಥೆಗಳಾಗಿವೆ**

   a) ರಾಜಕೀಯ **b) ಹಣಕಾಸು** c) ಶೈಕ್ಷಣಿಕ d) ಮೇಲಿನ ಎಲ್ಲವೂ

3. **ಬ್ಯಾಂಕುಗಳು ಸುಮಾರು __________ ವರ್ಷಗಳ ಹಿಂದೆ ಅಭಿವೃದ್ಧಿ ಹೊಂದಿದವು.**

   **a) ಎರಡುನೂರು** b) ಏಳುನೂರು c) ಐದುನೂರು d) ಆರುನೂರು



Use e-papers for save trees-InyaTrust.com

4. **ಕೆಳಗಿನ ಯಾವ ಸೇವೆ ಬ್ಯಾಂಕಿನಿಂದ ಕೊಡಲ್ಪಡುವುದಿಲ್ಲ**

a) ಕ್ರೆಡಿಟ್ ಕಾರ್ಡ್ b) ಡೆಬಿಟ್ ಕಾರ್ಡ್ c) ವ್ಯವಹಾರ ಸಾಲ d) ಚಾಲ್ತಿ ಖಾತೆ

5. **ಕೆಳಗಿನ ಯಾವುದು ಖಾತೆಯ ವಿಧವಲ್ಲ**

a) ನಿಶ್ಚಿತ ಠೇವಣಿ ಖಾತೆ b) ಉಳಿತಾಯ ಖಾತೆ

c) ಸಹಕಾರ ಬ್ಯಾಂಕ್ d) ಆವರ್ತ ಠೇವಣಿ ಬ್ಯಾಂಕ್

6. **ಕೆಳಗಿನ ಯಾವ ಬ್ಯಾಂಕನ್ನು ಭಾರತೀಯ ಸೆಂಟ್ರಲ್ ಬ್ಯಾಂಕ್ ಎನ್ನುವರು**

a) ಭಾರತೀಯ ರಿಜರ್ವ್ ಬ್ಯಾಂಕು b) ವಾಣಿಜ್ಯ ಬ್ಯಾಂಕು

c) ಸ್ಥಳೀಯ ಬ್ಯಾಂಕುಗಳು d) ಭೂ–ಅಭಿವೃದ್ಧಿ ಬ್ಯಾಂಕು

7 **________ ಗಿಂತ ಕಡಿಮೆ ಠೇವಣಿಯನ್ನು ಬ್ಯಾಂಕುಗಳು ಸ್ವೀಕರಿಸುವುದಿಲ್ಲ**

a) ರೂ.10 b) ರೂ.50 c) ರೂ.100 d) ರೂ.1000

## IV ಬಿಟ್ಟ ಸ್ಥಳ ತುಂಬಿರಿ:

1. ಬ್ಯಾಂಕ್ ಎಂಬ ಪದವು ಇಟಾಲಿಯನ್‌ನ **ಬ್ಯಾಂಕೊ** ಎಂಬ ಶಬ್ದದಿಂದ ಬಂದಿದೆ.
2. ಬ್ಯಾಂಕುಗಳ ಬ್ಯಾಂಕು **ಭಾರತೀಯ ರಿಜರ್ವ್ ಬ್ಯಾಂಕ್** ಆಗಿದೆ
3. ರಾಷ್ಟ್ರೀಕೃತ ಬ್ಯಾಂಕಿಗೆ ಒಂದು ಉದಾಹರಣೆ **ಕೆನರಾ ಬ್ಯಾಂಕ್**
4. ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹಾರ ಮಾಡಬಹುದಾದ ಖಾತೆಯ ವಿಧ **ಚಾಲ್ತಿ ಖಾತೆ**
5. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು **ಅಂಚೆ** ಇಲಾಖೆಯು ನೀಡುತ್ತದೆ.
6. ಠೇವಣಿಯನ್ನು ನಿಗಧಿತ ಅವಧಿಗೆ **ನಿಶ್ಚಿತ ಠೇವಣಿ** ಖಾತೆಯಲ್ಲಿ ಇಡಬಹುದಾಗಿದೆ.
7. ಬ್ಯಾಂಕುಗಳು **ಹಣಕಾಸಿನ** ಸಂಸ್ಥೆಗಳಾಗಿವೆ.
8. ಬ್ಯಾಂಕಿನಲ್ಲಿಯ ಸೇವೆಗಳನ್ನು ಉಪಯೋಗಿಸಿಕೊಳ್ಳುವ ವ್ಯವಹಾರಗಳನ್ನು **ಬ್ಯಾಂಕಿಂಗ್** ಎನ್ನುತ್ತೇವೆ.
9. ಬ್ಯಾಂಕುಗಳು ಯಾವಾಗಲೂ ತನ್ನ ಹೆಸರಿನಲ್ಲಿ **ಬ್ಯಾಂಕು** ಎಂಬ ಪದವನ್ನು ಸೇರಿಸಬೇಕು
10. ಇಬ್ಬರು ಅಥವಾ ಹೆಚ್ಚಿನ ಜನರು ಒಂದೇ ಬ್ಯಾಂಕ್ ಖಾತೆ ತೆರೆದು ವ್ಯವಹರಿಸುವುದನ್ನು **ಜಂಟಿಖಾತೆ** ಎನ್ನುತ್ತಾರೆ.



Use e-papers for save trees-InyaTrust.com

## V ಹೊಂದಿಸಿ ಬರೆಯಿರಿ.

| | A | B | ಉತ್ತರ |
|---|---|---|---|
| 1. | ಉಳಿತಾಯ ಖಾತೆ | a) ನಿಶ್ಚಿತ ಅವಧಿಗೆ ತೆರೆಯುವುದು | d) |
| 2. | ಚಾಲ್ತಿ ಖಾತೆ | b) ತಿಂಗಳು ತಿಂಗಳು ಕಟ್ಟುವುದು | c) |
| 3. | ಆವರ್ತ ಠೇವಣಿ ಖಾತೆ | c) ವ್ಯಾಪಾರಸ್ಥರು ತೆರೆಯುವ ಖಾತೆ | b) |
| 4. | ನಿಶ್ಚಿತ ಠೇವಣಿ ಖಾತೆ | d) ವೇತನ ಪಡೆಯುವವರಿಗೆ | a) |

## VI ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ:

**1. ಬ್ಯಾಂಕು ಎಂದರೇನು?**

ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದ್ದು, ಗ್ರಾಹಕರು ಭದ್ರತೆಯ ದೃಷ್ಟಿಯಿಂದ ಇಟ್ಟ ಹಣವನ್ನು ತಮಗೆ ಬೇಕಾದಾಗ ಹಿಂದಿರುಗಿ ಪಡೆಯಲು ಸಹಾಯ ಮಾಡುತ್ತದೆ.

**2. ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳ ಪಟ್ಟಿ ಮಾಡಿ.**

* ಹಣದ ವಹಿವಾಟು
* ಠೇವಣಿಗಳನ್ನು ಅಂಗೀಕರಿಸುತ್ತದೆ.
* ಸಾಲಗಳನ್ನು ಕೊಡುವುದು.
* ಪಾವತಿ ಹಾಗೂ ಹಿಂದಕ್ಕೆ ಪಡೆಯುವುದು.
* ಏಜೆಂಟ್ ಮತ್ತು ಉಪಯುಕ್ತ ಸೇವೆಗಳು.
* ಲಾಭ ಮತ್ತು ಸೇವಾ ಭಾವನೆ.
* ನಿರಂತರ ವಿಸ್ತರಿಸುತ್ತಾ ಹೋಗುವ ಕಾರ್ಯಗಳು.
* ಸಂಬಂಧ ಕಲ್ಪಿಸುವ ಕೊಂಡಿ.
* ಬ್ಯಾಂಕಿಂಗ್ ವ್ಯವಹಾರ.
* ಹೆಸರಿನ ಗುರುತು.

**3. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು?**

* ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು.
* ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲವನ್ನು ಕೊಡುವುದು.
* ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
* ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
* ಹುಂಡಿಗಳನ್ನು ಸೋಡಿ ಮಾಡುವುದು.



Use e-papers for save trees-InyaTrust.com

* ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
* ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
* ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ದಿಗಳಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.
* ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರಗಳನ್ನು ಕೊಡುವುದು.
* ಸರ್ಕಾರದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.

**4. ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧವನ್ನು ತಿಳಿಸಿ.**

ಬ್ಯಾಂಕರನಿಗೂ ಅದರ ಗ್ರಾಹಕರಿಗೂ ಇರುವ ಸಂಬಂಧಗಳನ್ನು ಎರಡು ರೀತಿಗಳಲ್ಲಿ ವಿಂಗಡಿಸಬಹುದು.

(i) ಸಾಮಾನ್ಯ ಸಂಬಂಧ (ii) ವಿಶೇಷ ಸಂಬಂಧ

**(i) ಸಾಮಾನ್ಯ ಸಂಬಂಧ :**

* ಪ್ರಾಥಮಿಕ ಸಂಬಂಧ (ಸಾಲಿಗ ಮತ್ತು ಸಾಲಗಾರನ ಸಂಬಂಧದಂತೆ)
* ಸಹಾಯಕ ಅಥವಾ ಉಪಕಾರ ಸಂಬಂಧ (ಧರ್ಮದರ್ಶಿ ಮತ್ತು ಪ್ರಯೋಜನಕಾರಿಯ ನಡುವಿನ ಸಂಬಂಧ)
* ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ

**(ii) ವಿಶೇಷ ಸಂಬಂಧ**

* ಚೆಕ್ಕುಗಳನ್ನು ಮನ್ನಣೆ ಮಾಡುವುದು.
* ಗ್ರಾಹಕನ ಲೆಕ್ಕಗಳ ಗೋಪ್ಯತೆ ಕಾಪಾಡುವುದು.

**5. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.**

ಉಳಿತಾಯ ಖಾತೆಯನ್ನು ತೆರೆಯುವವರ ಸಂಖ್ಯೆ ಹೆಚ್ಚಾಗುತ್ತಿದೆ ಕಾರಣ,

* ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಈ ಖಾತೆ ತೆರೆಯಲ್ಪಡುತ್ತದೆ. ಈ ಖಾತೆಯನ್ನು ವಿದ್ಯಾರ್ಥಿಗಳು, ಹಿರಿಯ ನಾಗರೀಕರು, ಪಿಂಚಣಿದಾರರು ಕೂಡ ತೆರೆಯಲು ಅವಕಾಶವಿದೆ. ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.
* ಉಳಿತಾಯ ಖಾತೆಯ ಗರಿಷ್ಟ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ.
* ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ.

**6. ಬ್ಯಾಂಕ್ ಖಾತೆ ತೆರೆಯುವುದರಿಂದಾಗುವ ಅನುಕೂಲಗಳಾವುವು?**

(i) ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.

(ii) ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.

(iii) ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.



Use e-papers for save trees-InyaTrust.com

(iv) ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.

(v) ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯಮಾಡಿಕೊಡುತ್ತದೆ.

(vi) ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.

**VII ಹೆಚ್ಚುವರಿ ಪ್ರಶ್ನೆಗಳು:**

**1. ಬ್ಯಾಂಕುಗಳು ಸಲ್ಲಿಸುವ ಸೇವೆಗಳನ್ನು ಪಟ್ಟಿ ಮಾಡಿ.**

(i) ಜಮಾ ಕಾರ್ಡುಗಳನ್ನು ಕೊಡುವುದು.

(ii) ಖಾಸಗಿ ಸಾಲಗಳು.

(iii) ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.

(iv) ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.

(v) ವ್ಯಾಪಾರಕ್ಕೆ ಬೇಕಾದ ಸಾಲಗಳನ್ನು ನೀಡುವುದು.

(vi) ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.

(vii) ಭರವಸೆ ಸೇವೆಗಳು.

(viii) ಸಹಿಗಳಿಗೆ ಜವಾಬ್ದಾರಿ ಹಾಕುವುದು.

**2. ಬ್ಯಾಂಕಿನ ವಿಧಗಳಾವುವು?**

* ಭಾರತೀಯ ರಿಜರ್ವ್ ಬ್ಯಾಂಕ್
* ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
* ಭೂ–ಅಭಿವೃದ್ಧಿ ಬ್ಯಾಂಕುಗಳು
* ಸ್ಥಳೀಯ ಬ್ಯಾಂಕುಗಳು
* ಸಹಕಾರಿ ಬ್ಯಾಂಕುಗಳು

**3. ಬ್ಯಾಂಕಿನಲ್ಲಿ ತೆರೆಯಬಹುದಾದ ವಿವಿಧ ಖಾತೆಗಳಾವುವು?**

ಸಾಮಾನ್ಯವಾಗಿ ಬ್ಯಾಂಕುಗಳಲ್ಲಿ 4 ವಿಧದ ಖಾತೆಗಳನ್ನು ತೆರೆಯಬಹುದು. ಅವುಗಳೆಂದರೆ,

(1) ಉಳಿತಾಯ ಖಾತೆ

(2) ಚಾಲ್ತಿ ಖಾತೆ

(3) ಆವರ್ತ ಠೇವಣಿ ಖಾತೆ

(4) ನಿಶ್ಚಿತ ಠೇವಣಿ ಖಾತೆ



Use e-papers for save trees-InyaTrust.com

**4. ಬ್ಯಾಂಕುಗಳಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಹಂತಗಳು ಯಾವುವು?**

(1) ಯಾವ ವಿಧದ ಬ್ಯಾಂಕ್ ಖಾತೆಯನ್ನು ತೆರೆಯಬೇಕೆಂಬುದನ್ನು ನಿರ್ಧರಿಸುವುದು.
(2) ನಮಗೆ ಅನುಕೂಲವಾದ ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು.
(3) ಪ್ರಸ್ತಾವನೆ ಅರ್ಜಿ–ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬಿ.
(4) ಪರಿಚಿತರ ಉಲ್ಲೇಖಗಳನ್ನು ಕೊಡುವುದು.
(5) ಬ್ಯಾಂಕು ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.
(6) ಅಧಿಕಾರಿಯ ಒಪ್ಪಿಗೆ
(7) ಪ್ರಾರಂಭಿಕ ಠೇವಣಿ

**5. ಯಾವುದಾದರೂ ನಾಲ್ಕು ಬ್ಯಾಂಕ್ ವ್ಯವಹಾರಗಳನ್ನು ಬರೆಯಿರಿ.**

(1) ಉಳಿತಾಯ ಖಾತೆಗಳನ್ನು ತೆರೆಯುವುದರ ಮೂಲಕ ಗ್ರಾಹಕರಲ್ಲಿ ಉಳಿತಾಯಕ್ಕೆ ಬೆಂಬಲ ನೀಡುತ್ತದೆ.
(2) ಬ್ಯಾಂಕು ಉಳಿತಾಯಗಳನ್ನು ಒಟ್ಟುಗೂಡಿಸಿ ಸಾಲಗಳನ್ನು ನೀಡುತ್ತದೆ.
(3) ಖಾತೆದಾರನು ಬ್ಯಾಂಕಿನ ಒಂದು ಸ್ಥಿರ ಆದೇಶದ ಮೂಲಕ ನಿಯತಕಾಲಿಕ ಸಂದಾಯಗಳನ್ನು ಮಾಡಲು ಆದೇಶಿಸಬಹುದು. ಉದಾ: ವಿಮಾ ಕಂತಿನ ಪಾವತಿ, ವಿದ್ಯುಚ್ಛಕ್ತಿ ಬಿಲ್ಲು, ದೂರವಾಣಿ ಬಿಲ್ಲು ಮುಂತಾದವು.
(4) ಖಾತೆದಾರನಿಗೆ ಗೊತ್ತುಪಡಿಸಿರುವ ದರಗಳಲ್ಲಿ ದಿನವಹಿ, ಮಾಹೆಯಾನ, ತ್ರೈಮಾಸಿಕ, ಅರ್ಧವಾರ್ಷಿಕ ಹಾಗೂ ವಾರ್ಷಿಕವಾಗಿ ಬಡ್ಡಿಯನ್ನು ಅವರ ಖಾತೆಗೆ ಜಮಾ ಮಾಡಲಾಗುತ್ತೆ.

* * *



Use e-papers for save trees-InyaTrust.com

## ಅಧ್ಯಾಯ –2
## ವಿಮೆ (Insurance)

**I ನೆನಪಿನಲ್ಲಿಡಬೇಕಾದ ಅಂಶಗಳು:**

- ❖ ವಿಮಾಸಂಸ್ಥೆಗಳ ಪ್ರಾಥಮಿಕ ಕರ್ತವ್ಯ ಹಾನಿಯ ನಷ್ಟವನ್ನು ತುಂಬಿಕೊಡುವುದು.
- ❖ ವಿಮೆ ಎನ್ನುವುದು ವಮಾಕರ್ತ ಹಾಗೂ ವಮದಾರರ ನಡುವಿನ ಒಪ್ಪಂದ
- ❖ ವಿಮಾ ಪಾಲಿಸಿಯು ವಿಮಾಕರ್ತ ಮತ್ತು ವಿಮಾಕರ್ತ ಮತ್ತು ವಿಮಾದಾರನ ನಡುವೆ ಏರ್ಪಡುವ ಒಂದು ಬರವಣಿಗೆಯ ಮೂಲಕದ ಕರಾರು
- ❖ ಹಕ್ಕು ಸಾಧನೆ: ಇದು ವಿಮಾದಾರನಾಗಲೀ ಅವನ ನಾಮನಿರ್ದೇಶಕನಾಗಲಿ ಅಥವಾ ನ್ಯಾಯಬದ್ಧ ಹಕ್ಕುದಾರನಾಗಲೀ ವಿಮಾಕರ್ತನಿಗೆ ಅವಧಿ ಮುಗಿದ ನಂತರ ಅಥವಾ ವಿಮಾ ಪಾಲಿಸಿಯ ರೀತ್ಯಾ ಅಪಘಾತ ಅಥವಾ ಹಾನಿ ಸಂಭವಿಸಿದಾಗ ವಿಮಾ ಸಂಸ್ಥೆಗೆ ವಿಮೆಯ ಹಣವನ್ನು ಪಾವತಿಸಲು ಕೇಳಿಕೊಳ್ಳುವ ಸಾಧನ.
- ❖ ವಿಮಾವಂತಿಕೆ (ಪ್ರೀಮಿಯಂ): ಜೀವ ವಿಮೆಯ ರಕ್ಷಣೆಗಾಗಿ ವಿಮಾದಾರನು ನಿರ್ದಿಷ್ಟ ಅವಧಿಯವರೆಗೂ ಜೀವವಿಮಾ ಸಂಸ್ಥೆಗೆ ಅವಧಿಗನುಗುಣವಾಗಿ ಪಾವತಿಸಬೇಕಾದ ವಂತಿಗೆಯಾಗಿದೆ.
- ❖ ಜೀವವಿಮೆಯು ಒಬ್ಬ ಮನುಷ್ಯನ ಜೀವವನ್ನು ತುಂಬಿಕೊಡುವ ವಿಮೆಯಾಗಿದೆ.
- ❖ ಸಾಮಾನ್ಯ ವಿಮೆಯು ಜೀವವಿಲ್ಲದ ವಸ್ತುಗಳ ವಿಮೆಯಾಗಿದೆ.
- ❖ ನಷ್ಟ ಪರಿಹಾರವನ್ನು ಕೊಡಲು ಒಪ್ಪುವವನನ್ನು ವಿಮಾಕರ್ತ (Insurer) ಎನ್ನುತ್ತೇವೆ.
- ❖ ನಷ್ಟ ಪರಿಹಾರ ಪಡೆಯುವವನನ್ನು ವಿಮಾದಾರ ಎನ್ನುತ್ತೇವೆ.
- ❖ ವಾಹನ ವಿಮೆಯು ಅನಿಶ್ಚತ ವಿಮೆಯಾಗಿರುತ್ತದೆ.

**II ಬಹು ಆಯ್ಕೆ ಪ್ರಶ್ನೆಗಳು:**

**1. ವಿಮೆಯು ______ಮತ್ತು ______ನಡುವೆ ಏರ್ಪಡುವ ಒಪ್ಪಂದ**

a) ವಿಮಾಕರ್ತ ಮತ್ತು ವಿಮದಾರ b) ವಿಮಾಕರ್ತ ಮತ್ತು ಏಜೆಂಟ್

c) ವಿಮದಾರ ಮತ್ತು ಏಜೆಂಟ್ d) ಮೇಲಿನ ಯಾವುದು ಅಲ್ಲ

**2. ವಿಮಾಕರ್ತ ಹಾಗೂ ವಿಮಾದಾರನ ನಡುವೆ ಏರ್ಪಡುವ ಬರವಣಿಗೆಯ ಮೂಲಕದ ಕರಾರು.**

a) ಹಕ್ಕು ಸಾಧನೆ b) ಪ್ರೀಮಿಯಂ c) ಪಾಲಿಸಿ d) ಏಜೆನ್ಸಿ

**3. ವಿಮೆಯ ಪ್ರಾಮುಖ್ಯತೆ**

**a) ಉಳಿತಾಯ ಪ್ರೋತ್ಸಾಹ** b) ಠೇವಣಿ ಪ್ರೋತ್ಸಾಹ

c) ತೆರಿಗೆ ವಿನಾಯಿತಿ d) ಮೇಲಿನ ಎಲ್ಲವೂ



Use e-papers for save trees-InyaTrust.com

**4.** **ಜೀವವಿಮೆಯು________________ ವಿಮೆಯಾಗಿರುತ್ತದೆ.**

a) ಮನುಷ್ಯನ ಜೀವ　　　　**b) ಕುಟುಂಬದವರೆಲ್ಲರ**

c) ಇಬ್ಬರು ವ್ಯಕ್ತಿಗಳ ಜೀವ　　　　d) ಮೇಲಿನ ಯಾವುದೂ ಅಲ್ಲ

**5.** **ವಿಮಾರ್ಹ ಹಿತಾಸಕ್ತಿ ಎನ್ನುವುದು**

a) ವಿಮಾಪಾಲಿಸಿಯ ಪ್ರಕಾರ　　　　b) ವಿಮೆಯ ಅನುಕೂಲ

c) ವಿಮಾಪಾಲಿಸಿ ಪಡೆಯುವ ವಿಧಾನ　　　　d) ವಿಮೆಯ ತತ್ವ

**6.** **ವಿಮಾಪಾಲಿಸಿಯ ಅರ್ಜಿ ನಮೂನೆಯನ್ನು ________________ ಎನ್ನುವರು.**

**a)** ಸಂದಾಯ ಪತ್ರ　　　　b) ಪ್ರಪೋಸಲ್ ಫಾರಂ

c) ಅಡ್ಮಿಷನ್ ಫಾರಂ　　　　d) ವಿಮಾ ಬಾಂಡು

**7.** **ಪ್ರಪೋಸಲ್ ಫಾರಂನ್ನು ತುಂಬಲು ಕೆಳಗಿನ ಯಾರ ಸಹಾಯ ಪಡೆಯಬಹುದು.**

a) ಏಜೆಂಟ್　　　　b) ವಿಮಾಕರ್ತ

c) ವಿಮಾದಾರ　　　　d) ಮೇಲಿನ ಎಲ್ಲವೂ

III **ಹೊಂದಿಸಿ ಬರೆಯಿರಿ**

| | A | | B |
|---|---|---|---|
| **1.** | **ವಿಮಾಕರ್ತ** | a) | ಜೀವವನ್ನು ತುಂಬಿಕೊಡುತ್ತದೆ |
| **2.** | **ವಿಮಾದಾರ** | b) | ಜೀವ ವಿಮಾ ಕಂಪನಿ |
| **3.** | **ಜೀವವಿಮೆ** | c) | ವಿಮೆಯನ್ನು ಹೊಂದುವವನು |
| **4.** | **ಹಕ್ಕುಸಾಧನೆ** | d) | ವಿಮಾದಾರನು ಅವಧಿಗನುಗುಣವಾಗಿ ಕಟ್ಟಬೇಕಾದ ಹಣ |
| **5.** | **ವಿಮಾವಂತಿಗೆ** | e) | ಹಣಪಾವತಿಸಲು ಕೋರಿಕೆ |

**ಉತ್ತರ: 1- b, 2-c, 3- a, 4- e, 5-d,**

**IV ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿ.**

1. ನಷ್ಟ ಪರಿಹಾರವನ್ನು ಕೊಡಲು ಒಪ್ಪುವವನನ್ನು **ವಿಮಾಕರ್ತ** ಎನ್ನುವರು.
2. ನಷ್ಟ ಪರಿಹಾರವನ್ನು ಪಡೆಯುವವನನ್ನು **ವಿಮಾದಾರ** ಎನ್ನುವರು.
3. ಮನುಷ್ಯನ ಜೀವವನ್ನು ತುಂಬಿಕೊಡುವ **ವಿಮೆ ಜೀವವಿಮೆ** ಆಗಿದೆ.
4. ವಾಹನ ವಿಮೆಯು **ಅನಿಶ್ಚಿತ ವಿಮೆ** ಆಗಿರುತ್ತದೆ.
5. **ಪಾಲಿಸಿ** ಎನ್ನುವುದು ವಿಮಾಕರ್ತ ಹಾಗೂ ವಿಮಾದಾರನ ನಡುವೆ ಏರ್ಪಡುವ ಬರವಣಿಗೆಯ ಕರಾರು.



Use e-papers for save trees-InyaTrust.com

6. ಜೀವವಿಮೆಯನ್ನು ರಕ್ಷಣೆಗಾಗಿ ವಿಮಾದಾರನು ನಿರ್ದಿಷ್ಟ ಅವಧಿಯವರೆಗೂ ಜೀವವಿಮಾ ಸಂಸ್ಥೆಗೆ ಅವಧಿಗನುಗುಣವಾಗಿ ಪಾವತಿಸಬೇಕಾದ ವಂತಿಗೆಯೇ **ಪ್ರೀಮಿಯಂ** (ವಿಮಾ ವಂತಿಗೆ)
7. **ವಿಮೆ** ಎನ್ನುವುದು ವಿಮಾಕರ್ತ ಮತ್ತು ವಿಮಾದಾರರ ನಡುವಿನ ಕರಾರು.

**V ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ವಿಮೆ ಎಂದರೇನು?**

ವಿಮೆಯು ವಿಮಾಕರ್ತ ಹಾಗೂ ವಿಮಾದಾರನ ನಡುವೆ ಏರ್ಪಡುವ ಒಂದು ಒಪ್ಪಂದವಾಗಿದೆ.

**2. ವಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ?**

* ವಿಮೆಯು ಅಪಾಯ ಹಾನಿ ಅಥವಾ ಮರಣ ಸಂಭವನೀಯತೆಯನ್ನು ರಕ್ಷಿಸುತ್ತದೆ.
* ವಿಮೆಯು ಕಡ್ಡಾಯ ಉಳಿತಾಯವನ್ನು ಪ್ರೋತ್ಸಾಹಿಸುತ್ತದೆ.
* ವಿಮೆಯು ವಿಮಾದಾರನ ಅಭೀಷ್ಟತೆಯನ್ನು ಈಡೇರಿಸಲು ಸಹಾಯ ಮಾಡುತ್ತದೆ.
* ವಿಮೆಯು ಜೀವ ಮತ್ತು ವಸ್ತು ನಷ್ಟಗಳನ್ನು ಭರಿಸುವುದರಿಂದ ವಿಮಾದಾರನು ಶಾಂತವಾಗಿರಲು ಸಾಧ್ಯವಾಗುತ್ತದೆ.
* ವಿಮೆಯು ಜೀವನಷ್ಟದ ನಿವಾರಣೆಗೆ ಸಹಾಯ ಮಾಡುತ್ತದೆ.
* ವಿಮೆಯು ಸಾಮಾಜಿಕ ಒಳಿತಿಗಾಗಿ ಸಹಾಯ ಮಾಡುತ್ತದೆ.
* ವಿಮೆಯು ಹಣದ ಠೇವಣಿಗಳನ್ನು ಪ್ರೋತ್ಸಾಹಿಸುತ್ತದೆ.
* ವಿಮೆಯು ಋಣ ಸಂದಾಯಗಳಿಗೆ ಅನುವು ಮಾಡಿಕೊಡುತ್ತದೆ.
* ವಿಮೆಯು ಸಾಲಗಳನ್ನು ಕೊಡುತ್ತದೆ ಮತ್ತು ತೆರಿಗೆಗಳ ವಿನಾಯಿತಿಗೆ ಸಹಾಯ ಮಾಡುತ್ತದೆ.

**3. ವಿಮಾಪಾಲಿಸಿಯು ಹೊಂದಿರುವ ಅಂಶಗಳನ್ನು ಪಟ್ಟಿ ಮಾಡಿ.**

❖ **ವಿಮಾಪಾಲಿಸಿ:–** ವಿಮಾಕರ್ತ ಮತ್ತು ವಿಮಾದಾರನ ನಡುವೆ ಏರ್ಪಡುವ ಒಂದು ಬರವಣಿಗೆಯ ಕರಾರು.

❖ **ಹಕ್ಕು ಸಾಧನೆ:–**ಇದು ವಿಮಾದಾರನಾಗಲೀ, ಅವನ ನಾಮ ನಿರ್ದೇಶಕನಾಗಲೀ ಅಥವಾ ನ್ಯಾಯಬದ್ಧ ಹಕ್ಕುದಾರನಾಗಲೀ ವಿಮಾಕರ್ತನಿಗೆ ಅವಧಿ ಮುಗಿದ ನಂತರ ವಿಮೆಯ ಹಣವನ್ನು ಪಾವತಿಸಲು ಕೇಳಿ ಕೊಳ್ಳುವ ಸಾಧನ.

❖ **ವಿಮಾವಂತಿಗೆ (ಪ್ರೀಮಿಯಂ):–**ಜೀವವಿಮೆಯ ರಕ್ಷಣೆಗಾಗಿ ವಿಮಾದಾರನು ನಿರ್ದಿಷ್ಟ ಅವಧಿಯವರೆಗೂ ಜೀವವಿಮಾ ಸಂಸ್ಥೆಗೆ ಅವಧಿಗನುಗುಣವಾಗಿ ಪಾವತಿಸಬೇಕಾದ ವಂತಿಗೆ.

**4. ಜೀವವಿಮೆಯ ಅವಶ್ಯಕತೆಯನ್ನು ವಿಶ್ಲೇಷಿಸಿ. ಅಥವಾ**
**ಜೀವವಿಮೆಯ ಪ್ರಾಮುಖ್ಯತೆಯನ್ನು ತಿಳಿಸಿ.**

❖ ಒಬ್ಬ ಮನುಷ್ಯನಿಗೆ ಏನಾದರೂ ವಿಪತ್ತು ಅಥವಾ ಅನಾಹುತ ಸಂಭವಿಸಿದ್ದಲ್ಲಿ ಆ ಮನುಷ್ಯನ ಕುಟುಂಬಕ್ಕೆ ತಕ್ಷಣಕ್ಕೆ

❖ ಬೇಕಾದ ಹಣದ ಸಂರಕ್ಷಣೆಗಾಗಿ



**Use e-papers for save trees-InyaTrust.com**

- ❖ ಮಕ್ಕಳ ವಿದ್ಯಾಭ್ಯಾಸ ಅಥವಾ ಇತರ ಅವಶ್ಯಕತೆಗಳಿಗಾಗಿ
- ❖ ನಿವೃತ್ತಿ ಹೊಂದಿದ ಮೇಲೆ ಒಂದು ನಿರಂತರ ಆದಾಯದ ಮೂಲಕ್ಕಾಗಿ ಅಥವಾ ಉಳಿತಾಯದ
- ❖ ಯೋಜನೆಗಾಗಿ
- ❖ ಏನಾದರೂ ಅಪಘಾತ ಅಥವಾ ಗಂಭೀರ ಖಾಯಿಲೆಯಿಂದಾಗಿ ಆದಾಯ ಕುಂಠಿತಗೊಂಡಾಗ ಬೇಕಾಗುವ ಹಣದ
- ❖ ಭರವಸೆಗಾಗಿ.
- ❖ ಜೀವನ ಶೈಲಿಯ ಬದಲಾವಣೆಗಳಿಗೆ ಅನುಗುಣವಾಗಿ ಅಥವಾ ಇತರೆ ಏನಾದರೂ ಹಣದ ಅನಿಶ್ಚಿತತೆಯ
- ❖ ಸಂಭವಗಳಿಗಾಗಿ ವಿಮೆಯು ಬೇಕಾಗುತ್ತದೆ.

**5. ಜೀವವಿಮೆ ಮತ್ತು ಸಾಮಾನ್ಯ ವಿಮೆಯ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.**

| **ಜೀವವಿಮೆ** | **ಸಾಮಾನ್ಯ ವಿಮೆ** |
|---|---|
| (i) ಜೀವವಿಮೆಯು ಒಬ್ಬ ಮನುಷ್ಯನ ಜೀವವನ್ನು ತುಂಬಿಕೊಡುವ ವಿಮೆಯಾಗಿದೆ. | (i) ಸಾಮಾನ್ಯ ವಿಮೆಯು ಜೀವವಿಲ್ಲದ ವಸ್ತುಗಳ ವಿಮೆಯಾಗಿದೆ. |
| (ii) ಇಲ್ಲಿ ಮರಣದ ವೇಳೆ ಅನಿಶ್ಚತವಾದರೂ ನಷ್ಟಪರಿಹಾರ ನಿಶ್ಚಿತವೆಂದು ಕರಾರಾಗುತ್ತದೆ. | (ii) ಸಾಮಾನ್ಯ ವಿಮೆಯಲ್ಲಿ ವಿಮೆಯ ಹಣವು ಅನಿಶ್ಚಿತ ಘಟನೆಯಾದಾಗ ಮಾತ್ರ ಸಾಧ್ಯವಾಗುತ್ತದೆ. |
| (iii) ಜೀವವಿಮೆಯು ಸಾಮಾನ್ಯವಾಗಿ ದೀರ್ಘ ಕಾಲದಿಂದ ಕೂಡಿರುತ್ತದೆ. | (iii) ಸಾಮಾನ್ಯ ವಿಮೆಯು ಅಲ್ಪಕಾಲಿಕ– –ವಾದುದು. |
| (iv) ಜೀವವಿಮೆಯಲ್ಲಿ ವಿಮಾ ಕಂತು ಮಾಸಿಕ, ಅರ್ಧವಾರ್ಷಿಕ ಅಥವಾ ವಾರ್ಷಿಕವಾಗಿ ಅವಧಿ ಮುಗಿಯುವ ತನಕ ಪಾವತಿ ಆಗುತ್ತದೆ. | (iv) ಸಾಮಾನ್ಯ ವಿಮೆಯಲ್ಲಿ ವಿಮಾಕಂತು ಪಾಲಿಸಿ ತೆಗೆದುಕೊಂಡ ತಕ್ಷಣ ಒಮ್ಮೆಗೇನೆ ಪಾವತಿಸಬೇಕಾಗುತ್ತದೆ. |
| (v) ಜೀವವಿಮೆಯಲ್ಲಿ ನಷ್ಟ ಪರಿಹಾರ ತತ್ವ ಸೇರಿರುವುದಿಲ್ಲ. | (v) ಸಾಮಾನ್ಯ ವಿಮೆಯಲ್ಲಿ ನಷ್ಟ ಪರಿಹಾರ ತತ್ವ ಸೇರಿರುತ್ತದೆ. |



Use e-papers for save trees-InyaTrust.com

**6. ವಿಮಾಕರ್ತನು ಅನುಸರಿಸಬೇಕಾದ ತತ್ವಗಳಾವುವು?**

ವಿಮಾಕರ್ತನು ವಿಮೆಯನ್ನು ಪಾಲಿಸಲು ಕೆಳಗಿನ ತತ್ವಗಳನ್ನು ಪಾಲಿಸಬೇಕು. ಅವುಗಳೆಂದರೆ,

* ಅತ್ಯಧಿಕ ವಿಶ್ವಾಸಾರ್ಹತೆಯ ತತ್ವ
* ವಿಮಾರ್ಹ ಹಿತಾಸಕ್ತಿ
* ನಷ್ಟ ಪರಿಹಾರ ತತ್ವ
* ಕೊಡುಗೆಯ ತತ್ವ
* ಸಮಾನ ಅನುಭೋಗದ ತತ್ವ
* ಕನಿಷ್ಟ ನಷ್ಟಶಮನ ತತ್ವ
* ನಿಕಟಕಾರಣ ತತ್ವ

**7. ವಿಮಾ ಸಂಸ್ಥೆಗಳಿಂದಾಗುವ ಪ್ರಯೋಜನಗಳಾವುವು?**

* ಅನೇಕರಿಗೆ ಯುಕ್ತ ಅಥವಾ ವಿವೇಚನೆಯ ಲಾಭಗಳಿಕೆ ಆಗುತ್ತದೆ.
* ಜನರಿಗೆ ರಕ್ಷಣಾ ಮನೋಭಾವ ಉಂಟಾಗುತ್ತದೆ.
* ಅನೇಕರಿಗೆ ಉದ್ಯೋಗಾವಕಾಶ ದೊರೆಯುತ್ತದೆ.
* ಆಸ್ತಿ ಅಥವಾ ಸ್ವತ್ತಿನ ಸುರಕ್ಷತೆ ಉಂಟಾಗುತ್ತದೆ.
* ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುತ್ತದೆ.
* ಐಶ್ವರ್ಯವಂತರಿಗೂ ಬಡವರಿಗೂ ತಾರತಮ್ಯ ಇರುವುದಿಲ್ಲ.
* ಸಂಶೋಧನಾಕಾರ್ಯಗಳಿಗೆ ಸಹಾಯ ಮಾಡುತ್ತದೆ.
* ನಷ್ಟಕ್ಕೆ ಈಡಾಗುವುದನ್ನು ತಪ್ಪಿಸುತ್ತದೆ.
* ಆರ್ಥಿಕ ಬೆಳವಣಿಗೆಗೆ ಉತ್ತೇಜನ ಕೊಡುತ್ತದೆ.
* ರಕ್ಷಣೆಯ ಭರವಸೆ ಕೊಡುತ್ತದೆ.
* ವ್ಯಾಪಾರ ಪೈಪೋಟಿಯನ್ನು ಉತ್ತೇಜಿಸುತ್ತದೆ.
* ಅಂತರರಾಷ್ಟ್ರೀಯ ವ್ಯಾಪಾರವನ್ನು ಪ್ರೋತ್ಸಾಹಿಸುತ್ತದೆ.

**8. ವಿಮಾ ಪಾಲಿಸಿ ಪಡೆಯುವಾಗ ಅನುಸರಿಸಬೇಕಾದ ವಿಧಾನಗಳಾವುವು?**

❖ ಯಾವ ವಿಮಾ ಸಂಸ್ಥೆಯಿಂದ ವಿಮಾ ಪಾಲಿಸಿ ಪಡೆಯಬೇಕು ಎಂಬುದನ್ನು ಗುರುತಿಸಿಕೊಳ್ಳಬೇಕು.

❖ ನಾವು ತೆಗೆದುಕೊಳ್ಳುವ ವಿಮೆಯ ವೆಚ್ಚ ಮತ್ತು ವಂತಿಗೆಗಳನ್ನು ವಯಸ್ಸಿಗನುಗುಣವಾಗಿ ತಿಳಿದುಕೊಳ್ಳಬೇಕು.

❖ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬೇಕು.

❖ ಪ್ರಪೋಸಲ್ ಫಾರಂನ್ನು ಪೂರ್ಣವಾಗಿ ಭರ್ತಿ ಮಾಡಬೇಕು. ಇದರಲ್ಲಿ ಮೂಲಭೂತ ವಿವರಗಳಾದ ವಯಸ್ಸು, ವಿಳಾಸ, ನಾಮ ನಿರ್ದೇಶನ, ವಿಮೆಯ ಅವಧಿ, ಯಾವ ರೀತಿಯ ವಿಮೆ,



Use e-papers for save trees-InyaTrust.com

ಉದ್ಯೋಗದಾತನ ವಿವರಗಳು, ವೈಯಕ್ತಿಕ ವಿವರಗಳಾದ ತೂಕ, ಎತ್ತರ, ಜನ್ಮ ದಿನಾಂಕ, ಆದಾಯದ ವಿವರ, ಕುಟುಂಬದ ಸದಸ್ಯರ ವಿವರ ಮುಂತಾದುವೆಲ್ಲ ಸೇರಿರುತ್ತವೆ.

- ❖ ವಿವರಗಳನ್ನೆಲ್ಲ ಕರಾರುವಕ್ಕಾಗಿ ಭರ್ತಿ ಮಾಡಿ, ಇದಕ್ಕೆ ವಿಮಾ ಸಂಸ್ಥೆಯ ಅಧಿಕಾರಿಗಳಿಂದಾಗಲೀ ಅಥವಾ ಏಜೆಂಟರಿಂದಾಗಲೀ ಸಹಾಯ ಪಡೆಯಬೇಕು.
- ❖ ವಿಮಾ ಕಂತಿನ ಹಣದೊಂದಿಗೆ ಪಾಲಿಸಿಯ ಜೊತೆಯಲ್ಲಿ ಲಗತ್ತಿಸಬೇಕಾದ ಪತ್ರಗಳೊಂದಿಗೆ ತಲುಪಿಸಬೇಕು.
- ❖ ವಿಮಾ ಸಂಸ್ಥೆ ನಮ್ಮ ಅರ್ಜಿ ನಮೂನೆಯಲ್ಲಿ ಕೊಟ್ಟಿರುವ ವಿವರಗಳನ್ನೆಲ್ಲ ಪರಾಮರ್ಶಿಸಿ, ಕೆಲವು ದಿನಗಳಲ್ಲಿ ನಮಗೆ ವಿಮಾಬಾಂಡನ್ನು ಕಳುಹಿಸಲಾಗುತ್ತದೆ.
- ❖ ವಿಮಾ ಬಾಂಡು ಬಂದ ನಂತರ ನಮ್ಮ ಪಾಲಿಸಿ ಅಂಗೀಕಾರವಾಗಿದೆಯೆಂದು ತಿಳಿದು, ಬಾಂಡನ್ನು ಸುರಕ್ಷಿತವಾಗಿಟ್ಟುಕೊಳ್ಳಬೇಕು.

**9. ವಿವಿಧ ಪ್ರಕಾರದ ವಿಮಾ ಪಾಲಿಸಿಗಳನ್ನು ಹೆಸರಿಸಿ:**

* ಕಾಲಮಿತಿ ವಿಮೆ
* ಜೀವಮಾನದತ್ತಿ ವಿಮಾ ಪಾಲಿಸಿ
* ಹನ ಮರುಪಾವತಿ ವಿಮೆ
* ಮಕ್ಕಳ ಭವಿಷ್ಯ ವಿಮೆ
* ವಾರ್ಷಿಕ (ನಿವೃತ್ತಿ) ಮರುಪಾವತಿ ಪಾಲಿಸಿ
* ಷೇರುಗಳ ಮೌಲ್ಯಧಾರಿತ ವಿಮಾ ಪಾಲಿಸಿ

* * *



Use e-papers for save trees-InyaTrust.com

# ಅಧ್ಯಾಯ – 3
# ಉದ್ಯಮಗಾರಿಕೆ

## I ಮುಖ್ಯಾಂಶಗಳು :

- ❖ ಉದ್ಯಮಿ ಎಂಬ ಪದವು ಫ್ರೆಂಚ್‌ನ "ಎಂಟ್ರಪ್ರೆಂಡೆ" ಎಂಬ ಪದದಿಂದ ಬಂದಿದ್ದು, ಇದರ ಅರ್ಥ ಒಂದು ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವುದು.
- ❖ ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಗಾರಿಕೆ ಎನ್ನುತ್ತೇವೆ.
- ❖ ಉದ್ಯಮಿಗಳು ಆರ್ಥಿಕತೆಯ ಯಂತ್ರದಲ್ಲಿ ವಿದ್ಯುತ್ತನ್ನು ಸಂಚರಿಸಲು ಸಹಾಯಕವಾಗುವ ಅಗ್ನಿಬರಟೆಯಂತೆ ಚೇತನ ಕೊಡುವ ಸಾಧಕರಾಗಿದ್ದಾರೆ.
- ❖ ಜಿಲ್ಲಾ ಕೈಗಾರಿಕಾ ಕೇಂದ್ರಗಳು 1978 ರಲ್ಲಿ ಸ್ಥಾಪನೆಯಾದವು.
- ❖ ಭಾರತದಲ್ಲಿ ಮೊದಲ ವೈದ್ಯ ಶಾಲೆಗಳ ಸಂಕೀರ್ಣ 'ಅಪೋಲೋ'ವನ್ನು ಅಭಿವೃದ್ಧಿಪಡಿಸಿದವರು ಡಾ॥ ಪ್ರತಾಪರೆಡ್ಡಿ.
- ❖ ನರೇಶ್ ಗೋಯಲ್ ಜೆಟ್ ವಾಯುಮಾರ್ಗವನ್ನು ಹುಟ್ಟುಹಾಕಿದರು ಮತ್ತು ಅದರ ಅಧ್ಯಕ್ಷರಾಗಿದ್ದಾರೆ.
- ❖ ವರ್ಗೀಸ್ ಕುರಿಯನ್ 'ಬಿಳಿಕ್ರಾಂತಿಯ ಪಿತಾಮಹ' ಎನಿಸಿದ್ದಾರೆ.
- ❖ ಧೀರುಭಾಯಿ ಅಂಬಾನಿಯವರು ಸ್ಥಾಪಿಸಿದ 'ರಿಲಯನ್ಸ್' ಸಂಸ್ಥೆ ಪ್ರಪಂಚದಲ್ಲೇ ಮುಖ್ಯ ಉದ್ಯಮಗಳಲ್ಲೊಂದಾಗಿದೆ.
- ❖ ಅಜೀಮ್ ಪ್ರೇಮ್‌ಜಿ ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ.
- ❖ ನಾರಾಯಣಮೂರ್ತಿ ಭಾರತದಲ್ಲಿ ಇನ್‌ಫೋಸಿಸ್ ತಂತ್ರಜ್ಞಾನ ನಿಗಮವನ್ನು ಪ್ರಾರಂಭಿಸಿದವರಲ್ಲಿ ಒಬ್ಬರಾಗಿದ್ದಾರೆ.
- ❖ ಏಕ್ತಾ ಕಫೂರ್ ಭಾರತದ ದೂರದರ್ಶನ ಕೇಂದ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ"ಯೆಂದೇ ಹೆಸರು ಮಾಡಿದ್ದಾರೆ.
- ❖ ಕಿರಣ್ ಮುಜಮ್‌ದಾರ್ ಷಾ 'ಬಯೋಕಾನ್' ನಿಗಮದ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರಾಗಿದ್ದಾರೆ.

## II ಕೆಳಗಿನವುಗಳನ್ನು ವಿಸ್ತರಿಸಿ.

1. GDP : ನಿವ್ವಳ ದೇಶೀಯ ಉತ್ಪನ್ನ
2. IDBI : ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
3. NABARD : ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
4. SIDBI : ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು



Use e-papers for save trees-InyaTrust.com

| | | | |
|---|---|---|---|
| 5. | EXIM BANK | : | ಆಮದು ಮತ್ತು ರಫ್ತು ಬ್ಯಾಂಕು |
| 6. | IFGI | : | ಭಾರತೀಯ ಕೈಗಾರಿಕಾ ಹಣಕಾಸು ನಿಗಮ |
| 7. | LIC | : | ಭಾರತೀಯ ಜೀವ ವಿಮಾ ನಿಗಮ |
| 8. | UTI | : | ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ |
| 9. | ICGC | : | ಭಾರತೀಯ ಕೈಗಾರಿಕೆಗೆ ಹಣಕಾಸಿನ ಹೂಡಿಕೆ ಮತ್ತು ಸಾಲದ ನಿಗಮ |
| 10. | NSIC | : | ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ |
| 11. | SIDC | : | ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ |
| 12. | SISI | : | ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ |
| 13. | KVIC | : | ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ |

**III ಬಹು ಆಯ್ಕೆ ಪ್ರಶ್ನೆಗಳು:**

**1. ಉದ್ಯಮಿ ಎಂಬ ಪದವು ಫ್ರೆಂಚ್‌ನ ________ ಪದದಿಂದ ಬಂದಿದೆ.**

a)ಎಂಟ್ರಪ್ರೀಮಿಯಂ **b)ಎಂಟ್ರಪ್ರೆಂಡೆ** c)ಎಂಟ್ರಪ್ರೀನರ್‌ಶಿಪ್ d)ಎಂಟ್ರಪ್ರೀ

**2. ಉದ್ಯಮಿಗಳು ಆರ್ಥಿಕತೆಯ ಯಂತ್ರದಲ್ಲಿ ______ ಯಂತೆ ಆರ್ಥಿಕ ಚಟುವಟಿಕೆಗಳಿಗೆ ಚೇತನ ಕೊಡುವ ಸಾಧಕರಾಗಿದ್ದಾರೆ.**

**a)ಸ್ಪಾರ್ಕ್ ಪ್ಲಗ್** b)ಸ್ಪಾರ್ಕ್ ಬೋರ್ಡ್ c)ಸೆಲ್‌ಫೋನ್ d) ಕಂಪ್ಯೂಟರ್

**3. ಜಿಲ್ಲಾ ಕೈಗಾರಿಕಾ ಕೇಂದ್ರಗಳು ________ ನಲ್ಲಿ ಪ್ರಾರಂಭವಾದವು.**

a)1960 b)1969 c)1975 **d) 1978**

**4. ಡಾ|| ಪ್ರತಾಪ್ ರೆಡ್ಡಿ ಭಾರತದಲ್ಲಿ ಮೊದಲು ಸ್ಥಾಪಿಸಿದ ವೈದ್ಯಾಶಾಲೆಗಳ ಸಂಕೀರ್ಣ**

a)ವಿಕ್ರಮ್ **b)ಅಪೋಲೋ** c)ನಾರಾಯಣ d) ನಿಮ್ಹಾನ್ಸ್

**5. ಭಾರತದಲ್ಲಿ ಅತಿದೊಡ್ಡ ಆಂತರಿಕ ವಾಯುಮಾರ್ಗ**

a)ಏರ್‌ವೇಸ್ b)ಕಿಂಗ್‌ಫಿಷರ್ c)ಇಂಡಿಯನ್ ಏರ್‌ಲೈನ್ಸ್ **d) ಜೆಟ್ ಏರ್‌ವೇಸ್**

**6. ವರ್ಗಿಸ್ ಕುರಿಯನ್ ಗುಜರಾತಿನಲ್ಲಿ ಸ್ಥಾಪಿಸಿದ ಹಾಲಿನ ಡೈರಿ**

a)ನಂದಿನಿ ಹಾಲಿನ ಡೈರಿ **b)ಆನಂದ್ ಮಿಲ್ಕ್ ಡೈರಿ**

c)ರೂಪ ಮಿಲ್ಕ್ ಡೈರಿ d)ಕಿಶೋರ್ ಮಿಲ್ಕ್ ಡೈರಿ



Use e-papers for save trees-InyaTrust.com

7. **'ಬಯೋಕಾನ್' ನಿಗಮದ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರು**

a)ಏಕ್ತಾ ಕಪೂರ್ **b)ಕಿರಣ್ ಮುಜಮ್‌ದಾರ್ ಷಾ**

c)ನಾರಾಯಣ ಮೂರ್ತಿ d) ಇಂದ್ರ ನೂಯಿ

8. **ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರು**

a)ಧೀರುಭಾಯಿ ಅಂಬಾನಿ b)ಡಾ|| ಪ್ರತಾಪ್ ರೆಡ್ಡಿ

c)ವರ್ಗೀಸ್ ಕುರಿಯನ್ **d)ಏಕ್ತಾ ಕಪೂರ್**

9. **ಧೀರುಭಾಯಿ ಅಂಬಾನಿಯವರು ಸ್ಥಾಪಿಸಿದ ಸಂಸ್ಥೆ**

a)ನೋಕಿಯ b)ಸ್ಯಾಮ್‌ಸಂಗ್ c)ವೊಡಾಫೋನ್ **d)ರಿಲಯನ್ಸ್**

## IV ವರ್ಷಗಳು ಮತ್ತು ಪ್ರಾಮುಖ್ಯತೆ

1. 1917 = ನರೇಶ್ ಗೋಯಲ್ ಜೆಟ್ ವಾಯಮಾರ್ಗವನ್ನು ಪ್ರಾರಂಭಿಸಿದ್ದು.
2. 1999 = ನಾರಾಯಣ ಮೂರ್ತಿ ರವರು ಇನ್‌ಫೋಸಿಸ್ ತಂತ್ರಜ್ಞಾನ ನಿಗಮವನ್ನು ಸ್ಥಾಪಿಸಿದರು.
3. 1978 = ಕಿರಣ್ ಮುಜಮ್‌ದಾರ್ ಷಾ ರವರು ಬಯೋಕಾನ್ ಸಂಸ್ಥೆಯನ್ನು ಪ್ರಾರಂಭಿಸಿದರು.
4. 2001 = ಏಕ್ತಾ ಕಪೂರ್ ವರ್ಷದ ಶ್ರೇಷ್ಠ ಉದ್ಯಮಿ ಎಂಬ ಪ್ರಶಸ್ತಿ ಪಡೆದದ್ದು.
5. 1978 = ಜಿಲ್ಲಾ ಕೈಗಾರಿಕಾ ಕೇಂದ್ರದ ಸ್ಥಾಪನೆ.

## V ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿ.

1. ಉದ್ಯಮಿ ಎಂಬ ಪದವು ಫ್ರೆಂಚ್‌ನ **'ಎಂಟ್ರಪ್ರೆಂಡೆ'** ಎಂಬ ಪದದಿಂದ ಬಂದಿದೆ.
2. ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು **ಉದ್ಯಮಗಾರಿಕೆ** ಎನ್ನುತ್ತೇವೆ.
3. ಜಿಲ್ಲಾ ಕೈಗಾರಿಕಾ ಕೇಂದ್ರವನ್ನು **1978** ರಲ್ಲಿ ಸ್ಥಾಪಿಸಲಾಯಿತು.
4. ಅಪೋಲೋ ಆಸ್ಪತ್ರೆಯ ರೂವಾರಿಗಳು **ಡಾ|| ಪ್ರತಾಪ್ ರೆಡ್ಡಿ.**
5. ವಿಪ್ರೋ ಸಂಸ್ಥೆಯ ಅಧ್ಯಕ್ಷರು **ಅಜೀಮ್ ಪ್ರೇಮ್‌ಜಿ**
6. ಉದ್ಯಮಗಾರಿಕೆಯು ಒಂದು **ಸೃಜನಾತ್ಮಕ** ಚಟುವಟಿಕೆ ಆಗಿದೆ.
7. ಭಾರತದ ಅತಿದೊಡ್ಡ ಖಾಸಗಿ ಆಂತರಿಕ ವಾಯುಮಾರ್ಗ **ಜೆಟ್ ವಾಯುಮಾರ್ಗ.**
8. ಡಾ|| ಪ್ರತಾಪ್ ರೆಡ್ಡಿ **ಅಪೋಲೋ** ವೈದ್ಯಶಾಲೆಗಳ ಗುಂಪನ್ನು ಸ್ಥಾಪಿಸಿದರು.
9. ವರ್ಗೀಸ್ ಕುರಿಯನ್ ರವರು **'ಬಿಳಿ ಕ್ರಾಂತಿಯ ಪಿತಾಮಹ'** ಎಂದು ಜನಪ್ರಿಯರಾಗಿದ್ದಾರೆ.
10. **ಏಕ್ತಾ ಕಪೂರ್** ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟು ಹಾಕಿದರು.



Use e-papers for save trees-InyaTrust.com

VI **ಹೊಂದಿಸಿ ಬರೆಯಿರಿ**

| | A | B |
|---|---|---|
| 1. | ಡಾ॥ ಪ್ರತಾಪರೆಡ್ಡಿ | a) ಬಾಲಾಜಿ ದೂರದರ್ಶನ ಚಿತ್ರ |
| 2. | ನರೇಶ್ ಗೋಯಲ್ | b) ವಿಪ್ರೋ ಸಂಸ್ಥೆಯ ಅಧ್ಯಕ್ಷರು |
| 3. | ಧೀರುಭಾಯಿ ಅಂಬಾನಿ | c) ಅಪೋಲೋ ಆಸ್ಪತ್ರೆಗಳ ಸ್ಥಾಪಕ |
| 4. | ಅಜೀಮ್ ಪ್ರೇಮ್‌ಜಿ | d) ರಿಲಯನ್ಸ್ ಸಂಸ್ಥೆಯ ಸ್ಥಾಪಕ |
| 5. | ಏಕ್ತಾ ಕಫೂರ್ | e) ಜೆಟ್ ವಾಯುಮಾರ್ಗ |

**ಉತ್ತರ: 1- b, 2-c, 3- a, 4- e, 5-d,**

VII **ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ಉದ್ಯಮಿ ಎಂದರೇನು?**

ಹೊಸ ಕಲ್ಪನೆಯನ್ನು ವ್ಯವಹಾರದಲ್ಲಿ ರೂಢಿಗೆ ತರುವವನೇ ಉದ್ಯಮಿ.

**2. ಉದ್ಯಮಗಾರಿಕೆಯು ಸಾಹಸಕಾರ್ಯವಾಗಿದೆ. ಹೇಗೆ?**

ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದ್ದು, ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸಾಮರ್ಥ್ಯವಾಗಿದೆ. ಇದು ಬೇರೆಯವರಿಂದ ಕಷ್ಟಸಾಧ್ಯವಾದ ಗೊಂದಲಮಯ, ವಿರೋಧಾತ್ಮಕ ಮತ್ತು ಅಸ್ತವ್ಯಸ್ತತೆಯಿಂದ ಕೂಡಿದ ಒಂದು ಅವಕಾಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ. ಆದ್ದರಿಂದ ಇದೊಂದು ಸಾಹಸಕಾರ್ಯವಾಗಿದೆ.

**3. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು?**

* ಸೃಜನಾತ್ಮಕ
* ಕ್ರಿಯಾತ್ಮಕ
* ಗುಂಪು ಕಟ್ಟುವುದು
* ಸಮಸ್ಯೆಯ ಪರಿಹಾರ
* ನಷ್ಟಭರಿತಕ್ಕೆ ಸಿದ್ಧ
* ವಚನಬದ್ಧತೆ
* ಹೊಸ ಪದ್ಧತಿಯನ್ನು ರೂಢಿಸಿ ತರುವುದು
* ನಾಯಕತ್ವ
* ಪ್ರಚೋದನೆಯ ಸಾಧನೆ
* ಗುರಿ ಮುಟ್ಟುವಿಕೆ
* ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು



Use e-papers for save trees-InyaTrust.com

**4. ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ.**

* ಉದ್ಯಮಿಗಳು ಮಾರುಕಟ್ಟೆಯ ಆರ್ಥಿಕ ಸ್ಥಿತಿಯಲ್ಲಿ ಕೇಂದ್ರ ಸ್ಥಾನವನ್ನು ಅಲಂಕರಿಸಿದ್ದಾರೆ. ಈ ಉದ್ಯಮಿಗಳು ಆರ್ಥಿಕತೆಯ ಯಂತ್ರದಲ್ಲಿ ವಿದ್ಯುತ್ತನ್ನು ಸಂಚರಿಸಲು ಸಹಾಯವಾಗುವ ಅಗ್ನಿಬಿರಟೆಯಂತೆ ಆರ್ಥಿಕ ಚಟುವಟಿಕೆಗಳಿಗೆ ಚೇತನ ಕೊಡುವ ಸಾಧಕರಾಗಿದ್ದಾರೆ.
* ಉದ್ಯಮಿಗಳು ಮತ್ತು ಅವರ ಚಟುವಟಿಕೆಗಳು ದೇಶದ ಯಶಸ್ಸು, ಅಭಿವೃದ್ಧಿ, ಬೆಳವಣಿಗೆ ಮತ್ತು ಸಮಯೋಚಿತ ವಿಮರ್ಶಾತ್ಮಕ ನಿರ್ಣಯಗಳಾಗಿರುತ್ತವೆ.
* ಉದ್ಯಮಿಗಳು ತಮ್ಮದೇ ಆದ ಮತ್ತು ಎರವಲು ಪಡೆದ ಸಂಪನ್ಮೂಲಗಳ ಮೂಲಕ ಉದ್ಯಮವನ್ನು ಸ್ಥಾಪಿಸಿ, ಸಂಪನ್ಮೂಲಗಳ ಸದ್ಬಳಕೆಗೆ ಸಹಾಯ ಮಾಡುತ್ತಾರೆ.
* ಆರ್ಥಿಕ ಮತ್ತು ಕೈಗಾರಿಕಾಭಿವೃದ್ಧಿಗೆ ಬೇಕಾದ ಹೊಸ ವಸ್ತುಗಳನ್ನು ಮತ್ತು ಸೇವೆಗಳನ್ನು ಮಾರಾಟಕ್ಕೆ ಸಹಾಯ ಮಾಡುತ್ತಾರೆ.

**5. ಉದ್ಯಮಗಳ ಅಭಿವೃದ್ಧಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪಾತ್ರವೇನು?**

* ಉದ್ಯಮವನ್ನು ಸ್ಥಾಪಿಸಲು ಮೊದಲು ಸಿದ್ಧಪಡಿಸಬೇಕಾದ ಯೋಜನಾವರಣ
* ಯಂತ್ರಗಳು ಮತ್ತು ಸಾಧನ ಸಲಕರಣೆಗಳ ಮಾಹಿತಿ
* ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ
* ಉದ್ದಿಮೆ ಅಭಿವೃದ್ಧಿ ಕಾರ್ಯಕ್ರಮದೆಡೆ ತರಬೇತಿ
* ಕಚ್ಚಾಪದಾರ್ಥಗಳ ಹಂಚಿಕೆ
* ಸ್ವಯಂ ಉದ್ಯೋಗದಡಿಯಲ್ಲಿನ ವ್ಯವಸ್ಥೆಯಲ್ಲಿ ಹಣಕಾಸಿನ ನೆರವು
* ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾರುಕಟ್ಟೆ ಸಹಾಯ
* ವಸ್ತು ಪ್ರದರ್ಶನಗಳಲ್ಲಿ, ವ್ಯಾಪಾರಿ ಜಾತ್ರೆಗಳಲ್ಲಿ ಮತ್ತು ಕೊಳ್ಳುವವರು ಮತ್ತು ಮಾರುವವರು ಸಂಧಿಸುವ ಭೇಟಿಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಮಾಡುವುದು
* ಉದ್ದಿಮೆಯನ್ನು ಆಧುನೀಕರಿಸುವಲ್ಲಿ ಸಹಾಯ ಮಾಡುವುದು
* ವಸ್ತುಗಳನ್ನು ರಫ್ತು ಮಾಡಲು ಸಹಾಯ ಮಾಡುವುದು
* ಅತಂತ್ರಗೊಳ್ಳುತ್ತಿರುವ ಉದ್ದಿಮೆಗಳಿಗೆ ಸಹಾಯ ಮಾಡುವುದು
* ಬದಲಾವಣೆ ಅಥವಾ ಮಾರ್ಪಾಡು ಮಾಡಿರುವ ವಸ್ತುಗಳಿಗೆ ಉತ್ತೇಜನ ಕೊಟ್ಟು ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ಕೊಡಲು ಪ್ರಯತ್ನಿಸುವುದು
* ಪ್ರಮಾಣಬದ್ಧ ವಸ್ತುಗಳ ತಯಾರಿಕೆಯಲ್ಲಿ ಸಹಾಯ ಮಾಡುವುದು
* ಕುಶಲಕೈಗಾರಿಕಾ ವಸ್ತುಗಳ ತಯಾರಿಕೆಯಲ್ಲಿ ಮಾದರಿ ವಸ್ತುಗಳ ತಯಾರಿಕೆಗೆ ಸಹಾಯ ಮಾಡುವುದು



Use e-papers for save trees-InyaTrust.com

VIII **ಹೆಚ್ಚುವರಿ ಪ್ರಶ್ನೆಗಳು**

**1. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರವೇನು?**

(i) ಉದ್ಯಮಿಗಳು ಒಂದು ದೇಶದ ನಿವ್ವಳದೇಶೀಯ ಉತ್ಪನ್ನ ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.

(ii) ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವುದರ ಮೂಲಕ ಉದ್ಯಮಿಗಳು ಕುಶಲ ಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ ಮತ್ತು ಕಸಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.

(iii) ಉದ್ಯಮಿಗಳು ಆದಾಯ ಮತ್ತು ಸಂಪತ್ತು ಒಂದು ಪ್ರದೇಶದಲ್ಲಿ ಕೇಂದ್ರೀಕೃತವಾಗುವುದನ್ನು ಕಡಿಮೆ ಮಾಡಿ ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ.

(iv) ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.

**2. ಉದ್ಯಮಿಯ ಮುಖ್ಯ ಕಾರ್ಯಗಳೇನು?**

- ❖ ಉದ್ಯಮಿಯು ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
- ❖ ಉದ್ಯಮಿಯು ಉತ್ಪಾದಿಸುವ ವಸ್ತುಗಳ ಬಗ್ಗೆ, ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
- ❖ ಉದ್ಯಮಿಯು ಎಲ್ಲಾ ಅಂಶಗಳನ್ನು ಸಮಂಜಸವಾಗಿ ಸಂಯೋಜಿಸುತ್ತಾನೆ.
- ❖ ಉದ್ಯಮಿಯು ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
- ❖ ಉದ್ಯಮಿಯು ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.
- ❖ ಉದ್ಯಮಿಯು ವ್ಯಾಪಾರದ ಮಾರ್ಗಗಳನ್ನು ತಿಳಿಸಿ, ಅದು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ಮಾರ್ಗದರ್ಶನ ನೀಡುತ್ತಾನೆ.

**3. ನಾರಾಯಣ ಮೂರ್ತಿ ಯಾರು?**

ಇನ್‌ಫೋಸಿಸ್ ತಂತ್ರಜ್ಞಾನ ನಿಗಮವನ್ನು ಸ್ಥಾಪಿಸಿದವರಲ್ಲಿ ನಾರಾಯಣ ಮೂರ್ತಿ ಒಬ್ಬರು.

**4. 'ಬಯೋಕಾನ್' ಎಂದರೇನು?**

'ಬಯೋಕಾನ್' ಎನ್ನುವುದು ಭಾರತದ ಅತಿ ದೊಡ್ಡ ಜೀವ ವಿಜ್ಞಾನ ತಂತ್ರಜ್ಞಾನ ಸಂಸ್ಥೆಯಾಗಿದೆ. ಇದರ ಸ್ಥಾಪಕರು ಕಿರಣ್ ಮುಜಮ್‌ದಾರ್ ಷಾ.

* * *



Use e-papers for save trees-InyaTrust.com

## ಅಧ್ಯಾಯ – 4

## ವ್ಯವಹಾರದ ಜಾಗತೀಕರಣ

**I ಮುಖ್ಯಾಂಶಗಳು :**

- ❖ 1870 ರಿಂದ 1913 ರ ತನಕ ಜಾಗತೀಕರಣವು ವ್ಯವಹಾರ ಕ್ಷೇತ್ರದಲ್ಲಿ ಒಂದು ಪಾತ್ರ ವಹಿಸಿತ್ತು.
- ❖ ಜಾಗತೀಕರಣವು ಸರಕು ಮತ್ತು ಸೇವೆಗಳ ಹೆಚ್ಚುತ್ತಿರುವ ಗಡಿಯಾಚಿನ ಚಲನೆ
- ❖ ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ ಕಛೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೀವಾದಲ್ಲಿದೆ
- ❖ ವಿಶ್ವ ವ್ಯಾಪಾರ ಸಂಘಟನೆ 1995 ರ ಜನವರಿ 1 ರಂದು ಅಸ್ತಿತ್ವಕ್ಕೆ ಬಂದಿತು.
- ❖ ಇಂದು 149 ದೇಶಗಳು ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರಗಳಾಗಿವೆ.

**II ಕೆಳಗಿನವುಗಳನ್ನು ವಿಸ್ತರಿಸಿ.**

1. IMF : ಅಂತರ ರಾಷ್ಟ್ರೀಯ ಹಣಕಾಸು ನಿಧಿ
2. WTO : ವಿಶ್ವ ವ್ಯಾಪಾರ ಸಂಘಟನೆ
3. OPEC : ಪೆಟ್ರೋಲಿಯಂ ರಫ್ತು ಮಾಡುವ ರಾಷ್ಟ್ರಗಳ ಸಂಘಟನೆ
4. WIPO : ವಿಶ್ವ ಬೌದ್ಧಿಕ ಆಸ್ತಿ ಸಂಬಂಧಿ ಸಂಸ್ಥೆ
5. GDP : ನಿವ್ವಳ ದೇಶೀಯ ಉತ್ಪನ್ನ

**III ಬಹು ಆಯ್ಕೆ ಪ್ರಶ್ನೆಗಳು.**

**1.** ವಿಶ್ವ ವ್ಯಾಪಾರ ವ್ಯವಹಾರಗಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಜಗತ್ತಿನ ಶಾಶ್ವತ ಸಂಘಟನೆ

a) I.M.F. b) W.T.O. c) O.P.E.C. d) W.I.P.O.

**2. ವಿಶ್ವ ವ್ಯಾಪಾರ ಸಂಘಟನೆಯ ಮುಖ್ಯ ಕಛೇರಿ ಇರುವುದು**

a) ನ್ಯೂಯಾರ್ಕ್ b) ಪ್ಯಾರಿಸ್ c) ರೋಮ್ **d)** **<u>ಜಿನೀವಾ</u>**

**3. ವಿಶ್ವ ವ್ಯಾಪಾರ ಸಂಘಟನೆ ಪ್ರಾರಂಭವಾದ ವರ್ಷ**

a) 1990 ರ ಮೇ 2 **b)** **<u>1995 ರ ಜನವರಿ 1</u>**

c) 1999 ರ ಏಪ್ರಿಲ್ 10 d) 2000 ರ ಆಗಸ್ಟ್ 15

**4. ಇಂದು ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರಗಳ ಸಂಖ್ಯೆ**

a)100 b)120 **c)<u>149</u>** d)119



Use e-papers for save trees-InyaTrust.com

**5. ವಿಶ್ವ ವ್ಯಾಪಾರ ಸಂಘಟನೆ ಎಷ್ಟು ವರ್ಷಗಳಿಗೊಮ್ಮೆ ಸಮ್ಮೇಳನ ನಡೆಸುತ್ತದೆ?**

a) ಒಂದು ವರ್ಷ b) ಎರಡು ವರ್ಷ c) ಮೂರು ವರ್ಷ d) ನಾಲ್ಕು ವರ್ಷ

**IV ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ಜಾಗತೀಕರಣ ಎಂದರೇನು? ವಿವರಿಸಿ.**

ಅಂತರರಾಷ್ಟ್ರೀಯ ಹಣಕಾಸು ನಿಧಿಯು ಜಾಗತೀಕರಣವನ್ನು ಹೀಗೆ ವ್ಯಾಖ್ಯಾನಿಸುತ್ತದೆ. "ಸರಕು ಮತ್ತು ಸೇವೆಗಳು ಹಾಗೂ ಅಂತರರಾಷ್ಟ್ರೀಯ ಬಂಡವಾಳದ ಹರಿವು, ತೀವ್ರ ಮತ್ತು ವ್ಯಾಪಕವಾದ ತಾಂತ್ರಿಕತೆಯ ಪ್ರಸರಣಗಳ ಮೂಲಕ ವಿಶ್ವದಾದ್ಯಂತ ಹೆಚ್ಚಿನ ಪ್ರಮಾಣದ ವೈವಿಧ್ಯತೆಯ ಗಡಿಯಾಚೆಗಿನ ವ್ಯವಹಾರಗಳಿಂದಾಗಿ ಹೆಚ್ಚುತ್ತಿರುವ ದೇಶಗಳ ಅಂತರ ಸ್ವಾವಲಂಬನೆ".

**2. ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಹೇಗೆ ಸಹಕಾರಿಯಾಗಿದೆ?**

- ❖ ಜಾಗತೀಕರಣವು ಸರಕು ಮತ್ತು ಸೇವೆಗಳ ಹೆಚ್ಚುತ್ತಿರುವ ಗಡಿಯಾಚಿನ ಚಲನೆ
- ❖ ಬಂಡವಾಳದ, ತಾಂತ್ರಿಕತೆಯ ಮತ್ತು ಮಾಹಿತಿಯ ಅಂತರರಾಷ್ಟ್ರೀಯ ಹರಿವು
- ❖ ಇಡೀ ವಿಶ್ವವನ್ನೇ ಒಂದು ಮಾರುಕಟ್ಟೆಯಾಗಿಸಿಕೊಂಡು ಕಚ್ಚಾ ವಸ್ತುಗಳು ಮತ್ತು ಇತರ
- ❖ ಸಂಪನ್ಮೂಲಗಳನ್ನು ವಿಶ್ವದ ಅಗ್ಗವಾದ ಮಾರುಕಟ್ಟೆಯಿಂದ ಪಡೆಯುವುದು.
- ❖ ವಿಶ್ವದ ಯಾವುದೇ ಪ್ರದೇಶದಲ್ಲಿ ಕಡಿಮೆ ವೆಚ್ಚದಲ್ಲಿ ಸರಕುಗಳನ್ನು ಉತ್ಪಾದಿಸುವುದು.
- ❖ ಆಮದು ಮತ್ತು ರಫ್ತುಗಳ ಸುಂಕಗಳನ್ನು ನಿರ್ಮೂಲನ ಮಾಡಿ ಮುಕ್ತ ವಲಯಗಳನ್ನುಸೃಷ್ಟಿಸುವುದು.
- ❖ ಜಾಗತೀಕರಣವು ವಿಶ್ವವ್ಯಾಪಿ ಸಂಸ್ಥೆಗಳಿಗೆ ಪ್ರೋತ್ಸಾಹಧನ ಸೃಷ್ಟಿಸುವುದು.

**3. ಜಾಗತೀಕರಣದಿಂದಾಗುವ ಅನುಕೂಲಗಳಾವುವು?**

- ❖ ಜಾಗತೀಕರಣವು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿ, ಹೆಚ್ಚಿನ ಸರಕು ಮತ್ತು ಸೇವೆಗಳು ವಿಶಾಲವಾಗಿ ಉತ್ಪಾದನೆಯಾಗಲು ಸಹಾಯ ಮಾಡುತ್ತದೆ.
- ❖ ಜಾಗತೀಕರಣವು ಜನರ ಜೀವನ ಮಟ್ಟ ಹೆಚ್ಚಿಸಲು ಸಹಾಯ ಮಾಡುತ್ತದೆ.
- ❖ ಜಾಗತೀಕರಣದಿಂದಾಗಿ ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರಕಲು ಸಾಧ್ಯವಾಗುತ್ತದೆ.
- ❖ ಜಾಗತೀಕರಣವು ದೇಶದ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ.
- ❖ ಜಾಗತೀಕರಣವು ಒಂದು ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ.
- ❖ ಬೇರೆ ಬೇರೆ ದೇಶಗಳ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕುವುದರಿಂದ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಕಂಡುಬರುತ್ತದೆ.
- ❖ ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆಗಳು ಕಡಿಮೆ ಇರುತ್ತದೆ.
- ❖ ಪ್ರಪಂಚದ ದೇಶಗಳ ನಡುವೆ ಆರ್ಥಿಕ ಅವಲಂಬನೆ ಉಂಟಾಗಿ ದೇಶಗಳ ನಡುವೆ ಸಾಮಾಜಿಕ ಹಾಗೂ ರಾಜಕೀಯ ಸಾಮರಸ್ಯ ಉಂಟಾಗಲು ಸಾಧ್ಯವಾಗುತ್ತದೆ.



Use e-papers for save trees-InyaTrust.com

**4. ಜಾಗತೀಕರಣದಲ್ಲಿ ಗುರುತಿಸಬಹುದಾದ ಲಕ್ಷಣಗಳನ್ನು ಪಟ್ಟಿಮಾಡಿ.**

- ❖ ಜಾಗತೀಕರಣವು ವಿಶ್ವದ ಆರ್ಥಿಕತೆಯ ಏಳಿಗೆಗಿಂತ ತೀವ್ರವಾಗಿ ಅಂತರರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ.
- ❖ ಅಂತರರಾಷ್ಟ್ರೀಯ ಬಂಡವಾಳವನ್ನು ವೃದ್ಧಿಸಿ ಬಂಡವಾಳದ ಹರಿವನ್ನು ಮತ್ತು ಬಂಡವಾಳದ ನೇರ ಹೂಡಿಕೆಯನ್ನು ಹೆಚ್ಚಿಸುತ್ತದೆ.
- ❖ ಅಂತರರಾಷ್ಟ್ರೀಯ ವ್ಯಾಪಾರ ಕರಾರುಗಳನ್ನು ಸೃಷ್ಟಿಸುತ್ತದೆ. ಇದರಿಂದಾಗಿಯೇ ವಿಶ್ವ ವ್ಯಾಪಾರ ಸಂಸ್ಥೆ ಪ್ರಾರಂಭವಾದುದು.
- ❖ ವಿಶ್ವ ಹಣಕಾಸಿನ ನೀತಿಯನ್ನು ಅಭಿವೃದ್ಧಿ ಪಡಿಸುತ್ತದೆ.
- ❖ ಅಂತರರಾಷ್ಟ್ರೀಯ ಸಂಸ್ಥೆಗಳಾದ ವಿಶ್ವ ವ್ಯಾಪಾರ ಸಂಘಟನೆ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಗಳ ಪಾತ್ರ ಹೆಚ್ಚಿಸುತ್ತದೆ.
- ❖ ಕೆಲವು ಆರ್ಥಿಕ ವ್ಯವಹಾರ ಪದ್ಧತಿಗಳಾದ ಹೊರನೆರವು ಮುಂತಾದವುಗಳನ್ನು ಬಹು ರಾಷ್ಟ್ರೀಯ ಸಂಸ್ಥೆಗಳ ಮೂಲಕ ಹೆಚ್ಚಿಸುತ್ತದೆ.
- ❖ ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚು ಮಾಡುತ್ತದೆ.
- ❖ ವಿವಿಧ ಸಾಂಸ್ಕೃತಿಕ ಪದ್ಧತಿಗಳನ್ನು ಹರಡಲು ಸಹಾಯ ಮಾಡುತ್ತದೆ.
- ❖ ಅಂತರರಾಷ್ಟ್ರೀಯ ಸಂಚಾರ ಮತ್ತು ಪರ್ಯಟನೆಗಳಿಗೆ ಅವಕಾಶಗಳನ್ನು ಒದಗಿಸುತ್ತದೆ.
- ❖ ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಸಾಧ್ಯವಾಗುತ್ತದೆ.

**5. ಜಾಗತೀಕರಣದ ನಕಾರಾತ್ಮಕ ಅಂಶಗಳನ್ನು ಉದಾಹರಣೆಯೊಂದಿಗೆ ವಿವರಿಸಿ.**

- ❖ ಜಾಗತೀಕರಣದಿಂದ ವಿಶ್ವ ಮಾರುಕಟ್ಟೆಯಲ್ಲಿ ತೀವ್ರವಾದ ಪೈಪೋಟಿ ಉಂಟಾಗಿ ಅನೇಕ ನೀತಿ ಬಾಹಿರ ಪದ್ಧತಿಗಳು ವ್ಯವಹಾರ ವಹಿವಾಟುಗಳಲ್ಲಿ ರೂಢಿಗೆ ಬರುವ ಸಾಧ್ಯತೆ ಇರುತ್ತದೆ.
- ❖ ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುವ ಸಾಧ್ಯತೆ ಉಂಟಾಗಿದೆ. ಕೈಗಾರಿಕಾ ತ್ಯಾಜ್ಯಗಳು ಶೇಖರಣೆ ಹೊಂದಿ ಮಾಲಿನ್ಯವು ಆಕಾಶದೆತ್ತರಕ್ಕೆ ಬೆಳೆಯುತ್ತದೆ.
- ❖ ಮತ್ತೊಂದು ಅಪಾಯಕಾರಿ ಪರಿಣಾಮವೆಂದರೆ, ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ. ಬಡವರು ಒಂದು ಹೊತ್ತಿನ ಊಟಕ್ಕೂ ಶ್ರಮ ಪಡಬೇಕಾಗುತ್ತದೆ.
- ❖ ಅನೇಕ ಮಾರಣಾಂತಿಕ ವೈರಾಣುಗಳಿಂದ ಹಬ್ಬುವ ರೋಗಗಳು ವಿಶ್ವದಾದ್ಯಂತ ಹಬ್ಬುತ್ತವೆ.
- ❖ ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗುತ್ತದೆ.
- ❖ ಅಗ್ಗ ವಸ್ತುಗಳ ಆಮದಿನಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಉತ್ಪಾದನೆಯು ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ.



Use e-papers for save trees-InyaTrust.com

**6. ವಿಶ್ವ ವ್ಯಾಪಾರ ಸಂಘಟನೆ (W.T.O.) ಯ ಉದ್ದೇಶಗಳಾವುವು?**

(1) ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವುದು.

(2) ಬಹುಪಕ್ಷೀಯ ವ್ಯಾಪಾರ ವ್ಯವಹಾರಗಳ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡುವುದು.

(3) ವಿಶ್ವದಾದ್ಯಂತ ಮುಕ್ತ ಹಾಗೂ ಸ್ವತಂತ್ರ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವುದು.

(4) ಅಂತರರಾಷ್ಟ್ರೀಯ ವ್ಯಾಪಾರಗಳಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು.

(5) ವಿಶ್ವದ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಉತ್ಪಾದನೆ ಮತ್ತು ವ್ಯಾಪಾರ ವಿಸ್ತರಣೆ ಹಾಗೂ ಸೇವಾಕ್ಷೇತ್ರಗಳನ್ನು ದಕ್ಷಗೊಳಿಸುವುದು.

(6) ಅಂತರರಾಷ್ಟ್ರೀಯ ವ್ಯಾಪಾರದಿಂದ ಹಿಂದುಳಿದ ರಾಷ್ಟ್ರಗಳು ಹೆಚ್ಚು ಪ್ರಯೋಜನ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

**7. W.T.O. ಎಂದರೇನು?**

W.T.O. ಎಂದರೆ ವಿಶ್ವ ವ್ಯಾಪಾರ ಸಂಘಟನೆ. ಇದು ಜಗತ್ತಿನ ಶಾಶ್ವತ ಸಂಘಟನೆಯಾಗಿದ್ದು, ವಿಶ್ವದ ವ್ಯಾಪಾರ ವ್ಯವಹಾರಗಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತದೆ.

**8. ವಿಶ್ವ ವ್ಯಾಪಾರ ಸಂಘಟನೆ ಯಾವಾಗ ಪ್ರಾರಂಭವಾಯಿತು? ಇದರ ಕೇಂದ್ರ ಕಛೇರಿ ಎಲ್ಲಿದೆ?**

ವಿಶ್ವ ವ್ಯಾಪಾರ ಸಂಘಟನೆ 1995 ರ ಜನವರಿ 1 ರಂದು ಪ್ರಾರಂಭವಾಯಿತು. ಇದರ ಕೇಂದ್ರ ಕಛೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೀವಾದಲ್ಲಿದೆ.

**9. ವಿಶ್ವ ವ್ಯಾಪಾರ ಸಂಘಟನೆಯ ಗುರಿಗಳಾವುವು?**

(1) ಜೀವನ ವೆಚ್ಚವನ್ನು ಕಡಿಮೆ ಮಾಡಿ ಸದಸ್ಯ ರಾಷ್ಟ್ರಗಳ ಜನರ ಜೀವನಮಟ್ಟ ಹೆಚ್ಚಿಸುವುದು.

(2) ಸದಸ್ಯ ರಾಷ್ಟ್ರಗಳ ನಡುವೆ ಉದ್ಭವಿಸುವ ವ್ಯಾಪಾರ ವ್ಯಾಜ್ಯಗಳನ್ನು ಬಗೆಹರಿಸುವುದು.

(3) ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವೆಚ್ಚಗಳನ್ನು ಕಡಿಮೆ ಮಾಡುವುದು.

(4) ಸದಸ್ಯ ರಾಷ್ಟ್ರಗಳಲ್ಲಿ ಉತ್ತರಮ ಸರ್ಕಾರ ರಚಿಸಲು ಸಹಾಯ ಮಾಡುವುದು.

(5) ಸದಸ್ಯ ರಾಷ್ಟ್ರಗಳಲ್ಲಿ ಶಾಂತಿ, ಸ್ಥಿರತೆ ಅಥವಾ ದೃಢತೆ ಕಾಪಾಡಲು ಸಹಕರಿಸುವುದು.

* * *



Use e-papers for save trees-InyaTrust.com